ಶನಿವಾರ, ಫೆಬ್ರುವರಿ 4, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 35 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ವಿದೇಶಿ ವಿದ್ಯಾಸಂಸ್ಥೆಗಳಿಗೆ ಕೆಂಪು ಹಾಸು

ಕಾಡುಗೊಲ್ಲರ ನಿಗಮದ ಅಧ್ಯಕ್ಷರ ನೇಮಕ: ಮರು ಆದೇಶ 6
'ಕಲ್ಯಾಣ ಕರ್ನಾಟಕ ಗ್ರಾ.ಪಂ.ಗೆ ಹೆಚ್ಚುವರಿ ₹1 ಕೋಟಿ' 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,841 ▲	17.854 ▲	₹59,850 (ಬೆಂಗಳೂರು) ▼	₹72.200 (ಬೆಂಗಳೂರು) ▼	82.08 ▲

ಕರ್ನಾಟಕ ಆಡಳಿತ ಸುಧಾರಣಾ ಆಯೋಗದಿಂದ 1,609 ಶಿಫಾರಸು

6,796 ಸರ್ಕಾರಿ ಶಾಲೆಗಳ ವಿಲೀನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 3,457 ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಸಮೀಪದ ಶಾಲೆಗಳಲ್ಲಿ ವಿಲೀನ ಹಾಗೂ 3,339 ಶಾಲೆ– ಕಾಲೇಜುಗಳನ್ನು ವಿಲೀನಗೊಳಿಸಿ ಕ್ಲಸ್ಟರ್ ಪ್ರೌಢಶಾಲೆ ಅಥವಾ ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಪರಿವರ್ತಿಸಬೇಕು ಎಂದು ಆಡಳಿತ ಸುಧಾರಣಾ ಆಯೋಗ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಹೀಗೆ ಮಾಡಿದಲ್ಲಿ ಒಟ್ಟು 6,796 ಶಾಲೆ– ಕಾಲೇಜುಗಳು ವಿಲೀನಗೊಳ್ಳಲಿವೆ. 3,457 ಶಾಲೆಗಳನ್ನು 1,667 ಶಾಲೆಗಳಲ್ಲಿ ವಿಲೀನಗೊಳಿಸುವಂತೆ ಸಲಹೆ ನೀಡಲಾಗಿದೆ. ಹೀಗಾದಲ್ಲಿ, 3,457 ಶಾಲೆಗಳು ಅಸ್ತಿತ್ವವನ್ನೇ ಕಳೆದುಕೊಳ್ಳಲಿವೆ.

3,339 ಪ್ರಾಥಮಿಕ, ಪ್ರೌಢಶಾಲೆ, ಪಿಯು ಕಾಲೇಜುಗಳನ್ನು ಸಮೀಪದ 1,135 ಶಾಲೆ-ಕಾಲೇಜುಗಳಲ್ಲಿ ವಿಲೀನಗೊಳಿಸಬೇಕು. ಬಳಿಕ, ಅವುಗಳನ್ನು ಸಮೂಹ ಪ್ರೌಢಶಾಲೆ ಅಥವಾ ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಪರಿವರ್ತಿಸಬೇಕು.

ಆಡಳಿತ ಸುಧಾರಣೆಗೆ ಸಲಹೆ ನೀಡಲು ನಿವೃತ್ತ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಆಯೋಗವು 1,609 ಶಿಫಾರಸುಗಳನ್ನು ಒಳಗೊಂಡ ನಾಲ್ಕು ಮತ್ತು ಐದನೇ ವರದಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಶುಕ್ರವಾರ ಸಲ್ಲಿಸಿತು. ಈ ವರದಿಯಲ್ಲಿ ಶಾಲೆಗಳ ವಿಲೀನ ಹಾಗೂ ಮೇಲ್ದರ್ಜೆಗೆ ಏರಿಸಲು ಸಲಹೆ ನೀಡಲಾಗಿದೆ.

ಮುಖ್ಯಾಂಶಗಳು

- ಪರಿಶಿಷ್ಟ ವಿದ್ಯಾರ್ಥಿಗಳ ಎಸ್ಸೆಸ್ಸೆಲ್ಸಿ ತೇರ್ಗಡೆಯ ಕನಿಷ್ಠ ಅಂಕ 20ಕ್ಕೆ ಇಳಿಕೆ
- 100 ಹಾಸಿಗೆಗಳ ಸಾಮರ್ಥ್ಯ ಇರುವ ತಾಲ್ಲೂಕು ಆಸ್ಪತ್ರೆಗಳಲ್ಲಿ ನರ್ಸಿಂಗ್ ಕೋರ್ಸ್
- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವಿಭಜನೆಗೆ ಸಲಹೆ

ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಗ್ರಾಮೀಣ ಕೋಟಾ: ಗ್ರಾಮೀಣ ಕೋಟಾದಲ್ಲಿ ವೈದ್ಯಕೀಯ ಸೇರಿದಂತೆ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ಸರ್ಕಾರಿ ಶಾಲೆ ವಿದ್ಯಾರ್ಥಿಗಳ ಸಂಖ್ಯೆ ಶೇ 3.45ರಷ್ಟಿದೆ. ಸಿಬಿಎಸ್‌ಇ , ಐಸಿಎಸ್‌ಇ ವಿದ್ಯಾರ್ಥಿಗಳೇ ಕೋಟಾ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಗ್ರಾಮೀಣ ಕೋಟಾವನ್ನು 'ಗ್ರಾಮೀಣ ಸರ್ಕಾರಿ ಶಾಲಾ ವಿದ್ಯಾರ್ಥಿ ಕೋಟಾ'ವಾಗಿ ಪರಿವರ್ತಿಸಬೇಕು. ಇಲ್ಲವೇ ಶೇ 7.5ರಷ್ಟು ಸೀಟುಗಳನ್ನು ಅವರಿಗೆ ಮೀಸಲಿಡಬೇಕು. ಗ್ರಾಮೀಣ ವ್ಯಾಸಂಗ, ಕನ್ನಡ ಮಾಧ್ಯಮ, ಹೈದರಾ ಬಾದ್ ಕರ್ನಾಟಕ ಪ್ರಮಾಣ ಪತ್ರಗಳ ಸಿಂಧುತ್ವವನ್ನು ಜೀವಿತಾವಧಿಗೆ ವಿಸ್ತರಿಸಬೇಕು ಎಂದು ಶಿಫಾರಸು ಮಾಡಲಾಗಿದೆ.

ಶಾಲೆಯಿಂದ ಹೊರಗುಳಿದ 15ರಿಂದ 18 ವರ್ಷದ ಬಾಲಕಿಯರಿಗೂ ಪ್ರೌಢ ಕಿಶೋರಿಯರ ಯೋಜನೆ ವಿಸ್ತರಿಸಬೇಕು. ಶಾಲೆಗಳಿಗೆ ನೀಡುವ ವಾರ್ಷಿಕ ಅನುದಾನವನ್ನು ದ್ವಿಗುಣಗೊಳಿಸಬೇಕು. ಸಣ್ಣ ಶಾಲೆಗಳಿಗೆ ಕನಿಷ್ಠ ₹ 20 ಸಾವಿರದಿಂದ ₹ 2 ಲಕ್ಷದವರೆಗೆ ನೀಡಬೇಕು ಎಂದು ಹೇಳಲಾಗಿದೆ.

ಅಪೌಷ್ಟಿಕತೆಯಿಂದ ಬಳಲುವ 6 ತಿಂಗಳಿನಿಂದ 3 ವರ್ಷದ ಮಕ್ಕಳಿಗೆ ವಾರಕ್ಕೆ ಐದು ದಿನಗಳು ಮೊಟ್ಟೆ ವಿತರಣೆ ಮಾಡಬೇಕು. ಇತರೆ ಮಕ್ಕಳಿಗೂ ವಾರಕ್ಕೆ ಎರಡು ದಿನ ಮೊಟ್ಟೆ ಕೊಡಬೇಕು.

ಕ್ರೀಡಾ ಚಟುವಟಿಕೆಗಳಿಗೆ, ಅಸಂಘಟಿತ ಕಾರ್ಮಿಕರಿಗೆ, ದುರ್ಬಲ ವರ್ಗಗಳ ಅಭಿವೃದ್ಧಿಗೆ ಸ್ಥಳೀಯ ಸಂಸ್ಥೆಗಳಿಂದ ಸೆಸ್ ಸಂಗ್ರಹಿಸಬಹುದು. ವಿವಿಧ ಶುಲ್ಕಗಳನ್ನು ಪರಿಷ್ಕರಿಸಬಹುದು. ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಮಸೂದೆಯನ್ನು ತ್ವರಿತವಾಗಿ ಅಂತಿಮಗೊಳಿಸಬೇಕು. ಕೃಷಿ ಉತ್ಪನ್ನಗಳ ಮಾರುಕಟ್ಟೆಯ ಹೊರಗಿನ ಮಾರಾಟಕ್ಕೆ ಶುಲ್ಕ ವಿಧಿಸಬಾರದು, ಪರವಾನಗಿ ಕಡ್ಡಾಯ ಮಾಡಬೇಕು. ನಿರಂತರ ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳಲು ಪ್ರತಿ ಕಚೇರಿಯಲ್ಲೂ 'ಕಾರ್ಯ ಸುಧಾರಣಾ ತಂಡ' ರಚಿಸಬೇಕು ಎಂದು ವಿವರಿಸಲಾಗಿದೆ.

ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಗೃಹ ಇಲಾಖೆ ಎಸಿಎಸ್ ರಜನೀಶ್ ಗೋಯಲ್ ಹಾಗೂ ಆಯೋಗದ ಸಲಹೆಗಾರ ಪ್ರಸನ್ನ ಕುಮಾರ್ ಉಪಸ್ಥಿತರಿದ್ದರು.

ಕರ್ನಾಟಕ ಆಡಳಿತ ಸುಧಾರಣಾ ಆಯೋಗದ 4 ಮತ್ತು 5ನೇ ವರದಿಯನ್ನು ಆಯೋಗದ ಅಧ್ಯಕ್ಷ ಟಿ.ಎಂ.ವಿಜಯಭಾಸ್ಕರ್ ಶುಕ್ರವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಹಸ್ತಾಂತರಿಸಿದರು. ಸಚಿವ ಗೋವಿಂದ ಕಾರಜೋಳ ಇದ್ದಾರೆ.

ವೈದ್ಯ: ಶೇ 10ರಷ್ಟು ಎನ್‌ಆರ್‌ಐ ಕೋಟಾ

ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಎನ್‌ಆರ್‌ಐ ಕೋಟಾದ ಸೀಟುಗಳನ್ನು ಶೇ 5ರಿಂದ 10ರಷ್ಟು ಹೆಚ್ಚಳ ಮಾಡಬೇಕು ಎಂದು ಆಯೋಗ ವರದಿ ಹೇಳಿದೆ.

ಹರಿಯಾಣ, ರಾಜಸ್ಥಾನ, ಹಿಮಾಚಲ ಪ್ರದೇಶ, ಪಂಜಾಬ್, ಪುದುಚೇರಿ ರಾಜ್ಯಗಳು ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಅನಿವಾಸಿ ಭಾರತೀಯ (ಎನ್‌ಆರ್‌ಐ) ಕೋಟಾವನ್ನು ಒದಗಿಸುತ್ತಿವೆ. ರಾಜ್ಯದಲ್ಲೂ ಸೀಟುಗಳ ಸಂಖ್ಯೆ ಹೆಚ್ಚಿಸಬೇಕು. ಹೆಚ್ಚಿನ ಶುಲ್ಕ ವಿಧಿಸಬೇಕು. ಸಂಗ್ರಹವಾದ ಹಣವನ್ನು ಸರ್ಕಾರಿ ಆಸ್ಪತ್ರೆಗಳ ಅಭಿವೃದ್ಧಿಗೆ ಬಳಸಬೇಕು ಎಂದು ಸಲಹೆ ನೀಡಲಾಗಿದೆ.

ರೈಲ್ವೆ ಯೋಜನೆ: ರಾಜ್ಯಕ್ಕೆ ₹7,561 ಕೋಟಿ ಅನುದಾನ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕರ್ನಾಟಕದ ರೈಲ್ವೆ ಯೋಜನೆಗಳಿಗೆ ಈ ಸಾಲಿನ ಕೇಂದ್ರ ಬಜೆಟ್‌ನಲ್ಲಿ ₹7,561 ಕೋಟಿ ಅನುದಾನ ಮೀಸಲಿಡಲಾಗಿದೆ. ಇದು ಕರ್ನಾಟಕಕ್ಕೆ ವರ್ಷವೊಂದರಲ್ಲಿ ಒದಗಿಸಿರುವ ದಾಖಲೆಯ ಮೊತ್ತ' ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, '2009–2013ರ ಅವಧಿಗೆ ಹೋಲಿಸಿದರೆ ವರ್ಷವೊಂದಕ್ಕೆ ಒದಗಿಸಿರುವ ಅನುದಾನ ಒಂಬತ್ತು ಪಟ್ಟು (ಶೇ 900) ಹೆಚ್ಚಾಗಿದೆ. 2009–14ರ ಅವಧಿಯಲ್ಲಿ ವಾರ್ಷಿಕ ₹841 ಕೋಟಿ ಒದಗಿಸಲಾಗುತ್ತಿತ್ತು. ಇದರಲ್ಲಿ ರಾಜ್ಯದಲ್ಲಿ ಅನುಷ್ಠಾನವಾಗುತ್ತಿರುವ ಹಾಗೂ ರಾಜ್ಯದ ಮೂಲಕ ಹಾದು ಹೋಗುತ್ತಿರುವ ಯೋಜನೆಗಳು ಸೇರಿವೆ' ಎಂದು ತಿಳಿಸಿದರು.

'ಕರ್ನಾಟಕದಲ್ಲಿ ಹೊಸ ಮಾರ್ಗಗಳ ನಿರ್ಮಾಣ, ದ್ವಿಪಥ, ಗೇಜ್ ಪರಿವರ್ತನೆ ಸೇರಿದಂತೆ ವಿವಿಧ ಮೂಲಸೌಕರ್ಯ ಕಾಮಗಾರಿಗಳಿಗೆ ಒದಗಿಸುತ್ತಿರುವ ಹಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಕರ್ನಾಟಕದಲ್ಲಿ ₹49,336 ಕೋಟಿ ವೆಚ್ಚದ 4,330 ಕಿ.ಮೀ. ಕಾಮಗಾರಿಗಳು ವಿವಿಧ ಹಂತದಲ್ಲಿವೆ. ಇದರಲ್ಲಿ 21 ಹೊಸ ಯೋಜನೆಗಳು ಹಾಗೂ 11 ದ್ವಿಪಥ ಕಾಮಗಾರಿಗಳು ಸೇರಿವೆ' ಎಂದು ಮಾಹಿತಿ ನೀಡಿದರು.

'ರಾಜ್ಯದಲ್ಲಿ 55 ನಿಲ್ದಾಣಗಳ ಅಭಿ ವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಬೆಂಗಳೂರಿನ ಬೈಯಪ್ಪನಹಳ್ಳಿಯ ವಿಶ್ವೇಶ್ವರಯ್ಯ ಟರ್ಮಿನಲ್ ಅನ್ನು ಅಭಿವೃದ್ಧಿಪಡಿಸಲಾಗಿದ್ದು, ಇದು ಇತರ ನಿಲ್ದಾಣಗಳ ಅಭಿವೃದ್ಧಿಗೆ ಮಾದರಿ' ಎಂದು ಅವರು ಹೇಳಿದರು.

'ರಾಜ್ಯದಲ್ಲಿ ರೈಲ್ವೆ ಯೋಜನೆಗಳ ಅಭಿವೃದ್ಧಿಗೆ ಕರ್ನಾಟಕ ಸರ್ಕಾರ ಉತ್ತಮ ಸಹಕಾರ ನೀಡುತ್ತಿದೆ. ಯೋಜನೆಗೆ ರಾಜ್ಯದ ಪಾಲು ಭರಿಸುವುದು, ಭೂಸ್ವಾಧೀನ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ವಿಚಾರದಲ್ಲಿ ಅಗತ್ಯ ನೆರವನ್ನು ನೀಡುತ್ತಿದೆ' ಎಂದರು.

ನೈರುತ್ಯ ರೈಲ್ವೆಗೆ ₹9200 ಕೋಟಿ: ನೈರುತ್ಯ ರೈಲ್ವೆ ವಿಭಾಗಕ್ಕೆ ₹9200 ಕೋಟಿ ನಿಗದಿಪಡಿಸಲಾಗಿದ್ದು, ಕೇಂದ್ರ ಸರ್ಕಾರ ₹527 ಕೋಟಿ ನೀಡಲಿದೆ. ಉಳಿದ ₹880 ಕೋಟಿಯನ್ನು ರಾಜ್ಯ ಸರ್ಕಾರ ಭರಿಸಬೇಕಿದೆ. ಒಟ್ಟು 22 ಯೋಜನೆಗಳಿಗೆ ಅನುದಾನ ಹಂಚಿಕೆ ಮಾಡಲಾಗಿದೆ ಎಂದು ರೈಲ್ವೆ ಇಲಾಖೆಯ ಪಿಂಕ್ ಬುಕ್‌ನಲ್ಲಿ ತಿಳಿಸಲಾಗಿದೆ.

ರೈಲು ಮಾರ್ಗಗಳ ದ್ವಿಪಥ ಕಾಮಗಾರಿಗೆ ₹1,329 ಕೋಟಿ ಹಂಚಿಕೆ ಮಾಡಲಾಗಿದೆ.

11ನೇ ಪುಟ ನೋಡಿ

10 ಯೋಜನೆಗಳಿಗೆ ತಲಾ ₹ 1 ಸಾವಿರ!

ರಾಜ್ಯದ 10 ಯೋಜನೆಗಳಿಗೆ ತಲಾ ₹1 ಸಾವಿರ ಅನುದಾನ ಮೀಸಲಿಡಲಾಗಿದೆ.

260 ಕಿ.ಮೀ. ಉದ್ದದ ಬೆಂಗಳೂರು–ಸತ್ಯಮಂಗಲಂ ರೈಲು ಮಾರ್ಗವೂ ಇದರಲ್ಲಿ ಸೇರಿದೆ. ಕೆಲವು ತಿಂಗಳ ಹಿಂದೆ ಶಂಕುಸ್ಥಾಪನೆ ನೆರವೇರಿಸಿದ ಮೈಸೂರಿನ ನವಲೂರು ಗೂಡ್ಸ್ ಶೆಡ್ ಕಾಮಗಾರಿಗೆ ಸಹ ₹1 ಸಾವಿರ ಒದಗಿಸಲಾಗಿದೆ. ಯಶವಂತಪುರ– ಚಿಕ್ಕಬಾಣಾವರ ವಿದ್ಯುದೀಕರಣ, ಬೆಂಗಳೂರು ಕಂಟೋನ್ಮೆಂಟ್–ವೈಟ್‌ಫೀಲ್ಡ್ ಸಿಗ್ನಲಿಂಗ್ ಕಾಮಗಾರಿ ಸಹ ಈ ಪಟ್ಟಿಯಲ್ಲಿದೆ. 'ಒಂದು ವೇಳೆ ಅನುದಾನ ಮೀಸಲಿಡದಿದ್ದರೆ ಯೋಜನೆಯನ್ನು ಕೈಬಿಟ್ಟಂತೆ. ಯೋಜನೆಯ ಪ್ರಸ್ತಾವವನ್ನು ಜೀವಂತವಾಗಿ ಇಡುವ ಉದ್ದೇಶದಿಂದ ಈ ರೀತಿ ಅನುದಾನ ಒದಗಿಸಲಾಗುತ್ತದೆ' ಎಂದು ರೈಲ್ವೆ ಅಧಿಕಾರಿಯೊಬ್ಬರು ತಿಳಿಸಿದರು.

ಜಿಲ್ಲಾ, ಅಧೀನ ನ್ಯಾಯಾಲಯದಲ್ಲಿ 6.72 ಲಕ್ಷ ಪ್ರಕರಣಗಳು ಬಾಕಿ: ರಿಜಿಜು

ನವದೆಹಲಿ (ಪಿಟಿಐ): ವಿವಿಧ ಜಿಲ್ಲಾ ಮತ್ತು ಅಧೀನ ನ್ಯಾಯಾಲಯಗಳಲ್ಲಿ ಕಳೆದ 20 ವರ್ಷಗಳಿಂದ ಸುಮಾರು 6.72 ಲಕ್ಷ ಪ್ರಕರಣಗಳು ಬಾಕಿ ಉಳಿದಿವೆ ಎಂದು ಸರ್ಕಾರ ಲೋಕಸಭೆಯಲ್ಲಿ ಶುಕ್ರವಾರ ತಿಳಿಸಿದೆ.

ಹೈಕೋರ್ಟ್‌ನಲ್ಲಿ 2,94,547 ಪ್ರಕರಣಗಳು ಇತ್ಯರ್ಥವಾಗದೆ ಉಳಿದಿವೆ.

ಈ ಕುರಿತು ಲಿಖಿತ ರೂಪದಲ್ಲಿ ಉತ್ತರ ನೀಡಿರುವ ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರು, ಕಳೆದ 20 ವರ್ಷಗಳಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ 2023 ಜನವರಿ 27ರವರೆಗೆ ಬಾಕಿ ಉಳಿದಿರುವ ಪ್ರಕರಣಗಳು 208. ಈ ಮಾಹಿತಿಯನ್ನು ಪ್ರಕರಣ ನಿರ್ವಹಣೆಗಳ ಸಂಯೋಜಿತ ಮಾಹಿತಿ ವ್ಯವಸ್ಥೆ (ಐಸಿಎಂಐಎಸ್)ಯಿಂದ ಪಡೆಯಲಾಗಿದೆ ಎಂದು ಹೇಳಿದ್ದಾರೆ.

ಕಳೆದ 2 ದಶಕಗಳಿಂದ ಹೈಕೋರ್ಟ್‌ಗಳಲ್ಲಿ 2,94,547 ಪ್ರಕರಣಗಳು ಮತ್ತು ಜಿಲ್ಲಾ ಹಾಗೂ ಅಧೀನ ನ್ಯಾಯಾಲಯಗಳಲ್ಲಿ 6,71,543 ಪ್ರಕರಣಗಳು 2023 ಫೆ. 1ರವರೆಗೆ ಬಾಕಿ ಉಳಿದಿವೆ ಎಂದೂ ತಿಳಿಸಿದ್ದಾರೆ.

ಸಂಚಾರ ನಿಯಮ ಉಲ್ಲಂಘನೆ ಶೇ 50ರಷ್ಟು ದಂಡ ಪಾವತಿಗೆ ಆಸಕ್ತಿ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ದಂಡ ಪಾವತಿ ಮೇಲೆ ಇದೇ 11ರ ವರೆಗೆ ಶೇ 50ರಷ್ಟು ರಿಯಾಯಿತಿ ನೀಡಲಾಗಿದ್ದು, ಬಾಕಿ ದಂಡ ಪಾವತಿಸಲು ಜನ ಹೆಚ್ಚು ಆಸಕ್ತಿ ತೋರುತ್ತಿದ್ದಾರೆ.

ಸಂಚಾರ ಠಾಣೆ ಹಾಗೂ ಆನ್‌ಲೈನ್ ಮೂಲಕ ದಂಡ ಪಾವತಿಗೆ ಅವಕಾಶ ಕಲ್ಪಿಸಲಾಗಿದೆ. ಬೆಂಗಳೂರು, ಮೈಸೂರು, ಮಂಗಳೂರು, ಬೆಳಗಾವಿ, ಕಲಬುರಗಿ, ಹುಬ್ಬಳ್ಳಿ–ಧಾರವಾಡ ಕಮಿಷನರೇಟ್ ವ್ಯಾಪ್ತಿಯಲ್ಲಿ ಸಂಚಾರ ನಿಯಮ ಉಲ್ಲಂಘನೆ ಸಂಬಂಧ ಜಾರಿಯಾದ 'ಇ-ಚಲನ್' ಪ್ರಕರಣಗಳಿಗೆ ಈ ಆದೇಶ ಅನ್ವಯವಾಗಲಿದೆ.

ಇನ್ನೊಂದು ಸುದ್ದಿ 03

ಟರ್ಮಿನಲ್–2: 15ರಿಂದ ಏರ್‌ಏಷ್ಯಾ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಹೊಸದಾಗಿ ಆರಂಭಿಸಲಾದ ಎರಡನೇ ಟರ್ಮಿನಲ್‌ನಲ್ಲಿ 'ಏರ್‌ಏಷ್ಯಾ ಇಂಡಿಯಾ' ಇದೇ 15ರಿಂದ ತನ್ನ ಕಾರ್ಯಾಚರಣೆಯನ್ನು ಆರಂಭಿಸಲಿದೆ.

'ಏರ್‌ಏಷ್ಯಾ ಇಂಡಿಯಾ'ಗೆ ಬೆಂಗಳೂರು ತವರು ನೆಲೆಯಾಗಿದ್ದು, ಅತಿದೊಡ್ಡ ಕೇಂದ್ರವಾಗಿದೆ. ದೆಹಲಿ, ಗೋವಾ, ಮುಂಬೈ, ಹೈದರಾಬಾದ್, ಕೋಲ್ಕತ್ತ, ಭುವನೇಶ್ವರ, ಗುವಾಹಟಿ, ಪುಣೆ, ಜೈಪುರ, ಲಖನೌ, ರಾಂಚಿ, ಕೊಚ್ಚಿ, ಚೆನ್ನೈ, ವಿಶಾಖಪಟ್ಟಣ ಮತ್ತು ಸೂರತ್‌ಗೆ ಬೆಂಗಳೂರಿನಿಂದ ಪ್ರತಿ ದಿನ 43 ವಿಮಾನಗಳು ಸಂಚರಿಸುತ್ತಿವೆ ಎಂದು ಪ್ರಕಟಣೆ ತಿಳಿಸಿದೆ.

ಈ ಬಗ್ಗೆ ವಿವರ ನೀಡಿರುವ ಏರ್ ಏಷ್ಯಾ ಇಂಡಿಯಾದ ಅಧ್ಯಕ್ಷ ಅಲೋಕ್ ಸಿಂಗ್, 'ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುವ ಹೊಸ ಟರ್ಮಿನಲ್‌ನಲ್ಲಿ ಕಾರ್ಯನಿರ್ವಹಿಸಲು ಸಂತಸ ತಂದಿದೆ. ಪ್ರತಿ ದಿನ ಇಲ್ಲಿಂದ ತೆರಳಲಿರುವ 43 ವಿಮಾನಗಳಿಗೆ ಈ ಟರ್ಮಿನಲ್ ಅತಿ ದೊಡ್ಡ ನೆಲೆಯಾಗಲಿದೆ' ಎಂದಿದ್ದಾರೆ.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಹರಿ ಮರಾರ್, 'ಬಿಎಲ್‌ಆರ್ ಏರ್‌ಪೋರ್ಟ್‌ನ ಹೊಸ ಟರ್ಮಿನಲ್–2ನಲ್ಲಿ ಏರ್‌ಏಷ್ಯಾ ಇಂಡಿಯಾದ ಪ್ರಯಾಣಿಕರನ್ನು ಸ್ವಾಗತಿಸಲು ನಾವು ಸಜ್ಜಾಗಿದ್ದೇವೆ' ಎಂದಿದ್ದಾರೆ.



'ಶಂಕರಾಭರಣಂ' ಖ್ಯಾತಿಯ ನಿರ್ದೇಶಕ ಕೆ.ವಿಶ್ವನಾಥ್ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಹೈದರಾಬಾದ್: 'ಕಲಾತಪಸ್ವಿ' ಎಂದೇ ಖ್ಯಾತರಾಗಿದ್ದ ನಿರ್ದೇಶಕ, 'ಶಂಕರಾಭರಣಂ' ಸೇರಿದಂತೆ ಹಲವು ಶ್ರೇಷ್ಠ ಚಲಚಿತ್ರಗಳನ್ನು ನಿರ್ದೇಶಿಸಿದ್ದ ಕಾಶೀನಾಥುನಿ ವಿಶ್ವನಾಥ್ (92) ಗುರುವಾರ ತಡರಾತ್ರಿ ಇಲ್ಲಿ ನಿಧನರಾದರು. ಅವರು ವಯೋಸಹಜ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದರು.

11ನೇ ಪುಟ ನೋಡಿ

ಬ್ಯಾಂಕ್ ಜೊತೆ ಅದಾನಿ ಸಮೂಹ ಮಾತುಕತೆ

'ಅದಾನಿ'ಗೆ ಸಾಲ: ಪ್ರಕ್ರಿಯೆ ಬಿಗಿ?

ಮುಂಬೈ/ನವದೆಹಲಿ (ರಾಯಿಟರ್ಸ್/ಎಎಫ್‌ಪಿ/ಪಿಟಿಐ): ಅದಾನಿ ಸಮೂಹಕ್ಕೆ ಹೊಸ ಸಾಲ ಮಂಜೂರು ಮಾಡುವ ಪ್ರಕ್ರಿಯೆಯನ್ನು ಬಿಗಿಗೊಳಿಸಲು ತೀರ್ಮಾನ ಮಾಡಿರುವುದಾಗಿ ಆರು ಬ್ಯಾಂಕ್‌ಗಳ ಪ್ರತಿನಿಧಿಗಳು ಶುಕ್ರವಾರ ಹೇಳಿದ್ದಾರೆ.

ಇವು ಅದಾನಿ ಸಮೂಹಕ್ಕೆ ಈಗಾಗಲೇ ಸಾಲ ನೀಡಿರುವ ಬ್ಯಾಂಕ್‌ಗಳು. ಆದರೆ ಈ ಬ್ಯಾಂಕ್‌ಗಳ ಹೆಸರುಗಳನ್ನು ಸುದ್ದಿಸಂಸ್ಥೆ ರಾಯಿಟರ್ಸ್ ಉಲ್ಲೇಖಿಸಿಲ್ಲ.

ಈ ನಡುವೆ ಹೇಳಿಕೆಯೊಂದನ್ನು ಬಿಡುಗಡೆ ಮಾಡಿರುವ ಆರ್‌ಬಿಐ, ದೇಶದ ಬ್ಯಾಂಕಿಂಗ್ ವಲಯವು ಸ್ಥಿರವಾಗಿದ್ದು, ತಾನು ಎಲ್ಲ ಬ್ಯಾಂಕ್‌ಗಳ ಮೇಲೆ ನಿರಂತರವಾಗಿ ನಿಗಾ ಇರಿಸಿರುವುದಾಗಿ ಹೇಳಿದೆ. ಅದಾನಿ ಸಮೂಹದ ಸಾಲದ ವಿಚಾರವಾಗಿ ಕಳವಳಗಳು ವ್ಯಕ್ತವಾಗಿರುವ ಸಂದರ್ಭದಲ್ಲಿ ಈ ಹೇಳಿಕೆ ಬಂದಿದೆ. ಆದರೆ ಆರ್‌ಬಿಐ ಹೇಳಿಕೆಯಲ್ಲಿ ಅದಾನಿ ಸಮೂಹದ ಹೆಸರು ಉಲ್ಲೇಖವಾಗಿಲ್ಲ.

ಬ್ಯಾಂಕ್‌ಗಳ ಕಳವಳವನ್ನು ನಿವಾರಿಸುವ ಯತ್ನದ ಭಾಗವಾಗಿ ಅದಾನಿ ಸಮೂಹವು ಹಲವು ಬ್ಯಾಂಕ್‌ಗಳ ಪ್ರತಿನಿಧಿಗಳ ಜೊತೆ ಮಾತುಕತೆ ನಡೆಸಿದೆ.

ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯ ವರದಿ ಪ್ರಕಟವಾದ ನಂತರದಲ್ಲಿ ಅದಾನಿ ಸಮೂಹದ ಹಲವು ಕಂಪನಿಗಳ ಷೇರು ಮೌಲ್ಯವು ಭಾರಿ ಪ್ರಮಾಣದಲ್ಲಿ ಕುಸಿದಿದೆ. ವರದಿಯಲ್ಲಿನ ಆರೋಪಗಳನ್ನು ಸಮೂಹ ಅಲ್ಲಗಳೆದಿದೆ. ಈ ನಡುವೆ ಅದಾನಿ ಸಮೂಹದ ಪ್ರತಿನಿಧಿಗಳು ಎಸ್‌ಬಿಐ ಅಧಿಕಾರಿಗಳ ಜೊತೆ ಮಾತುಕತೆ ನಡೆಸಿದ್ದು, ಸಾಲ ಮರುಪಾವತಿ ವಿಚಾರದಲ್ಲಿ ಯಾವ ಸಮಸ್ಯೆಯೂ ಇಲ್ಲ ಎಂದು ಹೇಳಿದ್ದಾರೆ ಎನ್ನಲಾಗಿದೆ.

ಸಮೂಹದ ವಿರುದ್ಧ ಬಂದಿರುವ ಆರೋಪಗಳ ಬಗ್ಗೆ ಜಂಟಿ ಸಂಸದೀಯ ಸಮಿತಿಯ (ಜೆಪಿಸಿ) ತನಿಖೆ ಆಗಬೇಕು ಹಾಗೂ ಆರೋಪಗಳ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕು ಎಂದು ವಿರೋಧ ಪಕ್ಷಗಳು ಶುಕ್ರವಾರ ಸಂಸತ್ತಿನಲ್ಲಿ ಘೋಷಣೆ ಕೂಗಿವೆ. ಎರಡೂ ಸದನಗಳ ಕಲಾಪವನ್ನು ಸೋಮವಾರಕ್ಕೆ ಮುಂದೂಡಲಾಗಿದೆ.

ಎಸ್‌ಬಿಐ ಹೇಳಿಕೆ: ಎಸ್‌ಬಿಐ ತಾನು ಅದಾನಿ ಸಮೂಹಕ್ಕೆ ನೀಡಿರುವ ಸಾಲಗಳ ಒಟ್ಟು ಮೊತ್ತವು ₹ 27 ಸಾವಿರ ಕೋಟಿ ಎಂದು ತಿಳಿಸಿದೆ. ಅದಾನಿ ಸಮೂಹವು ಪಡೆದಿರುವ ಒಟ್ಟು ಸಾಲಗಳಲ್ಲಿ ವಿವಿಧ ಬ್ಯಾಂಕ್‌ಗಳಿಂದ ಪಡೆದಿರುವ ಸಾಲದ ಪ್ರಮಾಣವು ಶೇ 38ರಷ್ಟು ಆಗುತ್ತದೆ ಎಂದು ಜೆಫ್ರಿಸ್ ವರದಿ ಹೇಳಿದೆ.

11ನೇ ಪುಟ ನೋಡಿ

ಹಿಂಡನ್‌ಬರ್ಗ್ ವರದಿ: ತನಿಖೆ ನಡೆಸಲು ಸುಪ್ರೀಂ ಕೋರ್ಟ್‌ಗೆ ಮನವಿ

ನವದೆಹಲಿ (ಪಿಟಿಐ): ಅದಾನಿ ಸಮೂಹ ಕಂಪನಿಗಳ ವಿರುದ್ಧ ಅಮೆರಿಕದ ಸಂಶೋಧನಾ ಸಂಸ್ಥೆ ಹಿಂಡನ್‌ಬರ್ಗ್ ರಿಸರ್ಚ್ ಮಾಡಿರುವ 'ಕ್ರಿಮಿನಲ್ ಪಿತೂರಿ' ಬಗ್ಗೆ ತನಿಖೆ ನಡೆಸಲು ಕೇಂದ್ರ ಮತ್ತು ಸೆಬಿಗೆ ನಿರ್ದೇಶನ ನೀಡುವಂತೆ ಕೋರಿ ವಕೀಲ ಮನೋಹರ್ ಲಾಲ್ ಶರ್ಮಾ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಹಿಂಡನ್ ಬರ್ಗ್ ರಿಸರ್ಚ್‌ನ ಅಮೆರಿಕ ನಿವಾಸಿ ನೇಟ್ ಅಂಡರ್ಸನ್ ಮತ್ತು ಅವರ ಭಾರತೀಯ ಕಂಪನಿಗಳು ಕ್ರಿಮಿನಲ್ ಪಿತೂರಿ ನಡೆಸಿವೆ. ಅದಾನಿ ಸಮೂಹವು ಷೇರು ಮಾರುಕಟ್ಟೆಯಲ್ಲಿ ಹಾಗೂ ಉದ್ಯಮದಲ್ಲಿ ಅವ್ಯವಹಾರ ನಡೆಸಿದೆ ಎಂಬುದಾಗಿ 'ಹಿಂಡನ್‌ಬರ್ಗ್ ರಿಸರ್ಚ್' ಸಂಸ್ಥೆ ಜ.25ರಂದು ಬಿಡುಗಡೆ ಮಾಡಿದ ತನ್ನ ವರದಿಯಲ್ಲಿ ಆರೋಪಿಸಿದೆ. ಆದರೆ, ಇದು ಕಪೋಲಕಲ್ಪಿತ ವರದಿ ಎಂದು ಅರ್ಜಿದಾರರು ಹೇಳಿದ್ದಾರೆ.

'ಸೆಬಿ, ಅದಾನಿ ಸಮೂಹ ಷೇರುಗಳ ವಹಿವಾಟು ಸ್ಥಗಿತಗೊಳಿಸದೆ ಮುಗ್ಧ ಹೂಡಿಕೆದಾರರ ಶೋಷಣೆಗೆ ಅವಕಾಶ ನೀಡಿತು' ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

ಒಳ ಪುಟಗಳು

- ರಾಜ್ಯ ಗೆಲ್ಲಲು ಗುಜರಾತ್, ಉ.ಪ್ರ ಮಾದರಿ ಪ್ರಯೋಗ 5
- ಕೆಪಿಎಸ್‌ಸಿ ಸದಸ್ಯರ ಸಂಖ್ಯೆ 8ಕ್ಕೆ ಇಳಿಸಲು ಶಿಫಾರಸು 6
- ಪಂಚಮಸಾಲಿ ಮೀಸಲು: ಹೈಕೋರ್ಟ್‌ಗೆ ವರದಿ ಸಲ್ಲಿಕೆ 7

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚನೆ

ಬಿಬಿಸಿ ಸಾಕ್ಷ್ಯಚಿತ್ರಕ್ಕೆ ತಡೆ: ದಾಖಲೆ ಸಲ್ಲಿಸಿ

ನವದೆಹಲಿ (ಪಿಟಿಐ): ಗುಜರಾತ್ ಗಲಭೆ ಕುರಿತು ಬಿಬಿಸಿ ನಿರ್ಮಿತ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ತಡೆ ನೀಡಿರುವ ನಿರ್ಧಾರಕ್ಕೆ ಸಂಬಂಧಿಸಿದ ಮೂಲ ದಾಖಲೆಗಳನ್ನು ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ.

ಈ ಕುರಿತ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಎಂ.ಎಂ. ಸುಂದ್ರೇಶ್ ಅವರಿದ್ದ ನ್ಯಾಯಪೀಠ, 3 ವಾರಗಳ ಒಳಗಾಗಿ ಈ ವಿಷಯ ಕುರಿತು ಪ್ರಮಾಣಪತ್ರ ಸಲ್ಲಿಸಬೇಕು. ಮುಂದಿನ ವಿಚಾರಣೆ ವೇಳೆ ಮೂಲ ದಾಖಲೆಗಳನ್ನು ಹಾಜರುಪಡಿಸಬೇಕು ಎಂದು ಸೂಚಿಸಿತು. ವಿಚಾರಣೆಯನ್ನು ಏಪ್ರಿಲ್‌ಗೆ ಮುಂದೂಡಿ ನ್ಯಾಯಪೀಠ ಆದೇಶಿಸಿತು.

ಸಾಕ್ಷ್ಯಚಿತ್ರ ಪ್ರಸಾರಕ್ಕೆ ತಡೆ ನೀಡುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಪತ್ರಕರ್ತ ಎನ್.ರಾಮ್, ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ, ಸಾಮಾಜಿಕ ಕಾರ್ಯಕರ್ತ ಹಾಗೂ ವಕೀಲ ಪ್ರಶಾಂತ್‌ಭೂಷಣ್, ವಕೀಲ ಎಂ.ಎಲ್.ಶರ್ಮಾ ಅರ್ಜಿ ಸಲ್ಲಿಸಿದ್ದಾರೆ.

'ನಾವು ನೋಟಿಸ್ ನೀಡುತ್ತಿದ್ದೇವೆ. ಮುಂದಿನ ವಿಚಾರಣೆಯ ದಿನಾಂಕದಂದು ಪ್ರತಿವಾದಿಗಳು ಮೂಲ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತಾರೆ' ಎಂದು ನ್ಯಾಯಪೀಠ ಹೇಳಿದೆ. ವಿಚಾರಣೆ ಆರಂಭದಲ್ಲಿ ನ್ಯಾಯ ಪೀಠ, 'ಈ ವಿಷಯದಲ್ಲಿ ಹೈಕೋರ್ಟ್ ಅನ್ನು ಏಕೆ ಸಂಪರ್ಕಿಸಲಿಲ್ಲ' ಎಂದು ಅರ್ಜಿದಾರರನ್ನು ಕೇಳಿತು.

ರಾಮ್ ಮತ್ತು ಇತರರ ಪರವಾಗಿ ಹಾಜರಾದ ಹಿರಿಯ ವಕೀಲ ಸಿ.ಯು. ಸಿಂಗ್, ಸಾಕ್ಷ್ಯಚಿತ್ರ ನಿರ್ಬಂಧಿಸಲು ಸರ್ಕಾರ ಮಾಹಿತಿ ತಂತ್ರಜ್ಞಾನ (ಐಟಿ) ನಿಯಮಗಳ ಅಡಿ ತುರ್ತು ಅಧಿಕಾರ ಬಳಸಿದೆ. ಎಲ್ಲಾ ಮೂಲ ದಾಖಲೆಗಳನ್ನು ಸಲ್ಲಿಸಲು ಕೇಂದ್ರಕ್ಕೆ ನಿರ್ದೇಶನ ನೀಡುವಂತೆ ಕೋರುತ್ತಿದ್ದೇನೆ ಎಂದು ಅವರು ಹೇಳಿದರು.

'ಇಂಡಿಯಾ: ದಿ ಮೋದಿ ಕ್ವೆಶ್ಚನ್' ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ತಡೆ ನೀಡಿರುವುದು ದುರುದ್ದೇಶಪೂರಿತ ಮತ್ತು ಅಸಾಂವಿಧಾನಿಕ ಎಂದು ಅರ್ಜಿದಾರರೊಬ್ಬರು ಆರೋಪಿಸಿದ್ದಾರೆ.

ರಾಮ್ ಅವರು ಮನವಿ ಸಲ್ಲಿಸಿದ ನಂತರ ಪ್ರತಿಕ್ರಿಯಿಸಿದ ಕಾನೂನು ಸಚಿವ ಕಿರಣ್ ರಿಜಿಜು, 'ಸುಪ್ರೀಂ ಕೋರ್ಟ್‌ನ ಅಮೂಲ್ಯ ಸಮಯವನ್ನು ಈ ರೀತಿಯಾಗಿ ವ್ಯರ್ಥ ಮಾಡಲಾಗುತ್ತಿದೆ. ಮತ್ತೊಂದೆಡೆ ಸಾವಿರಾರು ಜನರು ನ್ಯಾಯಾಲಯದ ದಿನಾಂಕಕ್ಕಾಗಿ ಕಾಯುತ್ತಿದ್ದಾರೆ' ಎಂದು ಟ್ವೀಟ್ ಮಾಡಿದ್ದರು.

ಸ್ಯಾಂಕಿ ಟ್ಯಾಂಕ್ ರಸ್ತೆಯಲ್ಲಿ ಮೇಲ್ಸೇತುವೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಯಾಂಕಿ ಟ್ಯಾಂಕ್ ರಸ್ತೆಯಲ್ಲಿ ಮೇಲ್ಸೇತುವೆ ನಿರ್ಮಾಣ ಹಾಗೂ ರಸ್ತೆ ಅಗಲೀಕರಣ ಮಾಡುವ ಬಿಬಿಎಂಪಿ ನಿರ್ಧಾರಕ್ಕೆ ಆಮ್ ಆದ್ಮಿ ಪಾರ್ಟಿ ವಿರೋಧ ವ್ಯಕ್ತಪಡಿಸಿದೆ.

'ಬಿಬಿಎಂಪಿಯಲ್ಲಿ ಎಎಪಿ ಅಧಿಕಾರಕ್ಕೆ ಬಂದರೆ ಈ ಯೋಜನೆಯನ್ನು ರದ್ದುಪಡಿಸಿ ಜನರ ಅಗತ್ಯಕ್ಕೆ ತಕ್ಕಂತೆ ವಿಶ್ವದರ್ಜೆಯ ಮೂಲಸೌಕರ್ಯಗಳನ್ನು ಕಲ್ಪಿಸಲಾಗು-ವುದು' ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ಹೇಳಿದ್ದಾರೆ.

'ಈಗಾಗಲೇ ಇಂತಹ ಅನೇಕ ಯೋಜನೆಗಳು ನಗರಕ್ಕೆ ಸಾಕಷ್ಟು ಹಾನಿ ಮಾಡಿದ್ದು, ಅವುಗಳ ಸಾಲಿಗೆ ಮತ್ತೊಂದನ್ನು ಸೇರ್ಪಡೆ ಮಾಡುವ ಅಗತ್ಯವಿಲ್ಲ. ನಗರದ ಯೋಜನೆಯನ್ನು ಮಹಾನಗರ ಯೋಜನಾ ಸಮಿತಿಯು ರೂಪಿಸಬೇಕು ಹಾಗೂ ಸಂಚಾರ ವ್ಯವಸ್ಥೆಯ ಯೋಜನೆಗಳನ್ನು ಬೆಂಗಳೂರು ಮಹಾನಗರ ರಸ್ತೆ ಸಾರಿಗೆ ಪ್ರಾಧಿಕಾರವು ಗುರುತಿಸಿ, ಯೋಜನೆ ರೂಪಿಸಬೇಕು. ಬಿಬಿಎಂಪಿಯಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದ್ದು, ಮೇಲ್ಸೇತುವೆ ಯೋಜನೆಯನ್ನು ಬಿಬಿಎಂಪಿ ಕೈಗೆತ್ತಿಕೊಂಡರೆ ಅದು ಮತ್ತೊಂದು ದುರಂತವಾಗಲಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಚುನಾಯಿತ ಸರ್ಕಾರ ಮೊದಲು ಜನರ ಭಾವನೆ ಗೌರವಿಸಬೇಕು. ಯೋಜನೆಯನ್ನು ರೂಪಿಸುವಾಗ ಜನರನ್ನು ಸಂಪರ್ಕಿಸಿ ಅವರ ಅಭಿಪ್ರಾಯವನ್ನು ಕೇಳಿಲ್ಲ. ಈ ರೀತಿ ಜನರ ಅಭಿಪ್ರಾಯವನ್ನೂ ನಿರ್ಲಕ್ಷಿಸಿ ಯೋಜನೆಯ ಪ್ರಸ್ತಾವ ರೂಪಿಸುವುದನ್ನು ಆಮ್ ಆದ್ಮಿ ಪಾರ್ಟಿಯ ಕರ್ನಾಟಕ ಘಟಕ ವಿರೋಧಿಸುತ್ತದೆ' ಎಂದು ಪೃಥ್ವಿ ರೆಡ್ಡಿ ಹೇಳಿದ್ದಾರೆ.

ಜಿಲ್ಲಾ ಪಂಚಾಯತ್, ಕೋಲಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಜಿಲ್ಲಾ ಒಳಾಂಗಣ ಕ್ರೀಡಾಂಗಣ, ಸರ್ಕಾರಿ ಪ್ರಥಮ ದರ್ಜೆ ಬಾಲಕರ ಕಾಲೇಜು ಮುಂಭಾಗ, ಬಂಗಾರಪೇಟೆ ರಸ್ತೆ, ಕೋಲಾರ ಜಿಲ್ಲೆ–563101. ದೂರವಾಣಿ: 08152–222320
ಇ–ಮೇಲ್: adysskolar@gmail.com
ಸಂ: ಸ.ನಿ./ಯು.ಸ.ಕ್ರೀ.ಇ/ಕೋ/ನ.ಕ್ರೀ.ಸಾ/02/2022–23 ದಿನಾಂಕ: 01.02.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅಲ್ಪಾವಧಿ ಟೆಂಡರ್ ಪ್ರಕಟಣೆಯ ಸಂಖ್ಯೆ: **dyss/2022-23/ind850** ದಿನಾಂಕ: 01.02.2023.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೋಲಾರ ಜಿಲ್ಲೆ ವತಿಯಿಂದ 2022–23ನೇ ಸಾಲಿನ ನರೇಗಾ ಯೋಜನೆಯಡಿ ಸರ್ಕಾರಿ ಶಾಲೆಯಲ್ಲಿ ಕ್ರೀಡಾ ಅಂಕಣಗಳನ್ನು ನಿರ್ಮಿಸಿರುವ ಸರ್ಕಾರಿ ಶಾಲೆಗಳಿಗೆ **ರೂ.6.50 ಲಕ್ಷಗಳಿಗೆ** ಕ್ರೀಡಾ ಸಾಮಾಗ್ರಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಮುಖಾಂತರ ನಿಯಮಾನುಸಾರ ಖರೀದಿಸುವ ಸಲುವಾಗಿ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಲಿಂಕ್ **https://eproc.karnataka.gov.in** (1) ಅರ್ಜಿ ಶುಲ್ಕ: ಇ–ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ (ಹಿಂತಿರುಗಿಸಲಾಗುವುದಿಲ್ಲ). (2) ಇ.ಎಂ.ಡಿ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಸಲ್ಲಿಸುವುದು): **ರೂ.16,250/–**. (3) ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **15.02.2023 ಸಂಜೆ 5.00 ಗಂಟೆಯೊಳಗೆ**. (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **16.02.2023 ಸಂಜೆ 5.00 ಗಂಟೆಗೆ**. (5) ಆರ್ಥಿಕ ಬಿಡ್ ತೆರೆಯುವ ದಿನಾಂಕ: **17.02.2023 ಸಂಜೆ 5.00 ಗಂಟೆಗೆ**.

ಸಹಿ/– ಸಹಾಯಕ ನಿರ್ದೇಶಕರು,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೋಲಾರ ಜಿಲ್ಲೆ, ಕೋಲಾರ.

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 499/ಎಂ.ಸಿ.ಎ/2022–23

ಕೋವಿಡ್–19. ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಗ್ರೀನ್ ಸಿಟಿ ಅಪಾರ್ಟ್‌ಮೆಂಟ್‌ನಲ್ಲಿ ಮೇಳಕ್ಕೆ ಚಾಲನೆ

ಬಿಬಿಎಂಪಿ: ಖಾತಾ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಮೂರು ದಿನಗಳ 'ಖಾತಾ ಮೇಳ'ಕ್ಕೆ ವಲಯ ಆಯುಕ್ತ ಜಯರಾಮ್ ರಾಯಪುರ ಶುಕ್ರವಾರ ಚಾಲನೆ ನೀಡಿದರು.

ಬಿಟಿಎಂ ಲೇಔಟ್ 2ನೇ ಹಂತದ ಬಳಿಯಿರುವ ಗ್ರೀನ್ ಸಿಟಿ ಅಪಾರ್ಟ್‌ಮೆಂಟ್‌ನಲ್ಲಿ ಮೇಳಕ್ಕೆ ಚಾಲನೆ ನೀಡಲಾಯಿತು.

'ಪಾಲಿಕೆಯಿಂದ ಆಸ್ತಿ ತೆರಿಗೆ ಹಾಗೂ ಖಾತೆ ಮಾಡಿಕೊಡುವ ವಿಚಾರದಲ್ಲಿ ನಾಗರಿಕರಲ್ಲಿ ಅಸಮಾಧಾನಗಳಿದ್ದು, ಆ ಬಗ್ಗೆ ದೂರುಗಳು ಕೇಳಿಬರುತ್ತಿವೆ. ಈ ನಿಟ್ಟಿನಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ನಾಗರಿಕರಿಗೆ ಅನುಕೂಲವಾಗುವ ದೃಷ್ಟಿಯಿಂದ ಖಾತಾಗೆ ಸಂಬಂಧಿಸಿದ ಅರ್ಜಿಗಳನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡಲು ಫೆ.5ರವರೆಗೆ ಖಾತಾ ಮೇಳ ಆಯೋಜಿಸಲಾಗಿದೆ' ಎಂದರು.

ಸಕಾಲ ತಂತ್ರಾಂಶದಲ್ಲಿ ಖಾತಾಗೆ ಸಂಬಂಧಿಸಿದ ಅರ್ಜಿ ಸಲ್ಲಿಸಿದ 30 ದಿನಗಳಲ್ಲಿ ಎಲ್ಲಾ ಚಟುವಟಿಕೆಗಳು ಪೂರ್ಣಗೊಳ್ಳಬೇಕು. ಈ ನಿಟ್ಟಿನಲ್ಲಿ ದಕ್ಷಿಣ ವಲಯದಲ್ಲಿ 317 ಖಾತಾಗೆ ಸಂಬಂಧಿಸಿದ ಅರ್ಜಿಗಳು ವಿಲೇವಾರಿಗೆ ಬಾಕಿ ಇದ್ದವು. ಖಾತಾ ಮೇಳ ಮಾಡುತ್ತೇವೆ ಎಂಬ ವಿಷಯ ತಿಳಿದ ಬಳಿಕ 317 ಅರ್ಜಿಗಳ ಪೈಕಿ 250 ಬಾಕಿ ಇವೆ. ಈ 3 ದಿನಗಳಲ್ಲಿ ಇನ್ನುಳಿದ ಬಾಕಿ ಅರ್ಜಿಗಳನ್ನು ವಿಲೇವಾರಿ ಮಾಡಲು ಕಂದಾಯ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಮೇಳದಲ್ಲಿ ಆಸ್ತಿ ತೆರಿಗೆ ಪಾವತಿಸಬಹುದು ಎಂದು ಜಯರಾಮ್ ಹೇಳಿದರು.

ಗ್ರೀನ್ ಸಿಟಿ ಅಪಾರ್ಟ್‌ಮೆಂಟ್ ಗೇಟ್ ಬಳಿ ಕಸ ಹಾಕುವುದು ಹಾಗೂ ಮೂತ್ರ ವಿಸರ್ಜನೆ ಮಾಡುವುದು, ಬಿಟಿಎಂ 2ನೇ ಹಂತದ ರಸ್ತೆ ಬೀದಿಬದಿ ವ್ಯಾಪಾರಿಗಳು ಪಾದಚಾರಿ ಮಾರ್ಗಗಳನ್ನು ಒತ್ತುವರಿ ಮಾಡಿಕೊಂಡಿರುವುದು ಹಾಗೂ ವಾಹನಗಳು ಪಾರ್ಕಿಂಗ್ ಮಾಡಿರುವುದರಿಂದ ಪಾದಚಾರಿಗಳಿಗೆ ಸಾಕಷ್ಟು ಸಮಸ್ಯೆ ಆಗಲಿದೆ ಹಾಗೂ ಬೀದಿ ದೀಪಗಳು ಇಲ್ಲದಿರುವ ಕಡೆ ಸರಿಪಡಿಸಲು ನಾಗರಿಕರು ಮನವಿ ಮಾಡಿದರು.

'ನಗರದಲ್ಲಿ ಎಲ್ಲೂ ಕಸದ ಬ್ಲ್ಯಾಕ್ ಸ್ಪಾಟ್ ಇಲ್ಲದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಗ್ರೀನ್ ಸಿಟಿ ಅಪಾರ್ಟ್‌ಮೆಂಟ್ ಬಳಿ ಕಸ ಹಾಕುವ ವಿಚಾರವಾಗಿ ಸ್ಥಳ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಲಾಗುವುದು. ಬೀದಿ ಬದಿ ವ್ಯಾಪಾರಿಗಳಿಗೆ ಪ್ರತ್ಯೇಕವಾಗಿ ವ್ಯಾಪಾರ ಮಾಡಲು ಹಾಕಿಂಗ್ ಝೋನ್ ಮಾಡಬೇಕಿದ್ದು, ಅದಕ್ಕೆ ಸೂಕ್ತ ಸ್ಥಳದ ಅವಶ್ಯಕತೆಯಿದೆ. ಇನ್ನು ಬೀದಿ ದೀಪಗಳನ್ನು ಸರಿಯಾಗಿ ನಿರ್ವಹಣೆ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು' ಎಂದು ಜಯರಾಮ್ ಹೇಳಿದರು.

ಉಪ ಆಯುಕ್ತರಾದ ಲಕ್ಷ್ಮೀದೇವಿ, ಕಂದಾಯ ಅಧಿಕಾರಿ ವರಲಕ್ಷ್ಮೀ, ಸಹಾಯಕ ಕಂದಾಯ ಅಧಿಕಾರಿ ಪುರುಷೋತ್ತಮ್ ಇದ್ದರು.

ಬಿಬಿಎಂಪಿ ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಆಯೋಜಿಸಿರುವ 'ಖಾತಾ ಮೇಳ'ಕ್ಕೆ ಬಿಟಿಎಂ ಲೇಔಟ್ 2ನೇ ಹಂತದಲ್ಲಿ ವಲಯ ಆಯುಕ್ತ ಜಯರಾಮ್ ರಾಯಪುರ ಶುಕ್ರವಾರ ಚಾಲನೆ ನೀಡಿದರು.

'ಕ್ಷೇತ್ರಾಭಿವೃದ್ಧಿ ನಿಧಿ ₹ 10 ಕೋಟಿಗೆ ಹೆಚ್ಚಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನ ಪರಿಷತ್ ಸದಸ್ಯರ ಕ್ಷೇತ್ರಾಭಿವೃದ್ಧಿ ನಿಧಿಯನ್ನು ₹ 2 ಕೋಟಿಯಿಂದ ₹ 10 ಕೋಟಿಗೆ ಹೆಚ್ಚಿಸಬೇಕು' ಎಂದು ಆಗ್ರಹಿಸಿ ಸ್ಥಳೀಯ ಸಂಸ್ಥೆಗಳಿಂದ ಪರಿಷತ್‌ಗೆ ಆಯ್ಕೆಯಾದ ಕಾಂಗ್ರೆಸ್ ಸದಸ್ಯರು ಮುಖ್ಯಮಂತ್ರಿ ಬೊಮ್ಮಾಯಿ ಹಾಗೂ ಪರಿಷತ್‌ನ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ ಅವರಿಗೆ ಮನವಿ ಸಲ್ಲಿಸಿದ್ದಾರೆ.

'ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದ ಸದಸ್ಯರ ಕ್ಷೇತ್ರದ ವ್ಯಾಪ್ತಿಯಲ್ಲಿ 350ರಿಂದ 400 ಗ್ರಾಮ ಪಂಚಾಯಿತಿಗಳಿವೆ. ಶಾಲಾ ಕೊಠಡಿ, ರಸ್ತೆ, ಚರಂಡಿ ಕಾಮಗಾರಿ ಮುಂತಾದ ಮೂಲಸೌಕರ್ಯಗಳನ್ನು ಒದಗಿಸುವಂತೆ ಗ್ರಾಮ ಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳು ಮನವಿ ಸಲ್ಲಿಸುತ್ತಾರೆ. ಸದ್ಯ ನೀಡುತ್ತಿರುವ ₹2 ಕೋಟಿ ಸಾಲುವುದಿಲ್ಲ. ಕ್ಷೇತ್ರಾಭಿವೃದ್ಧಿ ನಿಧಿಯನ್ನು ₹25 ಕೋಟಿಗೆ ಹೆಚ್ಚಿಸಬೇಕು ಎಂದು ಬೆಳಗಾವಿಯ ಅಧಿವೇಶನದಲ್ಲಿ ಒತ್ತಾಯಿಸಲಾಗಿತ್ತು' ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

'ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿರುವ 25 ಸದಸ್ಯರು ಇಂತಹ ಸಮಸ್ಯೆ ಎದುರಿಸುತ್ತಿ-ದ್ದೇವೆ. ಗ್ರಾಮಗಳ ಜೊತೆ ಹೆಚ್ಚಿನ ಒಡನಾಟ ಇರುವುದರಿಂದ ಜನರ ಅವಶ್ಯಗಳನ್ನು ಈಡೇರಿಸುವ ಅನಿವಾರ್ಯ ಎದುರಾಗುತ್ತದೆ. ಹೀಗಾಗಿ, ಅನುದಾನವನ್ನು ಕನಿಷ್ಠ ₹ 10 ಕೋಟಿಗೆ ಹೆಚ್ಚಿಸಿ ಬಜೆಟ್‌ನಲ್ಲಿ ಘೋಷಿಸಬೇಕು' ಎಂದರು.

'ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿರುವ ನಾವು 2–3 ಜಿಲ್ಲೆಗಳನ್ನು ಪ್ರತಿನಿಧಿಸುತ್ತೇವೆ. ಸದ್ಯ ನೀಡುತ್ತಿರುವ ಅನುದಾನ ಅಭಿವೃದ್ಧಿಗೆ ಸಾಕಾಗುತ್ತಿಲ್ಲ. ಒಂದೊ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಅನುದಾನ ಹೆಚ್ಚಿಸಿ ಮುಖ್ಯಮಂತ್ರಿ ಘೋಷಿಸಬೇಕು. ಇಲ್ಲದೇ ಇದ್ದರೆ ಕೊಡುತ್ತಿರುವ ಅನುದಾನವನ್ನು ವಾಪಸ್ ಪಡೆಯಬೇಕು' ಎಂದು ಪರಿಷತ್ ಸದಸ್ಯ ಎಸ್. ರವಿ ಆಗ್ರಹಿಸಿದ್ದಾರೆ.

ಕ್ಷೇತ್ರಾಭಿವೃದ್ಧಿ ನಿಧಿ ಹೆಚ್ಚಿಸುವಂತೆ ಆಗ್ರಹಿಸಿ ವಿಧಾನ ಪರಿಷತ್ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿಗೆ ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯರಾದ ಎಸ್. ರವಿ, ದಿನೇಶ್ ಗೂಳಿಗೌಡ, ಶರಣಗೌಡ ಪಾಟೀಲ, ಮಂಜುನಾಥ ಭಂಡಾರಿ ಮತ್ತು ಸುನೀಲ್ ಗೌಡ ಪಾಟೀಲ ಮನವಿ ಸಲ್ಲಿಸಿದರು

ಡಯಟ್ ಹುದ್ದೆಗಳ ಕಡಿತ; ಆಕ್ಷೇಪ

ಬೆಂಗಳೂರು: ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಹುದ್ದೆಗಳ ಕಡಿತ ಪ್ರಸ್ತಾವದ ಹಿಂದೆ ಡಯಟ್‌ಗಳನ್ನು ಶಾಶ್ವತವಾಗಿ ಮುಚ್ಚುವ ಹುನ್ನಾರವಿದೆ ಎಂದು ಶಿಕ್ಷಣದ ಮೂಲಭೂತ ಹಕ್ಕಿಗಾಗಿ ಜನಾಂದೋಲನಗಳ ಸಮನ್ವಯ (ಫಾಪ್ರೆ) ದೂರಿದೆ.

ರಾಷ್ಟ್ರೀಯ ಶಿಕ್ಷಣ ನೀತಿ ಅನ್ವಯ ಡಯಟ್, ಸಿಟಿಇ ಮತ್ತು ಡಿಎಸ್‌ಇ-ಆರ್‌ಟಿಗಳನ್ನು ಪುನರ್‌ರಚಿಸುವ ನೆಪದಲ್ಲಿ ಸಿಬ್ಬಂದಿ ಸಂಖ್ಯೆ ಕಡಿತಗೊಳಿಸಲಾಗುತ್ತಿದೆ. ಡಯಟ್‌ಗಳನ್ನು ಮುಚ್ಚುವ ಮೂಲಕ ಸಾರ್ವಜನಿಕ ಶಿಕ್ಷಣಕ್ಕಿರುವ ಒಂದೇ ಬೆಂಬಲ ವ್ಯವಸ್ಥೆಯನ್ನು ದುರ್ಬಲಗೊಳಿಸ-ಲಾಗುತ್ತಿದೆ. ಆ ಮೂಲಕ ಶಿಕ್ಷಣದ ಖಾಸಗೀಕರಣದತ್ತ ಇಲಾಖೆ ಸಾಗುತ್ತಿದೆ ಎಂದು ಫಾಪ್ರೆ ಪ್ರಧಾನ ಸಂಚಾಲಕ ನಿರಂಜನಾರಾಧ್ಯ ವಿ.ಪಿ ಹೇಳಿದ್ದಾರೆ.

ಈಗಿರುವ ಡಯಟ್‌ಗಳ ಕಾರ್ಯ ನಿರ್ವಹಣೆಯ ಅಧ್ಯಯನ ನಡೆಸಿ, ಅವುಗಳನ್ನು ಮತ್ತಷ್ಟು ಸದೃಢಗೊಳಿಸಲು ತಜ್ಞರ ಸಮಿತಿ ರಚಿಸಬೇಕು ಎಂದು ಒತ್ತಾಯಿಸಿದ್ದಾರೆ.

ಸುದ್ದಿ 2 ನಿಮಿಷ

ಪಿಎಸ್‌ಐ ಹಗರಣ: ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್

ಬೆಂಗಳೂರು: 'ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಹುದ್ದೆಗಳ ನೇಮಕಾತಿ ಹಗರಣದಲ್ಲಿ ದಾಖಲಾಗಿರುವ ಎಫ್‌ಐಆರ್ ಹಾಗೂ ತನಿಖೆಗೆ ಸಂಬಂಧಿಸಿದ ದಾಖಲೆಗಳನ್ನು ಕೋರ್ಟ್‌ಗೆ ಒದಗಿಸಲು ನಿರ್ದೇಶಿಸಬೇಕು' ಎಂದು ಕೋರಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ (ಪಿಐಎಲ್) ಸಂಬಂಧಿಸಿದಂತೆ ನೋಟಿಸ್ ಜಾರಿಗೊಳಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಸಂಬಂಧ ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಅಲೋಕ್ ಆರಾಧೆ ಹಾಗೂ ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಸರ್ಕಾರದ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ರಾಜ್ಯ ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ ಹಾಗೂ ಸಿಐಡಿಗೆ ನೋಟಿಸ್ ಜಾರಿಗೊಳಿಸಲು ನ್ಯಾಯಪೀಠ ಆದೇಶಿಸಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ಈತನಕದ ವಸ್ತುಸ್ಥಿತಿಯನ್ನು ಒಳಗೊಂಡ ಆಕ್ಷೇಪಣೆಯನ್ನು ಕೋರ್ಟ್‌ಗೆ ಸಲ್ಲಿಸಿ' ಎಂದು ಪ್ರತಿವಾದಿಗಳಿಗೆ ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ನಾಲ್ಕು ವಾರಗಳ ಕಾಲ ಮುಂದೂಡಿದೆ.

ಸಾಹಿತ್ಯ ಸಮ್ಮೇಳನ: ₹ 25 ಕೋಟಿ ಅನುದಾನ ನೀಡಲು ಮನವಿ

ಬೆಂಗಳೂರು: ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮುಂಬರುವ ಬಜೆಟ್‌ನಲ್ಲಿ ₹ 25 ಕೋಟಿ ಅನುದಾನ ಒದಗಿಸಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಈ ಬಗ್ಗೆ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ. ಹಾವೇರಿಯಲ್ಲಿ ನಡೆದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸರ್ಕಾರವು ₹ 20 ಕೋಟಿ ಅನುದಾನ ನೀಡಿತ್ತು.

'ಮಂಡ್ಯದಲ್ಲಿ ನಡೆಯುವ ಸಮ್ಮೇಳನಕ್ಕೆ ಸರ್ಕಾರದ ವತಿಯಿಂದ ಎಲ್ಲಾ ರೀತಿಯ ಅಗತ್ಯ ಸಹಕಾರ, ಸಹಯೋಗವನ್ನು ನೀಡಲಾಗುವುದು ಎಂಬ ವಾಗ್ದಾನವನ್ನು ಬಸವರಾಜ ಬೊಮ್ಮಾಯಿ ನೀಡಿದ್ದಾರೆ. ಮುಂಬರುವ ಸಮ್ಮೇ-ಳನವನ್ನು ಸಂಘಟಿಸಲು ಅನುಕೂಲವಾಗುವಂತೆ ಬಜೆಟ್‌ನಲ್ಲಿ ₹ 25 ಕೋಟಿ ಅನುದಾನ ಕಾಯ್ದಿರಿಸುವ ಭರವಸೆ ಇದೆ' ಎಂದು ಮಹೇಶ ಜೋಶಿ ಪ್ರಕಟಣೆ-ಯಲ್ಲಿ ತಿಳಿಸಿದ್ದಾರೆ.

ನಾಳೆ ಆತ್ಮಾರಾಮಸ್ವಾಮಿ ಬ್ರಹ್ಮರಥೋತ್ಸವ

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿಯ ನರಸೀಪುರದ ಆತ್ಮಾರಾಮಸ್ವಾಮಿ ಬ್ರಹ್ಮರಥೋತ್ಸವವು ಫೆ.5ರಂದು ನಡೆಯಲಿದೆ.

ಫೆ.8ರ ವರೆಗೆ ದೇವಾಲಯದಲ್ಲಿ ಅಂಕುರಾರ್ಪಣೆ, ಸ್ವಸ್ತಿವಾಚನ, ರಕ್ಷಾ ಬಂಧನ, ಚಪ್ಪರಸೇವೆ, ಧ್ವಜಾರೋಹಣ, ಬೆಟ್ಟದ ಉತ್ಸವ, ದೇವರ ಉತ್ಸವ, ಕಲ್ಯಾಣೋತ್ಸವ, ಗಜೇಂದ್ರ ಮೋಕ್ಷ, ಹೂವಿನ ಅಲಂಕಾರ, ಪಾನಕಪೂಜೆ, ಕುದುರೆ ಉತ್ಸವ, ಗರುಡೋತ್ಸವ, ಶೇಷವಾಹನೋತ್ಸವ ಮತ್ತು ಶಯನೋತ್ಸವ ಸೇರಿ ವಿವಿಧ ಪೂಜಾ ಕಾರ್ಯಕ್ರಮಗಳು ನೆರವೇರಲಿವೆ. ಭಕ್ತರಿಗೆ ಬ್ರಹ್ಮ ರಥೋತ್ಸವ ದಿನದಂದು ಪಾನಕ ವಿತರಣೆ ಮತ್ತು ಅನ್ನಸಂತರ್ಪಣೆ ನಡೆಯಲಿದೆ.

ಸಂಚಾರ ನಿಯಮ ಉಲ್ಲಂಘನೆ ಪ್ರಕರಣ • ಶೇ 50ರಷ್ಟು ರಿಯಾಯಿತಿ • 2 ಲಕ್ಷ ಪ್ರಕರಣ ಇತ್ಯರ್ಥ

ಒಂದೇ ದಿನ ₹5.61 ಕೋಟಿ ದಂಡ ಸಂಗ್ರಹ

ಪ್ರಜಾವಾಣಿ ವಾರ್ತೆ

ಎಲ್ಲೆಲ್ಲಿ? ಎಷ್ಟು ದಂಡ ಸಂಗ್ರಹ?

ದಂಡ ಪಾವತಿಸಿದ ಮಾದರಿ	ಪ್ರಕರಣಗಳು	ಸಂಗ್ರಹಿಸಿದ ದಂಡ
ಎಎಸ್‌ಐ, ಪಿಎಸ್‌ಐ, ಇನ್‌ಸ್ಪೆಕ್ಟರ್	89,699	₹2.17 ಕೋಟಿ
ಪೇಟಿಎಂ ಆ್ಯಪ್	1.04 ಲಕ್ಷ	₹3.23 ಕೋಟಿ
ಸಂಚಾರ ನಿರ್ವಹಣಾ ಕೇಂದ್ರ	540	₹89,650
ಬೆಂಗಳೂರು ಒನ್ ಕೇಂದ್ರ	7,316	₹16.21 ಲಕ್ಷ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ಬಾಕಿ ಇರುವ ದಂಡ ಪಾವತಿಸಲು ಜನರು ಮುಗಿಬಿದ್ದಿದ್ದು, ಶುಕ್ರವಾರ ಒಂದೇ ದಿನದಲ್ಲಿ ₹ 5.61 ಕೋಟಿ ದಂಡ ಸಂಗ್ರಹವಾಗಿದೆ.

ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ದಂಡ ಪಾವತಿ ಮೇಲೆ ಶೇ 50ರಷ್ಟು ರಿಯಾಯಿತಿ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದ್ದು, ಇದಕ್ಕೆ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ನಗರದ ಸಂಚಾರ ಪೊಲೀಸ್ ಠಾಣೆಗಳು, ಸಂಚಾರ ನಿರ್ವಹಣಾ ಕೇಂದ್ರ (ಟಿಎಂಸಿ) ಹಾಗೂ ಕರ್ನಾಟಕ ಒನ್- ಬೆಂಗಳೂರು ಒನ್ ಕೇಂದ್ರಗಳಿಗೆ ಬೆಳಿಗ್ಗೆಯಿಂದಲೇ ಆಗಮಿಸಿದ ಜನರು, ದಂಡ ಪಾವತಿಸಿ ರಶೀದಿ ಪಡೆದರು.

ಸಂಚಾರ ಠಾಣೆಯಲ್ಲಿದ್ದ ಎಎಸ್‌ಐ, ಪಿಎಸ್‌ಐ ಹಾಗೂ ಇನ್‌ಸ್ಪೆಕ್ಟರ್‌ಗಳು ಶುಕ್ರವಾರ ಇಡೀ ದಿನ ದಂಡ ಕಟ್ಟಿಸಿಕೊಳ್ಳುವುದರಲ್ಲಿ ನಿರತರಾಗಿದ್ದರು. ಕೆಲ ಠಾಣೆಗಳಲ್ಲಿ ಸರದಿಯಲ್ಲಿ ನಿಂತು ಜನರು ದಂಡ ಪಾವತಿಸಿದರು.

ಪೇಟಿಎಂ ಆ್ಯಪ್‌ನಲ್ಲೂ ದಂಡ ಪಾವತಿಗೆ ಅವಕಾಶವಿದ್ದು, ಮೊಬೈಲ್ ಮೂಲಕವೇ ಹೆಚ್ಚು ಜನರು ದಂಡ ಕಟ್ಟಿದ್ದಾರೆ.

'ಶೇ 50ರಷ್ಟು ರಿಯಾಯಿತಿ ಆದೇಶಕ್ಕೆ ಜನರು ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ. ಬಾಕಿ ಉಳಿಸಿಕೊಂಡಿದ್ದ ದಂಡವನ್ನು ಉತ್ಸಾಹದಿಂದ ಪಾವತಿಸುತ್ತಿದ್ದಾರೆ. ಶುಕ್ರವಾರ ಒಂದೇ ದಿನದಲ್ಲಿ ₹ 5.61 ಕೋಟಿ ಸಂಗ್ರಹವಾಗಿದ್ದು, 2 ಲಕ್ಷ ಪ್ರಕರಣಗಳು ಇತ್ಯರ್ಥವಾಗಿವೆ. ಸಾಮಾನ್ಯ ದಿನಗಳಲ್ಲಿ ದಂಡ ಸಂಗ್ರಹ ಮೊತ್ತ ಗರಿಷ್ಠ ₹ 10 ಲಕ್ಷದಿಂದ ₹ 15 ಲಕ್ಷ ಇರುತ್ತಿತ್ತು' ಎಂದು ವಿಶೇಷ ಕಮಿಷನರ್ (ಸಂಚಾರ) ಎಂ.ಎ. ಸಲೀಂ 'ಪ್ರಜಾವಾಣಿ'ಗೆ ತಿಳಿಸಿದರು.

'ಪಾನಮತ್ತ ಚಾಲನೆ ಹೊರತುಪಡಿಸಿ ಉಳಿದೆಲ್ಲ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ರಿಯಾಯಿತಿ ದೊರಕಲಿದೆ. ಸಂಚಾರ ಪೊಲೀಸ್ ಠಾಣೆಗಳಲ್ಲಿ ದಂಡ ಪಾವತಿಸಿ ರಶೀದಿ ಪಡೆಯಬಹುದಾಗಿದೆ. ಬೆಂಗಳೂರು ಒನ್, ಕರ್ನಾಟಕ ಒನ್ ಕೇಂದ್ರಗಳು ಹಾಗೂ ಪೇಟಿಎಂ ಮೂಲಕ ದಂಡ ತುಂಬಬಹುದು. ಮಾಹಿತಿಗೆ 080-22942883 ಅಥವಾ 080-22943381 ಸಂಪರ್ಕಿಸಿ' ಎಂದರು.

ಸರ್ವರ್ ಡೌನ್: ಜನರ ಪರದಾಟ

ಶೇ 50ರಷ್ಟು ರಿಯಾಯಿತಿ ಇರುವುದರಿಂದ ದಂಡ ಪಾವತಿಸಲು ಜನರು ಮುಗಿಬೀಳುತ್ತಿದ್ದಾರೆ. ಹೆಚ್ಚಿನ ಸಂಖ್ಯೆಯ ಜನರು, ಆನ್‌ಲೈನ್ ಮೂಲಕ ದಂಡ ಪಾವತಿಸಲು ಯತ್ನಿಸುತ್ತಿದ್ದಾರೆ. ಇದರಿಂದಾಗಿ ಕರ್ನಾಟಕ ಒನ್ ಹಾಗೂ ಪೊಲೀಸ್ ಇಲಾಖೆಯ ಜಾಲತಾಣಗಳ ಸರ್ವರ್ ಡೌನ್ ಆಗಿದ್ದು, ಜನರು ಪರದಾಡಿದರು.

'ರಿಯಾಯಿತಿ ನೀಡಿರುವುದು ಸ್ವಾಗತಾರ್ಹ. ಆದರೆ, ದಂಡ ಪಾವತಿಸುವ ಆನ್‌ಲೈನ್ ವ್ಯವಸ್ಥೆಯಲ್ಲಿ ಸಾಕಷ್ಟು ಲೋಪಗಳಿವೆ. ಶುಕ್ರವಾರ ಬೆಳಿಗ್ಗೆಯಿಂದ ಜಾಲತಾಣ ತೆರೆದುಕೊಳ್ಳುತ್ತಿಲ್ಲ' ಎಂದು ಸಾರ್ವಜನಿಕರು ದೂರಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಸಲೀಂ, 'ಒಂದೇ ಬಾರಿಗೆ ಹೆಚ್ಚು ಜನರು ಜಾಲತಾಣ ತೆರೆಯುತ್ತಿರುವುದರಿಂದ ಸರ್ವರ್ ಡೌನ್ ಆಗಿದೆ. ಆನ್‌ಲೈನ್ ಮಾತ್ರವಲ್ಲದೇ, ಸಂಚಾರ ಠಾಣೆಗಳು ಹಾಗೂ ಸಂಚಾರ ನಿರ್ವಹಣಾ ಕೇಂದ್ರದಲ್ಲಿ ದಂಡ ಪಾವತಿಸಲು ಅವಕಾಶವಿದೆ' ಎಂದು ಹೇಳಿದರು.

'ಚಾರ್ಜ್‌ಶೀಟ್ ಪ್ರಕರಣಗಳಿಗೆ ಅನ್ವಯವಾಗಲ್ಲ'

'ನೋಟಿಸ್ ಜಾರಿಯಾಗಿ ಆರು ತಿಂಗಳೊಳಗೆ ಕೆಲವರು ಉತ್ತರ ನೀಡುತ್ತಾರೆ. ನ್ಯಾಯಾಲಯದಲ್ಲಿ ಪ್ರಕರಣ ಬಗೆಹರಿಸಿಕೊಳ್ಳುವುದಾಗಿ ತಿಳಿಸುತ್ತಾರೆ. ಇಂಥ ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ (ದೋಷಾರೋಪ ಪಟ್ಟಿ) ಸಲ್ಲಿಸಲಾಗುತ್ತದೆ. ಇಂಥ ಪ್ರಕರಣಗಳಿಗೆ ಈ ಆದೇಶ ಅನ್ವಯವಾಗುವುದಿಲ್ಲ' ಎಂದು ಸಲೀಂ ಹೇಳಿದರು.

ಬೆನ್ನಿಗಾನಹಳ್ಳಿ ಬಳಿ ರೈಲು ಹಳಿಯ ಮೇಲೆ ಮೆಟ್ರೊ ರೈಲು ಮಾರ್ಗಕ್ಕೆ ವೆಬ್ ಗರ್ಡರ್ ಅಳವಡಿಕೆ ಮಾಡಿರುವುದು

ವೆಬ್ ಗರ್ಡರ್ ಅಳವಡಿಕೆ ಯಶಸ್ವಿ

ಬೆಂಗಳೂರು: ಬೈಯಪ್ಪನಹಳ್ಳಿ-ವೈಟ್‌ಫೀಲ್ಡ್ ಮೆಟ್ರೊ ರೈಲು ಮಾರ್ಗಕ್ಕೆ ಸವಾಲಾಗಿದ್ದ ವೆಬ್ ಗರ್ಡರ್ ಅಳವಡಿಕೆ ಕಾಮಗಾರಿಯನ್ನು ಕೊನೆಗೂ ಬಿಎಂಆರ್‌ಸಿಎಲ್ ಪೂರ್ಣಗೊಳಿಸಿದೆ.

ಬೆನ್ನಿಗಾನಹಳ್ಳಿ ಬಳಿ ಹಾದು ಹೋಗಿರುವ ಬೆಂಗಳೂರು–ಸೇಲಂ ರೈಲ್ವೆ ಮಾರ್ಗದ ಮೇಲ್ಭಾಗದಲ್ಲಿ ತೆರೆದ ವೆಬ್ ಗರ್ಡರ್ ಅಳವಡಿಸಲಾಗಿದೆ.

65 ಮೀಟರ್ ಉದ್ದ ಮತ್ತು 550 ಟನ್ ತೂಕದ ಈ ವೆಬ್ ಗರ್ಡರ್‌ಗೆ ಸ್ಪಿರಕಲ್ ಬೇರಿಂಗ್ ಬಳಸಲಾಗಿದೆ. ರೈಲು ಹಳಿಯಿಂದ 8.45 ಮೀಟರ್ ಎತ್ತರದಲ್ಲಿ ಯಶಸ್ವಿಯಾಗಿ ಅಳವಡಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ. ಬೆಂಗಳೂರು ಮೆಟ್ರೊ ರೈಲು ಮಾರ್ಗದಲ್ಲಿ ಅಳವಡಿಕೆಯಾದ ಅತಿ ಉದ್ದದ ವೆಬ್ ಗರ್ಡರ್ ಇದಾಗಿದೆ. ಡಿಸೆಂಬರ್ ಕೊನೆ ವಾರದಲ್ಲಿ ಈ ಕಾಮಗಾರಿ ನಡೆಸಲು ಉದ್ದೇಶಿಸಲಾಗಿತ್ತು. ಸುರಕ್ಷತಾ ಕೆಲಸಗಳು ಪರಿಪೂರ್ಣವಾದ ಬಳಿಕವೇ ಈಗ ವೆಬ್ ಗರ್ಡರ್ ಅಳವಡಿಸಲಾಗಿದೆ.

ಬೈಯಪ್ಪನಹಳ್ಳಿಯಿಂದ ವೈಟ್ ಫೀಲ್ಡ್ ಮಾರ್ಗಕ್ಕೆ ತೊಡಕಾಗಿದ್ದ ಈ ಕಾಮಗಾರಿ ಪೂರ್ಣಗೊಂಡಿದ್ದು, ಮುಂದಿನ ದಿನಗಳಲ್ಲಿ ಬಾಕಿ ಕಾಮಗಾರಿ ವೇಗವಾಗಿ ನಡೆಯಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಇನ್ನೊಂದೆಡೆ, ಕೆ.ಆರ್.ಪುರ–ವೈಟ್‌ಫೀಲ್ಡ್ ನಡುವೆ ಮೆಟ್ರೊ ರೈಲು ಸಂಚಾರ ಆರಂಭಿಸಲು ಸಿದ್ಧತೆಯನ್ನು ಬಿಎಂಆರ್‌ಸಿಎಲ್ ನಡೆಸುತ್ತಿದೆ. ಸುರಕ್ಷತೆ ಪರಿಶೀಲಿಸಲು ಮೆಟ್ರೊ ರೈಲು ಸುರಕ್ಷತಾ ಆಯುಕ್ತರನ್ನು ಶೀಘ್ರದಲ್ಲೇ ಆಹ್ವಾನಿಸಲು ಯೋಚಿಸಲಾಗುತ್ತಿದೆ ಎಂದೂ ಮಾಹಿತಿ ನೀಡಿದರು.

'ಪ್ರಜಾವಾಣಿ' ಜನಸ್ಪಂದನ ಇಂದು

ಜನಸ್ಪಂದನ ಸಿಟಿಜನ್ಸ್ ಫಾರ್ ಚೇಂಜ್

ಬೆಂಗಳೂರು: ತುರಹಳ್ಳಿ ಮುಖ್ಯರಸ್ತೆಯಲ್ಲಿರುವ ಶೋಭಾ ಫಾರೆಸ್ಟ್ ವ್ಯೂ ಅಪಾರ್ಟ್‌ಮೆಂಟ್‌ನಲ್ಲಿ ಶನಿವಾರ ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್‌ನಿಂದ 'ಜನಸ್ಪಂದನ' ನಡೆಯಲಿದೆ. ಬೆಳಿಗ್ಗೆ 10ರಿಂದ ನಡೆಯಲಿರುವ 'ಜನಸ್ಪಂದನ'ದಲ್ಲಿ ಸಚಿವ ಎಸ್.ಟಿ. ಸೋಮಶೇಖರ್ ಅವರಷ್ಟೆ ಅಲ್ಲದೆ ಬಿಬಿಎಂಪಿ, ಜಲಮಂಡಳಿ, ಬೆಸ್ಕಾಂ, ಪೊಲೀಸ್ ಹಾಗೂ ಇನ್ನಿತರ ಇಲಾಖೆಗಳ ಅಧಿಕಾರಿಗಳು ಇರಲಿದ್ದು, ನಾಗರಿಕರ ಅಹವಾಲುಗಳಿಗೆ ಪರಿಹಾರ ಸೂಚಿಸಲಿದ್ದಾರೆ.

ಮಿಸೆಸ್ ಇಂಡಿಯಾ

ಜೆ.ಪಿ.ನಗರದ ನಿವಾಸಿ ಶರತ್ ನಂದಿನಿ ದೇಸಾಯಿ ಅವರು (ಮಧ್ಯದಲ್ಲಿ ಇರುವವರು) ರಾಜಸ್ಥಾನದ ರಣಥಂಬೋರ್‌ನಲ್ಲಿ ನಡೆದ ಮಿಸೆಸ್ ಇಂಡಿಯಾ ಸ್ಪರ್ಧೆಯಲ್ಲಿ 'ಟೈಮ್‌ಲೆಸ್ ಬ್ಯೂಟಿ' ಪಟ್ಟವನ್ನು ಜಯಿಸಿದರು.

'ನ್ಯಾಯಾಂಗ ವ್ಯವಸ್ಥೆಯಲ್ಲೂ ಜಾತಿ ಪದ್ಧತಿ'

'ನ್ಯಾಯಾಂಗ ಒಳನೋಟ' ಪುಸ್ತಕ ಬಿಡುಗಡೆ • ನ್ಯಾ. ಬಿ.ವೀರಪ್ಪ ಕಳವಳ

ಪ್ರಜಾವಾಣಿ ವಾರ್ತೆ

'ನ್ಯಾಯಾಂಗ ಒಳನೋಟ' ಪುಸ್ತಕವನ್ನು ನ್ಯಾಯಮೂರ್ತಿ ಬಿ.ವೀರಪ್ಪ (ಎಡದಿಂದ 4ನೆಯವರು) ಬಿಡುಗಡೆ ಮಾಡಿದರು. ಜನ ಪ್ರಕಾಶನದ ಬಿ.ರಾಜಶೇಖರಮೂರ್ತಿ, ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ, ವಕೀಲರ ಸಂಘದ ಮಾಜಿ ಅಧ್ಯಕ್ಷ ಎ.ಪಿ. ರಂಗನಾಥ್ ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: 'ನ್ಯಾಯಾಂಗ ವ್ಯವಸ್ಥೆಯಲ್ಲೂ ಜಾತಿ ಪದ್ಧತಿ ತುಳುಕಾಡುತ್ತಿದೆ. ಇದರಿಂದ ದೇಶ ಹಾಳಾಗುತ್ತಿದೆ' ಎಂದು ಹೈಕೋರ್ಟ್ ನ್ಯಾಯಮೂರ್ತಿ ಬಿ.ವೀರಪ್ಪ ಕಳವಳ ವ್ಯಕ್ತಪಡಿಸಿದರು.

ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ಅವರ 'ನ್ಯಾಯಾಂಗ ಒಳನೋಟ' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, 'ನ್ಯಾಯಪೀಠದಲ್ಲಿ ಕುಳಿತಾಗ ಧರ್ಮ ಮತ್ತು ಅಧರ್ಮ ಎರಡೇ ಕಾಣಬೇಕು. ಜಾತಿ ಅಥವಾ ಸಂಬಂಧಗಳು ಅಡ್ಡವಾಗಬಾರದು. ತಪ್ಪು ಮಾಡಿದವರು ತನ್ನ ಪತ್ನಿ ಅಥವಾ ಮಕ್ಕಳೇ ಆಗಿದ್ದರೂ ನಿರ್ದಾಕ್ಷಿಣ್ಯವಾಗಿ ಜೈಲಿಗೆ ಕಳುಹಿಸುವ ಧೈರ್ಯವನ್ನು ನ್ಯಾಯಮೂರ್ತಿಗಳು ಬೆಳಸಿಕೊಳ್ಳಬೇಕು' ಎಂದರು.

ಭ್ರಷ್ಟಾಚಾರ ಈ ದೇಶದ ದೊಡ್ಡ ಪಿಡುಗು. ಶೇ 99ರಷ್ಟು ಅಂಕಗಳನ್ನು ಪಡೆದು ದೊಡ್ಡ ಹುದ್ದೆಗೆ ಹೋದ ನಂತರ ಭ್ರಷ್ಟನಾದರೆ ಏನು ಪ್ರಯೋಜನ ಎಂದು ಪ್ರಶ್ನಿಸಿದರು.

ಭ್ರಷ್ಟಾಚಾರದ ವಿರುದ್ಧದ ಹೋರಾಟ ಮನೆಯಿಂದಲೇ ಆರಂಭವಾಗಬೇಕು. ಸಂಬಳಕ್ಕಿಂತ ಹೆಚ್ಚಿನ ಹಣ ತಂದರೆ ಅದನ್ನು ಪ್ರಶ್ನಿಸುವ ಪತ್ನಿ ಮತ್ತು ಮಕ್ಕಳು ಇದ್ದರೆ ಮಾತ್ರ ಭ್ರಷ್ಟಾಚಾರ ತನಾಗಿಯೇ ಕಡಿಮೆಯಾಗಲಿದೆ ಎಂದು ಹೇಳಿದರು.

ಹೈಕೋರ್ಟ್ ಎದುರಿನ ಕಲ್ಲು ಕಟ್ಟಡದಲ್ಲಿ ಕುಳಿತವರ ಹೃದಯಗಳೂ ಕಲ್ಲುಗಳಾಗಿವೆ. ಹೈಕೋರ್ಟ್ ಆದೇಶಗಳನ್ನು 8ರಿಂದ 10 ವರ್ಷಗಳು ಕಳೆದರೂ ಪಾಲಿಸುವುದಿಲ್ಲ. ನ್ಯಾಯಾಂಗ ನಿಂದನೆ ಪ್ರಕರಣ ದಾಖಲಾದ ಬಳಿಕವೂ ಸಮಯ ಕೇಳುವ ಪರಿಪಾಟ ಬೆಳಸಿಕೊಂಡಿದ್ದಾರೆ. ಅಧಿಕಾರಿಗಳನ್ನು ಜೈಲಿಗೆ ಕಳುಹಿಸುವ ಎಚ್ಚರಿಕೆ ನೀಡಿದಾಗ ಆದೇಶ ಪಾಲನೆಯಾಗುತ್ತವೆ. ಅಧಿಕಾರಿ ವರ್ಗದ ಈ ರೀತಿ ಬೇಜವಾಬ್ದಾರಿಗಳನ್ನು ನ್ಯಾಯಾಂಗ ಸಹಿಸಬಾರದು ಎಂದರು.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ ಮಾತನಾಡಿ, 'ಒಳ್ಳೆಯ ನ್ಯಾಯಮೂರ್ತಿ ಆಗಬೇಕೆಂದರೆ ಅವರಿಗೆ ಅಂತಃಕರಣ ಇರಬೇಕಾಗುತ್ತದೆ. ನ್ಯಾಯಮೂರ್ತಿಗಳ ಮೇಲೆ ಮತ್ತೊಂದು ಕಾವಲು ವ್ಯವಸ್ಥೆ ಇಲ್ಲ. ಆದರೆ, ಅವರಿಗೆ ಆತ್ಮಸಾಕ್ಷಿಯೇ ಕಾವಲುಗಾರ. ಕಾವಲಿದ್ದವರಿಗೆ ನಮ್ಮ ತಪ್ಪುಗಳು ಗೊತ್ತಾಗದಿದ್ದರೂ, ನಮ್ಮ ಆತ್ಮಸಾಕ್ಷಿಗೆ ಗೊತ್ತಾಗಲಿದೆ. ಆತ್ಮಸಾಕ್ಷಿಯಂತೆ ನಡೆದುಕೊಂಡರೆ ಸಾಕು' ಎಂದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಮಾತನಾಡಿ, 'ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವ ಆತಂಕ ಕಾಡುತ್ತಿದೆ. ನ್ಯಾಯಾಂಗವನ್ನೂ ತಮ್ಮ ಹಿಡಿತಕ್ಕೆ ತಗೆದುಕೊಳ್ಳಲು ಶಾಸಕಾಂಗ, ಅದರಲ್ಲೂ ಉಪರಾಷ್ಟ್ರಪತಿಯೇ ಅದಕ್ಕೆ ಪೂರಕವಾದ ಮಾತುಗಳನ್ನಾಡಿರುವುದು ದುರಂತ' ಎಂದು ಹೇಳಿದರು.

ಬಿಡುಗಡೆಯಾದ ಪುಸ್ತಕ

ಪುಸ್ತಕ: ನ್ಯಾಯಾಂಗ ಒಳನೋಟ
ಲೇಖಕರು: ಎಚ್.ಎನ್. ನಾಗಮೋಹನದಾಸ್
ಪುಟ: 120
ಬೆಲೆ: ₹120
ಪ್ರಕಾಶನ: ಜನ ಪ್ರಕಾಶನ

ಕ್ಯಾನ್ಸರ್ ಪೀಡಿತರಿಗೆ ಗುಣಮುಖರಿಂದ ಭರವಸೆ

ಬೆಂಗಳೂರು: 'ಕ್ಯಾನ್ಸರ್ ಕಾಯಿಲೆಯನ್ನು ಎದುರಿಸಲು ಔಷಧ ಹಾಗೂ ಚಿಕಿತ್ಸೆಯ ಜತೆಗೆ ಮಾನಸಿಕ ಶಕ್ತಿ ಅಗತ್ಯ' ಎಂದು ಕ್ಯಾನ್ಸರ್ ಗೆದ್ದವರು ತಮ್ಮ ಮನದಾಳ ಹಂಚಿಕೊಂಡರು.

ವಿಶ್ವ ಕ್ಯಾನ್ಸರ್ ದಿನದ ಪ್ರಯುಕ್ತ ಮಣಿಪಾಲ್ ಆಸ್ಪತ್ರೆಯು ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮಾತನಾಡಿದ ಚಲನಚಿತ್ರ ನಟಿ ಛವಿ ಮಿತ್ತಲ್, 'ನಾನು ಸ್ತನ ಕ್ಯಾನ್ಸರ್ ವಿರುದ್ಧ ಹೋರಾಡಿ, ಕಾಯಿಲೆಯನ್ನು ಜಯಿಸಿದ್ದೇನೆ. ರೋಗದ ಬಗ್ಗೆ ಅನಗತ್ಯವಾಗಿ ಭಯಕ್ಕೆ ಒಳಗಾಗಬಾರದು' ಎಂದು ಹೇಳಿದರು.

ಕ್ಯಾನ್ಸರ್ ಜಯಿಸಿದ ವೈದ್ಯೆ ಡಾ. ವಿನುತಾ ಲಕ್ಷ್ಮಣ್, 'ಕ್ಯಾನ್ಸರ್ ಪೀಡಿತೆಯಾಗಿರುವುದು ಆರಂಭಿಕ ದಿನಗಳಲ್ಲಿ ತಿಳಿದಿರಲಿಲ್ಲ. ಕಾಯಿಲೆಯ ಲಕ್ಷಣಗಳು ಗೋಚರಿಸಿದಾಗ ಮಹಿಳೆಯರು ಸ್ವಯಂಪ್ರೇರಿತರಾಗಿ ಆಸ್ಪತ್ರೆಗೆ ತೆರಳಿ, ತಪಾಸಣೆ ಮಾಡಿಸಿಕೊಳ್ಳಬೇಕು' ಎಂದರು. ಮಣಿಪಾಲ್ ಆಸ್ಪತ್ರೆಯ ಕ್ಯಾನ್ಸರ್ ತಜ್ಞೆ ಡಾ. ಪೂನಮ್ ಪಾಟೀಲ್, 'ಸ್ತನ ಕ್ಯಾನ್ಸರ್ ಪ್ರಕರಣಗಳು ಇತ್ತೀಚೆಗೆ ಹೆಚ್ಚಳವಾಗುತ್ತಿವೆ. ಈ ಕಾಯಿಲೆಯನ್ನು ಬೇಗ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಿದಲ್ಲಿ ಗುಣಪಡಿಸಲು ಸಾಧ್ಯ. ಬಹುತೇಕ ಮಹಿಳೆಯರು ತಮ್ಮ ಆರೋಗ್ಯ ಕಡೆಗಣಿಸುತ್ತಾರೆ. ಇದರಿಂದ ಸಮಸ್ಯೆ ಉಲ್ಬಣವಾಗಿ, ಜೀವಕ್ಕೆ ಅಪಾಯವಾಗುವ ಸಾಧ್ಯತೆ ಇರುತ್ತದೆ' ಎಂದರು.

SBI ಭಾರತೀಯ ಸ್ಟೇಟ್ ಬ್ಯಾಂಕ್

ಸಾರ್ವಜನಿಕ ಪ್ರಕಟಣೆ

ಭಾರತೀಯ ಸ್ಟೇಟ್ ಬ್ಯಾಂಕ್, ಸರ್ಕಾರಿ ವ್ಯವಹಾರ ಶಾಖೆ(40658), ನಂ. 79/2, ಎಲ್.ಸಿ. ರಸ್ತೆ, ಶಿವಾಜಿನಗರ, ಬೆಂಗಳೂರು – 560 001. ದಿನಾಂಕ: **20.02.2023** ರಿಂದ ಹೆಚ್ಚು ಅನುಕೂಲಕರ ಮತ್ತು ವಿಶಾಲವಾದ ಸ್ಥಳಕ್ಕೆ ವಿಲೀನಗೊಳಿಸುವುದಾಗಿ ತಿಳಿಸಲು ಹರ್ಷಿಸುತ್ತೇವೆ.

ಹೊಸ ವಿಳಾಸ

ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು ಮುಖ್ಯ ಶಾಖೆ (0813), ಸ್ಥಳೀಯ ಪ್ರಧಾನ ಕಚೇರಿ ಕಟ್ಟಡ, ನಂ. 65, ಸಂತ ಮಾರ್ಕ್‌ರ್ ರಸ್ತೆ, ಬೆಂಗಳೂರು. ದೂರವಾಣಿ ಸಂಖ್ಯೆಗಳು: 9480024978 / 9480490611.

ಸಹಿ/– ಶಾಖಾ ವ್ಯವಸ್ಥಾಪಕರು

ASTER DM HEALTHCARE SINCE 1987

ಆಸ್ಟರ್ ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಆಂಕೋಲಾಜಿ ನಮ್ಮ ಹೊಸ ತಜ್ಞರನ್ನು ಸ್ವಾಗತಿಸುತ್ತದೆ

ಪ್ರಮುಖ ಕ್ಯಾನ್ಸರ್ ಕಾಳಜಿ ಪೂರೈಕೆದಾರರ ತಂಡವನ್ನು ಬಲಪಡಿಸುತ್ತದೆ.

ಡಾ. ಸ್ನೇಹಾ ಕೊಮ್ಮಿನೇನಿ
MBBS, MD, DNB, MRCP (UK)
ಸಲಹೆಗಾರರು – ಮೆಡಿಕಲ್ ಆಂಕೋಲಾಜಿ ಮತ್ತು ಹೆಮಟೊ–ಆಂಕೋಲಾಜಿ

ಡಾ. ವೈಷ್ಣವಿ S ಜೋಶಿ
MBBS, MD, DNB, MRCP (UK)
ಸಲಹೆಗಾರರು – ಮೆಡಿಕಲ್ ಆಂಕೋಲಾಜಿ ಮತ್ತು ಹೆಮಟೊ–ಆಂಕೋಲಾಜಿ

ಡಾ. ಸಾಯಿ ವಿವೇಕ್ V
MBBS, MD, DM, ECMO, MRCP (SCE), UK
ಸಲಹೆಗಾರರು – ಮೆಡಿಕಲ್ ಆಂಕೋಲಾಜಿ ಮತ್ತು ಹೆಮಟೊ–ಆಂಕೋಲಾಜಿ

ಡಾ. C N ಪಾಟೀಲ್
MBBS, MD, DM
ವಿಭಾಗೀಯ ಮುಖ್ಯಸ್ಥರು ಮತ್ತು ಪ್ರಮುಖ ಸಲಹೆಗಾರರು – ಮೆಡಿಕಲ್ ಆಂಕೋಲಾಜಿ ಮತ್ತು ಹೆಮಟೋ–ಆಂಕೋಲಾಜಿ

ಡಾ. ಅನೂಪ್ P
MBBS, MD, DCH, FRCPCH, FRCPath, CCT (UK)
ಪ್ರಮುಖ ಸಲಹೆಗಾರರು – ಹೆಮಟಾಲಜಿ & ಪೀಡಿಯಾಟ್ರಿಕ್ ಹೆಮಟೋ–ಆಂಕೋಲಾಜಿ

ಡಾ. M S ಬೆಳ್ಳಿಯಪ್ಪ
MBBS, DMRT, MD RT, DNB RT
ವಿಭಾಗೀಯ ಮುಖ್ಯಸ್ಥರು ಮತ್ತು ಪ್ರಮುಖ ಸಲಹೆಗಾರರು – ರೇಡಿಯೇಶನ್ ಆಂಕೋಲಾಜಿ

ಡಾ. ರಾಮ್ ಚರಿತ್ ಆಳ್ವಾ
MBBS, MD RT, DNB RT
ಸಲಹೆಗಾರರು – ರೇಡಿಯೇಶನ್ ಆಂಕೋಲಾಜಿ

ಥೀಮ್ ಆಂಕೊಲಾಜಿ

(ಟ್ರಾನ್ಸ್‌ಪ್ಲಾಂಟ್, ಹೆಮಟಾಲಜಿ, ಮೆಡಿಕಲ್ ಮತ್ತು ಪೀಡಿಯಾಟ್ರಿಕ್ ಆಂಕೋಲಾಜಿ)
ಮೆಡಿಕಲ್ ಆಂಕೋಲಾಜಿ, ಕೀಮೋ ಇನ್‌ಫ್ಯೂಷನ್, ಇಮ್ಯುನೋಥೆರಪಿ, ಟಾರ್ಗೆಟೆಡ್ ಥೆರಪಿ,
ಹೆಮಟಾಲಾಜಿ ಮತ್ತು :ಒಖಿ ಯಲ್ಲಿ 4 ದಶಕಗಳ ಪರಿಣತಿ

ಅತ್ಯಾಧುನಿಕ ರೇಡಿಯೇಶನ್ ಥೆರಪಿ

IMRT, IGRT, SRS, SBRT, ಸೈಬರ್‌ನೈಫ್, ಬ್ರಾಕಿಥೆರಪಿ, ಪ್ರೋಟಾನ್ ಥೆರಪಿಯಲ್ಲಿ 5 ದಶಕಗಳ ಅನುಭವ.

ಅತ್ಯಾಧುನಿಕ ಬಹುಶಿಸ್ತೀನ ಅಂತರಾಷ್ಟ್ರೀಯ ಗುಣಮಟ್ಟದ ಕ್ಯಾನ್ಸರ್ ಆರೈಕೆ ಸಂಸ್ಥೆ. ಅತ್ಯಾಧುನಿಕ ತಂತ್ರಜ್ಞಾನಗಳು ಮತ್ತು ಇತ್ತೀಚಿನ ಆವಿಷ್ಕಾರಗಳ ಜೊತೆಗೆ 9 ದಶಕಗಳ ಅನುಭವ ಹೊಂದಿರುವ ವೈದ್ಯರ ಬೆಂಬಲದೊಂದಿಗೆ ಸಂಪೂರ್ಣ ಶ್ರೇಣಿಯ ಆಂಕೋಲಾಜಿ–ಸಂಬಂಧಿತ ಸೇವೆಗಳನ್ನು ನೀಡುತ್ತಿದೆ. ಒಂದೇ ಛಾವಣಿಯಡಿಯಲ್ಲಿ ಸಂಪೂರ್ಣ ಕ್ಯಾನ್ಸರ್ ಆರೈಕೆಯನ್ನು ನಿಮಗೆ ಒದಗಿಸಲು, ರೊಬೊಟಿಕ್ ಸರ್ಜರಿ, HIPEC, PIPAC, ಸ್ತನ ಆಂಕೋಪ್ಲಾಸ್ಟಿಕ್ ಮತ್ತು ಲಿಂಫಾಟಿಕ್ ಶಸ್ತ್ರಚಿಕಿತ್ಸೆಯೊಂದಿಗೆ ಅತ್ಯಾಧುನಿಕ ಸರ್ಜಿಕಲ್ ಆಂಕೋಲಾಜಿಯಿಂದ ಬೆಂಬಲಿತವಾಗಿದೆ.

To know more
Call: +91 8884009955
Aster CMI Hospital, Hebbal
Aster Whitefield Hospital, Whitefield
Aster RV Hospital, J.P. Nagar
Scan here

Aster INTERNATIONAL INSTITUTE OF ONCOLOGY
Complete Cancer Care

ಸುಧಾ, ಮಯೂರ ಓದಿರಿ

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ನಂ. 16 ಡಿ, 5ನೇ ಮಹಡಿ, ದೇವರಾಜ ಅರಸು ಭವನ, ಮಿಲ್ಲರ್ಸ್‌ಟ್ಯಾಂಕ್ ಬೆಡ್ಏರಿಯಾ, ವಸಂತನಗರ, ಬೆಂಗಳೂರು-560 052. ದೂರವಾಣಿ : 080-22374848
ಇ-ಮೈಲ್: mdvishwakaram2015@gmail.com

ಸಂಖ್ಯೆ: KVCDC/ADM/OSV/CR-52/2022-23 ದಿನಾಂಕ: 03.02.2023

ಇ-ಟೆಂಡರ್ ಅಧಿಸೂಚನೆ

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2000ರನ್ವಯ, ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಕಂಡ ಸೇವೆಗಾಗಿ ಮರುಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಮತ್ತು ನೋಂದಾಯಿತ ಬಿಡ್ಡುದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.
ಟೆಂಡರ್ ಶೀರ್ಷಿಕೆ: ಹೊರಗುತ್ತಿಗೆ ಆಧಾರದ ಮೇಲೆ ವಾಹನವನ್ನು ಪಡೆಯುವ ಬಗ್ಗೆ.
ಟೆಂಡರ್ ಸಂಖ್ಯೆ: KVCDC/ADM/OSV/CR-52/2022-23/CALL-2
ಟೆಂಡರ್ ದಾಖಲೆ ಇ-ಪೋರ್ಟಲ್‌ನಲ್ಲಿ ಲಭ್ಯವಾಗುವ ದಿನಾಂಕ: 04.02.2023
ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 13.02.2023
ಇ-ಟೆಂಡರ್ ಅಧಿಸೂಚನೆಯ ದಾಖಲೆಗಳನ್ನು, ಟೆಂಡರ್ ಸಂಸ್ಕರಣ ಶುಲ್ಕಗಳು, ಇತರೆ ವಿವರಗಳು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನಲ್ಲಿ ಮತ್ತು ಸಹಾಯವಾಣಿ ಸಂಖ್ಯೆ: +918046010000/+918068948777 ಅಥವಾ ಕೆಲಸದ ಸಮಯದಲ್ಲಿ ನೀವು ಈ ಕಛೇರಿಯನ್ನು ಸಹ ಸಂರ್ಕಿಸಬಹುದು.

ಸಹಿ/-
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಹಾಗೂ ವ್ಯವಸ್ಥಾಪಕ ನಿರ್ದೇಶಕರು,
ವಾ.ಸಾ.ಸಂ.ಇ/ವಾಪ್ರ/4466/ಅಕಾರ್/22-23 ಕ.ವಿ.ಸ.ಅ.ನಿ., ಬೆಂಗಳೂರು.

ದಂಪತಿ ಅಡ್ಡಗಟ್ಟಿದ್ದ ಹೆಡ್ ಕಾನ್‌ಸ್ಟೆಬಲ್, ಕಾನ್‌ಸ್ಟೆಬಲ್ • ಟ್ವೀಟ್ ಮೂಲಕ ಕಮಿಷನರ್‌ಗೆ ನೀಡಿದ್ದ ದೂರು

₹1 ಸಾವಿರ ಸುಲಿಗೆ: ಹೊಯ್ಸಳ ಸಿಬ್ಬಂದಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಯಕ್ರಮ ಮುಗಿಸಿಕೊಂಡು ಮನೆಗೆ ಹೊರಟಿದ್ದ ದಂಪತಿಯನ್ನು ಅಡ್ಡಗಟ್ಟಿ ₹ 1 ಸಾವಿರ ಸುಲಿಗೆ ಮಾಡಿದ್ದ ಆರೋಪದಡಿ ಸಂಪಿಗೆಹಳ್ಳಿ ಠಾಣೆಯ ಇಬ್ಬರು ಪೊಲೀಸರನ್ನು ಸೇವೆಯಿಂದ ವಜಾಗೊಳಿಸಲಾಗಿದೆ.

ಹೆಡ್ ಕಾನ್‌ಸ್ಟೆಬಲ್ ರಾಜೇಶ್ ಮತ್ತು ಕಾನ್‌ಸ್ಟೆಬಲ್ ನಾಗೇಶ್ ಲೋಣಾವಿ ವಜಾಗೊಂಡವರು. ಇವರಿಬ್ಬರೂ ಹೊಯ್ಸಳ ಗಸ್ತು ವಾಹನದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ದಂಪತಿ ನೀಡಿದ್ದ ದೂರಿನಡಿ ಇಬ್ಬರನ್ನೂ ಅಮಾನತು ಮಾಡಲಾಗಿತ್ತು. ಇದೀಗ ಇಲಾಖೆ ವಿಚಾರಣೆ ಮುಕ್ತಾಯಗೊಂಡಿದ್ದು, ಅದರ ವರದಿ ಆಧರಿಸಿ ಇಬ್ಬರನ್ನೂ ಸೇವೆಯಿಂದ ವಜಾಗೊಳಿಸಿ ಕಮಿಷನರ್ ಪ್ರತಾಪ್ ರೆಡ್ಡಿ ಆದೇಶ ಹೊರಡಿಸಿದ್ದಾರೆ.

ಅಪರಾಧ ಸುದ್ದಿ

'ಮಾನ್ಯತಾ ಟೆಕ್ ಪಾರ್ಕ್ ಬಳಿಯ ನಿವಾಸಿಯಾದ ದೂರುದಾರ ಕಾರ್ತಿಕ್ ಪಾತ್ರಿ ಹಾಗೂ ಪತ್ನಿ, ಡಿ. 8ರಂದು ಸ್ನೇಹಿತರ ಮನೆಯಲ್ಲಿದ್ದ ಕಾರ್ಯಕ್ರಮಕ್ಕೆ ಹೋಗಿದ್ದರು. ಅಲ್ಲಿಂದ, ರಾತ್ರಿ 12.30ರ ಸುಮಾರಿಗೆ ವಾಪಸು ಮನೆಯತ್ತ ನಡೆದುಕೊಂಡು ಹೋಗುತ್ತಿದ್ದರು. ಅವರನ್ನು ಅಡ್ಡಗಟ್ಟಿದ್ದ ರಾಜೇಶ್ ಹಾಗೂ ನಾಗೇಶ್, ತಪಾಸಣೆ ನೆಪದಲ್ಲಿ ಕಿರುಕುಳ ನೀಡಿದ್ದರು. ಮೊಬೈಲ್ ಸಹ ಕಿತ್ತುಕೊಂಡಿದ್ದರು' ಎಂದು ಮೂಲಗಳು ಹೇಳಿವೆ.

'ದಂಪತಿ ಬಳಿ ಇದ್ದ ಕೇಕ್ ಬಾಕ್ಸ್ ಕಸಿದುಕೊಂಡು ಪರೀಕ್ಷಿಸಿದ್ದರು. ಹೆದರಿದ್ದ ದಂಪತಿ, ಆಧಾರ್ ತೋರಿಸಿದ್ದರು. ಸಮೀಪದಲ್ಲೇ ಮನೆ ಇರುವುದಾಗಿ ಹೇಳಿದ್ದರು. ಅಷ್ಟಾದರೂ ಸುಮ್ಮನಾಗದ ರಾಜೇಶ್ ಹಾಗೂ ನಾಗೇಶ್, 'ನಿಮ್ಮ ಮೇಲೆ ಪ್ರಕರಣ ದಾಖಲಿಸಿ, ಜೈಲಿಗೆ ಕಳುಹಿಸುತ್ತೇವೆ. ಈ ರೀತಿ ಮಾಡಬಾರದೆಂದರೆ, ₹ 3 ಸಾವಿರ ನೀಡಿ' ಎಂಬುದಾಗಿ ಬೇಡಿಕೆಯಿಟ್ಟಿದ್ದರು.'

'ಆರೋಪಿತ ಪೊಲೀಸರ ಕಿರುಕುಳ ಹೆಚ್ಚಾಗುತ್ತಿದ್ದಂತೆ ಬೇಸತ್ತ ಕಾರ್ತಿಕ್, ಪೇಟಿಎಂ ಮೂಲಕ ₹ 1 ಸಾವಿರ ವರ್ಗಾಯಿಸಿದ್ದರು. ಇದಾದ ಮರುದಿನವೇ ಟ್ವೀಟ್ ಮೂಲಕ ಕಮಿಷನರ್ ಅವರಿಗೆ ದೂರು ನೀಡಿದ್ದರು. ಬಳಿಕ, ಈಶಾನ್ಯ ವಿಭಾಗದ ಡಿಸಿಪಿ ಅನೂಪ್ ಶೆಟ್ಟಿ ತನಿಖೆ ನಡೆಸಿ ವರದಿ ಸಲ್ಲಿಸಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ವಜಾಗೊಂಡಿರುವ ಪೊಲೀಸರು, ಮುಂದಿನ ದಿನಗಳಲ್ಲಿ ಯಾವುದೇ ಸರ್ಕಾರಿ ಕೆಲಸಕ್ಕೂ ಅರ್ಹರಾಗಿರುವುದಿಲ್ಲ' ಎಂದೂ ಹೇಳಿವೆ.

ಸಂದರ್ಶನಕ್ಕೆ ಕರೆದು ₹ 6.18 ಲಕ್ಷ ಸುಲಿಗೆ: ನಾಲ್ವರ ಬಂಧನ

ಬೆಂಗಳೂರು: ಸಾಫ್ಟ್‌ವೇರ್ ಕಂಪನಿ ಹೆಸರಿನಲ್ಲಿ ಸಂದರ್ಶನಕ್ಕೆ ಕರೆದು ಅಭ್ಯರ್ಥಿಯೊಬ್ಬರನ್ನು ಸುಲಿಗೆ ಮಾಡಲಾಗಿದ್ದು, ಈ ಸಂಬಂಧ ನಾಲ್ವರು ಆರೋಪಿಗಳನ್ನು ಕೊಡಿಗೇಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆಂಧ್ರಪ್ರದೇಶದ ಮಲ್ಲ ಶಿವಶಂಕರ್ ರೆಡ್ಡಿ ಅಲಿಯಾಸ್ ಗೋಪಿಚಂದ್ (26), ಗುಂಡ ಮಂಗರಾವ್ (35), ಶೇಖ್ ಶಫಾಜ್ (30) ಹಾಗೂ ಮಹೇಶ್ (21) ಬಂಧಿತರು. ಇವರ ಬ್ಯಾಂಕ್ ಖಾತೆಯಲ್ಲಿದ್ದ ₹ 5.95 ಲಕ್ಷ ಹಣವನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಖಾಸಗಿ ಕಂಪನಿ ಉದ್ಯೋಗಿಗಳಾದ ಆರೋಪಿಗಳು, ಪ್ರತಿಷ್ಠಿತ ಕಂಪನಿಗಳಲ್ಲಿ ಕೆಲಸ ಇರುವುದಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಜಾಹೀರಾತು ನೀಡುತ್ತಿದ್ದರು. ಆರೋಪಿ ಮಲ್ಲು ಶಿವಶಂಕರ್ ರೆಡ್ಡಿ, ಗೋಪಿಚಂದ್ ಹೆಸರಿನಲ್ಲಿ ಫೇಸ್‌ಬುಕ್‌ನಲ್ಲಿ ಖಾತೆ ತೆರೆದಿದ್ದ. ಅದೇ ಖಾತೆ ಮೂಲಕ ದೂರುದಾರ ಪ್ರದೀಪ್ ಅವರನ್ನು ಪರಿಚಯ ಮಾಡಿಕೊಂಡಿದ್ದ' ಎಂದು ತಿಳಿಸಿದರು.

'ಸಿಎಸ್‌ಎಸ್ ಗ್ರೂಪ್ ಕಂಪನಿಯಲ್ಲಿ ಹುದ್ದೆಗಳು ಖಾಲಿ ಇವೆ. ಜ. 11ರಂದು ಬೆಳಿಗ್ಗೆ ಸಂದರ್ಶನಕ್ಕೆ ಬನ್ನಿ' ಎಂದು ಆರೋಪಿಗಳು ಸಂದೇಶ ಕಳುಹಿಸಿದ್ದರು. ಅದನ್ನು ನಂಬಿದ್ದ ಪ್ರದೀಪ್, ನಿಗದಿ ದಿನದಂದು ಬೆಂಗಳೂರಿಗೆ ಬಂದಿದ್ದರು. ಅವರನ್ನು ಕಾರಿನಲ್ಲಿ ಹತ್ತಿಸಿಕೊಂಡು ನಗರದಲ್ಲಿ ಸುತ್ತಾಡಿಸಿದ್ದ ಆರೋಪಿಗಳು, ಜೀವ ಬೆದರಿಕೆಯೊಡ್ಡಿ ₹ 6.18 ಲಕ್ಷ ಸುಲಿಗೆ ಮಾಡಿದ್ದರು. ಬಳಿಕ, ದೂರುದಾರರನ್ನು ಬಿಟ್ಟು ಪರಾರಿಯಾಗಿದ್ದರು' ಎಂದು ಹೇಳಿದರು.

'ಅಪಹರಣ ಹಾಗೂ ಸುಲಿಗೆ ಸಂಬಂಧ ಪ್ರದೀಪ್ ದೂರು ನೀಡಿದ್ದರು. ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ಸುಲಿಗೆ ಮಾಡಿದ್ದ ಹಣದಲ್ಲಿ ಸ್ವಲ್ಪ ಹಣವನ್ನು ಆರೋಪಿಗಳು ಖರ್ಚು ಮಾಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.

PUBLIC NOTICE

The general public is hereby informed that, we are investigating the title of all those pieces and parcels of converted lands set out as Item No. 1 to Item No.5 of the Schedule hereto (collectively "**Schedule Property**") in connection with our client's proposal for purchase of the Schedule Property from its present owners whose details are set out in the Schedule ("**Owners**").

If any person has any right, title, interest, claim or demand in relation to the Schedule Property or any part thereof or, has executed any transactions or documents (whether registered of unregistered) with the owners or predecessors in title of the Schedule Property, having the effect of creating an encumbrance thereon, are called upon to submit their statements, objections or claims in writing, along with documentary evidence in support thereof, with the undersigned, **within 10 (ten) days** from the date of publication of this notice. If no objections are received, we would conclusively presume that no person has any right, title, interest, claim, demand, charge or encumbrance whatsoever existing on the Schedule Property or any part thereof and we will issue our opinion confirming that the owners have title in respect of the Schedule Property.

SCHEDULE (SCHEDULE PROPERTY)

All that pieces and parcels of agricultural land all situated at Hunasemaranahalli village, Jala Hobli, Bangalore North Taluk. comprising of the following: -

Sl. No.	Sy No	Extent in Guntas A	Extent in Guntas G	Kharab extent in guntas	Boundaries East by	West by	North by	South by	Owners
1	149/2	3	15	Nil	Road	149/1	149/1,150 & 152	139 and 140	K.H.Byrappa, S/o. Hemanna
2	141/1		31	Nil	141/2	147	148/2	Remaining portion of Survey No 141/1	Saraswathamma, W/o. late Ramachandrappa and children
3	141/2		30 1/2	Nil	140	141/1	148/2	Remaining portion of Survey No 141/1	Saraswathamma, W/o. late Ramachandrappa and children
4	148/2	1	23	01	149	148/1	134	141	Saraswathamma, W/o. late Ramachandrappa and children
5	140	2	20	07	137	128	141	149	Gopalappa son of Hemanna

Prashanth Kumar D., M/s. Anandarama & Prashanth, Advocates
No. 40, 1st Cross, Malleshwaram, Bangalore - 560 003

ನಿಧನ ವಾರ್ತೆ

ಲತಾದೇವಿ

ಬೆಂಗಳೂರು: ಹ್ಯಾಬಿಟೇಟ್ ವೆಂಚರ್ಸ್ ಸಮೂಹದ ಜಂಟಿ ವ್ಯವಸ್ಥಾಪಕ ನಿರ್ದೇಶಕ ಭಾಸ್ಕರ್ ನಾಗೇಂದ್ರಪ್ಪ ಅವರ ತಾಯಿ ಲತಾದೇವಿ (73) ಶುಕ್ರವಾರ ಹೃದಯಾಘಾತದಿಂದ ನಿಧನರಾದರು.

ಮೃತರಿಗೆ ಇಬ್ಬರು ಪುತ್ರರು ಹಾಗೂ ಪುತ್ರಿಯರು ಇದ್ದಾರೆ.

ಮೂವರು ಮಕ್ಕಳು ಅಮೆರಿಕದಲ್ಲಿ ನೆಲೆಸಿದ್ದು, ಅವರು ಭಾನುವಾರ ಬೆಂಗಳೂರಿಗೆ ಆಗಮಿಸುವ ನಿರೀಕ್ಷೆಯಿದೆ.

ಭಾನುವಾರ ಬೆಳಿಗ್ಗೆ 7ರಿಂದ 9ರ ತನಕ ವಿಜಯನಗರದ ಸರ್ಕಾರಿ ಕಾಲೇಜು ಎದುರಿನ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗುವುದು. ಅಂದೇ ಮಧ್ಯಾಹ್ನ 3ಕ್ಕೆ ದಾವಣಗೆರೆ ಜಿಲ್ಲೆ, ಚನ್ನಗಿರಿಯ ತ್ಯಾವಣಿಗೆಯ ಸ್ವಂತ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉದ್ಯೋಗ ಆಮಿಷವೊಡ್ಡಿ ಅತ್ಯಾಚಾರ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯೋಗ ಕೊಡಿಸುವ ಆಮಿಷವೊಡ್ಡಿ ಯುವತಿಯೊಬ್ಬರ ಮೇಲೆ ಅತ್ಯಾಚಾರ ಎಸಗಿದ್ದ ಆರೋಪದಡಿ ದಿಲ್ಲಿ ಪ್ರಸಾದ್ ಎಂಬುವವರನ್ನು ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆಂಧ್ರಪ್ರದೇಶದ ದಿಲ್ಲಿ ಪ್ರಸಾದ್, ನಗರದ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಎಂಜಿನಿಯರ್ ಕೆಲಸ ಮಾಡುತ್ತಿದ್ದ. ಕೋರಮಂಗಲದಲ್ಲಿ ನೆಲೆಸಿದ್ದ. ಸಂತ್ರಸ್ತೆ ನೀಡಿದ್ದ ದೂರು ಆಧರಿಸಿ ಈತನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ನಕಲಿ ಖಾತೆ ತೆರೆದು ಪರಿಚಯ: 'ಮೋನಿಕಾ ಹಾಗೂ ವ್ಯವಸ್ಥಾಪಕ ಎಂಬ ಹೆಸರಿನಲ್ಲಿ ಇನ್‌ಸ್ಟಾಗ್ರಾಂ ಸಾಮಾಜಿಕ ಮಾಧ್ಯಮದಲ್ಲಿ ಎರಡು ನಕಲಿ ಖಾತೆಗಳನ್ನು ಆರೋಪಿ ಸೃಷ್ಟಿಸಿದ್ದ. ಪ್ರತಿಷ್ಠಿತ ಕಂಪನಿಗಳಲ್ಲಿ ಕೆಲಸ ಖಾಲಿ ಇರುವುದಾಗಿ ಜಾಹೀರಾತು ನೀಡುತ್ತಿದ್ದ. ಅದನ್ನು ನಂಬಿ ಹಲವು ಯುವತಿಯರು, ಆರೋಪಿಗೆ ಸಂದೇಶ ಕಳುಹಿಸುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

'ಸಂತ್ರಸ್ತೆ ಸಹ ಉದ್ಯೋಗ ಸಿಗುವ ಆಸೆಯಿಂದ ಆರೋಪಿಗೆ ಸಂದೇಶ ಕಳುಹಿಸಿದ್ದರು. ಅದಕ್ಕೆ ಪ್ರತಿಕ್ರಿಯಿಸಿದ್ದ ಆರೋಪಿ, 'ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸ ಖಾಲಿ ಇದೆ. ಸ್ವ-ವಿವರ ಸಮೇತ ಸಂದರ್ಶನಕ್ಕೆ ಬನ್ನಿ' ಎಂದು ಕರೆದಿದ್ದ. ಮಡಿವಾಳ ಬಳಿ ಇರುವ 'ಒಯೊ' ಕೊಠಡಿ ವಿಳಾಸ ನೀಡಿದ್ದ.'

'ನಿಗದಿತ ಸಮಯದಂದು ಯುವತಿ ಕೊಠಡಿಗೆ ಬಂದಿದ್ದರು. ಅವರ ಜೊತೆ ಅನುಚಿತವಾಗಿ ವರ್ತಿಸಿದ್ದ ಆರೋಪಿ, ಕೈ ಹಿಡಿದು ಎಳೆದಾಡಿದ್ದ. ಯುವತಿಯನ್ನು ಅರೆನಗ್ನಗೊಳಿಸಿದ್ದ. ಈ ದೃಶ್ಯವನ್ನು ರಹಸ್ಯ ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದ. ಇದಾದ ನಂತರ, ಯುವತಿಯನ್ನು ಪೀಡಿಸುತ್ತಿದ್ದ. ವಿಡಿಯೊಗಳನ್ನು ಕಳುಹಿಸಿ ತನ್ನೊಂದಿಗೆ ಲೈಂಗಿಕವಾಗಿ ಸಹಕರಿಸುವಂತೆ ಒತ್ತಾಯಿಸುತ್ತಿದ್ದ. ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುವುದಾಗಿ ಬೆದರಿಸಿದ್ದ' ಎಂದು ಪೊಲೀಸರು ಹೇಳಿದರು.

'ಮರ್ಯಾದೆ ಹೋಗುವ ಭಯದಲ್ಲಿ ಯುವತಿ, ಆರೋಪಿ ಜೊತೆ ಹೋಗಿದ್ದರು. ಪುನಃ ಕೊಠಡಿಗೆ ಕರೆದೊಯ್ದಿದ್ದ ಆರೋಪಿ, ಯುವತಿ ಮೇಲೆ ಅತ್ಯಾಚಾರ ಎಸಗಿದ್ದ. ಇದಾದ ನಂತರವೂ ಆರೋಪಿ ಪುನಃ ಪೀಡಿಸಲಾರಂಭಿಸಿದ್ದ. ಬೇಸತ್ತ ಸಂತ್ರಸ್ತೆ ಠಾಣೆಗೆ ದೂರು ನೀಡಿದ್ದರು' ಎಂದು ತಿಳಿಸಿದರು.

ಹಲವರಿಗೆ ವಂಚನೆ: 'ಉದ್ಯೋಗ ಆಮಿಷವೊಡ್ಡಿ ಮಹಿಳೆಯರನ್ನು ಪರಿಚಯ ಮಾಡಿಕೊಳ್ಳುತ್ತಿದ್ದ ಆರೋಪಿ, ಹಲವರಿಂದ ಹಣ ಪಡೆದು ವಂಚಿಸಿದ್ದಾನೆ. ಕೆಲವರನ್ನು ಲೈಂಗಿಕವಾಗಿ ಬಳಸಿಕೊಂಡಿದ್ದಾನೆ. ಸದ್ಯ ಯುವತಿಯೊಬ್ಬರೇ ದೂರು ನೀಡಿದ್ದಾರೆ. ಉಳಿದ ಸಂತ್ರಸ್ತೆಯರ ಹೇಳಿಕೆ ಪಡೆಯಲು ಪ್ರಯತ್ನಿಸಲಾಗುತ್ತಿದೆ' ಎಂದರು.

ನಾಳೆ ಉಚಿತ ಆರೋಗ್ಯ ತಪಾಸಣಾ ಶಿಬಿರ

ಮಾಗಡಿ: ತಾಲ್ಲೂಕಿನ ಸೋಲೂರಿನ ಆರ್ಯ ಈಡಿಗರ ಮಹಾ ಸಂಸ್ಥಾನ ಮಠದ ಆವರಣದಲ್ಲಿ ಬೆಂಗಳೂರಿನ ಸಪ್ತಗಿರಿ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ, ಸ್ಪರ್ಶ ಆಸ್ಪತ್ರೆ ಹಾಗೂ ನವರಂಗ್ ಬ್ಲಡ್ ಬ್ಯಾಂಕ್ ಸಹಯೋಗದಲ್ಲಿ ಫೆ. 5ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3ರವರೆಗೆ ಉಚಿತ ಆರೋಗ್ಯ ತಪಾಸಣಾ, ಶಸ್ತ್ರ ಚಿಕಿತ್ಸೆ ಹಾಗೂ ರಕ್ತದಾನ ಶಿಬಿರ ನಡೆಯಲಿದೆ.

ಆರ್ಯ ಈಡಿಗ ಮಹಾಸಂಸ್ಥಾನ ಮಠದ ಪೀಠಾಧಿಪತಿ ವಿಖ್ಯಾತಾನಂದ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ. ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಧ್ಯಕ್ಷ ಡಾ.ಎಂ.ತಿಮ್ಮೇಗೌಡ ಶಿಬಿರ ಉದ್ಘಾಟಿಸಲಿದ್ದಾರೆ. ಆರ್ಯ ಈಡಿಗ ಮಹಾ ಸಂಸ್ಥಾನ ಮಠ ಕಾರ್ಯನಿರ್ವಾಹಕ ಧರ್ಮದರ್ಶಿ ಜೆ.ಪಿ.ಸುಧಾಕರ್ ಭಾಗ ವಹಿಸಲಿದ್ದಾರೆ ಎಂದು ಆಡಳಿತಾಧಿಕಾರಿ ಸಂತೋಷ್ ಕುಮಾರ್ ತಿಳಿಸಿದ್ದಾರೆ.

ಶಿಬಿರದಲ್ಲಿ ಹೃದಯ ತಪಾಸಣೆ, ಕಣ್ಣಿನ ತಪಾಸಣೆ, ಕಿವಿ, ಮೂಗು, ಗಂಟಲು ತಪಾಸಣೆ, ಚರ್ಮರೋಗ ತಪಾಸಣೆ, ಕೀಲು ಮತ್ತು ಮೂಳೆ, ಮಕ್ಕಳ ತಪಾಸಣೆ, ಪ್ರಸೂತಿ ಸ್ತ್ರೀರೋಗ ತಪಾಸಣೆ, ಶಸ್ತ್ರ ಚಿಕಿತ್ಸೆ ತಪಾಸಣೆ, ಇ.ಸಿ.ಜಿ ಮತ್ತು ಎಕೋ ತಪಾಸಣೆ, ನರರೋಗ ತಪಾಸಣೆ ನಡೆಸಲಾಗುವುದು.

ಮಾಹಿತಿಗೆ 9945075920 ಸಂಪರ್ಕಿಸಬಹುದು.

ನಾರಾಯಣ ಹೆಲ್ತ್ ಸಿಟಿಯ ಮಜುಂದಾರ್ ಶಾ ವೈದ್ಯಕೀಯ ಕೇಂದ್ರದಲ್ಲಿ ನಿರ್ಮಾಣವಾಗಿರುವ 10 ಹಾಸಿಗೆಗಳ ಅಸ್ಥಿಮಜ್ಜೆ ಕಸಿ ಘಟಕಕ್ಕೆ (ಬಿಎಂಟಿ) ನಾರಾಯಣ ಹೆಲ್ತ್ ಅಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ ಮತ್ತು ಕಂಪನಿಯ ಮುಖ್ಯಸ್ಥೆ ಕಿರಣ್ ಮಜುಂದಾರ್ ಶಾ ಚಾಲನೆ ನೀಡಿದರು.

ಸಿಬಿಐ ತನಿಖೆ: ಡಿಕೆಶಿ ಅರ್ಜಿ ವಿಚಾರಣೆ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯ ಮೀರಿ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧ ಸಿಬಿಐ ದಾಖಲಿಸಿರುವ ಪ್ರಕರಣವನ್ನು ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳುವಂತೆ ಶಿವಕುಮಾರ್ ಪರ ವಕೀಲರು ಹೈಕೋರ್ಟ್‌ಗೆ ಮನವಿ ಮಾಡಿದರು.

ಈ ಸಂಬಂಧ ಡಿ.ಕೆ.ಶಿವಕುಮಾರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣ'ಗಳ ವಿಚಾರಣೆ ನಡೆಸುವ ಹೈಕೋರ್ಟ್‌ನ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಕೆ.ನಟರಾಜನ್ ಶುಕ್ರವಾರ ವಿಚಾರಣೆಗೆ ಕೈಗೆತ್ತಿಕೊಂಡರು.

ವಿಚಾರಣೆ ವೇಳೆ ಸಿಬಿಐ ಪರ ವಕೀಲರು ಹಾಜರಿರಲಿಲ್ಲ. ಅವರ ಪರ ಕಿರಿಯ ವಕೀಲರು ಹಾಜರಾಗಿ ವಿಚಾರಣೆ ಮುಂದೂಡುವಂತೆ ಕೋರಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಶಿವಕುಮಾರ್ ಪರ ಹಾಜರಾಗಿದ್ದ ಹಿರಿಯ ವಕೀಲ ಸಿ.ಎಚ್.ಜಾಧವ್, ಸಿಬಿಐ ಪರ ವಕೀಲರ ಗೈರು ಹಾಜರಿಗೆ ಅಸಮಾಧಾನ ವ್ಯಕ್ತಪಡಿಸಿದರು. ಅಂತೆಯೇ, ವಿಚಾರಣೆಯನ್ನು ತುರ್ತಾಗಿ ಕೈಗೆತ್ತಿಕೊಳ್ಳುವಂತೆ ನ್ಯಾಯಪೀಠಕ್ಕೆ ಮನವಿ ಮಾಡಿದರು. ಆದರೆ, ಸಿಬಿಐ ಪರವಾದ ಕಿರಿಯ ವಕೀಲರ ಮನವಿಯನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆಯನ್ನು ಇದೇ 10ಕ್ಕೆ ಮುಂದೂಡಿತು.

'ಸತಾಯಿಸಲಾಗುತ್ತಿದೆ': ಕಳೆದ ವಿಚಾರಣೆ ವೇಳೆ ಸಿ.ಎಚ್.ಜಾಧವ್, 'ಶಾಸಕ ಡಿ.ಕೆ.ಶಿವಕುಮಾರ್ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿರುವ ಕಾರಣಕ್ಕಾಗಿ ಕಿರುಕುಳ ನೀಡಲಾಗುತ್ತಿದ್ದು ಅವರ ವಿರುದ್ಧ ರಾಜಕೀಯ ಪಿತೂರಿ ನಡೆಯುತ್ತಿದೆ. ಹತ್ತಿರವಾಗುತ್ತಿರುವ ವಿಧಾನಸಭಾ ಚುನಾವಣೆಯಲ್ಲಿ ಹೇಗಾದರೂ ಮಾಡಿ ಅವರಿಗೆ ತೊಂದರೆ ನೀಡಬೇಕೆಂದು ಸತಾಯಿಸಲಾಗುತ್ತಿದೆ' ಎಂದು ನ್ಯಾಯಪೀಠಕ್ಕೆ ಅರುಹಿದ್ದರು.

'ಅರ್ಜಿದಾರರು ಸಾರ್ವಜನಿಕ ಸೇವಕ. ಅವರ ವಿರುದ್ಧ ದಾಖಲಿಸಿರುವ ಈ ಪ್ರಕರಣದಲ್ಲಿ ಅವರ ಕುಟುಂಬದ ಸದಸ್ಯರೆಲ್ಲರ ಆದಾಯವನ್ನು ಪರಿಗಣಿಸಲಾಗಿದೆ. ಜಾಮೀನು ದೊರೆತ ಮೇಲೆ ಜಾರಿ ನಿರ್ದೇಶನಾಲಯದ ಮಾಹಿತಿ ಅನುಸಾರ ಸಿಬಿಐ ಕೇಸು ದಾಖಲಿಸಿದೆ. ಇದೆಲ್ಲಾ ಅರ್ಜಿದಾರರಿಗೆ ಕೇವಲ ಕಿರುಕುಳ ನೀಡಬೇಕೆಂಬ ದುರುದ್ದೇಶದ ಕ್ರಮವಾಗಿದೆ' ಎಂದು ಆಕ್ಷೇಪ ವ್ಯಕ್ತಪಡಿಸಿದ್ದರು.

ಪ್ರಕರಣವೇನು?: 'ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ ಕಲಂ 13 (2), 13 (1)(ಇ) ಅಡಿಯಲ್ಲಿ ಸಿಬಿಐ 2020ರ ಅಕ್ಟೋಬರ್ 3ರಂದು ಪ್ರಕರಣ ದಾಖಲಿಸಿದೆ. 'ಸಿಬಿಐ ದಾಖಲಿಸಿರುವ ಈ ಎಫ್‌ಐಆರ್ ಕಾನೂನು ಬಾಹಿರವಾಗಿದ್ದು ಇದನ್ನು ರದ್ದುಗೊಳಿಸಬೇಕು' ಎಂದು ಕೋರಿ ಶಿವಕುಮಾರ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಕೆಪಿಸಿಸಿ ಹೆಸರಿನಲ್ಲಿ ನಕಲಿ ಜಾಲತಾಣ: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ಹೆಸರಿನಲ್ಲಿ ನಕಲಿ ಜಾಲತಾಣ ಸೃಷ್ಟಿಸಲಾಗಿದ್ದು, ಈ ಸಂಬಂಧ ನಗರದ ಸೈಬರ್ ಕ್ರೈಂ ಠಾಣೆಯಲ್ಲಿ ಶುಕ್ರವಾರ ಎಫ್‌ಐಆರ್ ದಾಖಲಾಗಿದೆ.

'ಕೆಪಿಸಿಸಿ ಕಾನೂನು ಘಟಕದ ಕಾರ್ಯಕಾರಿ ಸಮಿತಿ ಸದಸ್ಯ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕಾಂಗ್ರೆಸ್ ಪಕ್ಷ ಹಾಗೂ ಮುಖಂಡರನ್ನು ಅವಹೇಳನ ಮಾಡುವ ವಿಷಯಗಳನ್ನು ಜಾಲತಾಣದಲ್ಲಿ ಬಿತ್ತರಿಸಲಾಗಿದೆ. ಇದರಿಂದ ಪಕ್ಷಕ್ಕೆ ಹಾಗೂ ಮುಖಂಡರಿಗೆ ಮಾನಹಾನಿಯಾಗಿರುವುದಾಗಿ ದೂರುದಾರ ತಿಳಿಸಿದ್ದಾರೆ' ಎಂದು ಹೇಳಿವೆ.

ನಗರದಲ್ಲಿ ಇಂದು

ವಿಶ್ವ ಕ್ಯಾನ್ಸರ್ ಜಾಗೃತಿ ದಿನದ ಪ್ರಯುಕ್ತ ವಾಕಥಾನ್: ಚಾಲನೆ: ಡಾ.ಕೆ. ಸುಧಾಕರ್, ಆಯೋಜನೆ: ಆರೋಗ್ಯ ಇಲಾಖೆ, ಸ್ಥಳ: ವಿಕಾಸಸೌಧದ ಗಾಂಧಿ ಪ್ರತಿಮೆಯಿಂದ ಕಂಠೀರವ ಕ್ರೀಡಾಂಗಣ, ಬೆಳಿಗ್ಗೆ 7

ಸುವರ್ಣ ಸಂಭ್ರಮ ಉದ್ಘಾಟನಾ ಸಮಾರಂಭ: ಸಾನ್ನಿಧ್ಯ: ಸಚ್ಚಿದಾನಂದ ಭಾರತೀ ಸ್ವಾಮೀಜಿ, ವೀರೇಂದ್ರ ಹೆಗ್ಗಡೆ, ಮುಖ್ಯ ಅತಿಥಿಗಳು: ಎಚ್.ಎಸ್. ಸಚ್ಚಿದಾನಂದ ಮೂರ್ತಿ, ಸುರೇಶ್ ಕುಮಾರ್, ರವಿಸುಬ್ರಹ್ಮಣ್ಯ, ಹರೀಶ್ ಪೂಂಜ, ಪ್ರತಾಪಸಿಂಹ ನಾಯಕ್, ಗೋವಿಂದ ಎನ್. ಫಡಕೆ, ವಿಷ್ಣು ಭಟ್ ಡೋಂಗ್ರೆ, ಆಯೋಜನೆ: ಚಿತ್ಪಾವನ ಸಮಾಜ, ಸ್ಥಳ: ಶ್ರೀ ಗುರುನರಸಿಂಹ ಸಭಾಭವನ, ರಾಮಕೃಷ್ಣ ಮಠದ ಎದುರು, ಬಸವನಗುಡಿ, ಬೆಳಿಗ್ಗೆ 9

ಜೈ ಭೀಮ್ ಸರ್ಕಲ್ ಉದ್ಘಾಟನೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕೆನರಾ ಬ್ಯಾಂಕ್ ಎಸ್‌ಸಿ, ಎಸ್‌ಟಿ ನೌಕರರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಲಾಲ್‌ಬಾಗ್, ಜೈ ಭೀಮ್ ಭವನದ ಎದುರು, ಬೆಳಿಗ್ಗೆ 10

40ನೇ ವಾರ್ಷಿಕೋತ್ಸವ ಪ್ರಯುಕ್ತ ವಿಶೇಷ ಸಮ್ಮೇಳನ: ಮುಖ್ಯ ಅತಿಥಿಗಳು: ಕೆ.ವಿ. ಧನಂಜಯ, ಮಧುಕರ ಹೆಗಡೆ, ಅಧ್ಯಕ್ಷತೆ: ಎಸ್. ಸತ್ಯಮೂರ್ತಿ, ಆಯೋಜನೆ: ಕರ್ನಾಟಕ ಅನುದಾನ ರಹಿತ ಶಾಲೆಗಳ ಆಡಳಿತ ಮಂಡಳಿಗಳ ಸಂಘ, ಸ್ಥಳ: ಆರ್.ವಿ. ಟೀಚರ್ಸ್ ಕಾಲೇಜು, ಜಯನಗರ, ಬೆಳಿಗ್ಗೆ 10

ಸ್ವಚ್ಛ ಭಾರತ ಅಭಿಯಾನ ಮತ್ತು ಜಾಥಾ: ಉದ್ಘಾಟನೆ: ಆರ್. ಅಶೋಕ, ಮುಖ್ಯ ಅತಿಥಿ: ಎಲ್. ಶ್ರೀನಿವಾಸ್, ಅಧ್ಯಕ್ಷತೆ: ನಿಶಾನ್ ಎಚ್. ಸಾಗರ್, ಗಾಳಿಸ್ವಾಮಿ, ಎಚ್.ಕೆ. ರಾಮರಾಜು, ಬಿ.ಜಿ. ಪ್ರಸಾದ್, ಆಯೋಜನೆ ಮತ್ತು ಸ್ಥಳ: ದಯಾನಂದ ಸಾಗರ್ ಕಾಲೇಜ್ ಆಫ್ ಎಂಜಿನಿಯರಿಂಗ್, ಕುಮಾರಸ್ವಾಮಿ ಲೇಔಟ್, ಬೆಳಿಗ್ಗೆ 10

ಮದ್ಯಪಾನ ಮತ್ತು ಮಾದಕ ವಸ್ತುಗಳ ವಿರುದ್ಧ ಯುವ ಜನರಲ್ಲಿ ಜಾಗೃತಿ ಮೂಡಿಸಲು 'ಮಾಯಾ ಮಾದಕ' ಯಕ್ಷಗಾನ ಪ್ರದರ್ಶನ: ಪ್ರಸ್ತುತಿ: ಕರ್ನಾಟಕ ಮಹಿಳಾ ಯಕ್ಷಗಾನ, ಕಾರ್ಯಕ್ರಮದ ಉದ್ಘಾಟನೆ: ಮಲ್ಲಿಕಾರ್ಜುನ ಬಸವಣ್ಣೆಪ್ಪ ತುಬಾಕಿ, ಅತಿಥಿಗಳು: ಎಸ್. ಶಂಕರಪ್ಪ, ಪ್ರತಿಭಾ ಪಾರ್ಶ್ವನಾಥ, ಅಧ್ಯಕ್ಷತೆ: ನವೀನ ಅಮ್ಮೆಂಬಳ, ಆಯೋಜನೆ: ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ಪುರ, ಬೆಳಿಗ್ಗೆ 10

ಕಾಲೇಜು ವಾರ್ಷಿಕೋತ್ಸವ: ಉದ್ಘಾಟನೆ: ವಂದನಾ ಶಾಸ್ತ್ರಿ, ಮುಖ್ಯ ಅತಿಥಿ: ಬಿ.ಎಂ. ಪಟೇಲ್‌ಪಾಂಡು, ಅಧ್ಯಕ್ಷತೆ: ಪ್ರೊ.ಎನ್. ಕಾಮರಾಜ್, ಆಯೋಜನೆ ಹಾಗೂ ಸ್ಥಳ: ಶಾರದಾ ವಿದ್ಯಾಪೀಠ, ಬ್ಯಾಟರಾಜನಪುರ, ಬೆಳಿಗ್ಗೆ 10.30

'ಬಸವ-ಗಾಂಧಿ ಚಿಂತನೆಗಳ ಅನುಸಂಧಾನ' ರಾಜ್ಯಮಟ್ಟದ ವಿಚಾರ ಸಂಕಿರಣ: ಉದ್ಘಾಟನೆ: ಸ.ಚಿ. ರಮೇಶ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಗೌರವ ಉಪಸ್ಥಿತಿ: ಎಂ.ಎಸ್. ನಟರಾಜ್, ಬಿ.ಜಿ. ಭಾಸ್ಕರ್, ಆಯೋಜನೆ ಹಾಗೂ ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 11

ವ್ಯಂಗ್ಯ ಭಾವಚಿತ್ರ ಪ್ರದರ್ಶನ: ನೆಡುಮಾರನ್, ಆಯೋಜನೆ ಹಾಗೂ ಸ್ಥಳ: ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿ, ಮಿಡ್ ಫೋರ್ಡ್ ಗಾರ್ಡನ್, ಟ್ರಿನಿಟಿ ವೃತ್ತ, ಬೆಳಿಗ್ಗೆ 11

ಸಂಗೀತ ಸಂಜೆ: ಗಾಯಕರು: ನಂದಿನಿ ಸಿರೀಶ್, ಕೃಷ್ಣಮೂರ್ತಿ ಎನ್., ರಮ್ಯಶ್ರೀ ಎಂ.ಪಿ., ಅನಿಲ್ ಜಿ.ಎನ್., ನಾಗರಾಜ್ ಆರ್., ಹುಝೈಫಾ, ಸ್ಥಳ: ಆರೋಹಿ, ಸ್ಥಳ: ಶುಕ್ರ ಸಭಾಂಗಣ, ಮಲ್ಲೇಶ್ವರ, ಸಂಜೆ 5

'ಕಾವ್ಯ, ಗೀತ, ಕುಂಚ' ಕಾರ್ಯಕ್ರಮ: 'ಕಾವ್ಯ ಒಂದು ಸಂಭಾಷಣೆ': ಎಸ್. ದಿವಾಕರ್, ಕಾವ್ಯ ಗಾಯನ: ನಾಗಚಂದ್ರಿಕಾ ಭಟ್, ಕಾವ್ಯ ದೃಶ್ಯರೂಪ ಗ್ರಹಿಕೆ: ಡಿ. ಮಹೇಂದ್ರ, ಆಯೋಜನೆ ಹಾಗೂ ಸ್ಥಳ: ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರ, ಮಲ್ಲತ್ತಹಳ್ಳಿ, ಸಂಜೆ 5

'ರುದ್ರವೀಣಾ ಬಸಂತೋತ್ಸವ' ಸಂಗೀತ ಕಾರ್ಯಕ್ರಮ: ಕಲಾವಿದರು: ಸುವೀರ್ ಮಿಶ್ರಾ, ಕಾಸ್ಟ್ರೆನ್ ವೀಕ್, ಜಾಹಿದ್ ಫರಿದಿ ದೇಸಾಯಿ, ಆಯೋಜನೆ: ಅನಂ ಪ್ರೇಮ್, ಹಿಮಾಲಯನ್ ಯೂನಿವರ್ಸಲ್ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ಕಾವ್ಯಾನಂದ ಪುರಸ್ಕಾರ ಪ್ರದಾನ: ನ್ಯಾ. ಶಿವರಾಜ್ ವಿ. ಪಾಟೀಲ್, ಕಾವ್ಯಾನಂದ ಪುರಸ್ಕೃತರು: ಗುರುಪಾದ ಮರಿಗುದ್ದಿ, 'ಪೊದೆಯಿಂದಿಳಿದ ಎದೆಯ ಹಕ್ಕಿ' ಕೃತಿ ಬಿಡುಗಡೆ, ಕೃತಿ ಬಗ್ಗೆ ಮಾತನಾಡುವವರು: ಬೈರಮಂಗಲ ರಾಮೇಗೌಡ, ಉಪಸ್ಥಿತಿ: ವಿಜಯಾ ನಂದೀಶ್ವರ, ಪ್ರಸನ್ನಕುಮಾರ ಪುರಾಣಿಕ, ರುದ್ರೇಶ ಅದರಂಗಿ, ಆಯೋಜನೆ: ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 6

ಶಿವರಾಜ್ ವಿ. ಪಾಟೀಲ್

'ಕರ್ನಾಟಕ ವಿಧಾನಸಭೆ ಚುನಾವಣೆಗಳು: ದೃಷ್ಟಿಕೋನಗಳು' ವಿಷಯದ ಬಗ್ಗೆ ವಿಚಾರ ಸಂಕಿರಣ: ಭಾಷಣಕಾರರು: ಪ್ರೊ.ರವಿವರ್ಮ ಕುಮಾರ್, ಎಂ.ಜಿ. ದೇವಸಹಾಯಂ, ಅರವಿಂದ್ ನರ್‍ರೈನ್, ಪ್ರೊ.ಎ.ಆರ್. ವಾಸವಿ, ಬೆಲಗಾಮಿ ಮೊಹಮ್ಮದ್ ಸಾಬ್, ಮೊಹಮ್ಮದ್, ತಾಹಾ ಮತೀನ್, ಅಧ್ಯಕ್ಷತೆ: ನ್ಯಾ.ಎಚ್.ಎನ್. ನಾಗಮೋಹನ್ ದಾಸ್, ಆಯೋಜನೆ: ಫೋರಂ ಫಾರ್ ಡೆಮಾಕ್ರಸಿ ಆ್ಯಂಡ್ ಕಮ್ಯುನಲ್ ಅಮಿಟಿ- ಕರ್ನಾಟಕ ಚಾಪ್ಟರ್, ಸ್ಥಳ: ಕೆ.ಎ.ಎಸ್. ಅಧಿಕಾರಿಗಳ ಸಂಘ, ಇನ್‌ಫೆಂಟ್ರಿ ರಸ್ತೆ, ಬೆಳಿಗ್ಗೆ 10



ನಾಗಮೋಹನ್ ದಾಸ್

ಕ್ಲಾಸಿಫೈಡ್ಸ್
WEEKEND CORNER

SALE FLAT 25% OFF
From 4th to 11th Feb 2023
ANAND JOHNSON
The entire world of lingerie..
VESTS- BRIEF- BRA- PANTY- SLIPS-TOWELS
MENS / LADIES WALLETS & CLUTCHES
Only @ BRIGHTWAYS WHOLESALERS Since 1957
AVENUE ROAD Ph: 080-22237504 Mob: 9742202223
Shop Online @ www.brightways.in
OPEN ON SUNDAY

ONLY 1 KM FROM KENGERI METRO STATION
SRL
READY, SET, MOVE! OWN 2 BHK APARTMENT IN KENGERI AT JUST 49 LAKH
"Experience Convenient Living - Only 1 Km from Kengeri Metro Station"
"Live on the Main Road - Beautifully Designed Apartments on 80 Feet Road"
"Savor the Tranquility - A Khatta property for a Calm & Peaceful Lifestyle"
"Upgrade Your Living Standards - Stylish and Spacious Apartments at an Affordable Price"
GST, Registration, BWSSB, Bescom Charges extra
STARTING AT JUST 47 Lakhs CALL FOR A SITE VISIT
47 LAKHS | 2 BHK
57 LAKHS | 3 BHK
8217516966

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Accounts & Finance

WANTED LADY account assistants, freshers can also apply. Candidates staying close to Seshadripuram will be prefered . Apply to biopharmgrp@gmail.com or call 9606508260

WANTED: ACCOUNTS ASSISTANT/ COMPUTER OPERATOR for SHASHI DETECTIVE SERVICES PVT. LTD. Rajajinagar-080 23133633, 23134876, 9880495755.

BUSINESS

Business to Business

Others

SAREES WHOLESALE LOT SALE Handloom and powerloom, silk, cotton and blended polyester sarees stock clearance bulk sale. Call 9108505475 / 9380402369

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call:7204995189

AUTOMOTIVE

Four Wheelers Selling

Maruti

ACCIDENTAL DAMAGED KA-05 MX-7124 Swift zdi+ 2018 model for sale with documents inspection at Kalyani Motors pantharapalya For details, contact 9845074511

PERSONAL

Announcements



Change of Name

I, KEERTHI P Shetty residing at #15 ' Janani' temple road, Katriguppe main road, ITI layout, Banahankari 3rd stage, Blr-560085 have changed My Minor Son's name from KAUSTUBH SHETTY to NAISHAL HITAARTH SHETTY. hereafter he shall known as NAISHAL HITAARTH SHETTY for all purpose vide affidavit dated 24.01.2023 before notary H.S Sakalesh Aradhya Bangalore.

I, MINAKASHI, residing at No.C-603, Platinum City, HMT Link Road, Yeshwanthpur, Bangalore-560022 have changed my name to MINAKASHI SHARMA vide affidavit dated 03/02/2023 sworn before notary Ambika.S, Bangalore

I,_PRIYANKA.S, R/o`No.359,1st E`Cross,6th Block,2nd Phase, Banashankari 3rd Stage,Bangalore -560085,have changed my_name_from Priyanka.S to Priyanka Rahul Vide`Affidavit dated 10-10-2022 before_Notary Jayappa.A, Bangalore.

I, AVINASH .N age 33 years, son of late NAGARAJ .M, residing at No. 1, Maruthi Ilaya, Near Bus Stop, Dasarahalli HA Farm Post Bengaluru 560024, have changed my son Name from Sri VIDYADHAR to ANVIK GOWDA .A Vide Affidavit dated 17-01-2023 sworn before Advocate and Notary G.R. Ravichandra Reddy, Bengaluru

CHANGE OF NAME
I, AMMAKANNU, Residing at No. 29, L.K. Sannidhi Chikkadugodi, DRC Post, Tavarekere, Bangalore-560029, have changed my name to JESSYSHANTHA, vide affidavit dated 11.01.2023, before Notary Aravind Patil.G.G., Bangalore. Henceforth, I shall be called JESSYSHANTHA, only.

I, G.H. SHAKUNTHALAMMA W/o Thyagaraja K R/o#166, Radha Madhavam, 4th Main, Singapura Paradise Layout, Bangalore- 560097 have changed my name from G.H. SHAKUNTHALA to G.H. SHAKUNTHALAMMA vide affidavit dated 12-01-2023 before Notary R.Ramesh, Bangalore

I, LUCY DAVID MUTHALGERI have changed my name to LUCY CHRISTOPHER DHAWALE vide affidavit dated 01.02.2023, before notary Uday Kumar, Bangalore.

Lost

LOST OF DOCUMENT
I, Sudha Purushotham have lost Fixed Deposit No.14006 of Mrs. M.S. Nagarathna, Police Complaint has been logded. Kindly Contact: 9900924765

MORE Classifieds IN SUPPLEMENT

DOCUMENT LOST
The following documents of property bearing Sy. Nos.24, Chandrashekarapura Village, and 50/2, Yelenahalli Village, Begur Hobli, Bangalore South, belonging to **M/s. Nandi Housing Private limited** have been lost;
1. Sale Deed No.12797/2004-05 dated 12/08/2004 executed between Mr. Muniyappa & Family and Mr. A.V.V. Dhanpal.
2. Sale Deed No.2859/70-71 dated 03.09.1970 executed between Mr.Subbaiah and Smt. Nagamma.
3. Sale Deed No.2624/74-75 dated 15.06.1974 executed between Smt. Nagamma and Mrs. Seethamma.
The Finders may please Contact: 98452 98877

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ನವೋದ್ಯಮ, ಎಂಎಸ್‌ಎಂಇ ಉದ್ದಿಮೆದಾರರು, ಶೈಕ್ಷಣಿಕ ತಜ್ಞರು, ಹೂಡಿಕೆದಾರರಿಗೆ ವೇದಿಕೆ

ಏರೋ ಇಂಡಿಯಾದಲ್ಲಿ ‘ಮಂಥನ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿಯ ಏರೋ ಇಂಡಿಯಾದಲ್ಲಿ ರಕ್ಷಣಾ ಮತ್ತು ವೈಮಾಂತರಿಕ್ಷ ಕ್ಷೇತ್ರದ ನವೋದ್ಯಮ ಮತ್ತು ಎಂಎಸ್‌ಎಂಇ ಉದ್ದಿಮೆದಾರರು, ಶೈಕ್ಷಣಿಕ ತಜ್ಞರು ಹಾಗೂ ಹೂಡಿಕೆದಾರರನ್ನು ಒಂದೇ ಸೂರಿನ ಅಡಿಯಲ್ಲಿ ತರಲು ‘ಮಂಥನ್–2023’ ವೇದಿಕೆ ಅವಕಾಶ ಒದಗಿಸಲಿದೆ.

ಮಹತ್ವದ ತಂತ್ರಜ್ಞಾನ ಪ್ರದರ್ಶನಕ್ಕೂ ‘ಮಂಥನ್’ ವೇದಿಕೆ ಕಲ್ಪಿಸಲಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ‘ಮಂಥನ್’ ಕಾರ್ಯಕ್ರಮದಲ್ಲಿ ಸೈಬರ್ ಭದ್ರತೆ ಕುರಿತ ‘ಡಿಫೆನ್ಸ್ ಇಂಡಿಯಾ’ ನವೋದ್ಯಮಕ್ಕೆ ಚಾಲನೆ ನೀಡಲಿದ್ದಾರೆ.

ಫೆ.15ರಂದು ನಡೆಯಲಿರುವ ‘ಮಂಥನ್’ ಅನ್ನು ‘ಐಡಿಇಎಕ್ಸ್’ ಆಯೋಜಿಸುತ್ತಿದೆ. ‘ಐಡಿಇಎಕ್ಸ್’ (ರಕ್ಷಣಾ ಶ್ರೇಷ್ಠತೆಗಾಗಿ ಆವಿಷ್ಕಾರಗಳು) ರಕ್ಷಣಾ ಸಚಿವಾಲಯದ ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಇದಕ್ಕೆ ಪ್ರಧಾನಿ 2018ರಲ್ಲಿ ಚಾಲನೆ ನೀಡಿದ್ದರು. ನವೋದ್ಯಮಗಳು, ಎಂಎಸ್‌ಎಂಇಗಳು, ಇನ್‌ಕ್ಯುಬೇಟರ್‌ಗಳನ್ನು ತೊಡಗಿಸಿಕೊಳ್ಳುವ ಮೂಲಕ ರಕ್ಷಣಾ ಮತ್ತು ಬಾಹ್ಯಾಕಾಶ ತಂತ್ರಜ್ಞಾನದ ಅಭಿವೃದ್ಧಿಯನ್ನು ಉತ್ತೇಜಿಸಲು ಪೂರಕ ವ್ಯವಸ್ಥೆ ಸೃಷ್ಟಿಸುವುದು ಯೋಜನೆಯ ಉದ್ದೇಶವಾಗಿದೆ ಎಂದು ರಕ್ಷಣಾ ಇಲಾಖೆ ಪ್ರಕಟಣೆ ತಿಳಿಸಿದೆ.

‘ಮಂಥನ್’ ಹಲವು ಪ್ರಥಮಗಳನ್ನು ಹೊಂದಿದೆ. ಸೈಬರ್ ಭದ್ರತೆಯ ಕುರಿತ ಸ್ಪರ್ಧೆಗಳಿಗೆ ಚಾಲನೆ ನೀಡುವುದು ಸೇರಿದಂತೆ ಐಡಿಇಎಕ್ಸ್ ಹೂಡಿಕೆದಾರರ ತಾಣ ಸ್ಥಾಪನೆ, ಹೂಡಿಕೆದಾರರೊಂದಿಗಿನ ಒಡಂಬಡಿಕೆಗಳು ಒಳಗೊಂಡಿವೆ.

ಇದುವರೆಗೆ ಐಡಿಇಎಕ್ಸ್ ಎಂಟು ಸುತ್ತುಗಳ ‘ಡಿಫೆನ್ಸ್ ಇಂಡಿಯಾ ಸ್ಟಾರ್ಟ್‌ಅಪ್ ಚಾಲೆಂಜ್’ (ಡಿಐಎಸ್‌ಸಿ) ಮತ್ತು ಆರು ಸುತ್ತುಗಳ ‘ಓಪನ್ ಚಾಲೆಂಜ್’ಗಳನ್ನು ಆರಂಭಿಸಿದೆ. ಜತೆಗೆ, ಆವಿಷ್ಕಾರ ಮಾಡಿದವರಿಂದ 6,850ಕ್ಕೂ ಹೆಚ್ಚು ಅರ್ಜಿಗಳನ್ನು ಸ್ವೀಕರಿಸಿದೆ. ಸದ್ಯ, ಐಡಿಇಎಕ್ಸ್ 90ಕ್ಕೂ ಹೆಚ್ಚು ನವೋದ್ಯಮಗಳು ಮತ್ತು ಎಂಎಸ್ ಎಂಇಗಳೊಂದಿಗೆ ಒಪ್ಪಂದ ಸಹ ಮಾಡಿಕೊಂಡಿದೆ. ಸಶಸ್ತ್ರ ಪಡೆಗಳಿಗೆ ಅತ್ಯಾಧುನಿಕ ತಂತ್ರಜ್ಞಾನಕ್ಕಾಗಿ ಧನಸಹಾಯ ಮತ್ತು ಮಾರ್ಗದರ್ಶನ ನೀಡುತ್ತಿದೆ.

ಪ್ರಮುಖ ಅಂಶಗಳು

- ಸೈಬರ್ ಭದ್ರತೆಯ ವಿಷಯದ ‘ಡಿಫೆನ್ಸ್ ಇಂಡಿಯಾ ಸ್ಟಾರ್ಟ್‌ಅಪ್ ಸ್ಪರ್ಧೆ’9 (ಡಿಐಎಸ್‌ಸಿ–9) ಗೆ ಚಾಲನೆ. ಇದು ನೂರಾರು ನವೋದ್ಯಮಿಗಳಿಗೆ ಭಾಗವಹಿಸಲು ಮತ್ತು ರಕ್ಷಣಾ ಮತ್ತು ಭದ್ರತಾ ಪೂರಕ ವ್ಯವಸ್ಥೆಯ ಭಾಗವಾಗಲು ಅವಕಾಶ ಒದಗಿಸುತ್ತದೆ.
- ಐಡಿಇಎಕ್ಸ್ ಸಂಬಂಧಿತ ನವೋದ್ಯಮಗಳು ಮತ್ತು ಎಂಎಸ್‌ಎಂಇಗಳ ತಂತ್ರಜ್ಞಾನ ಪ್ರದರ್ಶನ
- ಸುಧಾರಿತ ಸೆನ್ಸರ್‌ಗಳು, ಬಾಹ್ಯಾಕಾಶ ತಂತ್ರಜ್ಞಾನ, ಭವಿಷ್ಯದ ತಂತ್ರಜ್ಞಾನಗಳ ಪ್ರದರ್ಶನ.
- ಹಣಕಾಸು ಸಂಸ್ಥೆಗಳ ಜತೆ ಒಡಂಬಡಿಕೆಗಳಿಗೆ ಸಹಿ ಹಾಕುವುದು.
- ಶ್ರೇಷ್ಠ ತಂತ್ರಜ್ಞರು, ಉದ್ಯಮದ ತಜ್ಞರು ಮತ್ತು ನೀತಿ ನಿರೂಪಕರ ಜತೆ ಸಂವಾದಗಳು.
- ಹೂಡಿಕೆದಾರರ ಗೋಷ್ಠಿಗಳು

ಬಿಬಿಎಂಪಿ ನೌಕರರ ಹೋರಾಟ ಫೆ.9ರಿಂದ ಸಾಮೂಹಿಕ ರಜೆ



ಬೆಂಗಳೂರು: ವಿವಿಧ ಬೇಡಿಕೆಗಳನ್ನು ಈಡೇರಿಸಲು ಸಲ್ಲಿಸಲಾಗಿರುವ ಮನವಿಗೆ ಸ್ಪಂದಿಸದಿರುವುದರಿಂದ ಫೆ.9ರಿಂದ ಸಾಮೂಹಿಕ ರಜೆ ಹಾಕಿ ಹೋರಾಟ ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ನಿರ್ಧರಿಸಿದೆ.

ಮುಖ್ಯಮಂತ್ರಿ, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಮನವಿಪತ್ರಗಳನ್ನು ಸಲ್ಲಿಸಲಾಗಿದೆ. ಆದರೆ ಈವರೆಗೆ ಯಾವುದೇ ಬೇಡಿಕೆಗಳನ್ನು ಈಡೇರಿಸಿಲ್ಲ. ಬಿಬಿಎಂಪಿ ಅಧಿಕಾರಿಗಳು, ನೌಕರರು ಆಡಳಿತ ಹಾಗೂ ವೈದ್ಯಕೀಯ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಹೀಗಾಗಿ ಹೋರಾಟ ಆರಂಭಿಸಲಾಗುತ್ತಿದೆ ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ತಿಳಿಸಿದರು.

ಆಡಳಿತ ವಿಭಾಗದ ವಿಶೇಷ ಆಯುಕ್ತರು ಮತ್ತು ಉಪ ಆಯುಕ್ತರನ್ನು ಪ್ರಭಾರದ ಮೇಲೆ ನೇಮಿಸಿರುವುದರಿಂದ ಪಾಲಿಕೆ ಕೆಲಸಗಳಿಗೆ ತೊಂದರೆ ಉಂಟಾಗಿದೆ. ಆಡಳಿತದ ಹಿತದೃಷ್ಟಿಯಿಂದ ಕೂಡಲೇ ಕಾಯಂ ಅಧಿಕಾರಿಗಳನ್ನು ನೇಮಿಸಬೇಕು ಎಂದು ಆಗ್ರಹಿಸಿದರು.

‘ಬಿಬಿಎಂಪಿಯಲ್ಲಿ ಅಧಿಕಾರ ಪ್ರತ್ಯೋಜನೆ ಪಾಲಿಸದಿರುವುದರಿಂದ ಸಿಬ್ಬಂದಿಗೆ ಆಡಳಿತ ಹಾಗೂ ಆರ್ಥಿಕ ಸೌಲಭ್ಯ ಸಿಗುತ್ತಿಲ್ಲ. ಸಮಾನ ಕೆಲಸಕ್ಕೆ ಸಮಾನ ವೇತನ ಆಧಾರದಲ್ಲಿ ವಿಲೀನ ಆದೇಶ ನೀಡದಿರುವುದರಿಂದ ಆರ್ಥಿಕವಾಗಿ ಸಂಕಷ್ಟವಾಗಿದೆ. ಸಿಬ್ಬಂದಿಯ ಅವಲಂಬಿತರಿಗೆ ಆರೋಗ್ಯ ಚಿಕಿತ್ಸೆಗೆ ಕಾರ್ಡ್ ನೀಡಿಲ್ಲ. ಎಲ್ಲ ವೃಂದದ ಮುಂಬಡ್ತಿಗಳನ್ನು ನೀಡಬೇಕು. 243 ವಾರ್ಡ್‌ಗಳು ರಚನೆಯಾಗಿರುವುದರಿಂದ 198 ವಾರ್ಡ್‌ಗಳಿರುವ ಸಿಬ್ಬಂದಿಯನ್ನು ಹೆಚ್ಚಿಸಬೇಕು. ಅಗತ್ಯವಿರುವ ಸಿಬ್ಬಂದಿಯನ್ನು ಕೂಡಲೆ ನೇಮಿಸಿಕೊಳ್ಳಬೇಕು. ಸರ್ಕಾರ ಹಾಗೂ ಕೌನ್ಸಿಲ್ ಅನುಮೋದಿಸಿರುವ 707 ಹುದ್ದೆಗಳ ನೇರ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು’ ಎಂದು ಬೇಡಿಕೆ ಸಲ್ಲಿಸಲಾಗಿದೆ ಎಂದರು.

ಬಿಬಿಎಂಪಿ ಆರೋಗ್ಯ ಇಲಾಖೆಗೆ ಕಾನೂನುಬಾಹಿರವಾಗಿ ಮಾರ್ಷಲ್‌ಗಳನ್ನು ನೇಮಿಸಲಾಗಿದ್ದು, ಅದನ್ನು ರದ್ದುಪಡಿಸಬೇಕು. ವಾಹನ ನಿಲ್ದಾಣಕ್ಕೆ ಸ್ಥಳ ಇಲ್ಲದಿರುವುದರಿಂದ ಪುರಸಭೆ ಬಳಿ ನೀರಿನ ಘಟಕ ಸ್ಥಾಪನೆ ಪ್ರಸ್ತಾವ ಕೈಬಿಡಬೇಕು ಎಂದರು.

ಎರಡು ವರ್ಷದಿಂದ ನಾಡಪ್ರಭು ಕೆಂಪೇಗೌಡ ದಿನ ಆಚರಿಸಿಲ್ಲ. 2022ರ ಸಾಲಿನಲ್ಲಿ ದಿನಾಚರಣೆ ಸಂಬಂಧ ಪ್ರಕ್ರಿಯೆ ಆರಂಭವಾದರೂ ಕಾರ್ಯಕ್ರಮ ನಡೆಯಲಿಲ್ಲ. ಹೀಗಾಗಿ, ಕಾರ್ಯಕ್ರಮ ಆಯೋಜಿಸಿ ಉತ್ತಮ ಸೇವೆ ಸಲ್ಲಿಸಿದ ಅಧಿಕಾರಿಗಳಿಗೆ ಪ್ರಶಸ್ತಿ ನೀಡಬೇಕು ಅದೇ ರೀತಿ ಡಾ. ಬಿ.ಆರ್. ಅಂಬೇಡ್ಕರ್ ದಿನಾಚರಣೆ ಮಾಡಿ ಪ್ರಶಸ್ತಿ ನೀಡಬೇಕು ಎಂದು ಆಗ್ರಹಿಸಲಾಗಿದೆ ಎಂದರು.

ಬಳ್ಳಾರಿ ರಸ್ತೆ ವಿಸ್ತರಣೆ: ವಿಶ್ವಾಸಾರ್ಹ ಅಧಿಕಾರಿಗಳ ಮೇಲ್ವಿಚಾರಣೆಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ (ಕೆಐಎ) ಸಂಪರ್ಕ ಕಲ್ಪಿಸುವ ಬಳ್ಳಾರಿ ರಸ್ತೆಯ ವಿಸ್ತರಣೆ ಕಾಮಗಾರಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಶ್ವಾಸಾರ್ಹ ಮತ್ತು ಹಿರಿಯ ಅಧಿಕಾರಿಯ ಮೇಲ್ವಿಚಾರಣೆಯಲ್ಲಿ ನಡೆಸಬೇಕು‘ ಎಂದು ಹೈಕೋರ್ಟ್ ಸೂಚಿಸಿದೆ.

‘ಬಳ್ಳಾರಿ ರಸ್ತೆ ವಿಸ್ತರಣೆಗೆ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿ ‘ಸಮರ್ಪಣಾ’ ಸ್ವಯಂ ಸೇವಾ ಸಂಸ್ಥೆ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಜಿ.ಆರ್. ಮೋಹನ್, ‘ವಾಹನ ದಟ್ಟಣೆಯಿಂದ ಬಳಲುತ್ತಿರುವ ಬಳ್ಳಾರಿ ರಸ್ತೆಯ ಸಂಚಾರ ವ್ಯವಸ್ಥೆ ಸುಗಮಗೊಳಿಸಲು ವಿಸ್ತರಣೆಗೆ ಸುಪ್ರೀಂಕೋರ್ಟ್ ಈಗಾಗಲೇ ನಿರ್ದೇಶಿಸಿದೆ. ಆದರೂ, ಬಿಬಿಎಂಪಿ ಕಾಮಗಾರಿಯನ್ನು ವಿಳಂಬ ಮಾಡುತ್ತಿದೆ‘ ಎಂದು ದೂರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಬಿಬಿಎಂಪಿ ಪರ ವಕೀಲರು, ‘ಮೇಖ್ರಿ ವೃತ್ತದಿಂದ ಕಾವೇರಿ ಜಂಕ್ಷನ್ ವರೆಗಿನ ಕಾಮಗಾರಿಯನ್ನು ಈಗಾಗಲೇ ಪ್ರಾರಂಭಿಸಲಾಗಿದೆ. ಈ ಮಾರ್ಗದಲ್ಲಿ ವಾಹನ ಸಂಚಾರ ದಟ್ಟಣೆ ಹೆಚ್ಚಾಗಿರುವ ಕಾರಣ ಕಾಮಗಾರಿ ವಿಳಂಬವಾಗುತ್ತಿದೆ‘ ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಇದಕ್ಕೆ ನ್ಯಾಯಪೀಠ, ರಸ್ತೆ ವಿಸ್ತರಣೆಯ ಕಾಮಗಾರಿಯನ್ನು ಪಾಲಿಕೆಯ ವಿಶ್ವಾಸಾರ್ಹ ಮತ್ತು ಹಿರಿಯ ಅಧಿಕಾರಿಗಳೇ ಮೇಲ್ವಿಚಾರಣೆ ನಡೆಸಬೇಕು. ಕಾಮಗಾರಿ ವಿಳಂಬವಾಗದಂತೆ ನೋಡಿಕೊಳ್ಳಬೇಕು’ ಎಂದು ಸೂಚಿಸಿತು. ನಾಲ್ಕು ವಾರಗಳಲ್ಲಿ ಕಾಮಗಾರಿಯ ಪ್ರಗತಿ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ’ ಎಂದು ಪಾಲಿಕೆಗೆ ನಿರ್ದೇಶಿಸಿ, ವಿಚಾರಣೆ ಮುಂದೂಡಿತು.

ಅರಮನೆ ಮೈದಾನ ರಸ್ತೆಗೆ ಒಂದು ವಾರದಲ್ಲಿ ಮತ್ತೆರಡು ಲೇನ್

ಬೆಂಗಳೂರು: ಅರಮನೆ ಮೈದಾನ ರಸ್ತೆ ವಿಸ್ತರಣೆಗೆ 54 ಮರಗಳನ್ನು ಕಡಿದಿರುವ ಬಿಬಿಎಂಪಿ, ಕಾಮಗಾರಿಯನ್ನು ವೇಗವಾಗಿ ನಡೆಸುತ್ತಿದೆ. ಹೀಗಾಗಿ, ಇನ್ನೊಂದು ವಾರದಲ್ಲಿ ಮತ್ತೆರಡು ಲೇನ್ ನಿರ್ಮಾಣವಾಗಲಿವೆ.

ಕಾವೇರಿ ಚಿತ್ರಮಂದಿರದಿಂದ ಮೇಖ್ರಿ ವೃತ್ತದವರಗೆ ಬಿಬಿಎಂಪಿ ಆರು ಪಥ ನಿರ್ಮಿಸುವ ಯೋಜನೆ ಹೊಂದಿದೆ. ವಿನ್ಯಾಸದ ಪ್ರಕಾರ, ಬಿಬಿಎಂಪಿ ತಲಾ 9.5 ಮೀಟರ್ ಅಗಲದ ರಸ್ತೆಗಳನ್ನು ಎರಡು ದಿಕ್ಕಿನಲ್ಲಿ ನಿರ್ಮಿಸಲಿದೆ. ಮೇಖ್ರಿ ವೃತ್ತದ ಕಡೆಗೆ ವಿಸ್ತಾರವಾದ ಪಾದಚಾರಿ ಮಾರ್ಗವನ್ನು ಹಾಗೆಯೇ ಉಳಿಸಿಕೊಳ್ಳಲಿದ್ದು, ಕಾವೇರಿ ಚಿತ್ರಮಂದಿರದ ಕಡೆಗಿನ ಪಾದಚಾರಿ ಮಾರ್ಗವನ್ನು ತೆಗೆಯುವ ಪ್ರಸ್ತಾಪವಿದೆ.

‘ಅರಮನೆ ಮೈದಾನಕ್ಕೆ ಪ್ರವೇಶ ಹಾಗೂ ನಿರ್ಗಮನದ ವಿನ್ಯಾಸವನ್ನು ಬದಲಿಸಲು ಯೋಜಿಸಲಾಗಿದೆ. ಪ್ರಸ್ತುತ, ಮೈದಾನದ ಒಳಗೆ ಹೋಗಲು ಮುಖ್ಯರಸ್ತೆಯಲ್ಲಿ ವಾಹನಗಳು ಸಾಲುಗಟ್ಟುತ್ತಿವೆ. ಇದೀಗ ಮೈದಾನದ ಗೇಟ್ ಹಾಗೂ ಮುಖ್ಯರಸ್ತೆ ನಡುವಿನ ಸ್ಥಳವನ್ನು ಉಪಯೋಗಿಸಿಕೊಂಡು, ವಾಹನ ಸಂಚಾರ ಸುಗಮಗೊಳಿಸಲು ಯೋಜಿಸಲಾಗಿದೆ’ ಎಂದು ಬಿಬಿಎಂಪಿ ಅಧಿಕಾರಿ ತಿಳಿಸಿದರು.

ಗಲಾಟೆ: 15 ಜನರ ವಿರುದ್ಧ ಪ್ರಕರಣ

ಹೊಸಪೇಟೆ(ವಿಜಯನಗರ): ಸಮೀಪದ ಕಾರಿಗನೂರು ಗ್ರಾಮದಲ್ಲಿ ಗುರುವಾರ ನಡೆದ ರಥೋತ್ಸವ ಸಂದರ್ಭದಲ್ಲಿ ಎರಡು ಕೋಮಿನ ಗುಂಪುಗಳ ನಡುವೆ ನಡೆದ ಗಲಾಟೆಗೆ ಸಂಬಂಧಿಸಿದಂತೆ 15 ಜನರ ವಿರುದ್ಧ ಶುಕ್ರವಾರ ಪ್ರಕರಣ ದಾಖಲಾಗಿದೆ.

ಪ್ರತಿ ವರ್ಷದಂತೆ ಗ್ರಾಮದಲ್ಲಿ ಗುರುವಾರ ಹರಿಹರೇಶ್ವರ ಸೇವಾ ಟ್ರಸ್ಟ್ ವತಿಯಿಂದ ಪಾಂಡುರಂಗಸ್ವಾಮಿ ಹಾಗೂ ಓಂಕಾರೇಶ್ವರ ಸ್ವಾಮಿಯ ಜೋಡಿ ರಥೋತ್ಸವ ಜರುಗಿತು.

ಸಂಜೆ ರಥೋತ್ಸವ ಸಂದರ್ಭದಲ್ಲಿ ಒಂದು ಕೋಮಿನ ಗುಂಪಿನವರು ರಥೋತ್ಸವಕ್ಕೆ ಹಾರ ತೆಗೆದುಕೊಂಡು ಹೋಗುವ ಸಮಯದಲ್ಲಿ ಇನ್ನೊಂದು ಕೋಮಿನ ಗುಂಪಿನವರು ಉದ್ದೇಶಪೂರ್ವಕವಾಗಿ ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆಗೆ ಮುಂದಾಗಿ ಕೊಲೆ ಬೆದರಿಕೆಯೊಡ್ಡಿದ್ದಾರೆ. ಈ ಕುರಿತು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಫೆ.11ರಿಂದ ಉಡುಪಿಯಲ್ಲಿ ರಾಜ್ಯಮಟ್ಟದ ಯಕ್ಷಗಾನ ಸಮ್ಮೇಳನ

ಬೆಂಗಳೂರು: ‘ಮೊದಲ ಬಾರಿಗೆ ಆಯೋಜಿಸಲಾಗುತ್ತಿರುವ ರಾಜ್ಯ ಮಟ್ಟದ ಸಮಗ್ರ ಯಕ್ಷಗಾನ ಸಮ್ಮೇಳನವು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಯಕ್ಷಗಾನ ಅಕಾಡೆಮಿ ಆಶ್ರಯದಲ್ಲಿ ಉಡುಪಿಯಲ್ಲಿ ಫೆ.11 ಹಾಗೂ 12ರಂದು ನಡೆಯಲಿದೆ’ ಎಂದು ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಕೆ.ರಘುಪತಿ ಭಟ್ ಇಲ್ಲಿ ಹೇಳಿದರು.

‘ಬಜೆಟ್‌ನಲ್ಲಿ ಸರ್ಕಾರವು ಘೋಷಿಸಿದಂತೆ ₹2 ಕೋಟಿ ಅನುದಾನ ಬಿಡುಗಡೆ ಮಾಡಿದೆ. ಉಡುಪಿಯ ಕುಂಜಿಬೆಟ್ಟುವಿನ ಎಎಲ್‌ಎಸ್‌ರಾವ್ ಕ್ರೀಡಾಂಗಣದಲ್ಲಿ ಸಮ್ಮೇಳನ ನಡೆಯಲಿದೆ. ಸಮ್ಮೇಳನಾಧ್ಯಕ್ಷರಾಗಿ ಡಾ.ಎಂ.ಪ್ರಭಾಕರ ಜೋಷಿ ಅವರನ್ನು ಆಯ್ಕೆ ಮಾಡಲಾಗಿದೆ’ ಎಂದು ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ತಿಳಿಸಿದರು.

‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಫೆ.11ರಂದು ಚಾಲನೆ ನೀಡಲಿದ್ದಾರೆ. 10 ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. 75 ಮಂದಿ ಯಕ್ಷಗಾನ ಕಲಾವಿದರನ್ನು ಸನ್ಮಾನಿಸಲಾಗುವುದು. 200 ಕಲಾವಿದರ ಭಾವಚಿತ್ರ ಹಾಗೂ ಕಿರು ಪರಿಚಯದ ಪ್ರದರ್ಶನ ಇರಲಿದೆ’ ಎಂದು ಹೇಳಿದರು.

‘ಉಡುಪಿಯಲ್ಲಿ 2006ರಿಂದಲೂ ಯಕ್ಷ ಶಿಕ್ಷಣ ಟ್ರಸ್ಟ್ ಅಡಿ 41 ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗೆ ಯಕ್ಷಗಾನ ಕಲಿಸಲಾಗುತ್ತಿದೆ. ಪ್ರತಿವರ್ಷ 1,500 ವಿದ್ಯಾರ್ಥಿಗಳು ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ. ಅವರೆಲ್ಲರೂ ಪ್ರದರ್ಶನ ನೀಡಲಿದ್ದಾರೆ’ ಎಂದು ಹೇಳಿದರು.

ನಳಂದಾ ವಿ.ವಿ ಬಳಿ 1,200 ವರ್ಷ ಹಳೆಯ ವಿಗ್ರಹಗಳು ಪತ್ತೆ

ಪಟ್ನಾ (ಪಿಟಿಐ): ‘ಪುರಾತನ ನಳಂದಾ ವಿಶ್ವವಿದ್ಯಾಲಯ ಬಳಿಯಲ್ಲಿರುವ ಕೊಳದ ಹೂಳು ತೆಗೆಯುವ ವೇಳೆ ಸುಮಾರು 1,200 ವರ್ಷಗಳಷ್ಟು ಹಳೆಯದಾದ ಎರಡು ಶಿಲಾ ವಿಗ್ರಹಗಳು ಪತ್ತೆಯಾಗಿವೆ’ ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ವಾರದ ಆರಂಭದಲ್ಲಿ ನೀರನ್ನು ಸಂರಕ್ಷಿಸಲು ಆರಂಭಿಸಲಾದ ‘ಜಲ್-ಜೀವನ್-ಹರಿಯಾಲಿ’ ಯೋಜನೆಯಡಿಯಲ್ಲಿ ಕೊಳದ ಹೂಳು ತೆಗೆಯುವ ಸಂದರ್ಭದಲ್ಲಿ ಪ್ರಾಚೀನ ನಳಂದ ಮಹಾವೀರ ಸಮೀಪದ ಸರ್ಲಿಚಕ್ ಗ್ರಾಮದ ತಾರ್ಸಿನ್ಸ್ ಕೊಳದಲ್ಲಿ ವಿಗ್ರಹಗಳು ಪತ್ತೆಯಾಗಿವೆ.

‘ಸರ್ಲಿಚಕ್ ಗ್ರಾಮಸ್ಥರು ಈ ವಿಗ್ರಹಗಳು ದೊರೆತ ಬಳಿಕ ಅವುಗಳಿಗೆ ದೇವಸ್ಥಾನ ಕಟ್ಟಿಸಲು ಮುಂದಾಗಿದ್ದರು. ಆ ಸ್ಥಳದಲ್ಲಿದ್ದ ನಮ್ಮ ಅಧಿಕಾರಿಗಳಿಗೆ ಈ ವಿಷಯ ತಿಳಿದ ಕೂಡಲೇ ಪೊಲೀಸರಿಗೆ ಮಾಹಿತಿ ನೀಡಿದ್ದು, ವಿಗ್ರಹಗಳನ್ನು ಸುಪರ್ದಿಗೆ ತೆಗೆದುಕೊಂಡಿದ್ದಾರೆ’ ಎಂದು ಅಧೀಕ್ಷಕ ಪುರಾತತ್ವ ಶಾಸ್ತ್ರಜ್ಞೆ ಗೌತಮಿ ಭಟ್ಟಾಚಾರ್ಯ ಅವರು (ಎಎಸ್‌ಐ ಪಟ್ನಾ ವಲಯ) ಮಾಹಿತಿ ನೀಡಿದ್ದಾರೆ.

ನಗರದ ವಿಕಾಸಸೌಧದಲ್ಲಿ ಶುಕ್ರವಾರ ಕರ್ನಾಟಕ ಕಾನೂನು ಹಾಗೂ ಸಂಸದೀಯ ಸುಧಾರಣಾ ಸಂಸ್ಥೆಯು ಆಯೋಜಿಸಿದ್ದ ರಾಜ್ಯಮಟ್ಟದ ಅಣಕು ಸಂಸತ್ ಅಧಿವೇಶನದಲ್ಲಿ ಕಾನೂನು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು

ನಟ ಸುದೀಪ್ ಮನೆಗೆ ಡಿಕೆಶಿ ಭೇಟಿ; ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಗುರುವಾರ ರಾತ್ರಿ ನಟ ಸುದೀಪ್ ಮನೆಗೆ ತೆರಳಿ ಚರ್ಚೆ ನಡೆಸಿರುವುದು ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ.

ಇಬ್ಬರು ಭೇಟಿಯಾಗಿರುವ ಫೋಟೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಯುವ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಮೊಹಮ್ಮದ್ ನಲಪಾಡ್ ಜತೆಗಿದ್ದರು.

ಸುದೀಪ್ ಭೇಟಿ ಕುರಿತು ಟ್ವಿಟರ್‌ನಲ್ಲಿ ಬರೆದುಕೊಂಡಿರುವ ಶಿವಕುಮಾರ್, ‘ಚಿತ್ರರಂಗಗಳಲ್ಲಿ ಛಾಪು ಮೂಡಿಸಿ, ಕರ್ನಾಟಕದ ಕೀರ್ತಿ ಹೆಚ್ಚಿಸಿದ ನಟ ಸುದೀಪ್ ಅವರನ್ನು ಭೇಟಿ ಮಾಡಿದೆ. ಈ ವೇಳೆ ಕನ್ನಡ ಚಿತ್ರರಂಗ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸಿದೆವು. ಚಿತ್ರರಂಗದ ಸಮಸ್ಯೆಗಳನ್ನು ಬಗೆಹರಿಸಲು ಕಾಂಗ್ರೆಸ್ ರೂಪಿಸುತ್ತಿರುವ ವಿಶೇಷ ಪ್ರಣಾಳಿಕೆಗೆ ಅವರ ಸಲಹೆಗಳನ್ನು ಪಡೆದಿದ್ದೇನೆ’ ಎಂದಿದ್ದಾರೆ.

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ



ಆತ್ಮಬಲಕ್ಕೆ ಅಂಜುವ ಅರ್ಬುದ....

ಡಾ. ವೀಣಾ ಭಟ್

ಮೊನ್ನೆಯಷ್ಟೆ ಕಾರ್ಯಕ್ರಮವೊಂದಕ್ಕೆ ಹೋಗಿದ್ದೆ. ಸದಾ ಕ್ರಿಯಾಶೀಲಳಾಗಿರುವ ಗೆಳತಿಯೊಬ್ಬಳು ಸಿಕ್ಕಳು. ಮಾತಾಡುತ್ತಾ, 'ಬಲಸ್ತನದಲ್ಲಿ ಒಂದು ಗಂಟಾಗಿದೆ. ಬಹುಶಃ ಮಾಂಗಲ್ಯ ಸರ ಒತ್ತಿ ಹಾಗಾಗಿರಬೇಕು. ನೋವೇನಿಲ್ಲ' ಎಂದು ಹೇಳಿದಳು. ನಾನು, ಅವಳ ಮಾತನ್ನು ಹಗುರವಾಗಿ ತೆಗೆದುಕೊಳ್ಳದೇ, 'ಮೊದಲು ಎಫ್.ಎನ್.ಎ.ಸಿ ಪರೀಕ್ಷೆ ಮಾಡಿಸು (ಸೂಜಿಯಿಂದ ಚಿಕ್ಕತುಣುಕನ್ನ ತೆಗೆದು ಪರೀಕ್ಷಿಸುವುದು) ಎಂದು ಸೂಚಿಸಿದೆ. ಆ ಪರೀಕ್ಷೆ ಮಾಡಿಸಿದಾಗ, ಅದು ಕ್ಯಾನ್ಸರ್‌ಕಾರಕ ಗಡ್ಡೆ ಎಂದು ದೃಢಪಟ್ಟಿತು !

ತರಕಾರಿ ಮಾರುವ ಮಹಿಳೆಯೊಬ್ಬರು, ಶ್ವಾಸಕೋಶದಲ್ಲಿ ನೀರು ತುಂಬಿದ ಕಾರಣಕ್ಕಾಗಿ ಚಿಕಿತ್ಸೆಪಡೆಯಲು ತೀವ್ರ ನಿಗಾ ಘಟಕಕ್ಕೆ ದಾಖಲಾಗಿದ್ದರು. ಆದರೆ, ಶ್ವಾಸಕೋಶಕ್ಕೆ ನೀರು ತುಂಬುವ ಮೊದಲೇ ಅವರಿಗೆ ಸ್ತನದ ಕ್ಯಾನ್ಸರ್ ಆಗಿ ಶ್ವಾಸಕೋಶ, ಮಿದುಳಿಗೆಲ್ಲ ಹರಡಿಬಿಟ್ಟಿತ್ತು. ಇದು ಆಕೆಗೆ ಗೊತ್ತೇ ಆಗಿರಲಿಲ್ಲ..!

ಸಂಕ್ರಾಂತಿ ಹಬ್ಬಕ್ಕೆ ಎಳ್ಳು ಬೆಲ್ಲ ಹೆಚ್ಚು ತಿಂದಿದ್ದೇನೆ. ಹಾಗಾಗಿ ಎರಡು ವರ್ಷಗಳಿಂದ ಆಗದ ಮುಟ್ಟು ಉಷ್ಣ ಹೆಚ್ಚಾಗಿ ಈಗ ಆಗುತ್ತಿದೆ ಎಂದು 55ರ ಹೊಸ್ತಿಲಲ್ಲಿ ಇರುವ ಪರಿಚಯಸ್ಥ ಮಹಿಳೆಯೊಬ್ಬರು ಹೇಳಿಕೊಂಡರು. ಸ್ಪೆಕ್ಯೂಲಂ ಎನ್ನುವ ಸರಳ ಉಪಕರಣದಿಂದ ಪರೀಕ್ಷಿಸಿದಾಗ ಅವರಿಗೆ ಗರ್ಭಕೊರಳಿನ ಕ್ಯಾನ್ಸರ್ ಇರುವುದು ಪತ್ತೆ ಆಯಿತು. ಈ ಮೂವರಲ್ಲಿ ಇಬ್ಬರಿಗಾದರೂ ಸರಿಯಾದ ಸಮಯಕ್ಕೆ ಕ್ಯಾನ್ಸರ್ (ಅರ್ಬುದ) ಪತ್ತೆಯಾಗಿದ್ದರಿಂದ ಅವರು ಚಿಕಿತ್ಸೆಗೆ ಸ್ಪಂದಿಸಿ ಗುಣಮುಖರಾಗುವುದು ಖಚಿತ ಎನ್ನುವುದೇ ಸದ್ಯದ ಸಮಾಧಾನ.

ಕ್ಯಾನ್ಸರ್ ಏನು ಮಾಡುತ್ತದೆ?

ಆಧುನಿಕ ವೈದ್ಯಕೀಯ ಚಿಕಿತ್ಸಾ ಪದ್ಧತಿ ಮುಂದುವರಿದ್ದರೂ ಲಿಂಗ, ವಯಸ್ಸಿನ ಭೇದವಿಲ್ಲದೇ ಬಾಧಿಸಬಹುದಾದ ಕಾಯಿಲೆಯೆಂದರೆ ಅದು ಕ್ಯಾನ್ಸರ್. ಅಸಹಜ ಹಾಗೂ ಅನಿಯಂತ್ರಿತ, ಜೀವಕೋಶಗಳ ವಿಭಜನೆಯೇ ಕ್ಯಾನ್ಸರ್. ಅದು ದೇಹದಾದ್ಯಂತ ವೇಗವಾಗಿ ಆಚೀಚೆ ಪಸರಿಸುತ್ತಾ, ಅಕ್ರಮಣಕಾರಿಯಾಗಿ ಪೋಷಕಾಂಶಗಳನ್ನೆಲ್ಲಾ ಹೀರಿ, ಸಹಜ ಜೀವಕೋಶಗಳ ಕಾರ್ಯಚಟುವಟಿಗಳಿಗೆ ತೊಂದರೆ ಮಾಡುತ್ತದೆ. ಕಾಯಿಲೆ ಉಲ್ಬಣವಾದಾಗ ಮೂಲ ಅಂಗಗಳಿಂದ ಕಳಚಲ್ಪಟ್ಟು (ಮೆಟಾಸ್ಟಾಸಿಸ್) ರಕ್ತದ ಮೂಲಕ, ದುಗ್ಧರಸದ (ಲಿಂಫ್) ಮೂಲಕ ಬೇರೆಡೆಗೆ ದಾಳಿ ಮಾಡಿ ಮೂಳೆ, ಮಿದುಳು, ಶ್ವಾಸಕೋಶ, ಲಿಂಫ್‌ನೋಡ್ ಇತ್ಯಾದಿಗಳಲ್ಲಿನ ಸಹಜಕೋಶಗಳನ್ನು ನಾಶಮಾಡುತ್ತಾ ಮಾರಾಣಾಂತಿಕವಾಗುತ್ತದೆ.

> ಆತ್ಮಬಲದಿಂದ ಸರಿಯಾದ ಸಮಯದಲ್ಲಿ ಸೂಕ್ತ ಚಿಕಿತ್ಸೆ ಪಡೆದುಕೊಂಡರೆ ಎಂಥ ಕ್ಯಾನ್ಸರ್ ಅನ್ನು ಕೂಡ ಹಿಮ್ಮೆಟ್ಟಿಸಬಹುದು ಎನ್ನುವುದಕ್ಕೆ ಹಲವು ನಿದರ್ಶನಗಳಿವೆ.

ಇಂದು ವಿಶ್ವ ಕ್ಯಾನ್ಸರ್ ಜಾಗೃತಿ ದಿನ

ಎರಡು ದಶಕಗಳಿಂದ ವಿಶ್ವ ಕ್ಯಾನ್ಸರ್ ಜಾಗೃತಿ ದಿನವನ್ನು ಆಚರಿಸಲಾಗುತ್ತಿದೆ. 'ಕ್ಯಾನ್ಸರ್ ಆರೈಕೆಯಲ್ಲಿನ ತಾರತಮ್ಯವನ್ನು ಸರಿಪಡಿಸೋಣ' ಎನ್ನುವುದು ಈ ವರ್ಷದ ಘೋಷವಾಕ್ಯ. ಕ್ಯಾನ್ಸರ್ ಬಗ್ಗೆ ಅರಿವಿನ ಕೊರತೆ, ಕ್ಯಾನ್ಸರ್ ಪತ್ತೆಹಚ್ಚುವಲ್ಲಿ ವಿಳಂಬ, ಉತ್ತಮ ಚಿಕಿತ್ಸಾ ವಿಧಾನದ ಅಲಭ್ಯತೆ, ತಾರತಮ್ಯ ಇವೆಲ್ಲವನ್ನು ಗುರುತಿಸಿ, ಹೋಗಲಾಡಿಸಲು ಪ್ರಯತ್ನಿಸುವುದು.

ಮಹಿಳೆಯರಲ್ಲಿ ಯಾವ ಕ್ಯಾನ್ಸರ್ ಹೆಚ್ಚು?

ವಿಶ್ವದಾದ್ಯಂತ ಮಹಿಳೆಯರಲ್ಲಿ ಮಧುಮೇಹ, ಹೃದ್ರೋಗ, ಏರು ರಕ್ತದೊತ್ತಡದಂತೆ ಕ್ಯಾನ್ಸರ್ ಕೂಡ ಹೆಚ್ಚುತ್ತಿದೆ. ಸಂತಾನೋತ್ಪತ್ತಿ ಅಂಗಗಳಿಗೆ ಸಂಬಂಧಪಟ್ಟ ಕ್ಯಾನ್ಸರ್‌ಗಳಾದ ಗರ್ಭಾಶಯ, ಅಂಡಾಶಯ ಹಾಗೂ ಗರ್ಭಕೊರಳಿನ ಕ್ಯಾನ್ಸರ್ ಮತ್ತು ಸ್ತನದ ಕ್ಯಾನ್ಸರ್ ಅಲ್ಲದೇ ಕೊಲೋರೆಕ್ಟಲ್, ಶ್ವಾಸಕೋಶದ ಕ್ಯಾನ್ಸರ್, ಥೈರಾಯಿಡ್ ಕ್ಯಾನ್ಸರ್‌ಗಳು ಹೆಚ್ಚುತ್ತಿವೆ. ಕ್ಯಾನ್ಸರ್ ಚಿಕಿತ್ಸಾ ತಜ್ಞರು ಹಾಗೂ ಆಸ್ಪತ್ರೆಗಳು ಸಾಕಷ್ಟಿವೆ. ಚಿಕಿತ್ಸಾ ವಿಧಾನದಲ್ಲಿ ಸುಧಾರಣೆಯಾಗುತ್ತಿದ್ದರೂ ಅದು ಎಲ್ಲರಿಗೂ ಎಲ್ಲ ಕಡೆಗಳಲ್ಲಿಯೂ ಲಭ್ಯವಾಗುತ್ತಿಲ್ಲ.

ಅತಿ ಕಾಳಜಿ ಮತ್ತು ನಿರ್ಲಕ್ಷ್ಯ ಎರಡೂ ಸಲ್ಲ

ಸಾಮಾನ್ಯವಾಗಿ ಮುಟ್ಟಿನ ಸಮಯದಲ್ಲಿ ಸ್ತನದಲ್ಲಿ ಸ್ವಲ್ಪ ನೋವು ಕಾಣಿಸಿಕೊಂಡರೂ ಕ್ಯಾನ್ಸರ್ ಇರಬಹುದಾ ಎಂದು ಆತಂಕಕ್ಕೆ ಒಳಗಾಗಿ ಪರೀಕ್ಷೆ ಮಾಡಿಸುವವರೂ ಇದ್ದಾರೆ. ಮುಟ್ಟು ನಿಲ್ಲುವ ಸಮಯದಲ್ಲಿ ಮುಟ್ಟಿನ ಸ್ರಾವ ಅಧಿಕವಾದಾಗ ಭಯದಿಂದ ಗರ್ಭಕೋಶವನ್ನೇ ತೆಗೆಸುವವರೂ ಇದ್ದಾರೆ. ಹಾಗೆಯೇ ಗಡ್ಡೆ ಕೈಗೆ ತಾಗುತ್ತಿದ್ದಾಗಲೂ 'ಗಡ್ಡೆಯಲ್ಲಿ ನೋವಿಲ್ಲವಲ್ಲ, ಇದು ಏನು ಮಾಡೀತು' ಎಂದು ಉದಾಸೀನ ತೋರುವವರು ಇದ್ದಾರೆ. ಇವರೆಡೂ ತಪ್ಪು ನಿರ್ಧಾರಗಳೇ.

ಶೇ 80ರಷ್ಟು ಪ್ರಕರಣಗಳಲ್ಲಿ ಕಾಯಿಲೆ ಉಲ್ಬಣಗೊಂಡಾಗ ರೋಗಿಗಳು ವೈದ್ಯರ ಬಳಿ ಹೋಗುತ್ತಾರೆ. ಶೇ 70ರಷ್ಟು ಮಂದಿಗೆ ಸೂಕ್ತ ಚಿಕಿತ್ಸೆ ಲಭ್ಯವಾಗದೇ ಸಾವನ್ನಪ್ಪುತ್ತಾರೆ. ಶೇ 50ರಷ್ಟು ಪ್ರಕರಣಗಳಲ್ಲಿ ತಪ್ಪು ಜೀವನಶೈಲಿಯಿಂದಾಗಿ ಕ್ಯಾನ್ಸರ್ ಬಂದಿರುತ್ತದೆ.

ಲೇಖಕರು ಪ್ರಸೂತಿ ಹಾಗೂ ಸ್ತ್ರೀರೋಗತಜ್ಞರು

ಏನು ಮಾಡಬೇಕು?

- ಆಗಾಗ್ಗೆ ಸ್ವಯಂ ತಪಾಸಣೆಗೆ ಒಳಗಾಗಿ ಎಲ್ಲಾದರೂ ಅಸಹಜ ಗಡ್ಡೆಗಳಿವೆಯಾ ಎಂದು ಗಮನಿಸಿ.
- ವೈಯಕ್ತಿಕ ಸ್ವಚ್ಛತೆಯನ್ನು ಕಾಪಾಡಿಕೊಳ್ಳಿ.
- ಮದ್ಯಪಾನ, ಧೂಮಪಾನ, ರಾಸಾಯನಿಕಯುಕ್ತ ಆಹಾರ ಸೇವನೆ, ಅತಿಯಾದ ಪ್ರಸಾಧನ ಬಳಕೆಯಿಂದ ದೂರವಿರಿ. ಸರಿಯಾದ ಸಮಯಕ್ಕೆ ಊಟ ಮಾಡುವ, ನಿದ್ರೆ ಮಾಡುವ ಅಭ್ಯಾಸವನ್ನು ರೂಢಿಸಿಕೊಳ್ಳಿ.
- ಆತ್ಮವಿಶ್ವಾಸವೇ ಎಲ್ಲದ್ದಕ್ಕೂ ಅಂಕುಶ. ಮನೋಸ್ಥೈರ್ಯ ಹಾಗೂ ಆತ್ಮಬಲವನ್ನು ಹೆಚ್ಚಿಸಿಕೊಳ್ಳದ ಹೊರತು ಯಾವ ಮದ್ದು ಪರಿಣಾಮಕಾರಿಯಾಗಿ ಕೆಲಸ ಮಾಡುವುದಿಲ್ಲ. ಹಾಗಾಗಿ ಮೊದಲು ಆತ್ಮವಿಶ್ವಾಸ ಬೆಳೆಸಿಕೊಳ್ಳಿ.
- ಕ್ಯಾನ್ಸರ್ ಎಂದು ಹೆಸರು ಕೇಳುವ ಮೊದಲೇ ಹೆದರಿದವರಂತೆ ಇದ್ದರೆ, ತಪ್ಪು ಹೆಜ್ಜೆ ಇಡುವ ಸಾಧ್ಯತೆ ಇರುತ್ತದೆ. ಹಾಗಾಗಿ ಸರಿಯಾದ ಸಮಯಕ್ಕೆ ಉದಾಸೀನ ತೋರದೆ, ತಜ್ಞರು ಸೂಚಿಸಿದಾಗ ಮಾತ್ರ ಕ್ಯಾನ್ಸರ್ ಪತ್ತೆ ಪರೀಕ್ಷೆ ಮಾಡಿಸಿ.
- ಅಂತರ್ಜಾಲ ಅಥವಾ ಇನ್ನೆಲ್ಲೋ ಸಿಗುವ ಅರೆಬರೆ ಮಾಹಿತಿ ಪಡೆದುಕೊಂಡು ಪದೇ ಪದೇ ಕ್ಯಾನ್ಸರ್ ಪತ್ತೆ ಹಚ್ಚುವ ಪರೀಕ್ಷೆ ಮಾಡಿಸಬೇಡಿ. ಇದೂ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು.
- ಕ್ಯಾನ್ಸರ್ ಇರುವುದೇ ಹಾಗೇ. ಅದು ಕೆಲವೊಮ್ಮೆ ಸದ್ದಿಲ್ಲದೆ ಇದ್ದು ಬಿಡುತ್ತದೆ. ಕೆಲವೊಮ್ಮೆ ಸುಳಿವು ಕೊಟ್ಟರೂ ಅದು ನಮ್ಮ ಗಮನಕ್ಕೆ ಬಾರದೇ ಹೋಗಬಹುದು. ನಿಮ್ಮ ದೇಹವನ್ನು ದೇವರಂತೆ ಪ್ರೀತಿಸಿ. ಉತ್ತಮ ಜೀವನ ಶೈಲಿಯನ್ನು ರೂಢಿಸಿಕೊಳ್ಳಿ.
- ಎ ಮತ್ತು ಸಿ ವಿಟಮಿನ್ ಕೊರತೆಯೂ ಕ್ಯಾನ್ಸರ್ ಉಂಟಾಗಲು ಕಾರಣವಾಗಬಹುದು. ನಿತ್ಯ ಯೋಗ, ವ್ಯಾಯಾಮ ಮಾಡಿ. ಯಾವುದೇ ಹಣ್ಣು ಅಥವಾ ತರಕಾರಿ ಇರಲಿ, ಅವನ್ನು ಕನಿಷ್ಠ 15 ನಿಮಿಷಗಳ ಕಾಲ ಉಪ್ಪುಮಿಶ್ರಿತ ಬಿಸಿನೀರಿನಲ್ಲಿ ನೆನೆಸಿ ಬಳಸಿ.

ಆರಂಭಿಕ ಲಕ್ಷಣಗಳೇನು?

- ಸ್ತನ ಮತ್ತಿತರ ಭಾಗಗಳಲ್ಲಿ ನೋವಿಲ್ಲದ ಗಂಟು, ಗುಣವಾಗದ ಹುಣ್ಣು, ಅಕಾರಣ ರಕ್ತಸ್ರಾವ, ಅತಿಯಾದ ಮಾಸಿಕ ರಕ್ತಸ್ರಾವ, ಕಾರಣವಿಲ್ಲದೇ ತೂಕ ಇಳಿಯುವಿಕೆ, ಕೆಳಹೊಟ್ಟೆಯಲ್ಲಿ ಸೆಳೆತ, ಸದಾ ಹೊಟ್ಟೆ ತುಂಬಿದ ಅನುಭವ, ವಾಂತಿ ವಾಕರಿಕೆ, ನಿದ್ರಾಹೀನತೆ ಇವೆಲ್ಲವೂ ವಿವಿಧ ಬಗೆಯ ಕ್ಯಾನ್ಸರ್‌ನ ಪ್ರಾಥಮಿಕ ಲಕ್ಷಣಗಳು.

ಬಿ ಪಾಸಿಟಿವ್; ಕ್ಯಾನ್ಸರ್ ನೆಗೆಟಿವ್...

'ಕ್ಯಾನ್ಸರ್ ಪಾಸಿಟಿವ್' ಎಂಬ ವರದಿಯನ್ನು ಸಕಾರಾತ್ಮಕವಾಗಿ ಸ್ವೀಕರಿಸಿ, ವಿವಿಧ ಚಿಕಿತ್ಸೆ, ಅದರಿಂದಾಗುವ ಅಡ್ಡ ಪರಿಣಾಮಗಳನ್ನೂ ಧೈರ್ಯವಾಗಿ ಎದುರಿಸಿ ಗೆದ್ದವರ ಕಥನಗಳನ್ನು ಕಟ್ಟಿಕೊಟ್ಟಿದ್ದಾರೆ ಕೃಷ್ಣಿ ಶಿರೂರ.

ಬೆಂಗಳೂರಿನ ಫರಿದಾ ರಿಜ್ವಾನ್ ಅವರಿಗೆ ಸ್ತನ ಕ್ಯಾನ್ಸರ್ ಪಾಸಿಟಿವ್ ಎಂದು ತಿಳಿದಾಗ ವಯಸ್ಸು ಕೇವಲ 29 ವರ್ಷ. ಅದು ಕೂಡ ಮೂರನೇ ಹಂತ. ಆ ಸಮಯದಲ್ಲಿ ಅವರಿಗೆ ಇಬ್ಬರು ಮಕ್ಕಳು. ಒಂದಕ್ಕೆ 4 ವರ್ಷ. ಮತ್ತೊಂದು ಹಾಲುಣ್ಣುವ 11 ತಿಂಗಳು ಕೂಸು.

ಒಂದು ಕಡೆ ಅನಾರೋಗ್ಯದ ಸವಾಲು. ಇನ್ನೊಂದೆಡೆ ಹಣಕಾಸಿನ ಮುಗ್ಗಟ್ಟು. ಅಂಥ ಸಂದರ್ಭದಲ್ಲೂ ಎದೆಗುಂದದೆ ಸ್ತನ ಛೇದನ ಮಾಡಿಸಿಕೊಂಡರು. ಕಿಮೋಥೆರಪಿಗೆ ಒಳಗಾಗಿ ಚಿಕಿತ್ಸೆ ಪಡೆದರು. ಪರಿಣಾಮ ಕ್ಯಾನ್ಸರ್ ಮುಕ್ತ ಜೀವನ ಆರಂಭಿಸಿ 27 ವರ್ಷಗಳೇ ಕಳೆದಿವೆ. ಸುಂದರ ಜೀವನ ತಮ್ಮದಾಗಿಸಿಕೊಂಡಿದ್ದಾರೆ.

ಕ್ಯಾನ್ಸರ್ ಗೆದ್ದ ಮೇಲೆ, ಕೌನ್ಸಲಿಂಗ್ ಮತ್ತು ಸೈಕೋಥೆರಪಿಯಲ್ಲಿ ಸ್ನಾತಕೋತ್ತರ ಪದವಿ ಮುಗಿಸಿ ವೃತ್ತಿ ಜೀವನ ಆರಂಭಿಸಿದರು. ಶೈಕ್ಷಣಿಕ ಅಪ್ಲಿಕೇಶನ್‌ನೊಂದಿಗೆ ಪಠ್ಯಕ್ರಮ ಡೆವಲಪರ್ ಆಗಿ ಕೆಲಸ ಮಾಡುತ್ತಿದ್ದಾರೆ. ಪ್ರಿಸ್ಕೂಲ್ ಮತ್ತು ಡೇ-ಕೇರ್ ಸೆಂಟರ್ ನಡೆಸುತ್ತಿದ್ದಾರೆ. ತಮ್ಮ 'ವಿಶೇಷ ಮಗಳ' ಆರೈಕೆ ಮಾಡುತ್ತಲೇ, ಹೂಟ್ಟೂರು ಶಿರೂರಿನಲ್ಲಿರುವ ವಿಶೇಷ ಶಿಕ್ಷಣ ಮತ್ತು ಪುನರ್ವಸತಿ ಕೇಂದ್ರದ ಶಾಲೆಗೆ ಶೈಕ್ಷಣಿಕ ನಿರ್ದೇಶಕರಾಗಿ ದೂರದಿಂದಲೇ ಕೆಲಸ ಮಾಡುತ್ತಿದ್ದಾರೆ.

'ಚಿಕಿತ್ಸೆಯಿಲ್ಲದೆ ಕೇವಲ ಸಕಾರಾತ್ಮಕ ಮನೋಭಾವ ಕ್ಯಾನ್ಸರ್ ಗುಣವಾಗಲು ಸಹಾಯ ಮಾಡುತ್ತದೆ ಎಂದು ನಾನು ಹೇಳಲಾರೆ. ಆದರೆ ಬದುಕುವ ಇಚ್ಛೆಯೊಂದಿಗೆ ಸರಿಯಾದ ಚಿಕಿತ್ಸೆ ಪಡೆದರೆ ಮತ್ತು ನಿಮ್ಮ ದೇಹವು ಹಾದುಹೋಗುವ ಬದಲಾವಣೆಗಳಿಂದ ತಲೆಕೆಡಿಸಿಕೊಳ್ಳದಿದ್ದರೆ, ಅದು ಖಂಡಿತವಾಗಿಯೂ ಸಹಾಯ ಮಾಡುತ್ತದೆ' ಎಂಬುದು ಫರಿದಾ ಅಭಿಪ್ರಾಯ.

ಕ್ಯಾನ್ಸರ್‌ನೊಂದಿಗಿನ ತನ್ನ ಅನುಭವಗಳನ್ನು ತಮಾಷೆಯಾಗಿ ತೆಗೆದುಕೊಳ್ಳುವ ಮೂಲಕ ಜನರನ್ನು ನಗಿಸುತ್ತಾ, ಕ್ಯಾನ್ಸರ್ ರೋಗಿಗಳ ಪಾಲಿಗೆ ಸ್ಫೂರ್ತಿಯಾಗಿದ್ದಾರೆ ಫರಿದಾ.

ಫರಿದಾ ರಿಜ್ವಾನ್

ಡಾ.ತೇಜಸ್ವಿನಿ ಹಿರೇಮಠ

ಗದಗ ಮೂಲದ ಡಾ.ತೇಜಸ್ವಿನಿ ಹಿರೇಮಠ, ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ವೈದ್ಯಕೀಯ ಪದವಿ ಶಿಕ್ಷಣ ಮುಗಿಸಿ, ಗದಗಿನಲ್ಲಿ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕಳೆದ ವರ್ಷದ ಮಧ್ಯಭಾಗದಲ್ಲಿ ಕ್ಯಾನ್ಸರ್ ಲಕ್ಷಣ ಕಂಡು ಬಂದಿದ್ದರೂ ತೇಜಸ್ವಿನಿಯವರು ತಪಾಸಣೆಗೆ ಒಳಗಾಗಿರಲಿಲ್ಲ. ಸೆಪ್ಟೆಂಬರ್‌ನಲ್ಲಿ ನಿಯಮಿತ ಆರೋಗ್ಯ ತಪಾಸಣೆಯ ವೇಳೆ ಬಲ ಸ್ತನದಲ್ಲಿ ಆರಂಭಿಕ ಹಂತದ ಕ್ಯಾನ್ಸರ್ ಪತ್ತೆಯಾಯಿತು.

ಆರಂಭದಲ್ಲಿ ವರದಿ ಸಂದೇಹಾಸ್ಪದವಾಗಿದ್ದರೂ, ಸಮಯ ವ್ಯರ್ಥ ಮಾಡದೇ, ಪೆಟ್‌ಸ್ಕ್ಯಾನ್ ಮಾಡಿಸಿದರು. ಕ್ಯಾನ್ಸರ್ ಇರುವುದು ದೃಢಪಟ್ಟಿತು. ಮನಸ್ಸು ಕಸಿವಿಸಿಯಿಂದ ಗೊಂದಲದ ಗೂಡಾಯಿತು. 'ಬೇರೆ ಮಾರ್ಗವಿಲ್ಲ. ಬಂದಿದ್ದನ್ನು ಒಪ್ಪಿಕೊಳ್ಳಲೇಬೇಕೆಂದು' ತೀರ್ಮಾನಿಸಿದರು. ನಾಲ್ಕು ಕಿಮೋ, ರೆಡಿಯೋ ಥೆರಪಿಗೆ ಒಳಪಟ್ಟರು. ನಾಲ್ಕೇ ತಿಂಗಳು ಕಳೆಯುವುದರಲ್ಲಿ, ಆರೋಗ್ಯ ಸುಸ್ಥಿತಿಗೆ ಬಂತು. ಕರ್ತವ್ಯಕ್ಕೆ ಹಾಜರಾದರು.

ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆಯಾಗಿರುವ ತೇಜಸ್ವಿನಿಯವರು, ಈಗ ಮಹಿಳೆಯರಿಗೆ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸುತ್ತಿದ್ದಾರೆ. ಕಾಲಕಾಲಕ್ಕೆ ಮ್ಯಾಮೊಗ್ರಾಂ ಮಾಡಿಸಿಕೊಳ್ಳುವುದರಿಂದ ಎಷ್ಟೊಂದು ಪ್ರಯೋಜನವಿದೆ, ಪಾಪ್‌ಸ್ಮೀಯರ್ ಎಷ್ಟು ಅಗತ್ಯ ಎಂಬುದನ್ನು ಮನವರಿಕೆ ಮಾಡುತ್ತಿದ್ದಾರೆ.

ಕಾಯಿಲೆ ಆರಂಭಿಕ ಹಂತದಲ್ಲೇ ಕಂಡುಬಂದಲ್ಲಿ, ತಕ್ಷಣ ಚಿಕಿತ್ಸೆ ಪಡೆದುಕೊಂಡರೆ ಕಡಿಮೆ ಖರ್ಚು ಹಾಗೂ ಕಡಿಮೆ ಸಮಯದಲ್ಲಿ ಕ್ಯಾನ್ಸರ್‌ನಿಂದಲೂ ಮುಕ್ತಗೊಳ್ಳಬಹುದು ಎಂಬುದಕ್ಕೆ ಇವರು ಉತ್ತಮ ಉದಾಹರಣೆ.

ಇನ್ನಷ್ಟು ಸ್ಫೂರ್ತಿ ಕಥನಗಳಿಗಾಗಿ www.prajavani.net/women ಭೇಟಿ ನೀಡಿ

ಬಾಲ್ಯದ ಅಂತರ್ಗತ ನೆನಪುಗಳು

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

ಚಿಕ್ಕಂದಿನಿಂದಲೂ ನನಗೆ ಕೀಳರಿಮೆ. ಬಡತನ, ಇನ್ನೊಬ್ಬರ ಮನೆಯಲ್ಲಿ ಇರಬೇಕಾದ ಪರಿಸ್ಥಿತಿ, ಕುಡುಕ ಅಪ್ಪ, ಅಂಗವೈಕಲ್ಯ ಹೊಂದಿದ್ದ ಅಮ್ಮ, ಆವಾಗಿನಿಂದಲೂ ಮಾತನಾಡಲು ಹೆದರುತ್ತೇನೆ. ನಾಲ್ಕು ಜನ ಒಟ್ಟಾದರೆ ಏನೋ ಒಂದು ಬಗೆಯ ಗೊಂದಲ ಉಂಟಾಗುತ್ತದೆ. ಈಗ ಒಂದೊಳ್ಳೆ ಕೆಲಸದಲ್ಲಿದ್ದೇನೆ. ಆದರೆ ಈ ಕೀಳರಿಮೆ ಮಾತ್ರ ನಾನಾ ರೂಪ ಪಡೆದುಕೊಂಡಿದೆ. ಮಾತನಾಡಲು ಕಷ್ಟವಾಗುವುದಲ್ಲದೆ ನಾಲ್ಕು ಜನರ ಜತೆ ಸುಲಭವಾಗಿ ಬೆರೆಯಲು ಬಿಡುತ್ತಿಲ್ಲ. ನನ್ನ ವ್ಯಕ್ತಿತ್ವವೇ ಕುಂಠಿತಗೊಂಡಂತೆ ಅನಿಸುತ್ತಿದೆ. ಇದರಿಂದ ಹೊರಬರುವುದು ಹೇಗೆ?

ಹೆಸರು, ಊರು ತಿಳಿಸಿಲ್ಲ.

ನಿಮ್ಮ ಪತ್ರದಲ್ಲಿರುವ ಸ್ಪಷ್ಟತೆ ಮೆಚ್ಚುಗೆಯಾಗುವಂತಿದೆ. ನಿಮ್ಮ ಕಷ್ಟಗಳೇನು? ಅವು ಎಲ್ಲಿಂದ ಬರುತ್ತಿವೆ? ಇವುಗಳನ್ನೆಲ್ಲಾ ಸರಿಯಾಗಿ ತಿಳಿದುಕೊಂಡಿದ್ದೀರಿ. ಇವುಗಳಿಂದ ಹೊರಬರುವುದು ಹೇಗೆ ಎನ್ನುವುದಷ್ಟೇ ಉಳಿದ ಪ್ರಶ್ನೆ. ಬಾಲ್ಯದ ಅನುಭವಗಳು ನಮ್ಮ ಮಿದುಳು ನರಮಂಡಲಗಳಷ್ಟೇ ಅಲ್ಲ, ದೇಹದ ಕಣಕಣಗಳಲ್ಲಿಯೂ ಆಳವಾಗಿ ದಾಖಲಾಗಿರುತ್ತವೆ. ಅನುಭವಕ್ಕೆ ಸಂಬಂಧಿಸಿದ ಎಲ್ಲಾ ಘಟನೆಗಳ ವಿವರಗಳು ನೆನಪಿಲ್ಲದಿದ್ದರೂ ಅನುಭವದ ಕಹಿ ಮಾತ್ರ ಆಳವಾಗಿ ದಾಖಲಾಗಿರುತ್ತದೆ. ಇದನ್ನು "ಅಂತರ್ಗತ ನೆನಪು (Implicit Memory)" ಎನ್ನಲಾಗುತ್ತದೆ. ಇದು ನಮ್ಮ ಅರಿವಿಗೆ ಬರದೆ ತೊಂದರೆ ಕೊಡುತ್ತಿರುತ್ತದೆ. ಹಾಗಾಗಿ ಅವುಗಳಿಂದ ಹೊರಬರಲು ದೇಹ ಮನಸ್ಸುಗಳೆರೆಡಕ್ಕೂ ಸತತವಾಗಿ ತರಬೇತಿ ನೀಡಬೇಕು. ನಿಮ್ಮ ಹಿಂಜರಿಕೆ ಕೀಳರಿಮೆಗಳು ನಿಮ್ಮ ದೇಹದ ಯಾವ ಭಾಗಗಳಲ್ಲಿ ಒತ್ತಡದ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ ಗಮನಿಸಿ. ದಿನಕ್ಕೆ 15 ನಿಮಿಷ ಏಕಾಂತದಲ್ಲಿ ಕುಳಿತು ದೀರ್ಘವಾಗಿ ಉಸಿರಾಡುತ್ತಾ ದೇಹದ ಆ ಭಾಗವನ್ನು ಗಮನಿಸಿ. ಒತ್ತಡವನ್ನು ಅನುಭವಿಸುತ್ತಿರುವ ದೇಹದ ಅಂಗಕ್ಕೆ ಒಂದು ಧ್ವನಿಯಿದ್ದಿದ್ದರೆ ಅದು ಏನು ಹೇಳಬಹುದಿತ್ತು ಎಂದು ಗಮನಿಸಿ. ನಿನ್ನನ್ನು ಎಲ್ಲರೂ ಕೀಳಾಗಿ ನೋಡುತ್ತಾರೆ, ನಿನಗೆ ಪ್ರೀತಿ ಗೌರವ ಸಿಗುವುದಿಲ್ಲ, ಪ್ರೀತಿ ಗೌರವಗಳನ್ನು ಪಡೆಯುವ ಯೋಗ್ಯತೆ ನಿನ್ನಲ್ಲಿಲ್ಲ, ನೀನು ಎಲ್ಲರೆದುರು ಮಾತನಾಡಿದರೆ ನೋವು ಅವಮಾನವನ್ನು ಅನುಭವಿಸುತ್ತೀಯಾ- ಮುಂತಾಗಿ ನಿಮ್ಮ ಅಂತರಂಗದ ಒಂದು ಧ್ವನಿ ಹೇಳುತ್ತಿರಬಹುದು. ಈ ಧ್ವನಿ ನಿಮಗೆ ಅಪಾರ ನೋವನ್ನು ಕೊಡುತ್ತಿರುತ್ತದೆ. ಆದರೆ ಆ ಧ್ವನಿಯನ್ನು ಹತ್ತಿಕ್ಕದೆ ಪ್ರೀತಿ ಸಹಾನುಭೂತಿಯಿಂದ ಸಂತೈಸಿ ಹೆಚ್ಚುಹೆಚ್ಚು ಮಾತನಾಡಲು ಅವಕಾಶ ಕೊಡಿ. ಆಗ ಬಾಲ್ಯದ ನೋವು ಕಹಿಗಳೆಲ್ಲವೂ ನಿಧಾನವಾಗಿ ಮನಸ್ಸಿನಲ್ಲಿ ಮೂಡುತ್ತಾ ಹೋಗುತ್ತದೆ. ಬಹಳ ಕಷ್ಟವಾದರೂ ಎಲ್ಲವನ್ನೂ ಮತ್ತೊಮ್ಮೆ ಅನುಭವಿಸಲು ಹಿಂಜರಿಯಬೇಡಿ.

ಬಾಲ್ಯದ ಆ ದುರ್ಭರ ಸಮಯದಲ್ಲಿ ಮೂಡಿದ ಹಿಂಜರಿಕೆ, ಕೀಳರಿಮೆ ಅವತ್ತಿನ ಅನುಭವವಾಗಿತ್ತು. ಆಗ ನನ್ನ ಸುತ್ತಲೂ ಇದ್ದ ಜನರು ಮತ್ತು ಸಂದರ್ಭಗಳು ಈಗಿಲ್ಲ. ಹಾಗಾಗಿ ಅಂತಹ ಅನುಭವಗಳನ್ನು ಜೀವನವೆಲ್ಲಾ ನನ್ನ ದೇಹ ಮನಸ್ಸುಗಳಲ್ಲಿ ಹೊತ್ತುಕೊಂಡು ಬದುಕುವ ಅಗತ್ಯವಿಲ್ಲವೆಂದು ನೆನಪುಮಾಡಿಕೊಳ್ಳಿ. ದೀರ್ಘವಾಗಿ ಉಸಿರಾಡುತ್ತಾ ತಾಯಿಯೊಬ್ಬಳು ತನ್ನ ಮಗುವನ್ನು ಸಂತೈಸುವಂತೆ ನಿಮ್ಮ ದೇಹ ಮನಸ್ಸುಗಳನ್ನು ಪ್ರೀತಿಯಿಂದ ಸಮಾಧಾನಪಡಿಸಿ. ಮಧ್ಯೆ ಮನಸ್ಸು ಹದತಪ್ಪುಬಹುದು ಎನ್ನಿಸಿದರೆ ಪ್ರಯೋಗವನ್ನು ನಿಲ್ಲಿಸಿ ಮನಸ್ಸನ್ನು ಬೇರೆಡೆ ತಿರುಗಿಸಿ. ಆದರೆ ಈ ಪ್ರಯೋಗವನ್ನು ಆಗಾಗ ಮುಂದುವರೆಸಿ.

ಪರಿಶುದ್ಧ ಆತ್ಮವಾಗಿ ಜನಿಸಿರುವ ಮಗು ಬಾಲ್ಯದ ಕಹಿ ಅನುಭವಗಳಿಂದ ಮಾನಸಿಕವಾಗಿ ಗಾಸಿಗೊಳ್ಳುತ್ತದೆ. ಹಾಗಾಗಿ ನಿಮ್ಮೊಳಗಿರುವ ಆ ಗಾಯಗೊಂಡ ಮಗುವನ್ನು ನೀವೇ ಸಂತೈಸಲು ಕಲಿಯಿರಿ. ಮತ್ತೆಮತ್ತೆ ನೆನಪಾಗಿ ನೋವನ್ನು ಕೊಡುವ ಹಳೆಯ ಕಹಿಯನ್ನು ತಿರಸ್ಕರಿಸದೆ ಒಪ್ಪಿಕೊಳ್ಳುತ್ತಲೆ ಹೊಸ ಅನುಭವಗಳಿಗೆ ತೆರೆದುಕೊಳ್ಳಿ. ನಾವು ಇಷ್ಟಪಡದ ನಮ್ಮ ವ್ಯಕ್ತಿತ್ವದ ಅಂಶಗಳನ್ನು ಕೂಡ ದ್ವೇಷಿಸದೆ ಅವುಗಳಿಗೆ ಸಹಾನುಭೂತಿ ತೋರಿಸುವುದನ್ನು ಕಲಿತಾಗ ದೇಹ ಮನಸ್ಸುಗಳು ಶಾಂತಗೊಳ್ಳುತ್ತವೆ.

ನೆನಪಿಡಿ. ಇಲ್ಲಿ ಹೇಳಿರುವುದು ಒಂದು ತಂತ್ರವಲ್ಲ. ಆಗಾಗ ಮಾಡುತ್ತಲೇ ಇರಬೇಕಾದ ಅಭ್ಯಾಸ ಅಥವಾ ಸಾಧನೆ. ಹಾಗಾಗಿ ಒಂದೆರೆಡು ಸೋಲುಗಳಿಂದ ಹತಾಶರಾಗಬೇಡಿ. ಹಳೆಯ ಅನುಭವದ ಕಹಿ ಹೆಚ್ಚಾಗಿದ್ದಷ್ಟೂ ಹೆಚ್ಚಿನ ಸಮಯದ ಮತ್ತು ಶ್ರಮದ ಅಗತ್ಯವಿರುತ್ತದೆ. ಲಭ್ಯವಿದ್ದರೆ ತಜ್ಞ ಮನೋಚಿಕಿತ್ಸಕರ ಸೌಲಭ್ಯ ಪಡೆದುಕೊಳ್ಳಿ.

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.

ಬಣ್ಣದ ನೂಲಿನಲ್ಲಿ ಅರಳಿದ ಕಸೂತಿ

ಫ್ಯಾಷನ್

ಇ.ಎಸ್.ಸುಧೀಂದ್ರ ಪ್ರಸಾದ್

ನವಿಲಿನ ಚಿತ್ತಾರ, ಜಾತ್ರೆ ತೇರಿನ ಸಡಗರ, ಬಾಸಿಂಗ, ತೊಟ್ಟಿಲ ಸಂಭ್ರಮ, ಕೋಳಿ, ಜಿಂಕೆ, ಆನೆ ಹೀಗೆ ಪ್ರಕೃತಿಯ ರಮ್ಯತೆ ಹಾಗೂ ಜಾನಪದದ ಸೊಗಡು ಇವೆಲ್ಲವೂ ಕಸೂತಿಯೊಳಗೆ ಮೂಡಿಬಿಟ್ಟರೆ ಅದರ ಸೊಗಸೆ ಬೇರೆ..!

ಧಾರವಾಡದ ಕಸೂತಿ ಎಂದೇ ಖ್ಯಾತಿಯಾಗಿ ಇದೀಗ ಕರ್ನಾಟಕ ಕಸೂತಿ ಎಂಬ ಭೌಗೋಳಿಕ ಮಾನ್ಯತೆ(ಜಿಐ ಟ್ಯಾಗ್) ಹೊಂದಿರುವ ಈ 'ಕಸೂತಿ ಕಲೆ' ಫ್ಯಾಷನ್ ಲೋಕದಲ್ಲಿ ತನ್ನದೇ ಆದ ಹೆಜ್ಜೆ ಉಳಿಸಿಕೊಂಡಿದೆ. ಕೇಂದ್ರ ಬಜೆಟ್ ಮಂಡನೆಗೆ ಬಂದ ನಿರ್ಮಲಾ ಸೀತಾರಾಮನ್ ಅವರು ಧಾರವಾಡ ಕಸೂತಿಯಿದ್ದ ಕಪ್ಪು ಅಂಚಿನ ಕೆಂಪು ಬಣ್ಣದ ಇಳಕಲ್ ರೇಷ್ಮೆ ಸೀರೆಯುಟ್ಟಿದ್ದು ದೇಶ, ವಿದೇಶಗಳಲ್ಲಿ ಹೆಚ್ಚು ಸುದ್ದಿಯಾಯಿತು. ಆದರೆ ಅಲ್ಲಿ ಗೆದ್ದಿದ್ದು ಕರ್ನಾಟಕದ ನೇಕಾರ ಮಹಿಳೆಯರ ಜೀವಂತ ಕಸೂತಿ ಕಲೆ.

ಧಾರವಾಡದ ಆರತಿ ಹಿರೇಮಠ ಅವರ ಆರತಿ ಕ್ರಾಫ್ಟ್ಸ್‌ನಲ್ಲಿರುವ ಮಹಿಳೆಯರಿಗೆ ಈಗ ಬಿಡುವಿಲ್ಲದ ಕೆಲಸ. ಜನಪ್ರಿಯವಾಗಿರುವ ಧಾರವಾಡದ ಈ ಕಸೂತಿಗೆ ದೇಶ ವಿದೇಶಗಳ ಮಹಿಳೆಯರಿಂದ ಸಾಕಷ್ಟು ಬೇಡಿಕೆ ಸೃಷ್ಟಿಯಾಗಿದೆ.

ಸುಮಾರು ಮೂರು ಶತಮಾನಗಳಿಗೂ ಹಿಂದಿನಿಂದ ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಯಾಗುತ್ತಲೇ ಬಂದಿರುವ ಕಸೂತಿ ಕಲೆಯನ್ನು ಉತ್ತರ ಕರ್ನಾಟಕದ ಗ್ರಾಮೀಣ ಭಾಗದ ನೇಕಾರ ಸಮುದಾಯದ ಹೆಣ್ಣುಮಕ್ಕಳು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ. ಆಧುನಿಕ ಕಾಲದಲ್ಲಿ ಈ ಕಲೆಯನ್ನು ಇತರ ಸಮುದಾಯದವರೂ ಕಲಿತಿದ್ದಾರೆ. ಮನೆಯಲ್ಲೇ ಕೂತು ಕಸೂತಿ ಹಾಕಿ ಕೊಡುವ ಮೂಲಕ ಕುಟುಂಬ ನಡೆಸುವಷ್ಟು ಆದಾಯ ಇದೆ.

ವಿವಿಧ ಶೈಲಿಗಳು

ಧಾರವಾಡದ ಈ ಕಲೆಯಲ್ಲಿ ಮುಖ್ಯವಾಗಿ ಮುರಗಿ, ನೇಯ್ಗಿ, ಮೆಂತೆ ಹಾಗೂ ಗಾಂವಟಿ ಎಂಬ ಪ್ರಮುಖ ಕಸೂತಿ ಶೈಲಿಗಳಿವೆ. ಅದರಲ್ಲೂ ಕಸೂತಿ ನಂತರ ಸೀರೆಯ ಮೇಲ್ಭಾಗ ಹಾಗೂ ಕೆಳಗೆ ವಿನ್ಯಾಸ ಒಂದೇ ರೀತಿಯಲ್ಲಿ ಕಂಡು ಬರುವ ಗಾಂವಟಿ (ಈಗ ಇದನ್ನು ಗಾವಂತಿ ಎಂದೂ ಕರೆಯಲಾಗುತ್ತದೆ) ವಿನ್ಯಾಸದ ಸೀರೆಗಳು ಹೆಚ್ಚು.

ನೇಯ್ಗೆಯಲ್ಲಿ ನೂಲುಗಳು ಅಷ್ಟಾಗಿ ಒತ್ತೊತ್ತಾಗಿರದ ಲಿನೆನ್ ಹೊರತುಪಡಿಸಿದರೆ, ಉಳಿದ ಎಲ್ಲಾ ರೀತಿಯ ಬಟ್ಟೆಗಳ ಮೇಲೂ ಕಸೂತಿಯನ್ನು ಕೂರಿಸಬಹುದು. ಅದರಲ್ಲೂ ಕೆಂಪು ಅಂಚಿನ ಕಪ್ಪು ಸೀರೆಗಳು ಈ ಕಸೂತಿಯ ಅಂದ ಹೆಚ್ಚಿಸುತ್ತವೆ. ಚಂದ್ರಕಾಳಿ ಸೀರೆ ಎಂದೇ ಅಂದು ಜನಪ್ರಿಯವಾಗಿದ್ದ ಕಪ್ಪು ಸೀರೆ ಹಾಗೂ ಕಸೂತಿ ವಿನ್ಯಾಸ ಇಂದಿಗೂ ಅದಕ್ಕೇ ಬೇಡಿಕೆ ಹೊಂದಿದೆ.

ಕಸೂತಿ ಸಲ್ವಾರ್‌ಗೂ ಬೇಡಿಕೆ

ಇಲ್ಲಿ ಸೀರೆಯಷ್ಟೇ ಅಲ್ಲದೆ, ಕಸೂತಿ ಇರುವ ಕಣದ ವಸ್ತ್ರ, ಸಲ್ವಾರ್, ಪುರುಷರಿಗೆ ಜುಬ್ಬಾ ಹಾಗೂ ಬಂದ್ ಗಲಾ ಕೋಟ್, ಗೋಡೆಗೆ ಹಾಕುವ ಆಲಂಕಾರಿಕ ವಸ್ತ್ರ, ಬಾಗಿಲಿಗೆ ಹಾಕುವ ಕಣದ ತೋರಣ, ಕಸೂತಿ ಇರುವ ಪರ್ಸ್ ಹಾಗೂ ವ್ಯಾನಿಟಿ ಬ್ಯಾಗ್, ಯುವತಿಯರು ಜೀನ್ಸ್ ಮೇಲೆ ತೊಡುವ ಆಧುನಿಕ ಟಾಪ್ ಮೇಲೂ ಕಸೂತಿಯ ಚಿತ್ತಾರಗಳನ್ನು ಬಿಡಿಸುವ ಮೂಲಕ ಹೊಸ ಪೀಳಿಗೆಗೂ ಕಸೂತಿ ದಾಟಿಸುವ ಕೆಲಸ.

ಹಳೇ ವಿನ್ಯಾಸವೇ ಈಗ ಟ್ರೆಂಡ್

'ಹತ್ತಿಕಾಳು ಬುಟ್ಟ, ಗಂಡೋಳಿ ಬಟ್ಟ, ಗೋಪುರ, ತೇರು, ಬಾಸಿಂಗ, ತೊಟ್ಟಿಲು, ಪಲ್ಲಕ್ಕಿ, ಬಾಗಿದ ನವಿಲು, ಕುಣಿಯುವ ನವಿಲು, ಹೀಗೆ ಅಂದು ತಮ್ಮ ಸುತ್ತಮುತ್ತ ಕಾಣುವ ಚಿತ್ರಣಗಳನ್ನೇ ಬಣ್ಣ ಬಣ್ಣದ ನೂಲಿನಿಂದ ಚಿತ್ರಗಳ ರೂಪ ನೀಡುತ್ತಿದ್ದ ಕಸೂತಿ ಕಲೆಯು ಆಧುನಿಕತೆಯ ಕಾಲದಲ್ಲೂ ತಮ್ಮ ಸ್ವರೂಪಗಳನ್ನು ಬದಲಿಸಲಾರದಷ್ಟು ಬೇಡಿಕೆಯನ್ನು ಪಡೆದುಕೊಂಡಿವೆ.

'ಆದರೆ ಕೈಯಿಂದ ಹಾಕುವ ಕಸೂತಿ ವಿನ್ಯಾಸವನ್ನೇ ಹೋಲುವ, ಯಂತ್ರಗಳಿಂದ ಸಿದ್ಧಗೊಂಡ ಅಥವಾ ಪ್ರಿಂಟ್ ಹಾಕಿರುವ ಸೀರೆಗಳು ಸಾಕಷ್ಟು ಬಂದಿವೆ. ನಿರ್ಮಲಾ ಸೀತಾರಾಮನ್ ಅವರು ಕಸೂತಿ ಸೀರೆ ತೊಟ್ಟಿದ್ದು ಸುದ್ದಿಯಾದ ನಂತರ, ಆನ್‌ಲೈನ್‌ನಲ್ಲಿ ನೈಜ ಕಸೂತಿ ಸೀರೆಯ ಚಿತ್ರದ ಕೆಳಗೆ ಅದೇ ವಿನ್ಯಾಸ ಹೊಂದಿರುವ ಸೀರೆಗಳು ₹ 2ಸಾವಿರಕ್ಕೆ ಲಭ್ಯ ಎಂಬ ಜಾಹೀರಾತುಗಳು ಹರಿದಾಡುತ್ತಿವೆ. ಅಸಲಿ ವಿನ್ಯಾಸ ಹೊರಬಿದ್ದ ಕೆಲವೇ ಕ್ಷಣಗಳಲ್ಲಿ ನಕಲು ಮಾಡುವಷ್ಟರ ಮಟ್ಟಿಗೆ ತಂತ್ರಜ್ಞಾನ ಅಭಿವೃದ್ಧಿಗೊಂಡಿದೆ. ಹೀಗಿದ್ದರೂ ಕೈ ಕಸೂತಿಗೆ ಬೇಡಿಕೆ ಹೆಚ್ಚು ಇದೆ.

ಯಂತ್ರದಿಂದ ಮಾಡಿದ ಕಸೂತಿಗೆ ಕೆಳಗೆ ಒಂದು ಪಫ್ ನೀಡಲಾಗಿರುತ್ತದೆ. ಆದರೆ ಕೈಯಲ್ಲಿ ಹಾಕಲಾದ ಕಸೂತಿಯಲ್ಲಿ ಇದು ಇರದು. ಕೈಯಲ್ಲಿ ಹಾಕಿರುವ ಕಸೂತಿ ನೀಡುವ ಅನುಭೂತಿಯೇ ಅನನ್ಯ. ಅದನ್ನು ಅನುಭವಿಸಿದವರು ಕಸೂತಿಯನ್ನು ಎಂದೂ ಬಿಡರು. ಹಿಂದಿನ ಕಸೂತಿ ಶೈಲಿಯನ್ನೇ ಅಳವಡಿಸಿಕೊಂಡು ಅವುಗಳನ್ನು ಜೋಡಿಸುವ ವಿನ್ಯಾಸದಲ್ಲಿ ಒಂದಷ್ಟು ಬದಲಾವಣೆಗಳನ್ನು ಮಾಡಲಾಗಿದೆ. ಅದಕ್ಕೂ ಉತ್ತಮ ಬೇಡಿಕೆ ಇದೆ.

ಹೆಚ್ಚಿದ ಬೇಡಿಕೆ

ಉತ್ತರ ಭಾರತದಿಂದ ಬೇಡಿಕೆ ಹೆಚ್ಚಿದೆ. ಅಮೆರಿಕ, ಸಿಂಗಪುರಗಳಿಂದಲೂ ಬೇಡಿಕೆ ಸಾಕಷ್ಟಿದೆ. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿಯಿಂದ ಪ್ರತಿ ವರ್ಷ ವಿದ್ಯಾರ್ಥಿಗಳ ತಂಡ ಕಸೂತಿ ಕಲಿಯಲು ಬರುತ್ತಾರೆ. ಹೀಗೆ ಹಿಂದೆ ಬಂದಿದ್ದ ತಂಡವೊಂದು ಫೇಸ್‌ಬುಕ್ ಪುಟ ತೆರೆದು, ಮಾರುಕಟ್ಟೆ ವಿಸ್ತರಿಸುವ ಕೌಶಲ ಕಲಿಸಿದ್ದರು. ಅದಾದ ನಂತರ ಮೇಳಗಳಿಗೆ ಹೋಗಿ ಸೀರೆ ಪ್ರದರ್ಶನ ಹಾಗೂ ಮಾರಾಟ ಮಾಡುವುದನ್ನು ನಿಲ್ಲಿಸಿದ್ದೇವೆ. ಅತಿ ಶೀಘ್ರದಲ್ಲಿ ಅಂತರ್ಜಾಲ ತಾಣದ ಮೂಲಕವೂ ಕಸೂತಿ ವಸ್ತ್ರಗಳ ಮಾರಾಟ ಆರಂಭಿಸಲಾಗುವುದು ಎನ್ನುತ್ತಾರೆ ಧಾರವಾಡದ ಆರತಿ ಹಿರೇಮಠ.

ಧಾರವಾಡದ ಆರತಿ ಕ್ರಾಫ್ಟ್ಸ್‌ನಲ್ಲಿ ಕಸೂತಿ ಆಕೃತಿಗಳನ್ನೇ ಬಳಸಿ ಅಭಿವೃದ್ಧಿಪಡಿಸಲಾದ ಹೊಸ ವಿನ್ಯಾಸದ ಸೀರೆಯೊಂದಿಗೆ ಆರತಿ ಹಿರೇಮಠ ಚಿತ್ರ: ಬಿ.ಎಂ.ಕೇದಾರನಾಥ

ಬೀದರ್‌ನಲ್ಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭರವಸೆ

‘ಕಲ್ಯಾಣ ಕರ್ನಾಟಕ ಗ್ರಾ.ಪಂ.ಗೆ ಹೆಚ್ಚುವರಿ ₹1 ಕೋಟಿ’

ಪ್ರಜಾವಾಣಿ ವಾರ್ತೆ

ಪ್ರಜಾ ಮತ ಜನತಂತ್ರದ ಹಬ್ಬ
ಕರ್ನಾಟಕ ವಿಧಾನಸಭಾ ಚುನಾವಣೆ - 2023

ಬೀದರ್: ‘ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಕಲ್ಯಾಣ ಕರ್ನಾಟಕದ 41 ಕ್ಷೇತ್ರಗಳ ಗ್ರಾಮ ಪಂಚಾಯಿತಿಗಳಿಗೆ ಪ್ರತಿ ವರ್ಷ ಹೆಚ್ಚುವರಿಯಾಗಿ ತಲಾ ₹ 1 ಕೋಟಿ ಅನುದಾನ ಕೊಡಲಿದೆ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಎರಡು ಲಕ್ಷ ಕೋಟಿ ರೂಪಾಯಿ ಕಾಯ್ದಿರಿಸಿ ಪ್ರತಿ ವರ್ಷ ₹ 40 ಸಾವಿರ ಕೋಟಿ ಖರ್ಚು ಮಾಡಿ ರಾಜ್ಯದಲ್ಲಿ ಬಾಕಿ ಉಳಿದಿರುವ ಎಲ್ಲ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲಿದೆ’ ಎಂದೂ ಹೇಳಿದರು.

‘ಬಿಜೆಪಿ ಸರ್ಕಾರ ಐದು ವರ್ಷಗಳಲ್ಲಿ ಒಂದೇ ಒಂದು ಮನೆ ಮಂಜೂರು ಮಾಡಿಲ್ಲ. ಅನುಭವ ಮಂಟಪದ ಕಾಮಗಾರಿ ಮಂದಗತಿಯಲ್ಲಿ ಸಾಗಿದೆ. ಕಾಂಗ್ರೆಸ್ ಅಧಿಕಾರ ಬಂದರೆ ಕಾಮಗಾರಿಯ ವೇಗ ಹೆಚ್ಚಿಸಿ ಕಾಲಮಿತಿಯಲ್ಲಿ ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಳಿಸಲಾಗುವುದು’ ಎಂದು ಭರವಸೆ ನೀಡಿದರು.

ಹಾಲಿ ಶಾಸಕರಿಗೆ ಟಿಕೆಟ್: ‘ಬಹುತೇಕ ಎಲ್ಲ ಹಾಲಿ ಶಾಸಕರಿಗೆ ಕಾಂಗ್ರೆಸ್ ಟಿಕೆಟ್ ದೊರೆಯಲಿದೆ. ನೂರಕ್ಕೆ ನೂರರಷ್ಟು ಗೆಲ್ಲಲು ಸಾಧ್ಯವೇ ಇಲ್ಲ ಎನ್ನುವ ಸ್ಥಿತಿ ಇರುವ ಕಡೆ ಮಾತ್ರ ಬೇರೆಯವರಿಗೆ ಟಿಕೆಟ್ ಕೊಡಲಾಗುವುದು. ಕಾಂಗ್ರೆಸ್ ಸಿದ್ಧಾಂತ ಮೆಚ್ಚಿ ಬಂದರೆ ಬಿಜೆಪಿ ಶಾಸಕರಿಗೂ ಸ್ವಾಗತವಿದೆ’ ಎಂದು ಹೇಳಿದರು.

‘ಬಿಜೆಪಿಯವರು ವಿರೋಧ ಪಕ್ಷದಲ್ಲಿದ್ದಾಗಲೂ ಏನೂ ಮಾಡಲಿಲ್ಲ. ಅಧಿಕಾರಕ್ಕೆ ಬಂದು ನಾಲ್ಕು ವರ್ಷಗಳಾಗಿವೆ. ಒಂಬತ್ತು ವರ್ಷ ಸುಮ್ಮನೆ ಕುಳಿತು ನನ್ನ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ’ ಎಂದರು.

ಪ್ರಜಾಧ್ವನಿ ಯಾತ್ರೆ: ವೇದಿಕೆ ಕಾರ್ಯಕ್ರಮಕ್ಕೆ ಮುನಿಯಪ್ಪ ಬಣ ಗೈರು

ಮುಳಬಾಗಿಲು (ಕೋಲಾರ ಜಿಲ್ಲೆ): ತಾಲ್ಲೂಕಿನಲ್ಲಿ ಶುಕ್ರವಾರ ಕಾಂಗ್ರೆಸ್ ಎರಡನೇ ಹಂತದ ‘ಪ್ರಜಾಧ್ವನಿ’ ಯಾತ್ರೆಯು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೇತೃತ್ವದಡಿ ಆರಂಭವಾಗಿದ್ದು, ಮಾಜಿ ಸಂಸದ ಕೆ.ಎಚ್. ಮುನಿಯಪ್ಪ ಸೇರಿದಂತೆ ಅವರ ಬಣದ ಮುಖಂಡರು ವೇದಿಕೆ ಕಾರ್ಯಕ್ರಮಕ್ಕೆ ಗೈರುಹಾಜರಾದರು.

ಕಾರ್ಯಕ್ರಮಕ್ಕೂ ಮೊದಲು ಕುರುಡುಮಲೆಯ ಗಣೇಶ ದೇವಸ್ಥಾನದಲ್ಲಿ ಬೆಳಿಗ್ಗೆ ನಡೆದ ಪೂಜೆಯಲ್ಲಿ ಮುನಿಯಪ್ಪ ಪಾಲ್ಗೊಂಡಿದ್ದರು. ಈ ವೇಳೆ ಶಿವಕುಮಾರ್ ಎದುರೇ ‘ಕಪ್ಪಲಮಡಗು ಬಳಿ ನಡೆಯುವ ವೇದಿಕೆ ಕಾರ್ಯಕ್ರಮಕ್ಕೆ ನಾವು ಬರುವುದಿಲ್ಲ’ ಎಂದು ಮುನಿಯಪ್ಪ ಬಣದ ಮುಖಂಡರು ಘೋಷಣೆ ಕೂಗಿದರು.

ಶಾಸಕ ಕೆ.ಆರ್. ರಮೇಶ್‌ಕುಮಾರ್ ಬಣದ ಕೊತ್ತೂರು ಮಂಜುನಾಥ್ ಅವರು ಮುಳಬಾಗಿಲು ಕಾರ್ಯಕ್ರಮದ ಉಸ್ತುವಾರಿ ಹೊತ್ತಿದ್ದರಿಂದ ಮುನಿಯಪ್ಪ ಬಣ ಪಾಲ್ಗೊಳ್ಳಲಿಲ್ಲ.

ಯಾತ್ರೆಯಲ್ಲಿ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಸರಣಿ ಭರವಸೆಗಳನ್ನು ಘೋಷಿಸುತ್ತಿರುವ ಬಗ್ಗೆ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆ ಸಮಿತಿ ಅಧ್ಯಕ್ಷ ಡಾ.ಜಿ. ಪರಮೇಶ್ವರ ಅಸಮಾಧಾನಗೊಂಡಿದ್ದಾರೆ. ಈ ಬಗ್ಗೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಜೊತೆಗೆ ಚರ್ಚಿಸಿದ್ದ ಪರಮೇಶ್ವರ ಅವರು, ಶಿವಕುಮಾರ್ ಅವರೊಟ್ಟಿಗೆ ವೇದಿಕೆಯಲ್ಲಿ ಕಾಣಿಸಿಕೊಂಡರು.

ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, ‘ವ್ಯಕ್ತಿಗಿಂತ ಪಕ್ಷ ಮುಖ್ಯ. ಕಾಂಗ್ರೆಸ್‌ನಲ್ಲಿ ಯಾವುದೇ ಅಸಮಾಧಾನ, ಗುಂಪುಗಾರಿಕೆ ಇಲ್ಲ. ಎಲ್ಲಾ ನಾಯಕರೂ ಯಾತ್ರೆಯಲ್ಲಿ ಭಾಗವಹಿಸುತ್ತಿದ್ದಾರೆ’ ಎಂದು ಸ್ಪಷ್ಟನೆ ನೀಡಿದರು.

ಸಂಜೆ ಕೆಜಿಎಫ್‌ನಲ್ಲಿ ನಡೆದ ಯಾತ್ರೆಯಲ್ಲಿ ಕೆ.ಎಚ್. ಮುನಿಯಪ್ಪ ಸೇರಿದಂತೆ ಅವರ ಬಣದ ಮುಖಂಡರು ಪಾಲ್ಗೊಂಡಿದ್ದರು.

ಪರಮೇಶ್ವರಗೆ ಅಸಮಾಧಾನ ಇಲ್ಲ: ಡಿಕೆಶಿ

ಬೆಂಗಳೂರು: ಕಾಂಗ್ರೆಸ್ ಪ್ರಣಾಳಿಕೆ ವಿಷಯದಲ್ಲಿ ಸಮಿತಿ ಅಧ್ಯಕ್ಷ ಜಿ.ಪರಮೇಶ್ವರ ಅವರು ಅಸಮಾಧಾನಗೊಂಡಿದ್ದಾರೆ ಎಂಬುದರಲ್ಲಿ ಸತ್ಯಾಂಶವಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು.

ಎರಡನೇ ಹಂತದ ಪ್ರಜಾಧ್ವನಿ ಯಾತ್ರೆ ಆರಂಭಕ್ಕೆ ಮೊದಲು ಕೆಪಿಸಿಸಿ ಕಚೇರಿಯಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ‘ಪರಮೇಶ್ವರ ಅವರು ಪಕ್ಷಕ್ಕೆ ದೊಡ್ಡ ಆಸ್ತಿ. ರಾಜ್ಯದ ಇತಿಹಾಸದಲ್ಲಿ ಸುದೀರ್ಘ ಕಾಲ ಪಕ್ಷದ ಅಧ್ಯಕ್ಷರಾಗಿದ್ದವರು. ಪರಮೇಶ್ವರ ಜತೆ ಸುರ್ಜೆವಾಲಾ ಅವರು ಸಭೆ ನಡೆಸಿದ್ದಾರೆ’ ಎಂದು ಹೇಳಿದರು.

‘ಬೆಂಗಳೂರು ಬಗ್ಗೆ ವಿಶೇಷ ಚಿಂತನೆ ಮಾಡಬೇಕಿದ್ದು, ಪರಮೇಶ್ವರ ಅವರ ನೇತೃತ್ವದ ತಂಡ ವಿದೇಶಕ್ಕೆ ತೆರಳಿ, ಸಂಚಾರ ನಿರ್ವಹಣೆ ಕುರಿತು ಅಧ್ಯಯನ ಮಾಡಲಿದೆ. ನಾವು ಈಗಾಗಲೇ ಸಿಂಗಾಪುರ ಆಡಳಿತದ ಜತೆ ಮಾತುಕತೆ ನಡೆಸಿದ್ದೇವೆ. ತಂಡ ರಚನೆ ಬಗ್ಗೆ ಚರ್ಚೆ ಮಾಡಲಾಗಿದೆ. ನಮ್ಮ ರಾಜ್ಯಕ್ಕೆ ಪ್ರಣಾಳಿಕೆ ನೀಡುವಾಗ ಬೆಂಗಳೂರಿಗೆ ಬಂದಿರುವ ಕಳಂಕ ತೊಡೆದುಹಾಕುವ ಪ್ರಯತ್ನ ಮಾಡುತ್ತೇವೆ’ ಎಂದರು.

ಪೀಠಾರೋಹಣ

ಬಾಗಲಕೋಟೆ ಜಿಲ್ಲೆಯ ಬನಹಟ್ಟಿಯಲ್ಲಿ ದೇವರದಾಸಿಮಯ್ಯ ಹಟಗಾರ ಸಮಾಜದ ಪ್ರಥಮ ಪೀಠಾಧಿಪತಿಯಾಗಿ ಶುಕ್ರವಾರ ಪೀಠಾರೋಹಣ ಮಾಡಿದ ಚಿಕ್ಕರೇವಣಸಿದ್ಧ ಶಿವಶರಣರಿಗೆ ಬೀದರ್‌ನ ಚಿದಂಬರ ಆಶ್ರಮದ ಡಾ.ಶಿವಕುಮಾರ ಸ್ವಾಮೀಜಿ ಕಿರೀಟ ಧಾರಣೆ ಮಾಡಿದರು. ಉಮಾಶ್ರೀ, ಶಾಸಕ ಸಿದ್ದು ಸವದಿ, ಜವಳಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಸೇರಿದಂತೆ ಗಣ್ಯರು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ರಾಜ್ಯ ಗೆಲ್ಲಲು ಗುಜರಾತ್, ಉ.ಪ್ರ ಮಾದರಿ ಪ್ರಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ಜಿಲ್ಲೆಯಲ್ಲೂ ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಕಾರ್ಯಕ್ರಮಗಳ ಫಲಾನುಭವಿಗಳ ಸಮಾವೇಶಗಳು ಮತ್ತು ನಾಲ್ಕು ತಂಡಗಳಲ್ಲಿ ವಿಜಯಸಂಕಲ್ಪ ಯಾತ್ರೆ ನಡೆಸಲು ಬಿಜೆಪಿ ತೀರ್ಮಾನಿಸಿದೆ.

ಚುನಾವಣೆಯಲ್ಲಿ ಗೆಲ್ಲಲೇಬೇಕಾದರೆ ಮೊದಲಿಗೆ ಫಲಾನುಭವಿಗಳ ಮನಸ್ಸು ಗೆಲ್ಲಬೇಕಾಗಿದೆ. ಆದ್ದರಿಂದ ಫಲಾನುಭವಿಗಳ ಜತೆ ನಿಕಟ ಸಂಪರ್ಕ ಹೊಂದಲು ಎಲ್ಲ ಜಿಲ್ಲೆಗಳಲ್ಲೂ ಫಲಾನುಭವಿಗಳ ಸಮಾವೇಶ ನಡೆಸಬೇಕು ಎಂದು ಶುಕ್ರವಾರ ರಾತ್ರಿ ನಡೆದ ಪ್ರಮುಖ ನಾಯಕರ ಸಭೆಯಲ್ಲಿ ನಿರ್ಧರಿಸಲಾಯಿತು ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಸುದ್ದಿಗಾರರಿಗೆ ತಿಳಿಸಿದರು.

ಗುಜರಾತ್ ಮತ್ತು ಉತ್ತರ ಪ್ರದೇಶ ರಾಜ್ಯಗಳ ಚುನಾವಣೆಗಳ ಸಂದರ್ಭದಲ್ಲೂ ಫಲಾನುಭವಿಗಳ ಸಮಾವೇಶಗಳನ್ನು ವ್ಯಾಪಕವಾಗಿ ನಡೆಸಲಾಗಿತ್ತು. ಅದರಿಂದಾಗಿ ಆ ರಾಜ್ಯಗಳ ಚುನಾವಣೆಗಳಲ್ಲಿ ಭರ್ಜರಿ ಗೆಲುವು ಪಡೆಯಲು ಸಾಧ್ಯವಾಯಿತು. ಅದೇ ಪ್ರಯೋಗವನ್ನು ಇಲ್ಲೂ ನಡೆಸಲಾಗುವುದು ಎಂದು ಹೇಳಿದರು.

‘ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲೂ ಕೇಂದ್ರ ಅಥವಾ ರಾಜ್ಯ ಸರ್ಕಾರಗಳ ಒಂದಲ್ಲ ಒಂದು ಕಾರ್ಯಕ್ರಮಗಳ ಫಲಾನುಭವಿಗಳು ಶೇ 70ರಷ್ಟು ಇದ್ದಾರೆ. ಅವರನ್ನು ಬಿಜೆಪಿ ಮತದಾರರನ್ನಾಗಿ ಪರಿವರ್ತಿಸಲು ಪ್ರಯತ್ನ ಹಾಕುತ್ತೇವೆ’ ಎಂದರು.

ಅಲ್ಲದೆ, ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ ಮತ್ತು ದಕ್ಷಿಣ ಭಾಗದಲ್ಲಿ ಎರಡು ಸೇರಿ ಒಟ್ಟು ನಾಲ್ಕು ಯಾತ್ರೆಗಳನ್ನು ಹಮ್ಮಿಕೊಳ್ಳಲು ತೀರ್ಮಾನಿಸಿದ್ದು, ಈ ಯಾತ್ರೆಯ ರೂಪು ರೇಷೆಯ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಈ ಯಾತ್ರೆಗಳ ಮಹಾ ಸಂಗಮ ದಾವಣಗೆರೆಯಲ್ಲಿ ನಡೆಯಲಿದೆ. ರಾಜ್ಯದ 224 ವಿಧಾನ ಸಭಾ ಕ್ಷೇತ್ರಗಳಲ್ಲಿ ವಿವಿಧ ಮೋರ್ಚಾಗಳ ಸಮಾವೇಶಗಳನ್ನು ಹಮ್ಮಿಕೊಳ್ಳಲಾಗುವುದು. ರಾಜ್ಯದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪ್ರಧಾನಿ ನರೇಂದ್ರ ಮೋದಿಯವರು ಇದೇ ತಿಂಗಳು ಎರಡರಿಂದ ಮೂರು ಬಾರಿ ರಾಜ್ಯಕ್ಕೆ ಭೇಟಿ ನೀಡಲಿದ್ದು, ಅದರ ತಯಾರಿಯ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಯಿತು ಎಂದರು. ರವಿ ತಿಳಿಸಿದರು.

ಸಭೆಯಲ್ಲಿ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್, ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್‌ಸಿಂಗ್, ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸಿ.ಎಂ ಬಸವರಾಜ ಬೊಮ್ಮಾಯಿ, ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಸೇರಿ ಪ್ರಮುಖ ನಾಯಕರು ಭಾಗವಹಿಸಿದ್ದರು.

ಬೆಂಗಳೂರಿನಲ್ಲಿ 4 ಪಟ್ಟು ಹೆಚ್ಚು ಹರಡಿದ್ದ ಕೋವಿಡ್

ಬೆಂಗಳೂರು: ಕೋವಿಡ್ ಸೋಂಕಿಗೆ ಸಂಬಂಧಿಸಿದಂತೆ ಪ್ರಯೋಗಾಲಯಗಳಲ್ಲಿ ಪರೀಕ್ಷೆ ನಡೆಸಿದಾಗ ಲಭ್ಯವಾಗುತ್ತಿದ್ದ ಪ್ರಕರಣಗಳಿಗಿಂತಲೂ ನಾಲ್ಕು ಪಟ್ಟು ಹೆಚ್ಚು ಜನರಲ್ಲಿ ಕೋವಿಡ್ ಸೋಂಕು ಹರಡಿತ್ತು ಎಂದು ಬೆಂಗಳೂರಿನ ‘ಟಾಟಾ ಇನ್‌ಸ್ಟಿಟ್ಯೂಟ್ ಫಾರ್ ಜೆನಿಟಿಕ್ಸ್ ಅಂಡ್ ಸೊಸೈಟಿ’ (ಟಿಐಜಿಎಸ್) ನಡೆಸಿರುವ ಅಧ್ಯಯನ ವರದಿ ತಿಳಿಸಿದೆ.

ಈ ಸಂಸ್ಥೆಯು ಬೆಂಗಳೂರು ನಗರದಲ್ಲಿ 2022ರ ಜನವರಿಯಿಂದ 2022ರ ಜೂನ್‌ವರೆಗೂ ಪ್ರತಿ ವಾರ ನಗರದ 28 ಚರಂಡಿಗಳಿಂದ ತ್ಯಾಜ್ಯ ನೀರು ಸಂಗ್ರಹಿಸಿ ಆನುವಂಶಿಕ ಧಾತುವಿನ ಮೇಲೆ ನಿಗಾ ಇರಿಸುವ (ಜಿನೋಮಿಕ್ ಸರ್ವೇಲೆನ್ಸ್) ವಿಧಾನವನ್ನು ಅನುಸರಿಸಿ ಅಧ್ಯಯನ ನಡೆಸಲಾಯಿತು. ಈ ವಿಧಾನದಿಂದ ವೈರಾಣುವಿನ ಹೊರೆ, ವೈರಾಣುಗಳು ತಳಿ ವೈವಿಧ್ಯಗಳು ಮತ್ತು ಹೊಸ ವೈರಾಣುವಿನ ಬಗ್ಗೆಯೂ ನಿಖರ ಮಾಹಿತಿ ಪಡೆಯಲು ಸಾಧ್ಯವಾಯಿತು ಎಂದು ಟಿಐಜಿಎಸ್‌ನ ವಿಜ್ಞಾನಿ ಡಾ.ಫರ್ಹಾ ಇಶ್ತಿಯಾಕ್ ತಿಳಿಸಿದ್ದಾರೆ.

ಅಚ್ಚರಿಯ ಅಂಶವೆಂದರೆ, ಕೋವಿಡ್ ಸೋಂಕಿನ ಬಗ್ಗೆ ಕ್ಲಿನಿಕಲ್ ಪರೀಕ್ಷೆಯಲ್ಲಿ ಕಂಡು ಬರುತ್ತಿದ್ದ ಸೋಂಕಿತರ ಸಂಖ್ಯೆಗಿಂತಲೂ ಆನುವಂಶಿಕ ಧಾತುವಿನ ಮೇಲಿನ ನಿಗಾ ವಿಧಾನದಲ್ಲಿ ಲಭ್ಯವಾದ ಮಾಹಿತಿ ಪ್ರಕಾರ ನಾಲ್ಕು ಪಟ್ಟು ಹೆಚ್ಚು ಸೋಂಕಿತರಾಗಿದ್ದು ಪತ್ತೆ ಆಗಿದೆ ಎಂದು ಅವರು ಹೇಳಿದ್ದಾರೆ.

ತ್ಯಾಜ್ಯ ನೀರಿನಲ್ಲಿ ಆನುವಂಶಿಕ ಧಾತುವಿನ ಮೇಲೆ ನಿಗಾ ಇರಿಸುವ ಮೂಲಕ ಕೋವಿಡ್–19 ರ ಹರಡುವಿಕೆ ಮುನ್ಸೂಚನೆಯನ್ನು ಪಡೆಯಬಹುದು ಮತ್ತು ವೈರಾಣುವಿನ ಹೊಸ ತಳಿಗಳನ್ನು ಬೇಗನೇ ಪತ್ತೆ ಮಾಡುವುದಕ್ಕೂ ಸಾಧ್ಯವಾಗುತ್ತದೆ. ತ್ಯಾಜ್ಯ ನೀರಿನಲ್ಲಿ ರೋಗಕಾರಕಗಳ ಮೇಲೆ ನಿಗಾ ಇಡುವುದು ಅತ್ಯಂತ ಕಡಿಮೆ ವೆಚ್ಚದ ವಿಧಾನ. ಈ ವಿಧಾನದ ಮೂಲಕ ಸಮುದಾಯದಲ್ಲಿ ವೈರಾಣು ಹರಡುವಿಕೆ ಪ್ರಮಾಣವನ್ನೂ ನಿಖರವಾಗಿ ಗುರುತಿಸಿ, ಅರ್ಥೈಸಿಕೊಳ್ಳಲೂ ಸಾಧ್ಯವಾಗುತ್ತದೆ. ಅಲ್ಲದೇ, ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಸ್ಥಿತಿಗತಿಯ ತತ್‌ಕ್ಷಣದ ಚಿತ್ರಣ ಪಡೆದು ಸಾಂಕ್ರಾಮಿಕದ ನಿರ್ವಹಣೆಯನ್ನುಸಮರ್ಪಕವಾಗಿ ಮಾಡಲು ಸಾಧ್ಯ ಎಂದು ಅವರು ವಿವರಿಸಿದ್ದಾರೆ.

ಸಮುದಾಯದಲ್ಲಿ ಹರಡಿದ ಕೋವಿಡ್ ವೈರಾಣುಗಳ ತಳಿಗಳ ಬಗ್ಗೆ ಕ್ಲಿನಿಕಲ್ ದತ್ತಾಂಶ ಆಧರಿಸಿ ನಡೆಸಿರುವ ಅಧ್ಯಯನಗಳು ಸೀಮಿತ. ಹೀಗಾಗಿ ಸಮುದಾಯದಲ್ಲಿ ವೈರಾಣುಗಳ ತಳಿಗಳ ಸಮೃದ್ಧಿಯನ್ನು ಸಾಂಪ್ರದಾಯಿಕ ವಿಧಾನದಲ್ಲಿ ಪತ್ತೆ ಮಾಡುವುದು ಕಷ್ಟ. ಆದರೆ, ತ್ಯಾಜ್ಯ ನೀರಿನಲ್ಲಿ ಆನುವಂಶಿಕ ಧಾತುವಿನ ಮೇಲೆ ನಿಗಾ ಇಡುವ ವಿಧಾನದಿಂದ ಕೋವಿಡ್ ಹರಡುವಿಕೆಯನ್ನು ನಿಖರವಾಗಿ ಹೇಳಲು ಸಾಧ್ಯವಿದೆ. ಬ್ರೆಜಿಲ್ ಮತ್ತು ದಕ್ಷಿಣ ಅಮೆರಿಕದ ಇತರೆಡೆಯೂ ಇದು ಸಾಬೀತಾಗಿದೆ ಎಂದು ಡಾ.ಉಮಾ ರಾಮಕೃಷ್ಣನ್ ಹೇಳಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ@75
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ಪ್ರಸಾರ
ಇಂದು
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ನಾಳೆ

ಐಶಾನಿ ಶೆಟ್ಟಿ
ನಟಿ
ಸೆಲೆಬ್ರಿಟಿ PREMIERE
‘ಐಶಾನಿ ಸಿನಿ ಕಹಾನಿ’
ಬೆಳಿಗ್ಗೆ 10 ಕ್ಕೆ

ಧರ್ಮಸಿಂಗ್ ಪುತ್ರ ಸೇರಿ 10 ಜನರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ವಿಜಯ್ ಸಿಂಗ್

ಬೀದರ್: ಬಸವಕಲ್ಯಾಣದ ಬಿಕೆಆರ್‌ಡಿಬಿ ಪ್ರವಾಸಿ ಮಂದಿರದಲ್ಲಿ ಎಐಸಿಸಿ ಸದಸ್ಯ ಆನಂದ ದೇವಪ್ಪ ಮೇಲೆ ನಡೆದ ಹಲ್ಲೆಗೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್ ಪುತ್ರ, ವಿಧಾನಪರಿಷತ್ ಮಾಜಿ ಸದಸ್ಯ ವಿಜಯಸಿಂಗ್ ಸೇರಿ 10 ಜನರ ವಿರುದ್ಧ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ವಿಜಯಸಿಂಗ್ ರಜಪೂತ, ಬಸವಕಲ್ಯಾಣ ತಾಲ್ಲೂಕಿನ ಜನಾಪುರದ ಓಂ ಪಾಟೀಲ, ಅಮ್ಜದ್ ನವರಂಗ್, ಬಸವಕಲ್ಯಾಣದ ಮೀನಾಜ್, ರಾಮ್ ಜಾಧವ್, ಬೀದರ್‌ನ ಈರಣ್ಣ ಬಾವಗೆ, ಟಿಪ್ಪು, ಮೊಹಸಿನ್, ಮಂಠಾಳದ ದಾವೂದ್, ಗೋರಟಾದ ಜೈದೀಪ ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ’ ಎಂದು ಆನಂದ ದೇವಪ್ಪ ಗುರುವಾರ ತಡರಾತ್ರಿ ದೂರು ದಾಖಲಿಸಿದ್ದಾರೆ.

‘ವಿಧಾನ ಪರಿಷತ್ ಸದಸ್ಯರಾದ ಪ್ರಕಾಶ ರಾಠೋಡ, ಭೀಮರಾವ್ ಪಾಟೀಲ ಸೇರಿದಂತೆ ಹಲವು ಕಾಂಗ್ರೆಸ್ ಮುಖಂಡರು ಬಿಕೆಆರ್‌ಡಿಬಿ ಪ್ರವಾಸಿಮಂದಿರದಲ್ಲಿ ಸಭೆ ನಡೆಯುತ್ತಿದ್ದಾಗ ವಿಜಯಸಿಂಗ್ ಅವರು ಕಾರ್ಯಕ್ರಮಕ್ಕೆ ತಗಲುವ ವೆಚ್ಚದ ಮಾಹಿತಿ ನೀಡಬೇಕು ಎಂದು ಸೂಚಿಸಿದರು. ಅದಕ್ಕೆ ನಾನು ‘ನಿಮಗೇಕೆ ಲೆಕ್ಕ ಕೊಡಬೇಕು. ಪಕ್ಷದ ಮುಖಂಡರಿಗೆ ಮಾಹಿತಿ ಕೊಡುತ್ತೇನೆ’ ಎಂದು ಹೇಳಿದಾಗ ಇಬ್ಬರ ಮಧ್ಯೆ ಮಾತಿನ ಚಕಮಕಿ ನಡೆದಿದೆ.

ಆಗ ವಿಜಯಸಿಂಗ್ ಅವರು ಹೊರಗಡೆ ನಿಂತಿದ್ದ ತಮ್ಮ ಬೆಂಬಲಿಗರನ್ನು ಕರೆದರು. ಅಲ್ಲದೇ ವಿಜಯಸಿಂಗ್ ಸೇರಿ 10 ಜನ ನನ್ನ ತುಟಿ, ಎದೆ ಹಾಗೂ ಬೆನ್ನಿಗೆ ಬಲವಾಗಿ ಹೊಡೆದಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಆನಂದ ದೇವಪ್ಪ ದೂರಿನಲ್ಲಿ ವಿವರಿಸಿದ್ದಾರೆ.

ಪೊಲೀಸರು ಪ್ರಕರಣ ದಾಖಲಿಸಿಕೊಳ್ಳುತ್ತಿದ್ದಂತೆಯೇ ವಿಜಯಸಿಂಗ್ ಅವರು, ನಿರೀಕ್ಷಣಾ ಜಾಮೀನು ಪಡೆದುಕೊಂಡಿದ್ದಾರೆ.

ತಂದೆ ನೆನೆದು ಎಚ್‌ಡಿಕೆ ಕಣ್ಣೀರು

ಪ್ರಜಾವಾಣಿ ವಾರ್ತೆ

ತಿಪಟೂರು: ‘ಕಳೆದ ಲೋಕಸಭಾ ಚುನಾವಣೆಯಲ್ಲಿ ತೆಗೆದುಕೊಂಡ ನಿರ್ಧಾರವು ಎಚ್.ಡಿ. ದೇವೇಗೌಡ ಅವರ ಆರೋಗ್ಯದ ಮೇಲೂ ಪರಿಣಾಮ ಬೀರಿದ್ದು, ಬೇಸರ ತಂದಿದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಕಣ್ಣೀರು ಹಾಕಿದರು.

ಶುಕ್ರವಾರ ನಡೆದ ಜೆಡಿಎಸ್ ಪಕ್ಷದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ವಯಸ್ಸಾದರೂ ರಾಜ್ಯವನ್ನು ಸುತ್ತಿ ರೈತರು, ಜನಪರ ಸರ್ಕಾರ ರಚನೆ ಮಾಡುವ ಹಂಬಲ ಹೊಂದಿದ್ದಾರೆ. ಆದರೆ, ಅವರಿಗೆ ದೇಹ ಸ್ಪಂದಿಸುತ್ತಿಲ್ಲ’ ಎಂದರು.



ಹಾವೇರಿಯ ಹಿಮ್ಸ್‌ನಲ್ಲಿ ಬೋಧಕರ ಕೊರತೆಯಿಂದ ನಡೆಯದ ಪಾಠ

150 ವೈದ್ಯಕೀಯ ವಿದ್ಯಾರ್ಥಿಗಳ ಭವಿಷ್ಯ ಅತಂತ್ರ

• ಸಿದ್ದು ಆರ್.ಜಿ.ಹಳ್ಳಿ

ಪ್ರಜಾವಾಣಿ ವಿಶೇಷ

ಹಾವೇರಿ: ಜಿಲ್ಲೆಯಲ್ಲಿ ಪ್ರಸಕ್ತ ವರ್ಷ ಹೊಸದಾಗಿ ಆರಂಭವಾಗಿರುವ ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಹಿಮ್ಸ್) ಕಾಲೇಜಿನಲ್ಲಿ ಬೋಧಕರ ಕೊರತೆಯಿಂದ ಒಂದೂವರೆ ತಿಂಗಳು ಕಳೆದರೂ ಪಾಠಗಳೇ ಆರಂಭವಾಗಿಲ್ಲ. ಇದರಿಂದ 150 ವಿದ್ಯಾರ್ಥಿಗಳ ಭವಿಷ್ಯ ಅತಂತ್ರವಾಗಿದೆ.

ಈ ಸರ್ಕಾರಿ ಮೆಡಿಕಲ್ ಕಾಲೇಜಿಗೆ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕರು ಸೇರಿದಂತೆ ಒಟ್ಟು 79 ಮಂದಿಯನ್ನು ಕಾಯಂ ನೇಮಕಾತಿ ಮಾಡಿಕೊಳ್ಳಲು 2022ರ ಜನವರಿಯಲ್ಲಿ ಸಂದರ್ಶನ ನಡೆಸಲಾಗಿತ್ತು. ಸಂದರ್ಶನದಲ್ಲಿ ಆಯ್ಕೆಯಾದವರ ತಾತ್ಕಾಲಿಕ ಪಟ್ಟಿಯನ್ನು 2022ರ ಡಿಸೆಂಬರ್ 9ರಂದು ಪ್ರಕಟಿಸಲಾಗಿತ್ತು. ಆಕ್ಷೇಪಣೆ ಅವಧಿ ಮುಗಿದು, ಒಂದೂವರೆ ತಿಂಗಳು ಕಳೆದರೂ ಅಂತಿಮ ಆಯ್ಕೆ ಪಟ್ಟಿಯೇ ಬಿಡುಗಡೆಯಾಗಿಲ್ಲ.

ಪ್ರಸ್ತುತ ಮೆಡಿಕಲ್ ಕಾಲೇಜಿನಲ್ಲಿ ಡೀನ್ ಮತ್ತು ಪ್ರಾಧ್ಯಾಪಕ ಸೇರಿದಂತೆ ಇಬ್ಬರು ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಬೋಧಕರ ಕೊರತೆಯಿಂದ ವಿದ್ಯಾರ್ಥಿಗಳಿಗೆ 'ಪಠ್ಯ' ಆರಂಭವಾಗಿಲ್ಲ. ಆರಂಭದಲ್ಲಿ 15 ದಿನ 'ಫೌಂಡೇಷನ್ ಕೋರ್ಸ್' ಅನ್ನು ಹಾವೇರಿ ಜಿಲ್ಲಾಸ್ಪತ್ರೆ ಮತ್ತು ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಯ ತಜ್ಞ ವೈದ್ಯರಿಂದ ಮಾಡಿಸಲಾಗಿದೆ.

ಹಾವೇರಿ ತಾಲ್ಲೂಕಿನ ದೇವಗಿರಿ ಸಮೀಪದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ವೈದ್ಯಕೀಯ ಕಾಲೇಜಿನ ತರಗತಿ ನಡೆಸಲು ತಾತ್ಕಾಲಿಕ ವ್ಯವಸ್ಥೆ ಕಲ್ಪಿಸಲಾಗಿದೆ

ವಿದ್ಯಾರ್ಥಿಗಳಿಗೆ ತಾತ್ಕಾಲಿಕ ವ್ಯವಸ್ಥೆ

ಹಾವೇರಿ ಜಿಲ್ಲೆಯ ಜನರ ಬಹುದಿನಗಳ ಕನಸಾದ ಸರ್ಕಾರಿ ಮೆಡಿಕಲ್ ಕಾಲೇಜು ಸ್ಥಾಪನೆಗೆ 2020ರ ಜನವರಿಯಲ್ಲಿ ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ದೊರೆಯಿತು. ದೇವಗಿರಿ-ಯಲ್ಲಾಪುರ ಬಳಿ 56 ಎಕರೆ ಜಾಗದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನದಡಿ ₹478 ಕೋಟಿ ವೆಚ್ಚದಲ್ಲಿ ವೈದ್ಯಕೀಯ ಕಾಲೇಜು ನಿರ್ಮಾಣ ಮಾಡಲಾಗುತ್ತಿದೆ. ಇನ್ನೂ ಕಾಮಗಾರಿ ಪೂರ್ಣಗೊಳ್ಳದ ಕಾರಣ ದೇವಗಿರಿ ಸಮೀಪದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮೆಡಿಕಲ್ ಕಾಲೇಜು ತರಗತಿ ನಡೆಸಲು ತಾತ್ಕಾಲಿಕ ವ್ಯವಸ್ಥೆ ಕಲ್ಪಿಸಲಾಗಿದೆ.

'ಎಂಜಿನಿಯರಿಂಗ್ ಕಾಲೇಜಿನ ಹಾಸ್ಟೆಲ್‌ನಲ್ಲಿ ಬಿಸಿನೀರು, ಶೌಚಾಲಯ, ಶುದ್ಧ ಕುಡಿಯುವ ನೀರು ಕೊರತೆ ಸೇರಿದಂತೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಊಟದ ವ್ಯವಸ್ಥೆ ಸಮರ್ಪಕವಾಗಿಲ್ಲ. ವಾರಗಟ್ಟಲೇ ತರಗತಿಗಳು ನಡೆಯುತ್ತಿಲ್ಲ. ಕೂಡಲೇ ಎಲ್ಲ ಸಮಸ್ಯೆಗಳನ್ನು ಬಗೆಹರಿಸಿ, ವ್ಯಾಸಂಗಕ್ಕೆ ಅನುಕೂಲ ಕಲ್ಪಿಸಬೇಕು' ಎಂದು ವಿದ್ಯಾರ್ಥಿನಿಯರು ಒತ್ತಾಯಿಸಿದ್ದಾರೆ.

ಪೂರ್ವಸಿದ್ಧತೆಯ ಕೊರತೆ: 'ನಮ್ಮ ಮಕ್ಕಳು 'ನೀಟ್'ನಲ್ಲಿ ಅತ್ಯುತ್ತಮ ಅಂಕಗಳನ್ನು ಗಳಿಸಿ, ಹಾವೇರಿ ಸರ್ಕಾರಿ ವೈದ್ಯಕೀಯ ಕಾಲೇಜನ್ನು ಆಯ್ಕೆ ಮಾಡಿಕೊಂಡು ಪ್ರವೇಶಾತಿ ಪಡೆದಿದ್ದಾರೆ. ಬೋಧಿಸಲು ಉಪನ್ಯಾಸಕರಿಲ್ಲದ ಕಾರಣ ವಿದ್ಯಾರ್ಥಿಗಳು ತರಗತಿಗಳಿಗೆ ಹೋಗದೆ ಹಾಸ್ಟೆಲ್‌ನಲ್ಲಿ ಕಾಲಹರಣ ಮಾಡುವಂತಾಗಿದೆ. ಪೂರ್ವಸಿದ್ಧತೆ ಇಲ್ಲದೆ ಕಾಲೇಜು ಆರಂಭಗೊಳಿಸಿದ್ದು ಏಕೆ' ಎಂದು ವಿದ್ಯಾರ್ಥಿಗಳ ಪೋಷಕರು ಪ್ರಶ್ನಿಸುತ್ತಿದ್ದಾರೆ.

> **ಫೌಂಡೇಷನ್ ಕೋರ್ಸ್ ನಡೆಸಿದ್ದೇವೆ. ಬೋಧಕರ ತಾತ್ಕಾಲಿಕ ನೇಮಕಾತಿ ಪಟ್ಟಿ ಪ್ರಕಟಿಸಿದ್ದು, ವಾರದೊಳಗೆ ಅಂತಿಮ ಪಟ್ಟಿ ಪ್ರಕಟವಾಗಲಿದೆ**
> **ಡಾ.ಅರವಿಂದ ಮುಳಗುಂದ**
> ನಿರ್ದೇಶಕ, ಹಿಮ್ಸ್, ಹಾವೇರಿ

ವ್ಯರ್ಥವಾದ 2 ತಿಂಗಳು: 'ಮೆಡಿಕಲ್ ಕೋರ್ಸ್‌ನ ಮೊದಲನೇ ವರ್ಷದ ಅವಧಿಯನ್ನು ಈ ಬಾರಿ 13 ತಿಂಗಳಿಗೆ ಸೀಮಿತಗೊಳಿಸಲಾಗಿದೆ. ಈಗಾಗಲೇ ಶೈಕ್ಷಣಿಕ ಅವಧಿಯ ಎರಡು ತಿಂಗಳು ವ್ಯರ್ಥವಾಗಿ ಹೋಗಿದೆ. ಬೇರೆ ಜಿಲ್ಲೆಗಳ ಮೆಡಿಕಲ್ ಕಾಲೇಜುಗಳಲ್ಲಿ ಪಾಠ ಚೆನ್ನಾಗಿ ನಡೆಯುತ್ತಿವೆ. ವೈದ್ಯರಾಗಬೇಕು ಎಂದು ಕನಸು ಹೊತ್ತು ಬಂದಿರುವ ನಮಗೆ ಹಾವೇರಿ ಮೆಡಿಕಲ್ ಕಾಲೇಜಿನ ಅವ್ಯವಸ್ಥೆಯಿಂದ ನಿರಾಸೆಯಾಗಿದೆ. ಭವಿಷ್ಯದ ಬಗ್ಗೆ ಆತಂಕ ಕಾಡುತ್ತಿದೆ' ಎಂದು ವಿದ್ಯಾರ್ಥಿಗಳು ಸಮಸ್ಯೆ ತೋಡಿಕೊಂಡರು.

ಸುದ್ದಿ 2 ನಿಮಿಷ

ಕಾಡುಗೊಲ್ಲರ ನಿಗಮದ ಅಧ್ಯಕ್ಷರ ನೇಮಕ: ಮರು ಆದೇಶ

ಶಿರಾ: ಕಾಡುಗೊಲ್ಲರ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಚಂಗಾವರ ಮಾರಣ್ಣ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಮರು ಆದೇಶ ಹೊರಡಿಸಿದೆ.

ಈ ಹಿಂದೆ ನಿಗಮದ ಅಧ್ಯಕ್ಷರಾಗಿ ಮಾರಣ್ಣ ಅವರನ್ನು ನೇಮಿಸಿ ಆದೇಶ ಹೊರಡಿಸಲಾಗಿತ್ತು. ಕೆಲವರು ಅವರ ನೇಮಕ ವಿರೋಧಿಸಿದ ಕಾರಣ ಅಧಿ ಕಾರ ಸ್ವೀಕರಿಸಲು ಸಾಧ್ಯವಾಗಿರಲಿಲ್ಲ.

'ಶಿರಾ ವಿಧಾನಸಭಾ ಉಪ ಚುನಾವಣೆ ಸಮಯದಲ್ಲಿ ಕಾಡುಗೊಲ್ಲ ಸಮುದಾಯಕ್ಕೆ ಕೊಟ್ಟ ಭರವಸೆಯಂತೆ ನಿಗಮ ಸ್ಥಾಪಿಸಲಾಗಿತ್ತು. ಪಕ್ಷ ಹಾಗೂ ಸಮುದಾಯಕ್ಕೆ ಮಾರಣ್ಣ ಸಲ್ಲಿಸಿರುವ ಸೇವೆ ಬಗ್ಗೆ ಮುಖ್ಯಮಂತ್ರಿ ಅವರಿಗೆ ಮನವರಿಕೆ ಮಾಡಿಕೊಡಲಾಗಿತ್ತು' ಎಂದು ಶಿರಾ ಶಾಸಕ ಡಾ.ಸಿ.ಎಂ. ರಾಜೇಶ್ ಗೌಡ, ಹಿರಿಯೂರು ಶಾಸಕಿ ಪೂರ್ಣಿಮಾ ಶ್ರೀನಿವಾಸ್ ತಿಳಿಸಿದ್ದಾರೆ.

ಕನ್ನಡದಲ್ಲಿ ಯುಪಿಎಸ್‌ಸಿ ಪರೀಕ್ಷೆ: ಜೆಡಿಎಸ್ ಒತ್ತಾಯ

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗದ ಎಲ್ಲ ವಿಷಯಗಳ ಪರೀಕ್ಷೆಗಳನ್ನು ಕನ್ನಡ ಸೇರಿದಂತೆ ಪ್ರಾದೇಶಿಕ ಭಾಷೆಗಳಲ್ಲಿ ಬರೆಯಲು ಅವಕಾಶ ಕಲ್ಪಿಸಬೇಕು ಎಂದು ಜೆಡಿಎಸ್ ಆಗ್ರಹಿಸಿದೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಜೆಡಿಎಸ್ ರಾಜ್ಯ ಘಟಕ, ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಮಾತ್ರ ಪೂರ್ವಭಾವಿ ಪರೀಕ್ಷೆ ಬರೆಯಬೇಕಿದೆ. ಬ್ಯಾಂಕಿಂಗ್ ಪರೀಕ್ಷೆ ನಡೆಸುವ ಐಬಿಪಿಎಸ್ ಹಾಗೂ ಕೇಂದ್ರ ಸಿಬ್ಬಂದಿ ಆಯ್ಕೆ ಆಯೋಗವೂ ಕನ್ನಡದಲ್ಲಿ ಬರೆಯಲು ಅವಕಾಶ ಕಲ್ಪಿಸಿವೆ. ಯುಪಿಎಸ್‌ಸಿಯೂ ಸಮ್ಮತಿಸಬೇಕು. ಇಲ್ಲದಿದ್ದರೆ ಐಎಎಸ್, ಐಪಿಎಸ್‌ನಂತಹ ಹುದ್ದೆಗಳಿಂದ ಕನ್ನಡಿಗರು ವಂಚಿತರಾಗುತ್ತಾರೆ ಎಂದು ಹೇಳಿದೆ.

ಪಾಕ್ ವರದಿ ಒಪ್ಪಿಸುವ ಡಿಕೆಶಿ: ಸಿ.ಟಿ.ರವಿ ವ್ಯಂಗ್ಯ

ಬೆಂಗಳೂರು: 'ಕಾಂಗ್ರೆಸ್ ಪಕ್ಷದ ಸಮೀಕ್ಷೆಯ ಪ್ರಕಾರ ಚುನಾವಣೆಯಲ್ಲಿ 160 ಸ್ಥಾನ ಸಿಗುತ್ತದೆ ಎಂದು ಡಿ.ಕೆ. ಶಿವಕುಮಾರ್ ಹೇಳಿಕೊಂಡಿದ್ದಾರೆ. ಬಹುಶಃ ಅವರು ಪಾಕಿಸ್ತಾನದಿಂದ ವರದಿ ಪಡೆದಿರಬೇಕು' ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ವ್ಯಂಗ್ಯವಾಡಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ಪ್ರಮುಖ ನಾಯಕರ ಸಭೆಗೂ ಮುನ್ನ ಸುದ್ದಿಗಾರರ ಜತೆ ಮಾತನಾಡಿದ ಅವರು, ಪಾಕಿಸ್ತಾನದ ಈಗಿನ ಸರ್ಕಾರ ಪತನ ಆಗುತ್ತದೆ ಎಂಬ ಮಾಹಿತಿ ಇದೆ. ಬಹುಶಃ ಅಲ್ಲಿಂದ ವರದಿ ತರಿಸಿಕೊಂಡಿರಬೇಕು ಎಂದರು.

ಕರ್ನಾಟಕದಲ್ಲೂ ಉತ್ತರ ಪ್ರದೇಶ, ಗೋವಾ ಮತ್ತು ಗುಜರಾತ್ ಮಾದರಿಯ ಫಲಿತಾಂಶವೇ ಬರುತ್ತದೆ. ಕಾಂಗ್ರೆಸ್‌ನವರು 160ರ ಹಗಲುಗನಸು ಕಾಣುತ್ತಿರಲಿ ಎಂದರು.

ಕೆಲವು ಮನೆತನದವರು ತಾವು ಹುಟ್ಟಿರೋದೇ ಲೀಡರ್ ಆಗಲು ಅಂತ ಅಂದುಕೊಂಡಿದ್ದಾರೆ. ತಮಗೆ ತಾವೇ ಭಾರತ ರತ್ನ ಪ್ರಶಸ್ತಿಯನ್ನೂ ಕೊಟ್ಟುಕೊಂಡು ಬಂದಿದ್ದಾರೆ ಎಂದು ಪರೋಕ್ಷವಾಗಿ ನೆಹರೂ ಕುಟುಂಬದ ವಿರುದ್ಧ ರವಿ ವಾಗ್ದಾಳಿ ನಡೆಸಿದರು.

ಎಂಟು ವರ್ಷಗಳಲ್ಲಿ ದುಪ್ಪಟ್ಟು ಕೆಲಸ: 1960 ರಿಂದ 2014 ರವರೆಗೆ ಆದ ಕೆಲಸಗಳಿಗಿಂತಲೂ ಆ ನಂತರದ ಎಂಟು ವರ್ಷಗಳಲ್ಲಿ ದುಪ್ಪಟ್ಟು ಕೆಲಸಗಳು ಆಗಿವೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯಕ್ಕೆ ಹೆಚ್ಚು ಅನುದಾನ ಬಂದಿಲ್ಲ ಎನ್ನುವುದರಲ್ಲಿ ಹುರುಳಿಲ್ಲ. ಮೋದಿ ಆಡಳಿತದಲ್ಲಿ ಹೆಚ್ಚು ಅನುದಾನ ಬಂದಿದೆ ಎಂದರು.

ಶಿಕ್ಷಕರ ಸಂಘಕ್ಕೆ ಮರುಚುನಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ 2020–25ನೇ ಸಾಲಿಗೆ ನಡೆದಿದ್ದ ಚುನಾವಣೆಯನ್ನು ಅಕ್ರಮ ಎಂದು ಸಹಕಾರ ಸಂಘಗಳ ಉಪ ನಿಬಂಧಕರು ರದ್ದುಗೊಳಿಸಿದ್ದು, ಸಂಘದ ಬೈ-ಲಾದಂತೆ ಸದಸ್ಯರ ಪರಿಷ್ಕೃತ ಪಟ್ಟಿ ತಯಾರಿಸಿ ಮರು ಚುನಾವಣೆ ನಡೆಸುವಂತೆ ಆದೇಶಿಸಿದ್ದಾರೆ.

ಸಂಘದ ಪದಾಧಿಕಾರಿಗಳ ಆಯ್ಕೆಗೆ ಡಿಸೆಂಬರ್ 2020ರಲ್ಲಿ ಚುನಾವಣೆ ನಡೆದಿತ್ತು. ಶಂಭುಲಿಂಗನಗೌಡ ಅಧ್ಯಕ್ಷರಾಗಿ, ಚಂದ್ರಶೇಖರ ನುಗ್ಗಲಿ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದರು. ಸಿ.ಬಿ.ಜಯರಂಗ ಅವರು ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದರು.

ಸಂಘದ ಬೈ-ಲಾ ಪ್ರಕಾರ ಸರ್ಕಾರಿ ಪ್ರಾಥಮಿಕ ಶಾಲೆಗಳ ಶಿಕ್ಷಕರು, ಮುಖ್ಯಶಿಕ್ಷಕರು ಸಂಘದ ಸದಸ್ಯರಾಗಬಹುದು. ಆದರೆ, ಚುನಾವಣೆಯ ಮತದಾರರಪಟ್ಟಿಯಲ್ಲಿ ಅಧಿಕ ಸಂಖ್ಯೆಯಲ್ಲಿ 6ರಿಂದ 8ನೇ ತರಗತಿಯ ಪದವೀಧರ ಪ್ರಾಥಮಿಕ ಶಿಕ್ಷಕರು (ಜಿಪಿಟಿ), ಪದವೀಧರ ತರಬೇತಿ ಶಿಕ್ಷಕರು (ಟಿಜಿಟಿ) ಸ್ಥಾನ ಪಡೆದಿದ್ದರು. ಈ ಅಕ್ರಮದಿಂದಾಗಿ ಚುನಾವಣೆಯಲ್ಲಿ ಒಂದು ಗುಂಪು ಗೆಲುವು ಪಡೆಯಲು ಸಹಕಾರಿಯಾಗಿದೆ ಎಂದು ಉಪ ನಿಬಂಧಕರು ಆದೇಶದಲ್ಲಿ ವಿವರಿಸಿದ್ದಾರೆ.

> **ಬೈ-ಲಾದಂತೆಯೇ ಸದಸ್ಯರ ಪಟ್ಟಿ ತಯಾರಿಸಲಾಗಿತ್ತು. ಉಪ ನಿಬಂಧಕರ ಆದೇಶ ಪರಿಶೀಲಿಸಿದ ನಂತರ ಕಾರ್ಯಕಾರಿ ಸಮಿತಿ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುವುದು.**
> **ಚಂದ್ರಶೇಖರ ನುಗ್ಗಲಿ**
> ಪ್ರಧಾನ ಕಾರ್ಯದರ್ಶಿ, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ

ಚುನಾವಣಾ ಪ್ರಕ್ರಿಯೆ ಪ್ರಶ್ನಿಸಿ, ಫಲಿತಾಂಶ ರದ್ದುಮಾಡುವಂತೆ ಕೋರಿ ದಕ್ಷಿಣ ಕನ್ನಡ ಜಿಲ್ಲೆಯ ಶಿಕ್ಷಕ ಪೋಲೂರು ಮುರಳೀಧರ ಅವರು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಅರ್ಜಿ ಕುರಿತು ವಿಚಾರಣೆ ಮಾಡಲು ಸಂಘಗಳ ಜಿಲ್ಲಾ ನೋಂದಣಾಧಿಕಾರಿಯನ್ನು ನೇಮಿಸಲಾಗಿತ್ತು. ವಿಚಾರಣೆ ನಡೆದು, ಆದೇಶ ಹೊರಡಿಸಲಾಗಿದೆ. ಚುನಾವಣಾಧಿಕಾರಿ ನೇಮಕ ಮಾಡಿಕೊಂಡು ಪರಿಷ್ಕೃತ ಸದಸ್ಯರ ಪಟ್ಟಿಯಂತೆ ಚುನಾವಣೆ ನಡೆಸಲು ಸೂಚಿಸಲಾಗಿದೆ.

ರಸ್ತೆ ಅಪಘಾತ: ಇಬ್ಬರ ಸಾವು

ಹಾವೇರಿ: ಮೈಲಾರಲಿಂಗೇಶ್ವರ ಸ್ವಾಮಿ ಜಾತ್ರೆಗೆ ಹೋಗುತ್ತಿದ್ದ ಟ್ರ್ಯಾಕ್ಟರ್‌ಗೆ ಹಿಂಬದಿಯಿಂದ ಬಂದ ಕಾರು ಡಿಕ್ಕಿ ಹೊಡೆದು ಇಬ್ಬರು ಸ್ಥಳದಲ್ಲೇ ಮೃತಪಟ್ಟು, ನಾಲ್ವರಿಗೆ ಗಂಭೀರ ಗಾಯಗಳಾಗಿವೆ.

ಶಿಗ್ಗಾವಿ ತಾಲ್ಲೂಕಿನ ಹೊನ್ನಾಪುರ ಗ್ರಾಮದ ಬಳಿ ಶುಕ್ರವಾರ ಅಪಘಾತ ಸಂಭವಿಸಿದೆ. ಹುಬ್ಬಳ್ಳಿ ತಾಲ್ಲೂಕಿನ ಶೆರೆವಾಡ ಗ್ರಾಮದ ಹನುಮಂತಪ್ಪ ಮುಲಗಿ (55) ಹಾಗೂ ಚಂದ್ರು ಸಿರಕೋಳ (40) ಮೃತರು. ಗಾಯಗೊಂಡವರನ್ನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಅನಂತ ನಾಗ್‌ಗೆ ಪ್ರಶಸ್ತಿ ಪ್ರದಾನ

ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಗುಣವಂತೆಯ ಯಕ್ಷಾಂಗಣದಲ್ಲಿ ಶುಕ್ರವಾರ ನಡೆದ ಕೆರೆಮನೆ ಶಂಭು ಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ ಕಾರ್ಯಕ್ರಮದಲ್ಲಿ ಚಿತ್ರನಟ ಅನಂತ ನಾಗ್ ಅವರಿಗೆ 'ಕೆರೆಮನೆ ಶಿವರಾಮ ಹೆಗಡೆ ರಾಷ್ಟ್ರೀಯ ಪ್ರಶಸ್ತಿ-2021' ಅನ್ನು ಪ್ರದಾನ ಮಾಡಲಾಯಿತು. ಕೆರೆಮನೆ ಶಿವಾನಂದ ಹೆಗಡೆ, ಶಾಸಕ ಸುನೀಲ ನಾಯ್ಕ, ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನೀಲಕುಮಾರ್, ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಚಿತ್ರಾಪುರ ಮಠದ ಸದ್ಯೋಜಾತ ಶಂಕರಾಶ್ರಮ ಸ್ವಾಮೀಜಿ, ಪತ್ರಕರ್ತ ಎಂ.ಕೆ.ಭಾಸ್ಕರ ರಾವ್ ಇದ್ದಾರೆ

ಕಾಲಿನ ಮೇಲೆ ಟಿಪ್ಪರ್ ಹರಿಸಿ ಚಾಲಕನ ದುಷ್ಕೃತ್ಯ

ನಿಧಾನವಾಗಿ ವಾಹನ ಚಲಾಯಿಸು ಎಂದಿದ್ದಕ್ಕೆ ಕೊಲೆ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): 'ದೂಳು ಹಾರುವ ಹಾಗೆ ವಾಹನವನ್ನು ಚಲಾಯಿಸಬೇಡ' ಎಂದು ಸಲಹೆ ನೀಡಿದ ವ್ಯಕ್ತಿಯೊಬ್ಬರಿಗೆ ಟಿಪ್ಪರ್ ಚಾಲಕ ರಾಡ್‌ನಿಂದ ಹಲ್ಲೆ ನಡೆಸಿ, ನೆಲಕ್ಕೆ ಬಿದ್ದ ಅದೇ ವ್ಯಕ್ತಿಯ ಕಾಲಿನ ಮೇಲೆ ಟಿಪ್ಪರ್ ಚಲಾಯಿಸಿದ ಪರಿಣಾಮ ಅವರು ಮೃತಪಟ್ಟಿದ್ದಾರೆ.

ಕೋಟೆಬಾಗಿಲಿನ ನಿವಾಸಿ ಫಯಾಝ್ (61) ಮೃತಪಟ್ಟ ವ್ಯಕ್ತಿ.

ಘಟನೆ ವಿವರ: ಶುಕ್ರವಾರ ಮಧ್ಯಾಹ್ನ ಫಯಾಝ್ ಅವರು ಕೋಟೆಬಾಗಿಲು ಮಸೀದಿಗೆ ನಮಾಜ್‌ಗೆ ತೆರಳುವ ವೇಳೆ ಹ್ಯಾರಿಸ್ ಎಂಬುವವರು ವೇಗದಿಂದ ಟಿಪ್ಪರ್ ಚಲಾಯಿಸಿಕೊಂಡು ಹೋಗಿದ್ದಾರೆ. ಆಗ ಅಲ್ಲೇ ನಡೆದುಕೊಂಡು ಹೋಗುತ್ತಿದ್ದ ಫಯಾಝ್ ಅವರ ಮೇಲೆ ದೂಳು ಹಾರಿದೆ. ನಮಾಜ್ ಮುಗಿಸಿ ವಾಪಸ್ ಬರುವಾಗ ಫಯಾಝ್ ಅವರು 'ನಿಧಾನ ವಾಹನ ಚಲಾಯಿಸು' ಎಂದು ಟಿಪ್ಪರ್‌ನಲ್ಲಿ ಕುಳಿತಿದ್ದ ಚಾಲಕನ ಬಳಿ ಹೋಗಿ ಸಲಹೆ ನೀಡಿದ್ದರು.

ಈ ವೇಳೆ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿದೆ. ಕೋಪಗೊಂಡ ಹ್ಯಾರಿಸ್, ಫಯಾಝ್ ಅವರ ತಲೆಗೆ ಕಬ್ಬಿಣದ ರಾಡ್‌ನಿಂದ ಹೊಡೆದಿದ್ದಾರೆ. ನೆಲಕ್ಕೆ ಬಿದ್ದ ಫಯಾಝ್ ಅವರ ಕಾಲಿನ ಮೇಲೆ ಟಿಪ್ಪರ್ ಚಲಾಯಿಸಿದ್ದಾರೆ. ತೀವ್ರ ಗಾಯಗೊಂಡಿದ್ದ ಫಯಾಝ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರು ಮೃತಪಟ್ಟಿದ್ದಾರೆ. ಆರೋಪಿ ಹ್ಯಾರಿಸ್ ಪರಾರಿಯಾಗಿದ್ದು, ಮೂಡುಬಿದಿರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಆರೋಪಿ ವಿರುದ್ಧ ಕೊಲೆ ಪ್ರಕರಣ ದಾಖಲಿಸಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದ್ದಾರೆ.

ಕೆಪಿಎಸ್‌ಸಿ ಸದಸ್ಯರ ಸಂಖ್ಯೆ 8: ಶಿಫಾರಸು

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಸದಸ್ಯರ ಸಂಖ್ಯೆಯನ್ನು 8ಕ್ಕೆ ಇಳಿಸುವಂತೆ ಕರ್ನಾಟಕ ಆಡಳಿತ ಸುಧಾರಣಾ ಆಯೋಗ ಶಿಫಾರಸು ಮಾಡಿದೆ.

ದೇಶದ ವಿವಿಧ ರಾಜ್ಯಗಳ ಲೋಕಸೇವಾ ಆಯೋಗಗಳ ಸಂಖ್ಯೆ 8 ಅಥವಾ ಅದಕ್ಕಿಂತ ಕಡಿಮೆ ಇದೆ. ಕೇರಳದ ಆಯೋಗವು ಜಿಲ್ಲಾಮಟ್ಟದ ಕಚೇರಿಗಳನ್ನು ಹೊಂದಿದೆ. ರಾಜ್ಯದಲ್ಲಿ ಮಾತ್ರ ಸದಸ್ಯರ ಸಂಖ್ಯೆ 14 ಇದೆ.

ನೇಮಕಾತಿ ಪ್ರಕ್ರಿಯೆಗಳಲ್ಲಿ ದಾಖಲಾತಿ ಪರಿಶೀಲನಾ ಕಾರ್ಯವನ್ನು ಆಯಾ ಇಲಾಖೆಗಳೇ ಮಾಡಬೇಕು. ಇದರಿಂದ ಕೆಪಿಎಸ್‌ಸಿ ಆಯ್ಕೆ ಪ್ರಕ್ರಿಯೆಗಳನ್ನು ತ್ವರಿತಗೊಳಿಸಲು ಸಾಧ್ಯವಾಗುತ್ತದೆ ಎಂದು ವಿವರಿಸಲಾಗಿದೆ.

ಜಲಸಂಪನ್ಮೂಲ ಇಲಾಖೆ : 400 ಎಂಜಿನಿಯರ್‌ಗಳ ನೇರ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಸಂಪನ್ಮೂಲ ಇಲಾಖೆಯಲ್ಲಿ ಖಾಲಿ ಇರುವ 400 ಎಂಜಿನಿಯರ್ ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆ ಅನುಮೋದನೆ ನೀಡಿದ್ದು, ಮೆರಿಟ್ ಆಧಾರದಲ್ಲಿ ನೇರ ನೇಮಕಾತಿ ಮಾಡಿಕೊಳ್ಳಲು ವಾರದಲ್ಲಿ ಅಧಿಸೂಚನೆ ಹೊರಡಿಸಲಾಗುವುದು ಎಂದು ಸಚಿವ ಗೋವಿಂದ ಕಾರಜೋಳ ಹೇಳಿದರು.

ವಿಧಾನಸೌಧದಲ್ಲಿ ಶುಕ್ರವಾರ ಸುದ್ದಿಗಾರರ ಜತೆ ಅವರು ಮಾತನಾಡಿದರು.

ರಾಜ್ಯದಲ್ಲಿ ಬೃಹತ್ ನೀರಾವರಿ ಯೋಜನೆಗಳು ಹಲವು ಹಂತಗಳಲ್ಲಿ ಅನುಷ್ಠಾನಗೊಳ್ಳುತ್ತಿವೆ. ಎಂಜಿನಿಯರ್‌ಗಳ ಅವಶ್ಯ ಇದೆ. ಇಲಾಖೆಯಲ್ಲಿ ಒಂದು ಸಾವಿರ ಎಂಜಿನಿಯರ್ ಹುದ್ದೆಗಳು ಖಾಲಿ ಇದ್ದು, 500 ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿತ್ತು. 100 ಸಹಾಯಕ ಎಂಜಿನಿಯರ್‌ಗಳು, 300 ಕಿರಿಯ ಎಂಜಿನಿಯರ್‌ಗಳ ಭರ್ತಿಗೆ ಅನುಮೋದನೆ ದೊರೆತಿದೆ. ತ್ವರಿತ ನೇಮಕದ ಕಾರಣಕ್ಕೆ ಕೆಪಿಎಸ್‌ಸಿ ಅಥವಾ ಯಾವುದೇ ನೇಮಕಾತಿ ಪ್ರಾಧಿಕಾರಕ್ಕೆ ನೀಡದೆ, ಇಲಾಖೆಯಿಂದಲೇ ಭರ್ತಿ ಮಾಡಿಕೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಕೇಂದ್ರ ಸರ್ಕಾರ 2023-24ನೇ ಸಾಲಿನ ಬಜೆಟ್‌ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ₹ 5,300 ಕೋಟಿ ನೀಡಿದೆ. ಇದರಿಂದ ಯೋಜನೆಯ ತ್ವರಿತ ಕಾರ್ಯಗಳಿಗೆ ಅನುಕೂಲವಾಗಿದೆ. ಯೋಜನೆಯ ಒಟ್ಟು ವೆಚ್ಚ ₹ 23 ಸಾವಿರ ಕೋಟಿಯಲ್ಲಿ ರಾಜ್ಯ ಸರ್ಕಾರ ಈಗಾಗಲೇ ₹ 13 ಸಾವಿರ ಕೋಟಿ ಖರ್ಚು ಮಾಡಿದೆ. ಕೇಂದ್ರ ನೀಡಿದ ಹಣ ಬಳಸಿಕೊಳ್ಳುವ ಜತೆಗೆ, ಉಳಿದ ಹಣ ನೀಡಲು ಮತ್ತೆ ಕೋರಿಕೆ ಸಲ್ಲಿಸಲಾಗುವುದು. ವರ್ಷದ ಒಳಗೆ ಯೋಜನೆ ಪೂರ್ಣಗೊಳಿಸಲಾಗುವುದು ಎಂದರು.

ಸರ್ಕಾರದಲ್ಲಿ ಖಾಲಿ ಇದ್ದ ಶೇ 90ರಷ್ಟು ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗಿದೆ. ಮೆರಿಟ್ ಆಧಾರದಲ್ಲೇ ನೇರ ನೇಮಕ ಪ್ರಕ್ರಿಯೆಗಳು ನಡೆದಿವೆ ಎಂದು ವಿವರ ನೀಡಿದರು.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರವರ ಕಛೇರಿ, ಕನನೀಸ ಮತ್ತು ಒಚ ಮಂಡಳಿ, ಜಲಭವನ, ನಂ.ಪಿ-4, 10ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, 3ನೇ ಮಹಡಿ, ಸರಸ್ವತಿ ಪುರಂ, ಮೈಸೂರು-570 009. ದೂ:0821-2545894, ಇಮೇಲ್: kwbcemys2014@gmail.com

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾಮಗಾರಿಯ ವಿವರ: ಕೇಂದ್ರ ಪುರಸ್ಕೃತ ಅಮೃತ್-2 ಯೋಜನೆಯಡಿ ಗುಂಡ್ಲುಪೇಟೆ ಪಟ್ಟಣದ ನೀರು ಸರಬರಾಜು ವ್ಯವಸ್ಥೆಯ ಸುಧಾರಣೆ ಹಾಗೂ 5 ವರ್ಷಗಳ ಕಾರ್ಯಚರಣೆ ಮತ್ತು ನಿರ್ವಹಣೆ ಕಾಮಗಾರಿಯು **ರೂ.119.86 ಕೋಟಿಗಳಿಗೆ** ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಇಂಡೆಂಟ್ ಸಂಖ್ಯೆ: KUWSDB/2022-23/WS/WORK_INDENT3308 ರಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://eproc.karnataka.gov.in ಸಂಪರ್ಕಿಸುವುದು.

ಸಹಿ/- ಮುಖ್ಯ ಅಭಿಯಂತರರು,
ಕ.ನ.ನೀ.ಸ ಮತ್ತು ಒ.ಚ ಮಂಡಳಿ, ಮೈಸೂರು

DIPR/MYS/KAVITA/966/2022-23

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಚಿತ್ರದುರ್ಗ.
ಸಂ:ಕಾ.ಸಾ.ಚಿ/ಪಿ.ಬಿ- 2/ಟೆಂಡರ್ ಪ್ರಕಟಣೆ-ಐ.ಎಫ್.ಟಿ-46/2022-23/ ದಿನಾಂಕ: 01.2.2023

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಟಿಪಿಪಿ ಆಕ್ಟ್-2000 ನಿಯಮದಂತೆ, ಹಾಗೂ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-4 ನಿಬಂಧನೆಗಳಿಗೊಳಪಟ್ಟಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ 1ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಹಾಗೂ ಅರ್ಹ ಏಜೆನ್ಸಿ/ಕನ್ಸಲ್‌ಟೆನ್ಸಿ ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು: 1) ದಾವಣಗೆರೆ ಜಿಲ್ಲೆ, ಹೊನ್ನಾಳಿ ತಾಲ್ಲೂಕಿನ, ಹಿರೇಗೋಣಿಗೆರೆ ಕೆರೆ ಕೋಡಿ ದುರಸ್ತಿ. ಟೆಂಡರ್‌ಗಿಟ್ಟ ಮೊತ್ತ: ರೂ. 41.35 ಲಕ್ಷಗಳು. 2) ದಾವಣಗೆರೆ ಜಿಲ್ಲೆ, ನ್ಯಾಮತಿ ತಾಲ್ಲೂಕಿನ, ಬೆಳಗುತ್ತಿ ಗ್ರಾಮಮದಲ್ಲಿ ವಡ್ಡಗಟ್ಟಿ ಕೆರೆ ಕೋಡಿ ಹಳ್ಳಕ್ಕೆ ತಡೆಗೋಡೆ ನಿರ್ಮಾಣ. ಟೆಂಡರ್‌ಗಿಟ್ಟ ಮೊತ್ತ: ರೂ. 41.95 ಲಕ್ಷಗಳು. 3) ದಾವಣಗೆರೆ ಜಿಲ್ಲೆ, ನ್ಯಾಮತಿ ತಾಲ್ಲೂಕಿನ, ಬೆಳಗುತ್ತಿ ಗ್ರಾಮದಲ್ಲಿ ಹಿರೇಕೆರೆಯ ಕೋಡಿ ನಾಲೆ ದುರಸ್ತಿ. ಟೆಂಡರ್‌ಗಿಟ್ಟ ಮೊತ್ತ: ರೂ. 420.92 ಲಕ್ಷಗಳು.

ಸದರಿ ಟೆಂಡರ್ ಪ್ರಕ್ರಿಯೆಗಳನ್ನು ಈ ಕೆಳಗಿನಂತೆ ನಿಗದಿಪಡಿಸಿದೆ. ದಿನಾಂಕ: 09.02.2023ರಿಂದ ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 23.02.2023 ಸಾಯಂಕಾಲ 05:30 ರವರೆಗೆ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 24.02.2023ರ ಸಾಯಂಕಾಲ 4.00 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ: 27.02.2023 ಸಾಯಂಕಾಲ 04:30 ಗಂಟೆಯ ನಂತರ (ಸಾಧ್ಯವಾದಲ್ಲಿ), ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ: 28.02.2023 ಸಾಯಂಕಾಲ 04:30 ಗಂಟೆಯ ನಂತರ(ಸಾಧ್ಯವಾದಲ್ಲಿ) ಸದರಿ ಕಾಮಗಾರಿಯಲ್ಲಿ ಟೆಂಡರ್ ಮೊತ್ತ ಅಥವಾ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತ ಅಂತಿಮವಾಗಿರುತ್ತವೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ (08194-231811) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ: 080-25501216/080-25501227 ರಿಂದ ಪಡೆಯಬಹುದು.

RO No. 945: DIPR/CTA/KSMCA/2022-23
ಸಹಿ/- ಕಾರ್ಯಪಾಲಕ ಇಂಜಿನಿಯರ್

ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್), ಕಛೇರಿ, ಗಾಜಿನಮನೆ, ದಾವಣಗೆರೆ.
ಫೋನ್ ನಂ: 08192-230049 Email:ddhdavanagere@yahoo.com
ಸಂಖ್ಯೆ/ತೋಉನಿ/ಜಿಪಂದಾ/ಹಿಸತೋನಿ/ರಾವ/ದಾ/ತಾಸ /2022-23 ದಿನಾಂಕ:-01-02-2023

e-Procurement ಟೆಂಡರ್ ಪ್ರಕಟಣೆ

2023-24 ನೇ ಸಾಲಿನಲ್ಲಿ ಇಲಾಖೆಯ ವಿವಿಧ ಯೋಜನೆಗಳಡಿ ದಾವಣಗೆರೆ ಜಿಲ್ಲೆಯ ವಿವಿಧ ತೋಟಗಾರಿಕೆ ಕ್ಷೇತ್ರಗಳಲ್ಲಿ ಮತ್ತು ಗಾಜಿನಮನೆಯಲ್ಲಿ ಕೆಲಸ ನಿರ್ವಹಿಸಲು ತೋಟಗಾರರ ಸೇವೆ ಮತ್ತು ಭದ್ರತಾ ಸೇವೆ ಒದಗಿಸಲು ಮಾನವ ಸಂಪನ್ಮೂಲ ಒದಗಿಸಲು ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 2001ರ (KTPP)ಪ್ರಕಾರ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳು ಹಾಗೂ ಟೆಂಡರ್ Document ವೀಕ್ಷಿಸಲು/ಪಡೆಯಲು www.eprocurement.kar.nic.in ಜಾಲತಾಣವನ್ನು ಸಂಪರ್ಕಿಸುವುದು.

ಟೆಂಡರ್ ಹೆಸರು ಅಂದಾಜು ಮೊತ್ತ ಮತ್ತು ಟೆಂಡರ್ ಸಂಖ್ಯೆ	ಟೆಂಡರ್ ಪ್ರಾರಂಭ ಮತ್ತು ಮುಕ್ತಾಯ ದಿನಾಂಕ	ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ	ಆರ್ಥಿಕ ಲಕೋಟೆ ತೆರೆಯುವ ದಿನಾಂಕ
ವಿವಿಧ ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆಗೆ ತೋಟಗಾರರ ಸೇವೆ ಒದಗಿಸುವುದು. ರೂ 25 ಲಕ್ಷ, DDH/ZP/DVG/FARM GARDENERS/2023-24	01-02-2023 ರಿಂದ 01-03-2023 ರ ಸಂಜೆ 5.00 pm ವರೆಗೆ	02-03-2023 ಬೆಳಿಗ್ಗೆ 11.00 ಘಂಟೆಗೆ	03-03-2023 ಬೆಳಿಗ್ಗೆ 11.00 ಘಂಟೆಗೆ
ಗಾಜಿನಮನೆ ಉದ್ಯಾನವನ ನಿರ್ವಹಣೆಗೆ ತೋಟಗಾರರ ಸೇವೆ ಒದಗಿಸುವುದು. ರೂ 22.0968 ಲಕ್ಷ, DDH/ZP/DVG/GLASS HOUSE GARDENERS/2023-24	02-02-2023 ರಿಂದ 02-03-2023 ಸಂಜೆ 5.00 pm ವರೆಗೆ	03-03-2023 ಬೆಳಿಗ್ಗೆ 11.00 ಘಂಟೆಗೆ	04-03-2023 ಬೆಳಿಗ್ಗೆ 11.00 ಘಂಟೆಗೆ
ಗಾಜಿನಮನೆ ಉದ್ಯಾನವನಕ್ಕೆ ಭದ್ರತಾ ಸೇವೆ ಒದಗಿಸುವುದು. ರೂ 17.1864 ಲಕ್ಷ, DDH/ZP/DVG/GLASS HOUSE SECURITY/2023-24	03-02-2023 ರಿಂದ 03-03-2023 ಸಂಜೆ 5.00 pm ವರೆಗೆ	04-03-2023 ಬೆಳಿಗ್ಗೆ 11.00 ಘಂಟೆಗೆ	06-03-2023 ಬೆಳಿಗ್ಗೆ 11.00 ಘಂಟೆಗೆ

ಸಹಿ/-ಸಹಾಯಕ ತೋಟಗಾರಿಕೆ ಅಧಿಕಾರಿ (ತಾಸ) ತೋಟಗಾರಿಕೆ ಉಪನಿರ್ದೇಶಕರ ಕಛೇರಿ, (ಜಿಲ್ಲಾ ಪಂಚಾಯತ್) ದಾವಣಗೆರೆ
ವಾಸಾಇ/ದಾವಣಗೆರೆ/867/ಕೆಎಸ್‌ಎಂಸಿಎ/2022-23

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕಾಮಗಾರಿ ವಿಭಾಗ, ಬೆಂಗಳೂರು
ಸಂ.: ಕರಾನಿ/ಕಾನಿಅ/ಬೆಂ/ಕಿಅ/734/2022-23 ದಿನಾಂಕ: 02.02.2023

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ, ಸಂ. 36 & 37 / 2022-23

ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ನೋಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿ ಕೆಲಸಗಳಿಗೆ ಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರುಗಳು ಇ-ಆಡಳಿತರವರೊಡನೆ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಲು ಕೋರಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್ ಪ್ರಕಟಣೆಯ ಸಂ.	ಟೆಂಡರ್‌ಗಿಟ್ಟ ಮೊತ್ತ ರೂ. ಲಕ್ಷಗಳಲ್ಲಿ	ಮುಂಗಡ ಠೇವಣೆ ರೂ.ಗಳಲ್ಲಿ	ಕಾಲಾವಧಿ ತಿಂಗಳಲ್ಲಿ (ಮಳೆಗಾಲ ಸೇರಿ)
1	ಮುಳುಬಾಗಿಲು ಬಸ್-ನಿಲ್ದಾಣದ ಅಭಿವೃದ್ಧಿ ಕಾಮಗಾರಿ ಕೆಲಸ (2ನೇ ಕರೆ)	36/2022-23	63.70	1,28,000.00	06
2	ಕೆ.ಜಿ.ಎಫ್. ಬಸ್- ನಿಲ್ದಾಣದ ಅಭಿವೃದ್ಧಿ ಕಾಮಗಾರಿ ಕೆಲಸ (2ನೇ ಹಂತದ ಕೆಲಸ) (2ನೇ ಕರೆ)	37/2022-23	63.70	1,28,000.00	06

ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://eproc.karnataka.gov.inಗೆ ಲಾಗ್‌ಆನ್ ಮಾಡಿ ಪಡೆದುಕೊಳ್ಳಬಹುದು.

ಸಹಿ/-,
ಕಾರ್ಯನಿರ್ವಾಹಕ ಅಭಿಯಂತರರು
ಕ.ರಾ.ರ.ಸಾ. ನಿಗಮ, ಕಾಮಗಾರಿ ವಿಭಾಗ, ಬೆಂಗಳೂರು
ವಾಸಾಸಂಇ/ವಾಪ್ರ/ಎಲ್‌ಸಿ/4463/2022-23

ಕರ್ನಾಟಕ ಗೃಹ ಮಂಡಳಿ
Karnataka Housing Board Building Communities
ಗೃಹ ಆಯುಕ್ತರ ಕಛೇರಿ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು-560 009.
ಸಂಖ್ಯೆ: ಕಗೃಮಂ/ಕಾ.ಪಾ.ಅ/ಹಂಚಿಕೆ/ಲಾಟರಿ/2022-23 ದಿನಾಂಕ: 02-02-2023

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಈ ಕೆಳಕಂಡ ಬಡಾವಣೆಗಳಲ್ಲಿ ಅಭಿವೃದ್ಧಿಪಡಿಸಿರುವ ನಿವೇಶನಗಳನ್ನು ಹಂಚಿಕೆ ಮಾಡುವ ಸಲುವಾಗಿ ದಿನಾಂಕ: 30-12-2022ರ ದಿನಪತ್ರಿಕೆಗಳಲ್ಲಿ ನೀಡಿರುವ ಪ್ರಕಟಣೆಗೆ ಅನುಗುಣವಾಗಿ ನಿಗಧಿತ ಆರಂಭಿಕ ಠೇವಣಿ ಮೊತ್ತದೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ಇ-ಲಾಟರಿ ಮುಖಾಂತರ ಹಂಚಿಕೆ ಮಾಡಲು ತಾತ್ಕಾಲಿಕ & ಅಂತಿಮ ಅರ್ಹ/ಅನರ್ಹ ಅರ್ಜಿದಾರರ ಪಟ್ಟಿಯನ್ನು ಪ್ರಕಟಿಸಿ ಈ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗದಿಪಡಿಸಲಾಗಿದೆ.

ಕ್ರ. ಸಂ.	ಬಡಾವಣೆ	ಅರ್ಹ & ಅನರ್ಹ ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆ ದಿನಾಂಕ	ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ	ಅರ್ಹ & ಅನರ್ಹ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ	ಲಾಟರಿ ದಿನಾಂಕ ಮತ್ತು ಸಮಯ
1.	ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲ್ಲೂಕು ಚಿಕ್ಕಬಾದವಾಡಗಿ	04-02-2023	09-02-2023	13-02-2023	15-02-2023 ಬೆಳಿಗ್ಗೆ 11.00 ಗಂಟೆಗೆ
2.	ದಾವಣಗೆರೆ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು, ಅನಂತನಹಳ್ಳಿ, ಮೆಳ್ಳೆಕಟ್ಟೆ	04-02-2023	09-02-2023	13-02-2023	15-02-2023 ಮಧ್ಯಾಹ್ನ 3.00 ಗಂಟೆಗೆ
3.	ಮೈಸೂರು ಜಿಲ್ಲೆ, ಇಲವಾಲ	04-02-2023	09-02-2023	13-02-2023	16-02-2023 ಬೆಳಿಗ್ಗೆ 11.00 ಗಂಟೆಗೆ
4.	ಬಳ್ಳಾರಿ ಜಿಲ್ಲೆ, ಎನ್.ಜಿ.ಓ. (ಮುಂಡ್ರಿಗಿ) ಹಲಕುಂದಿ	04-02-2023	09-02-2023	13-02-2023	16-02-2023 ಮಧ್ಯಾಹ್ನ 3.00 ಗಂಟೆಗೆ

ಇ-ಲಾಟರಿ ನಡೆಯುವ ಸ್ಥಳ:- ಮಂಡಳಿ ಸಭಾಂಗಣ, 4ನೇ ಮಹಡಿ, ಕಗೃಮಂ, ಕಾವೇರಿ ಭವನ, ಬೆಂಗಳೂರು.

ವಿಶೇಷ ಸೂಚನೆ:- ಅರ್ಜಿದಾರರ ತಾತ್ಕಾಲಿಕ ಮತ್ತು ಅಂತಿಮ ಅರ್ಹ/ಅನರ್ಹ ಅರ್ಜಿಗಳ ವಿವರಗಳನ್ನು ಮಂಡಳಿಯ ವೆಬ್‌ಸೈಟ್, ಕೇಂದ್ರ ಕಛೇರಿಯ ಹಾಗೂ ಆಯಾ ಜಿಲ್ಲಾ ಯೋಜನಾ ಕಛೇರಿಯ ಸೂಚನಾಫಲಕದಲ್ಲಿ ಮೇಲೆ ತಿಳಿಸಿರುವ ದಿನಾಂಕಗಳಂದು ಪ್ರಕಟಿಸಲಾಗುವುದು. ಅನರ್ಹ ಅರ್ಜಿದಾರರು ಆಕ್ಷೇಪಣೆ ಸಲ್ಲಿಸಲು ತಿಳಿಸಿರುವ ಕೊನೆಯ ದಿನಾಂಕದೊಳಗೆ ಮಾಹಿತಿ/ದಾಖಲೆಯನ್ನು ಸಂಬಂಧಿಸಿದ ಜಿಲ್ಲಾ ಯೋಜನಾ ಕಛೇರಿಗಳಲ್ಲಿ ಅಥವಾ ಕೇಂದ್ರ ಕಛೇರಿ, ಹಂಚಿಕೆ ಶಾಖೆ, ಕಾವೇರಿ ಭವನ ಬೆಂಗಳೂರು ಇಲ್ಲಿ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಸಲ್ಲಿಸಲಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಮಂಡಳಿಯ ವೆಬ್‌ಸೈಟ್ https://www.khb.karnataka.gov.in ಸಂಪರ್ಕಿಸುವುದು.

ಸಹಿ/- ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/RO4455/AAPL/2022-23

ಜಲ ಸಂಪನ್ಮೂಲ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರು, ಕೃಮೇಯೋ, ಪುನರವಸತಿ ವಿಭಾಗ ನಂ.3, ಜಮಖಂಡಿ, (ಕಡಕೋಳ ಪುನರ್ವಸತಿ ಕೇಂದ್ರ) ಇವರ ಕಾರ್ಯಾಲಯ.
ಸಂ:ಕೃಮೇಯೋ/ಪುವಿ-3/ಯೋ.ವಿ-3/ಟೆಂಡರ್/2022-23/1762 ದಿನಾಂಕ : 02/02/2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೋಕ್ಯೂರಮೆಂಟ್ ಮುಖಾಂತರ)

ಕಾರ್ಯನಿರ್ವಾಹಕ ಅಭಿಯಂತರರು, ಕೃಮೇಯೋ: ಪುನರ್ವಸತಿ ವಿಭಾಗ ನಂ-3, ಜಮಖಂಡಿ (ಕಡಕೋಳ ಪುನರ್ವಸತಿ ಕೇಂದ್ರ) ಇವರ ಕಛೇರಿ ವ್ಯಾಪ್ತಿಯಲ್ಲಿ ಬರುವ ಉಪ ವಿಭಾಗಳಾದ ಮುಧೋಳ, ಬೀಳಗಿ ಹಾಗೂ ಜಮಖಂಡಿ ತಾಲೂಕಿನ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮದಂತೆ ಯಾವುದೇ ರಾಜ್ಯದ ಲೋಕೋಪಯೋಗಿ ಇಲಾಖೆ ಹಾಗೂ ಕೃ.ಭಾ.ಜ.ನಿ.ನಿ.ಗಳಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ (KW-3ರನ್ವಯ) ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಶೇಕಡಾವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ. ಟೆಂಡರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ www.eproc.karnataka.govt.in ದಿನಾಂಕ:03/02/2023 ರಿಂದ **ದಿನಾಂಕ:17/02/2023 ರವರೆಗೆ ಡೌನ್‌ಲೋಡ ಮಾಡಿಕೊಂಡು ಸಲ್ಲಿಸಬಹುದಾಗಿದೆ.** ಈ ಕಾಮಗಾರಿಯ ನಿಬಂಧನೆ ಹಾಗೂ ವಿವರಗಳನ್ನು ಇ-ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಹಾಗೂ ಈ ಕಚೇರಿಯು ಕೆಲಸದ ವೇಳೆಯುಲ್ಲಿ ಪಡೆಯಬಹುದಾಗಿದೆ. **(ಈ ಕಛೇರಿ ಮೋ ಸಂ: 9620892102, 9108335489)**

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು,
ಕೃಮೇಯೋ, ಪುನರವಸತಿ ವಿಭಾಗ ನಂ-3,
ವಾ.ಸಾ.ಇ/ಬಾಗಲಕೋಟ/838/2022-23/ದೇಶಪಾಂಡೆಪಬ್ಲಿಸಿಟಿ ಕಡಕೋಳ ಪುನರ್ವಸತಿ ಕೇಂದ್ರ, ಜಮಖಂಡಿ,

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ರಸ್ತೆ ಮೂಲ ಸೌಕರ್ಯ - ಟಿಇಸಿ ವಿಭಾಗ, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು - 560002.
ಸಂಖ್ಯೆ: ಕಾಅ/ರಮೂಸೌ/ಟಿಇಸಿ/ಟೆಂಡರ್/08/2022-23 ದಿನಾಂಕ: 03-02-2023

ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ)-(ಅಲ್ಪಾವಧಿ) - (3ನೇ ಕರೆ)
(ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ರಸ್ತೆ ಮೂಲ ಸೌಕರ್ಯ - ಟಿಇಸಿ ವಿಭಾಗ), ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗೆ ಸುಪ್ರಸಿದ್ಧ ಸಂಸ್ಥೆ / ಏಜೆನ್ಸಿಗಳಿಂದ ಸ್ಪರ್ಧಾತ್ಮಕ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಸ್ಕೈ ವಾಕ್‌ಗಳ ಸಂಖ್ಯೆ	ಇ.ಎಂ.ಡಿ (ರೂ. ಲಕ್ಷಗಳಲ್ಲಿ)
1	"ಕೆ.ಆರ್. ಪುರಂ ಜಂಕ್ಷನ್‌ನಲ್ಲಿನ ಸಾಧ್ಯತೆಯಿರುವ ಮತ್ತು ಅನುಮೋದಿತ ಸ್ಥಳಗಳಲ್ಲಿ ವಾಣಿಜ್ಯ ಜಾಹೀರಾತು ಹಕ್ಕುಗಳ ಅಡಿಯಲ್ಲಿ ಅವಧಿ ಕ್ರಿಯಾತ್ಮಕ ಆಧಾರದ ಮೇರೆ ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ವರ್ಗಾವಣೆ (ಡಿಬಿಎಫ್‌ಓಟಿ) ಮೇರೆ ಪಿಪಿಪಿ ಮಾದರಿ ಅನ್ವಯ ಸ್ಕೈವಾಕ್‌ಗಳ ನಿರ್ಮಾಣ ಮಾಡುವಿಕೆ". (ಎಸ್.ಸಿ ವರ್ಗಕ್ಕೆ ಮೀಸಲಿರಿಸಲಾಗಿದೆ)	1	2.50

ಟೆಂಡರ್ ವೇಳಾಪಟ್ಟಿ: 1) ಪ್ರಸ್ತಾವನೆಗೆ ಮನವಿ (ಆರ್‌ಎಫ್‌ಪಿ) ಡಾಕ್ಯೂಮೆಂಟ್‌ನ್ನು **ದಿನಾಂಕ: 03-02-2023ರ 16.00 ಗಂಟೆ ನಂತರ** ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **http://eproc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ದಸ್ತಾವೇಜನ್ನು ಸಲ್ಲಿಸುವ ಕೊನೆಯ ದಿನಾಂಕ: **09-02-2023ರಂದು 16.00 ಗಂಟೆವರೆಗೆ.** 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **10-02-2023ರಂದು 16.30 ಗಂಟೆಯ ನಂತರ.** 4) ಸಕ್ಷಮ ಪ್ರಾಧಿಕಾರಿಯಿಂದ **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ರಮೂಸೌ-ಟಿಇಸಿ ವಿಭಾಗ, ಬಿಬಿಎಂಪಿ.

ಪಂಚಮಸಾಲಿ ಮೀಸಲು: ಹೈಕೋರ್ಟ್‌ಗೆ ವರದಿ ಸಲ್ಲಿಕೆ

ಬೆಂಗಳೂರು: ಲಿಂಗಾಯತ ಪಂಚಮಸಾಲಿ ಸಮುದಾಯವನ್ನು ಪ್ರವರ್ಗ-2ಎಗೆ ಸೇರ್ಪಡೆ ಮಾಡುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಇತ್ತೀಚೆಗೆ ಸಲ್ಲಿಸಿರುವ ಮಧ್ಯಂತರ ವರದಿಯನ್ನು ರಾಜ್ಯ ಸರ್ಕಾರ ಮುಚ್ಚಿದ ಲಕೋಟೆಯಲ್ಲಿ ಹೈಕೋರ್ಟ್‌ಗೆ ಸಲ್ಲಿಸಿದೆ.

ಈ ಸಂಬಂಧ ಬೆಂಗಳೂರಿನ ಜ್ಞಾನ ಭಾರತಿಯ ಮೃತ್ಯುಂಜಯ ನಗರದ ನಿವಾಸಿ ಡಿ.ಜಿ.ರಾಘವೇಂದ್ರ ಬಿನ್ ಸೂರ್ಯ ದೇವಾಡಿಗ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ, ಮಧ್ಯಂತರ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಪೀಠಕ್ಕೆ ಸಲ್ಲಿಸಿದರು. ಅಂತೆಯೇ, ಆಕ್ಷೇಪಣೆ ಸಲ್ಲಿಸಲು ಎರಡು ವಾರಗಳ ಕಾಲಾವಕಾಶ ನೀಡಬೇಕು ಎಂದು ಮನವಿ ಮಾಡಿದರು.

ಅರ್ಜಿದಾರರ ಪರ ವಕೀಲ ಎಚ್.ವಿ. ಮಂಜುನಾಥ್ ವರದಿಯ ಪ್ರತಿ ತಮಗೂ ನೀಡುವಂತೆ ಪೀಠಕ್ಕೆ ಮನವಿ ಮಾಡಿದರು. ಆದರೆ, ಪೀಠ, 'ಇದು ಮುಚ್ಚಿದ ಲಕೋಟೆಯಲ್ಲಿದೆ. ಮೊದಲು ನಾವು ಪರಿಶೀಲಿಸುತ್ತೇವೆ, ಆಮೇಲೆ ನೋಡೋಣ' ಎಂದು ಪ್ರತಿಕ್ರಿಯಿಸಿತು.

ಅಡ್ವೊಕೇಟ್ ಜನರಲ್ ಮನವಿಯನ್ನು ಪರಿಗಣಿಸಿದ ನ್ಯಾಯಪೀಠ, '2022ರ ಡಿ.27ರಂದು ನ್ಯಾಯಾಲಯ ನೀಡಿದ್ದ ನಿರ್ದೇಶನದಂತೆ ಮಧ್ಯಂತರ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಲಾಗಿದೆ' ಎಂದು ದಾಖಲಿಸಿಕೊಂಡು, ಎರಡು ವಾರಗಳ ಕಾಲಾವಕಾಶ ನೀಡಿ ವಿಚಾರಣೆ ಮುಂದೂಡಿತು. ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಯಥಾಸ್ಥಿತಿ ಕಾಯ್ದುಕೊಂಡು ಹೋಗುವಂತೆ ಈ ಹಿಂದೆ ಇದೇ ವಿಭಾಗೀಯ ನ್ಯಾಯಪೀಠ ಆದೇಶಿಸಿದೆ.

ರಾಜ್ಯದ ಹಲವೆಡೆ ಎರಡು ದಿನ ಮೋಡ ಕವಿದ ವಾತಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಭಾಗಗಳಲ್ಲಿ ಶನಿವಾರ ಹಾಗೂ ಭಾನುವಾರ ಮೋಡ ಕವಿದ ಹಾಗೂ ತೀವ್ರ ಚಳಿಯ ವಾತಾವರಣ ಇರುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ದಕ್ಷಿಣ ಒಳನಾಡಿನಲ್ಲಿ ಬಲವಾದ ಮೇಲ್ಮೈ ಸುಳಿಗಾಳಿ ಬೀಸಲಿದೆ. ಬೆಂಗಳೂರಿನಲ್ಲಿ ಗರಿಷ್ಠ 27 ಹಾಗೂ ಕನಿಷ್ಠ 17 ಡಿಗ್ರಿ ಸೆಲ್ಸಿಯಸ್ ದಾಖಲಾಗುವ ಸಾಧ್ಯತೆಯಿದೆ.

ಉತ್ತರ ಒಳನಾಡಿನ ಕೆಲವು ಸ್ಥಳಗಳಲ್ಲಿ ಉಷ್ಣಾಂಶವು ಸಾಮಾನ್ಯಕ್ಕಿಂತ 3ರಿಂದ 4 ಡಿಗ್ರಿ ಸೆಲ್ಸಿಯಸ್ ಕಡಿಮೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ ಶುಕ್ರವಾರ ಕನಿಷ್ಠ ತಾಪಮಾನ 11 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ,
ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು–560052.

ಕವಶಿಸಸ/ಸಕಾಅ–4/ಟೆಂಡರ್–26/2022–23 ದಿನಾಂಕ: 02.02.2023

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ 1. ವಿಜಯನಗರ ಜಿಲ್ಲೆ, ಮುದ್ದೇಬಿಹಾಳ ತಾಲ್ಲೂಕು, ನಲಾವತ್ತವಾಡ (ಪ.ಜಾತಿ) ಮೊರಾರ್ಜಿ ದೇಸಾಯಿ ವಸತಿ ಶಾಲಾ ಸಂಕೀರ್ಣದಲ್ಲಿ 50 ಕೆ.ಎಲ್.ಡಿ ತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಾಣ ಕಾಮಗಾರಿ (ಟೆಂಡರ್ ಇಂಡೆಂಟ್ ಸಂಖ್ಯೆ. 3087) ಹಾಗೂ 2. ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಕನ್ನನಾಯಕಹಳ್ಳಿ (ಪ.ಪಂ) ಮೊರಾರ್ಜಿ ದೇಸಾಯಿ ವಸತಿ ಶಾಲಾ ಸಂಕೀರ್ಣದಲ್ಲಿ ದುರಸ್ಥಿ ಕಾಮಗಾರಿ (ಟೆಂಡರ್ ಇಂಡೆಂಟ್ ಸಂಖ್ಯೆ. 3074/Call-2) ಯನ್ನು ಇ–ಪೋರ್ಟಲ್ ಮುಖಾಂತರ ದಿನಾಂಕ: 02.02.2023 ರಂದು ಟೆಂಡರ್‌ನ್ನು ಕರೆಯಲಾಗಿದ್ದು, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 16.02.2023 ರಂದು ನಿಗಧಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ http://eproc.karnataka.gov.in ರಲ್ಲಿ ನೋಡಬಹುದಾಗಿದೆ.

ಸೂಚನೆ: ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೂಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು
ವಾ.ಸಾ.ಸಂ.ಇ/ವಾಪ್ರ/4467/ಆಕಾರ್/22–23 ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ,
ಕೃಭಾಜನಿನಿ, ಅರಣ್ಯ ವಿಭಾಗ, ಆಲಮಟ್ಟಿ.ದೂರವಾಣಿ: 08426–281410.
ಸಂ:ಕೃಭಾಜನಿನಿ/ಅರಣ್ಯ/ಡಿಟಿಪಿ/ಎಲ್.ಎಸ್/ಇ–ಟೆಂಡರ್/2022–23/1060
ದಿನಾಂಕ: 31.01.2023

ಅಲ್ಪಾವದಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಈ ಕೆಳಗೆ ನಮೂದಿಸಿದ ಎಲ್.ಎಸ್ ಯೋಜನೆಯ 5 ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಡಿ ಅರ್ಹ ಗುತ್ತಿಗೆದಾರರಿಂದ ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.eproc.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಳ್ಳಬಹುದು. ಇಪ್ರೋಕ್ಯೂರ್‌ಮೆಂಟ್ ನಿಗದಿಪಡಿಸಿದಂತೆ

ಕ್ರ.ಸಂ	ವಿವರ	4ನೇ & 5ನೇ ಕರೆ ಟೆಂಡರ್ ದಿನಾಂಕ
1)	ಟೆಂಡರ್ ಪ್ರಕಟಿಸುವ ದಿನಾಂಕ	01.02.2023 ಸಂಜೆ 5.00 ಘಂಟೆಗೆ
2)	ಪ್ರೀ ಬಿಡ್ ಮೀಟಿಂಗ್	09.02.2023 ಬೆಳಿಗ್ಗೆ 11.00 ಘಂಟೆಗೆ
3)	ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ	15.02.2023 ಸಂಜೆ 5.00 ಘಂಟೆಗೆ
4)	ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ	17.02.2023 ಬೆಳಿಗ್ಗೆ 11.00 ಘಂಟೆಗೆ
5)	ಆರ್ಥಿಕ ಬಿಡ್ ತೆರೆಯುವ ದಿನಾಂಕ	24.02.2023 ಬೆಳಿಗ್ಗೆ 11.00 ಘಂಟೆಗೆ

ಷರಾ: ದಿನಾಂಕ 09.02.2023 ರಂದು ಬೆಳಿಗ್ಗೆ 11.00 ಗಂಟೆಗೆ ಪ್ರಿ ಬಿಡ್ ಮೀಟಿಂಗ್‌ನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕೃಭಾಜನಿನಿ ಅರಣ್ಯ ವಿಭಾಗ, ಆಲಮಟ್ಟಿ ರವರ ಕಚೇರಿಯಲ್ಲಿ ನಿಗದಿಪಡಿಸಲಾಗಿದೆ. ಸದರಿ ಟೆಂಡರಿಗೆ ಸಂಭಂಧಿಸಿದಂತೆ ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ಲಿಖಿತ ರೂಪದಲ್ಲಿ ದಿನಾಂಕ: 08.02.2023 ರಂದು ಸಾಯಂಕಾಲ 5.00 ಘಂಟೆಯವರೆಗೆ ಈ ಕೆಳಗೆ ಸಹಿ ಮಾಡಿದವರ ಕಚೇರಿಗೆ ಸಲ್ಲಿಸಬೇಕು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಕೃಭಾಜನಿನಿ,ಅರಣ್ಯ ವಿಭಾಗ, ಆಲಮಟ್ಟಿ
ವಾಸಾಸಂಇ/ವಿಜಯಪುರ/821/ಕೆಎಸ್‌ಎಂಸಿಎ/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ರಸ್ತೆ ಮೂಲ ಸೌಕರ್ಯ – ಸಂಚಾರ,
ಇಂಜಿನಿಯರಿಂಗ್ ಸೆಲ್, ನ.ರಾ.ಚೌಕ, ಬೆಂಗಳೂರು – 560002.

ಸಂಖ್ಯೆ: ಕಾಪಾಅ/ರಮೂ–ಟೆಕ್/ಟೆಂಡರ್/19/2022–2023 ದಿನಾಂಕ: 03.02.2023

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಅಲ್ಪಾವಧಿ ಟೆಂಡರ್ ಪ್ರಕಟಣೆ) (2ನೇ ಕರೆ) (ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲ ಸೌಕರ್ಯ – ಟೆಕ್ ವಿಭಾಗ, ಇವರು ಮುಖ್ಯ ಆಯುಕ್ತರು, ಬಿಬಿಎಂಪಿ ಇವರ ಪರವಾಗಿ ಕೆಳಕಂಡ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್‌ದಾರರು ಕೆಳಗಿನ ಕೋಷ್ಟಕದಲ್ಲಿರುವ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬೇಕು. ಗುತ್ತಿಗೆಯನ್ನು ಪಡೆಯಲು ಅರ್ಹರಾಗಲು ಟೆಂಡರ್‌ದಾರರಿಗೆ ಕಲಂ 3 ರಲ್ಲಿ ನಿಗಧಿ ಪಡಿಸಲಾದ ಕನಿಷ್ಠ ಅರ್ಹತೆಯನ್ನು ಗಮನಿಸಬೇಕಾಗಿ ಸಲಹೆ ನೀಡಲಾಗಿದೆ.

ಕ್ರಮ ಸಂಖ್ಯೆ	ಕೆಲಸದ ಹೆಸರು	ಕೆಲಸದ ಅಂದಾಜು ಮೌಲ್ಯ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಲಕ್ಷಗಳಲ್ಲಿ)
1.	ದಕ್ಷಿಣ ವಲಯದಲ್ಲಿ ಸವೆದಿರುವ ಮೇಲ್ಮೈಗೆ ಮೈಕ್ರೋ ಸರ್ಫೇಸಿಂಗ್ ಒದಗಿಸುವುದು	318.90	4.8

ಪೂರ್ಣಗೊಳಿಸಲು ಕಾಲಾವಧಿ : 3 ತಿಂಗಳು.

ಕಾರ್ಯ ಸೂಚಿ : (1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳ ಲಭ್ಯತೆ : 03.02.2023 ರಿಂದ. (2) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 09.02.2023 ರ 16.00 ಗಂಟೆಯವರೆಗೆ. (3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 10.02.2023 ರಂದು 16.30 ಗಂಟೆಗೆ. (4) ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ : ಟೆಂಡರ್‌ದಾರರಿಗೆ ನಂತರ ತಿಳಿಸಲಾಗುವುದು

ಸಹಿ/– ಕಾರ್ಯಪಾಲಕ ಅಭಿಯಂತರರು,
(ರಸ್ತೆ ಮೂಲ ಸೌಕರ್ಯ)

ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್

ನೊಂದಾಯಿತ ಕಛೇರಿ: 1ನೇ ಮಹಡಿ, ಪಾಲಿಕೆ ಕಟ್ಟಡ ಬ್ಲಾಕ್,
ಎಸ್.ಎನ್ ಮಾರ್ಕೆಟ್ ನೆಹರು ರಸ್ತೆ, ಶಿವಮೊಗ್ಗ–577201
CIN: U74999KA2017PLC100268 GSTIN:29AAYCS380B1Z0
PAN:AAYCS3808B, TAN: BLRS63059D
Web: https://shivamoggasmartcity.co.in,
Email: shimogasmartcity@gmail.com Ph: No:08182-279951

No: SSCL/TECH/DDB-P2/2022-23 Date: 01.02.2023

ರಿಕ್ವೆಸ್ಟ್ ಫಾರ್ ಪ್ರಪೋಸಲ್

ಶಿವಮೊಗ್ಗ ಸ್ಮಾರ್ಟ್ ಸಿಟಿ ಕಛೇರಿಯಿಂದ ಶಿವಮೊಗ್ಗದಲ್ಲಿ ಡಿಜಿಟಲ್ ಡಿಸ್‌ಪ್ಲೇ ಬೋರ್ಡ್‌ನ ಸಂಗ್ರಹಣೆ, ಸ್ಥಾಪನೆ ಮತ್ತು ಕಾರ್ಯಾರಂಭ (ಹಂತ–2) – ಕೆಲಸಕ್ಕಾಗಿ ಬಿಡ್ (ರಿಕ್ವೆಸ್ಟ್ ಫಾರ್ ಪ್ರಪೋಸಲ್) ನ್ನು ಆಹ್ವಾನಿಸಲಾಗಿರುತ್ತದೆ. ಆಯ್ಕೆಯಾದ ಬಿಡ್ಡುದಾರರು ಅಗತ್ಯವಾದ ನಿರ್ವಹಣ, ಹಾರ್ಡ್‌ವೇರ್, ನೆಟ್‌ವರ್ಕ್ ಮತ್ತು ಇತರ ಉಪಕರಣಗಳನ್ನು 2.5 ತಿಂಗಳಲ್ಲಿ ಒದಗಿಸಿ ಅಳವಡಿಸಿ 3 ವರ್ಷಗಳವರೆಗೆ ನಿರ್ವಹಣೆ ಮಾಡಿಕೊಡಬೇಕಾಗಿರುತ್ತದೆ. ಆಸಕ್ತ ಬಿಡ್ಡುದಾರರು ಇ–ಪೋರ್ಟಲ್ (https://eproc.karnataka.gov.in) ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಅರ್ಜಿದಾರರ/ಬಿಡ್ಡುದಾರರ ಅರ್ಹತೆ: ಆರ್‌ಎಫ್‌ಪಿ ದಾಖಲೆಯ ಪ್ರಕಾರ

1) ಪ್ರಸ್ತಾವನೆಗಾಗಿ ವಿನಂತಿಯು ಎಲ್ಲಾ ಹೆಸರಾಂತ ಮತ್ತು ಅರ್ಹ ಬಿಡ್ಡರ್‌ಗಳಿಗೆ ಮುಕ್ತವಾಗಿದೆ 2. ಬಿಡ್ಡುದಾರರ ಆಯ್ಕೆಯ ವಿಧಾನವು 2 ಹಂತದ ಮೌಲ್ಯಮಾಪನ ವ್ಯವಸ್ಥೆಯಾಗಿದ್ದು, ಅವುಗಳೆಂದರೆ ತಾಂತ್ರಿಕ ಅರ್ಹತೆ ಮತ್ತು ಆರ್ಥಿಕ ಅರ್ಹತೆ. ಈ ಆರ್‌ಎಫ್‌ಪಿಯಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವ ಬಿಡ್‌ದಾರರು ಆರ್‌ಎಫ್‌ಪಿಯಲ್ಲಿ ಉಲ್ಲೇಖಿಸಿರುವ ಆಯ್ಕೆ ಮಾನದಂಡಗಳನ್ನು ಪೂರೈಸಬೇಕು. 3) ಆಸಕ್ತ ಬಿಡ್‌ದಾರರು ತಮ್ಮ ಆರ್‌ಎಫ್‌ಪಿ ಮತ್ತು ಆರ್‌ಎಸ್‌ನ ಅಗತ್ಯ ಇಎಮ್‌ಡಿಯಾದ ರೂ 2,00,000/– ಅನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದು.

ಘಟನೆಗಳ ಕ್ಯಾಲೆಂಡರ್ : 1)ಖಾಲಿ ಟೆಂಡರ್ ದಾಖಲೆಗಳನ್ನು ದಿನಾಂಕ: 02.02.2002 ಸಂಜೆ 5.30 ರಿಂದ ಡೌನ್‌ಲೋಡ್ ಮಾಡಬಹುದು: 2) ಅಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07.02.2023 ಸಂಜೆ 5.30 ಗಂಟೆವರೆಗೆ 3) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 17.02.2023 ಸಂಜೆ 5.30 ರವರೆಗೆ 4) ಇ–ಪ್ರಕ್ಯೂರ್‌ಮೆಂಟ್ ಮೂಲಕ ತಾಂತ್ರಿಕ ಬಿಡ್ ತೆರೆಯುವ ದಿನಾಂಕ 20.02.2023 ಸಂಜೆ 5.30 ವರೆಗೆ 5) ತಾಂತ್ರಿಕ ಬಿಡ್ ಅನುಮೋದನೆಯ ನಂತರ ಆರ್ಥಿಕ ಬಿಡ್ ತೆರೆಯಲಾಗುತ್ತದೆ. ವಿವರಗಳು, ನೋಂದಣಿ ಮತ್ತು ಇ–ಪಾವತಿಗಾಗಿ GOK ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ಗೆ ಭೇಟಿ ನೀಡಿ, ಅಥವಾ ಒಪ್ಪಂದದ ಇ–ಪ್ರೊಕ್ಯೂರ್‌ಮೆಂಟ್ ಹೆಲ್ಪ್‌ಡೆಸ್ಕ್ 080– 25501216 / 080–25501227 ಅನ್ನು ಸಂಪರ್ಕಿಸಿ, ಹೆಚ್ಚಿನ ಮಾಹಿತಿಗಾಗಿ ಕಛೇರಿ ಸಮಯದಲ್ಲಿ ಸಂಪರ್ಕಿಸಿ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು,
ವಾಸಾಸಂಇ/ಶಿ/ನಂ.50/ಝಂಕಾರ್/2022–23 ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ.

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ರಾಮನಗರ ವಿಭಾಗ, ರಾಮನಗರ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:13/2022–23, ದಿನಾಂಕ: 03.02.2023

ರಾಮನಗರ ವಿಭಾಗ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಗೆ ಸಂಬಂಧಿಸಿದಂತೆ, ಅಲ್ಪಾವಧಿ ಟೆಂಡರ್ ಪ್ರಕಟಣೆ ಹೊರಡಿಸಲಾಗಿದ್ದು, ವಿವರಗಳು ಈ ಕೆಳಗಿನಂತಿವೆ.

1. ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ಡಾಕ್ಯೂಮೆಂಟ್ ಅನ್ನು ದಿನಾಂಕ: 04.02.2023 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.
2. ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ: 20.02.2023 ವೇಳೆ 16.00 ಗಂಟೆಯೊಳಗೆ ಸಲ್ಲಿಸುವುದು.
3. ಟೆಂಡರ್‌ಗಳನ್ನು ತೆರೆಯುವ ದಿನಾಂಕ: 21.02.2023 ವೇಳೆ 16.00 ಗಂಟೆ. (ಸಾಧ್ಯವಾದಲ್ಲಿ)

ಕಾಮಗಾರಿಯ ಹೆಸರು: ಸರ್ಕಾರಿ ಕಾಲೇಜು ಬಾಲಕರ ವಿದ್ಯಾರ್ಥಿ ನಿಲಯ, ಕನಕಪುರ ಟೌನ್ ಮತ್ತು ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ರಾಮನಗರ ಟೌನ್. ಅಂದಾಜು ಮೊತ್ತ ರೂ. 1235.00 ಲಕ್ಷಗಳು.

ಹೆಚ್ಚಿನ ವಿವರಗಳಿಗೆ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

Note: Here after any changes with reference to this notification will be Notified in E-portal Only.

ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಇ, ರಾಮನಗರ ವಿಭಾಗ, ರಾಮನಗರ

(ವಾಣಿಜ್ಯ ತೆರಿಗೆಗಳ ಇಲಾಖೆ)

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ)
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–01,
3ನೇ ಮಹಡಿ, ಟಿಟಿಎಂಸಿ, ಬಿಎಂಟಿಸಿ ಕಟ್ಟಡ, ಯಶವಂತಪುರ,
ಬೆಂಗಳೂರು–560022, ದೂ.ಸಂ: 080–23570382
ಇ–ಮೇಲ್: jcctdgst01.bng@ka.gov.in

ಸಂ:ವಾತೆಜಂಆ(ಆ)/ವಿಸ&ಸೇತೆಕ–01/ಎಸ್‌ಟಿಎನ್/ಸಿಆರ್–17/2022–23 ದಿ:23.01.2023

ಟೆಂಡರ್ ಅಧಿಸೂಚನೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–1, ಯಶವಂತಪುರ, ಬೆಂಗಳೂರು ಇವರ ವಿಭಾಗದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಲು 94 (ತೊಂಬತ್ತನಾಲ್ಕು ಮಾತ್ರ) ದತ್ತಾಂಶ ನಮೂದಕರ ಸೇವೆಯನ್ನು ಒದಗಿಸಲು 1999 ರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಪ್ರತಿಷ್ಠಿತ ಮಾನವ ಸಂಪನ್ಮೂಲ ಸಂಸ್ಥೆಯಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗೆ ಸಂಬಂಧಿಸಿದ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **21.02.2023**. ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನ್ನು ಸಂಪರ್ಕಿಸಿ ದೂರವಾಣಿ ಸಂಖ್ಯೆ: 080–23470479 **https://www. eproc.karnataka.gov.in, http://www.ctax.kar.nic.in**

ಸಹಿ/– ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ರಸ್ತೆ ಮೂಲಭೂತಸೌಕರ್ಯ
– ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ನರಸಿಂಹರಾಜ ಚೌಕ,
ಬೆಂಗಳೂರು – 560002.

ಸಂಖ್ಯೆ: ಕಾಪಾಅ/ರಾಮೂ–ಟಿಇಸಿ/ಟೆಂಡರ್/18/2022–23 ದಿನಾಂಕ: 03.02.2023

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (2ನೇ ಕರೆ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಾಗಿ ಅರ್ಹ ಟೆಂಡರುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (₹ ಲಕ್ಷಗಳಲ್ಲಿ)	ಇಎಂಡಿ (₹ಲಕ್ಷಗಳಲ್ಲಿ)
1	ಬೃ.ಬೆಂ.ಮ.ಪಾಲಿಕೆ ವ್ಯಾಪ್ತಿಯಲ್ಲಿ ಬಸ್ ಬೇಗಳನ್ನು ನಿರ್ಮಾಣ ಮಾಡುವುದು (2ನೇ ಕರೆ)	401.56	6.00
2	ಬೃ.ಬೆಂ.ಮ.ಪಾಲಿಕೆ ವ್ಯಾಪ್ತಿಯಲ್ಲಿ ಬಸ್ ಬೇಗಳನ್ನು ನಿರ್ಮಾಣ ಮಾಡುವುದು (2ನೇ ಕರೆ)	353.09	5.10

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ **03.02.2023**ರಿಂದ ಲಭ್ಯವಿರುತ್ತವೆ. (2) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ **09.02.2023**ರ ಸಂಜೆ **4.00** ಗಂಟೆಯವರೆಗೆ. (3) ತಾಂತ್ರಿಕ ಬಿಡ್ಡನ್ನು ದಿನಾಂಕ **10.02.2023**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (4) ಆರ್ಥಿಕ ಬಿಡ್ ತೆರೆಯುವುದನ್ನು **ಟೆಂಡರುದಾರರಿಗೆ ತಿಳಿಸಲಾಗುವುದು**. (5) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ **www.bbmp.gov.in**. ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, (ರಮೂಸೌ–ಟಿಇಸಿ)

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ,
ಬೆಂಗಳೂರು ವಿಭಾಗ, 2ನೇ ಮಹಡಿ, ಲೋ. ಇ. ಪೂರಕ ಕಟ್ಟಡ, ಕೆ. ಆರ್. ವೃತ್ತ,
ಬೆಂಗಳೂರು - 560 001. ದೂ.: 080-22133370 ಫ್ಯಾಕ್ಸ್: 080-22133365
ಇ-ಮೇಲ್: eepwdbngdn@yahoo.com Web: http/www.kpwd.gov.in

ಟೆಂಡರ್ ಪ್ರಕಟಣೆ ಸಂಖ್ಯೆ : 51/2022–23 ದಿನಾಂಕ : 02–02–2023

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ** ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ನಂ. 2 ಉತ್ತರ ಉಪವಿಭಾಗಕ್ಕೆ ಸಂಬಂಧಿಸಿದಂತೆ 02 ಸಂಖ್ಯೆಯ (ರೂ. 499.00 ಲಕ್ಷಗಳು) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

ಕಾಮಗಾರಿಗಳ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

(1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸರ್ಕಾರದ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗಧಿಪಡಿಸಿರುವ **ದಿನಾಂಕ : 02–02–2023** ರಿಂದ. (2) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ **ದಿನಾಂಕ : 09–02–2023 ಸಂಜೆ 4.00 ಗಂಟೆಯವರೆಗೆ**. (3) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯುವ **ದಿನಾಂಕ : 10–02–2023 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ವಾಸಾಇ/ಬೆಂ.ನ./4464/ಮಣಿಪಾಲ್/2022–23 ಲೋ.ಇ. ಬೆಂಗಳೂರು ವಿಭಾಗ, ಬೆಂಗಳೂರು.

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

ಕರಾಸಕೈಅನಿನಿ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೋಂದಣಿ ಸಂಖ್ಯೆ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–560 010.
ಫೋನ್: 080–2340 7011 ಇಂದ 25, ಫ್ಯಾಕ್ಸ್: 91–2314 3566/2338 9070 ತಂತಿ: ಮೈಸ್ಮಾಲ್ ಕಾರ್ಪ್
ಇ–ಮೇಲ್: kssidcho@karnataka.gov.in ವೆಬ್‌ಸೈಟ್: www.kssidc.co.in

ಸಂಖ್ಯೆ: ಇಪಿ–72:ಇಎನ್‌ಜಿ:ಅಅ:ಪೀಣ್ಯ:1ನೇಹಂತ:ಮೂಭೂಸೌ:2022–23 ದಿನಾಂಕ: 02–02–2023

ಟೆಂಡರ್ ಪ್ರಕಟಣೆ
(ದ್ವಿ ಟೆಂಡರ್ ದಾಖಲೆ ಪದ್ಧತಿ) (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಅಧೀಕ್ಷಕ ಅಭಿಯಂತರರು, ವ್ಯವಸ್ಥಾಪಕ ನಿರ್ದೇಶಕರವರ ಪರವಾಗಿ ಟೆಂಡರ್ ಪ್ರಕಟಣೆ ನೀಡಿದ್ದು ಟೆಂಡರ್ ಪ್ರಕಟಣೆ ಸಂಖ್ಯೆ:ಇಪಿ–72:ಇಎನ್‌ಜಿ:ಅಅ:ಪೀಣ್ಯ:1ನೇಹಂತ:ಮೂಭೂಸೌ:2022–23 ದಿ:02–02–2023 ರ ಪ್ರಕಾರ ಸೂಚಿಸಿರುವ ಪೀಣ್ಯ 1ನೇ ಹಂತದಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ಕರ್ನಾಟಕ PWD, CPWD, MES, NHAI, ರೈಲ್ವೇ ಮತ್ತು ರಾಷ್ಟ್ರೀಯ ಹೆದ್ದಾರಿ ಸಂಸ್ಥೆಗಳಲ್ಲಿ ನೊಂದಾಯಿಸಲ್ಪಟ್ಟ ಪರವಾನಗಿಯುಳ್ಳ, ಸೂಚಿಸಿದ ಆರ್ಥಿಕ ಸಾಮರ್ಥ್ಯ ಹಾಗೂ ತಾಂತ್ರಿಕ ಮಾನವಸಂಪನ್ಮೂಲವುಳ್ಳ ಮತ್ತು ಕಾಮಗಾರಿ ಕೆಲಸಗಳ ಅನುಭವವಿರುವ ಅರ್ಹ ಗುತ್ತಿಗೆದಾರರು (ಸಿವಿಲ್) ಇವರಿಂದ ಐಟಂವಾರು ಟೆಂಡರನ್ನು ಇ–ಪ್ರೊಕ್ಯರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ ಟೆಂಡರ್ ದಾಖಲೆ ಪದ್ದತಿ (TWO TENDER DOCUMENT SYSTEM) ಪ್ರಕಾರ ಟೆಂಡರ್ ಕರೆಯಲಾಗಿದೆ.

ಆಸಕ್ತಿಯುಳ್ಳ ಅರ್ಹತೆ ಹೊಂದಿರುವ ಗುತ್ತಿಗೆದಾರರು ವಿವರವಾದ ಟೆಂಡರ್ ಪ್ರಕಟಣೆಯನ್ನು, ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://www.eproc.karnataka.gov.in (ವಾಣಿಜ್ಯ ಮತ್ತು ಕೈಗಾರಿಕೆ) ಮೂಲಕ ದಿನಾಂಕ:04–02–2023 ರ ಸಂಜೆ 4.00 ಗಂಟೆ ನಂತರ ಪಡೆದುಕೊಳ್ಳಬಹುದು.

ಭರ್ತಿಮಾಡಲಾದ (Online submission) ಟೆಂಡರ್‌ನೊಡನೆ ಟೆಂಡರ್‌ಗೆ ಸಂಬಂಧಿಸಿದ ಶುಲ್ಕ ಮತ್ತು ಇ.ಎಂ.ಡಿ ಮೊತ್ತವನ್ನು ಆನ್‌ಲೈನ್ ಗೇಟ್‌ವೇ ಪೋರ್ಟಲ್ ವೆಬ್‌ಸೈಟ್ https://www.eproc.karnataka.gov.in (Commerce and Industries) ಇ–ಪೋರ್ಟಲ್ ಮೂಲಕ ದಿನಾಂಕ: 24–02–2023 ರ ಸಂಜೆ 4:00 ಗಂಟೆಯೊಳಗೆ ಸಲ್ಲಿಸಲು ಕೋರಿದೆ.

ಹೆಚ್ಚಿನ ಮಾಹಿತಿಯನ್ನು ಈ ಕೆಳಸಹಿದಾರ ಅಧಿಕಾರಿಯವರ ಕಛೇರಿಯಲ್ಲಿ ಅಥವಾ ಇ–ಪ್ರೊಕ್ಯುರ್‌ಮೆಂಟ್ ವೆಬ್‌ಸೈಟ್ https://www.eproc.karnataka.gov.in ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸೆಲ್/ ಹೆಲ್ಪ್‌ಡೆಸ್ಕ್ (ದೂರವಾಣಿ 080–25501227 / 25501216) ಮುಖಾಂತರ ಪಡೆಯಲು ಕೋರಿದೆ.

ಟೆಂಡರ್ ನ ಕಾಲಮಿತಿ ವಿವರಗಳು:

- ಅಧೀಕ್ಷಕ ಅಭಿಯಂತರರ ಕಛೇರಿಯಲ್ಲಿ ಪೂರ್ವಭಾವಿ ಸಭೆ ದಿನಾಂಕ: 08–02–2023 at 16.00 ಗಂಟೆ
- ಟೆಂಡರ್ ದಸ್ತಾವೇಜುಗಳನ್ನು (Online Submission) ಸಲ್ಲಿಸುವ ಕೊನೆಯ ದಿನಾಂಕ: 24–02–2023 16.30 ಗಂಟೆ
- ತಾಂತ್ರಿಕ ಟೆಂಡರ್ Document ತೆರೆಯುವ ದಿನಾಂಕ: 27–02–2023 16.30 ಗಂಟೆ
- ತಾಂತ್ರಿಕ ಟೆಂಡರ್ Document ತೆರೆಯುವ ಪ್ರಸ್ತಾವನೆ ಅನುಮೋದನೆ ನಂತರ ಆರ್ಥಿಕ ಟೆಂಡರ್ Document ಗಳನ್ನು ಇ–ಪೋರ್ಟಲ್ ಮುಖಾಂತರ ತೆರೆಯಲಾಗುವುದು.

ಸಹಿ/–
ವಾ.ಸಾ.ಸಂ.ಇ/ವಾಪ್ರ/4468/ಆಕಾರ್/22–23 ಅಧೀಕ್ಷಕ ಅಭಿಯಂತರರು

ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ನಂ. 16–ಡಿ, 4ನೇ ಮಹಡಿ, ದೇವರಾಜ ಅರಸು ಭವನ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560 052.

ಸಂಖ್ಯೆ: ಕ.ಸ.ಸ.ಅ.ನಿ./ಕ್ರಿ.ಯೋ./ಸಿಆರ್–05/2022–23 ದಿನಾಂಕ: 03.02.2023

ಪ್ರಕಟಣೆ

ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮಕ್ಕೆ ಸರ್ಕಾರವು 2022–23ನೇ ಸಾಲಿನ ಪೂರಕ ಆಯವ್ಯಯದ ಒದಗಿಸಿದ ಅನುದಾನದಲ್ಲಿ ಈ ಕೆಳಕಂಡ ಯೋಜನೆಗಳಲ್ಲಿ ಸಾಲ ಸೌಲಭ್ಯ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸೇವಾ ಸಿಂಧು ಪೋರ್ಟಲ್ ಮುಖಾಂತರ ಅರ್ಜಿ ಸ್ವೀಕೃತಿ

ಗಂಗಾ ಕಲ್ಯಾಣ ನೀರಾವರಿ ಯೋಜನೆ

ಹಿಂದುಳಿದ ವರ್ಗಗಳ ಪ್ರವರ್ಗ–2ಎ ರಲ್ಲಿನ ಸವಿತಾ ಮತ್ತು ಇದರ ಉಪಜಾತಿಗಳಿಗೆ ಸೇರಿದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಗಂಗಾ ಕಲ್ಯಾಣ ನೀರಾವರಿ ಯೋಜನೆಯಲ್ಲಿ ಸೌಲಭ್ಯ ಒದಗಿಸಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ಯೋಜನೆಯಲ್ಲಿ ಸೌಲಭ್ಯ ಪಡೆಯಲು ಅರ್ಜಿದಾರರು ಈ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು.

1. **ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮದ ವ್ಯಾಪ್ತಿಗೆ ಒಳಪಡುವ ಸವಿತಾ ಮತ್ತು ಇದರ ಉಪಜಾತಿಗಳಿಗೆ ಸೇರಿದ ಸಣ್ಣ ಮತ್ತು ಅತಿ ಸಣ್ಣ ರೈತರಾಗಿದ್ದು ಹಾಲಿ ಜಮೀನುಗಳು ಖುಷ್ಕಿಯಾಗಿದ್ದು ಯಾವುದೇ ಮೂಲದಿಂದ ನೀರಾವರಿ ಸೌಲಭ್ಯ ಹೊಂದಿರಬಾರದು.**
2. ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
3. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ. 98,000/– ಹಾಗೂ ಪಟ್ಟಣ ಪ್ರದೇಶದವರಿಗೆ ರೂ. 1,20,000/–ಗಳ ಒಳಗಿರಬೇಕು.
4. ಅರ್ಜಿದಾರರು ಒಂದೇ ಸ್ಥಳದಲ್ಲಿ ಹೊಂದಿಕೊಂಡಂತೆ ಕನಿಷ್ಠ 02 ಎಕರೆ ಜಮೀನು ಹೊಂದಿರಬೇಕು, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ಕನಿಷ್ಠ 01 ಎಕರೆ ಜಮೀನು ಹೊಂದಿರಬೇಕು.
5. ವೈಯಕ್ತಿಕ ಕೊಳವೆ ಬಾವಿ ಯೋಜನೆಯಲ್ಲಿ ಘಟಕ ವೆಚ್ಚ ರೂ. 2.50 ಲಕ್ಷಗಳು, ಇದರಲ್ಲಿ ರೂ. 2.00 ಲಕ್ಷ ಸಹಾಯಧನ ಹಾಗೂ ರೂ. 50,000/– ನಿಗಮದಿಂದ ಶೇ.4ರ ಬಡ್ಡಿದರದಲ್ಲಿ ನೀಡುವ ಸಾಲದ ಮೊತ್ತ ಒಳಗೊಂಡಿದೆ.
6. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಹಾಗೂ ತುಮಕೂರು ಜಿಲ್ಲೆಗಳಿಗೆ ವೈಯಕ್ತಿಕ ಕೊಳವೆ ಬಾವಿ ಘಟಕ ವೆಚ್ಚ ರೂ. 4.00ಲಕ್ಷಗಳು ಇದರಲ್ಲಿ ರೂ. 3.50ಲಕ್ಷ ಸಹಾಯಧನ ಹಾಗೂ ರೂ. 50,000/– ನಿಗಮದಿಂದ ಶೇ. 4ರ ಬಡ್ಡಿದರದಲ್ಲಿ ನೀಡುವ ಸಾಲದ ಮೊತ್ತ ಒಳಗೊಂಡಿದೆ.
7. ರೈತರು ಆಧಾರ್ ಜೋಡಣೆಯಾದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆ ಹೊಂದಿರಬೇಕು. ಆಧಾರ್ ಕಾರ್ಡ್‌ನಲ್ಲಿರುವಂತೆ ರೈತರ ಹೆಸರು, (ಶ್ರೀ/ಶ್ರೀಮತಿ, ಕುಮಾರಿ ಮುಂತಾದ ಮಾಹಿತಿಗಳೆಲ್ಲವು) ಬ್ಯಾಂಕ್ ಖಾತೆಯ ಪುಸ್ತಕದಲ್ಲಿಯೂ ಇದ್ದು, ಇತರೆ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರದಲ್ಲಿಯೂ ಆಧಾರ್ ಕಾರ್ಡ್‌ನಲ್ಲಿರುವಂತೆ ಹೆಸರು ಹೊಂದಾಣಿಕೆಯಾಗಬೇಕು.

ಅರಿವು ಶೈಕ್ಷಣಿಕ ಸಾಲ ಯೋಜನೆ (ಹೊಸತು)

ಹಿಂದುಳಿದ ವರ್ಗಗಳ ಪ್ರವರ್ಗ–2 ರಲ್ಲಿನ ಸವಿತಾ ಮತ್ತು ಇದರ ಉಪಜಾತಿಗಳಿಗೆ ಸೇರಿದ ಸಿ.ಇ.ಟಿ. ಮೂಲಕ ಆಯ್ಕೆಯಾದ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಸಲ್ಲಿಸಬಯಸುವ ವಿದ್ಯಾರ್ಥಿಗಳು ಸೇವಾಸಿಂಧು ಪೋರ್ಟಲ್ ಮುಖಾಂತರ ಆನ್‌ಲೈನ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ.

1. ವಿದ್ಯಾರ್ಥಿಯ ವಯಸ್ಸು 18 ರಿಂದ 35 ವರ್ಷಗಳ ಒಳಗಿರಬೇಕು.
2. ಕುಟುಂಬದ ವಾರ್ಷಿಕ ವರಮಾನ 3,50,000/– ರೂಗಳ ಒಳಗಿರಬೇಕು.
3. ವಿದ್ಯಾರ್ಥಿಗಳು ಆಧಾರ್ ಜೋಡಣೆಯಾದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆ ಹೊಂದಿರಬೇಕು. ಆಧಾರ್ ಕಾರ್ಡ್‌ನಲ್ಲಿರುವಂತೆ ವಿದ್ಯಾರ್ಥಿಗಳ ಹೆಸರು, (ಶ್ರೀ/ಶ್ರೀಮತಿ, ಕುಮಾರಿ ಮುಂತಾದ ಮಾಹಿತಿಗಳೆಲ್ಲವು) ಬ್ಯಾಂಕ್ ಖಾತೆಯ ಪುಸ್ತಕದಲ್ಲಿಯೂ ಇದ್ದು, ಇತರೆ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರದಲ್ಲಿಯೂ ಆಧಾರ್ ಕಾರ್ಡ್‌ನಲ್ಲಿರುವಂತೆ ಹೆಸರು ಹೊಂದಾಣಿಕೆಯಾಗಬೇಕು.
4. ಮೇಲ್ಕಂಡ ಯೋಜನೆಗಳಲ್ಲಿ ಅರ್ಜಿದಾರರು/ವಿದ್ಯಾರ್ಥಿಗಳು ಅರ್ಜಿಗಳನ್ನು **ಸೇವಾಸಿಂಧು ಪೋರ್ಟಲ್ ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾಕೇಂದ್ರಗಳಲ್ಲಿ** ಆನ್‌ಲೈನ್ ಮೂಲಕ ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ **ದಿನಾಂಕ : 03.02.2023 ರಿಂದ 03.03.2023 ರವರೆಗೆ** ಸಲ್ಲಿಸಬಹುದಾಗಿರುತ್ತದೆ.
5. ಮೇಲ್ಕಂಡ 02 ಯೋಜನೆಗಳಿಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಬಯಸುವ ಅರ್ಜಿದಾರರು/ವಿದ್ಯಾರ್ಥಿಗಳು ಹಿಂದೆ ನಿಗಮದ ಯಾವುದಾದರೂ ಯೋಜನೆಗಳಲ್ಲಿ ಪ್ರಯೋಜನ ಪಡೆದಿದ್ದಲ್ಲಿ ಅಂತಹವರು ಹಾಗೂ ಅವರ ಕುಟುಂಬದವರು ಮತ್ತೊಮ್ಮೆ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್‌ಸೈಟ್ https://kssd.karnataka.gov.in ವೆಬ್‌ಸೈಟ್‌ನಲ್ಲಿ ಸಂಪರ್ಕಿಸಿ ಅಥವಾ ಸಂಬಂಧಪಟ್ಟ ನಿಗಮದ ವೆಬ್‌ಸೈಟನ್ನು ಅಥವಾ ನಿಗಮದ ದೂರವಾಣಿ/ ಸಹಾಯವಾಣಿ ಸಂಖ್ಯೆ 080–22374832, 8050773004/5, 8050370006, 7090400100 ಅಥವಾ 7090400900 ಸಂಪರ್ಕಿಸುವುದು.

ಸಹಿ/– (ವಿ. ರವಿ)
ವ್ಯವಸ್ಥಾಪಕ ನಿರ್ದೇಶಕರು
ವಾಸಾಸಂಇ/ವಾಪ್ರ/ಜಿಎ/4460/2022–23

ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ನಂ. 16–ಡಿ, 4ನೇ ಮಹಡಿ, ದೇವರಾಜ ಅರಸು ಭವನ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560 052.

ಸಂಖ್ಯೆ: ಕ.ಮ.ಮಾ.ಅ.ನಿ./ಕ್ರಿ.ಯೋ./ಸಿಆರ್–04/2022–23 ದಿನಾಂಕ: 03.02.2023

ಪ್ರಕಟಣೆ

ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮಕ್ಕೆ ಸರ್ಕಾರವು 2022–23ನೇ ಸಾಲಿನ ಪೂರಕ ಆಯವ್ಯಯದ ಒದಗಿಸಿದ ಅನುದಾನದಲ್ಲಿ ಈ ಕೆಳಕಂಡ ಯೋಜನೆಗಳಲ್ಲಿ ಸಾಲ ಸೌಲಭ್ಯ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸೇವಾ ಸಿಂಧು ಪೋರ್ಟಲ್ ಮುಖಾಂತರ ಅರ್ಜಿ ಸ್ವೀಕೃತಿ – ಗಂಗಾ ಕಲ್ಯಾಣ ನೀರಾವರಿ ಯೋಜನೆ

ಹಿಂದುಳಿದ ವರ್ಗಗಳ ಪ್ರವರ್ಗ–2ಎ ರಲ್ಲಿನ ಮಡಿವಾಳ ಮತ್ತು ಇದರ ಉಪಜಾತಿಗಳಿಗೆ ಸೇರಿದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಗಂಗಾ ಕಲ್ಯಾಣ ನೀರಾವರಿ ಯೋಜನೆಯಲ್ಲಿ ಸೌಲಭ್ಯ ಒದಗಿಸಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ಯೋಜನೆಯಲ್ಲಿ ಸೌಲಭ್ಯ ಪಡೆಯಲು ಅರ್ಜಿದಾರರು ಈ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು.

1. **ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮದ ವ್ಯಾಪ್ತಿಗೆ ಒಳಪಡುವ** ಮಡಿವಾಳ ಮತ್ತು ಇದರ ಉಪಜಾತಿಗಳಿಗೆ ಸೇರಿದ **ಸಣ್ಣ ಮತ್ತು ಅತಿ ಸಣ್ಣ ರೈತರಾಗಿದ್ದು ಹಾಲಿ ಜಮೀನುಗಳು ಖುಷ್ಕಿಯಾಗಿದ್ದು ಯಾವುದೇ ಮೂಲದಿಂದ ನೀರಾವರಿ ಸೌಲಭ್ಯ ಹೊಂದಿರಬಾರದು.**
2. ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
3. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ. 98,000/– ಹಾಗೂ ಪಟ್ಟಣ ಪ್ರದೇಶದವರಿಗೆ ರೂ. 1,20,000/–ಗಳ ಒಳಗಿರಬೇಕು.
4. ಅರ್ಜಿದಾರರು ಒಂದೇ ಸ್ಥಳದಲ್ಲಿ ಹೊಂದಿಕೊಂಡಂತೆ ಕನಿಷ್ಠ 02 ಎಕರೆ ಜಮೀನು ಹೊಂದಿರಬೇಕು, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ಕನಿಷ್ಠ 01 ಎಕರೆ ಜಮೀನು ಹೊಂದಿರಬೇಕು.
5. ವೈಯಕ್ತಿಕ ಕೊಳವೆ ಬಾವಿ ಯೋಜನೆಯಲ್ಲಿ ಘಟಕ ವೆಚ್ಚ ರೂ. 2.50 ಲಕ್ಷಗಳು, ಇದರಲ್ಲಿ ರೂ. 2.00 ಲಕ್ಷ ಸಹಾಯಧನ ಹಾಗೂ ರೂ. 50,000/– ನಿಗಮದಿಂದ ಶೇ.4ರ ಬಡ್ಡಿದರದಲ್ಲಿ ನೀಡುವ ಸಾಲದ ಮೊತ್ತ ಒಳಗೊಂಡಿದೆ.
6. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಹಾಗೂ ತುಮಕೂರು ಜಿಲ್ಲೆಗಳಿಗೆ ವೈಯಕ್ತಿಕ ಕೊಳವೆ ಬಾವಿ ಘಟಕ ವೆಚ್ಚ ರೂ. 4.00ಲಕ್ಷಗಳು ಇದರಲ್ಲಿ ರೂ. 3.50ಲಕ್ಷ ಸಹಾಯಧನ ಹಾಗೂ ರೂ. 50,000/– ನಿಗಮದಿಂದ ಶೇ. 4ರ ಬಡ್ಡಿದರದಲ್ಲಿ ನೀಡುವ ಸಾಲದ ಮೊತ್ತ ಒಳಗೊಂಡಿದೆ.
7. ರೈತರು ಆಧಾರ್ ಜೋಡಣೆಯಾದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆ ಹೊಂದಿರಬೇಕು. ಆಧಾರ್ ಕಾರ್ಡ್‌ನಲ್ಲಿರುವಂತೆ ರೈತರ ಹೆಸರು, (ಶ್ರೀ/ಶ್ರೀಮತಿ, ಕುಮಾರಿ ಮುಂತಾದ ಮಾಹಿತಿಗಳೆಲ್ಲವು) ಬ್ಯಾಂಕ್ ಖಾತೆಯ ಪುಸ್ತಕದಲ್ಲಿಯೂ ಇದ್ದು, ಇತರೆ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರದಲ್ಲಿಯೂ ಆಧಾರ್ ಕಾರ್ಡ್‌ನಲ್ಲಿರುವಂತೆ ಹೆಸರು ಹೊಂದಾಣಿಕೆಯಾಗಬೇಕು.
8. ಸದರಿ ಯೋಜನೆಯಲ್ಲಿ ಅರ್ಜಿದಾರರು ಅರ್ಜಿಗಳನ್ನು **ಸೇವಾಸಿಂಧು ಪೋರ್ಟಲ್ ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾಕೇಂದ್ರಗಳಲ್ಲಿ** ಆನ್‌ಲೈನ್ ಮೂಲಕ ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ **ದಿನಾಂಕ : 03.02.2023 ರಿಂದ 03.03.2023 ರವರೆಗೆ** ಸಲ್ಲಿಸಬಹುದಾಗಿರುತ್ತದೆ.
9. ಸದರಿ ಯೋಜನೆಯಲ್ಲಿ ಅರ್ಜಿ ಸಲ್ಲಿಸಬಯಸುವ ಅರ್ಜಿದಾರರು ಹಿಂದೆ ನಿಗಮದ ಯಾವುದಾದರೂ ಯೋಜನೆಗಳಲ್ಲಿ ಪ್ರಯೋಜನ ಪಡೆದಿದ್ದಲ್ಲಿ ಅಂತಹವರು ಹಾಗೂ ಅವರ ಕುಟುಂಬದವರು ಮತ್ತೊಮ್ಮೆ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್‌ಸೈಟ್ https://kmmd.karnataka.gov.in ವೆಬ್‌ಸೈಟ್‌ನಲ್ಲಿ ಸಂಪರ್ಕಿಸಿ ಅಥವಾ ಸಂಬಂಧಪಟ್ಟ ನಿಗಮದ ವೆಬ್‌ಸೈಟನ್ನು ಅಥವಾ ನಿಗಮದ ದೂರವಾಣಿ/ ಸಹಾಯವಾಣಿ ಸಂಖ್ಯೆ 080–22374832, 8050773004/5, 8050370006, 7090400100 ಅಥವಾ 7090400900 ಸಂಪರ್ಕಿಸುವುದು.

ಸಹಿ/– (ವಿ. ರವಿ)
ವ್ಯವಸ್ಥಾಪಕ ನಿರ್ದೇಶಕರು
ವಾಸಾಸಂಇ/ವಾಪ್ರ/ಜಿಎ/4461/2022–23

ಸುಭಾಷಿತ
ಹೆಚ್ಚು ಕಲಿತವ, ಹೆಚ್ಚು ಕಲಿಸಿದವ, ಅಷ್ಟಾದರೂ ಅತೃಪ್ತಿ ಹೊಂದಿರುವವ ಅತಿ ದೊಡ್ಡ ಮೂರ್ಖ.
–ತಿರುವಳ್ಳುವರ್

ಸಾಮಾಜಿಕ ಜಾಲತಾಣದ ಮೂಲಕ ಪ್ರಭಾವ
ಗ್ರಾಹಕರ ರಕ್ಷಣೆಗೆ ಅಗತ್ಯವಾಗಿದ್ದ ಮಾರ್ಗಸೂಚಿ

ಸಾಮಾಜಿಕ ಜಾಲತಾಣಗಳ ಮೂಲಕ ಸಾರ್ವಜನಿಕರ ಮೇಲೆ ಪ್ರಭಾವ ಬೀರುವವರು ಪಾಲಿಸಬೇಕಾದ ಕೆಲವು ಮಾರ್ಗಸೂಚಿಗಳನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ. ಉತ್ಪನ್ನಗಳು, ಸೇವೆಗಳು, ಯೋಜನೆಗಳ ಬಗ್ಗೆ ಸಾರ್ವಜನಿಕವಾಗಿ ಅಭಿಪ್ರಾಯ ಹೇಳುವ, ಅವುಗಳನ್ನು ಪಡೆದುಕೊಳ್ಳಿ ಎಂದು ಸಾರ್ವಜನಿಕರಿಗೆ ಕರೆ ನೀಡುವ ಇಂಥವರು ಈ ಮಾರ್ಗಸೂಚಿಗಳನ್ನು ಪಾಲಿಸಬೇಕು. ಪ್ರಚಾರಕ್ಕಾಗಿ ನಡೆಯುವ ಅಭಿಯಾನಗಳ ಸಂದರ್ಭದಲ್ಲಿ ಗ್ರಾಹಕರು ಮೋಸಹೋಗುವ ಸಾಧ್ಯತೆಗಳು ಇರುತ್ತವೆ. ಈ ಮಾರ್ಗಸೂಚಿಗಳು ಗ್ರಾಹಕರ ಹಿತವನ್ನು ಒಂದಿಷ್ಟುಮಟ್ಟಿಗೆ ಕಾಯುವ ನಿರೀಕ್ಷೆ ಇದೆ. ಸಾಮಾಜಿಕ ಜಾಲತಾಣಗಳ ಮೂಲಕ ಪ್ರಭಾವ ಬೀರುವ ವ್ಯಕ್ತಿಗಳು ತಾವು ಪ್ರಚಾರ ಮಾಡುವ ಉತ್ಪನ್ನ ಅಥವಾ ಸೇವೆಗಳಿಗೆ ಪ್ರತಿಯಾಗಿ ಪಡೆದುಕೊಳ್ಳುತ್ತಿರುವುದು ಏನನ್ನು ಎಂಬುದನ್ನು ಬಹಿರಂಗಪಡಿಸಬೇಕು ಎಂದು ಮಾರ್ಗಸೂಚಿಗಳು ಹೇಳುತ್ತವೆ. ಪ್ರಚಾರ ಮಾಡಿದ್ದಕ್ಕೆ ಪ್ರತಿಫಲವಾಗಿ ಉಡುಗೊರೆಗಳು, ಹೋಟೆಲ್ ವಸತಿ, ಷೇರುಗಳು, ರಿಯಾಯಿತಿಗಳನ್ನು ಪಡೆದುಕೊಳ್ಳುತ್ತಿದ್ದರೆ ಅವುಗಳ ಬಗ್ಗೆ ಮಾಹಿತಿಯನ್ನು ಬಹಿರಂಗಪಡಿಸಬೇಕು. ಖ್ಯಾತ ವ್ಯಕ್ತಿಗಳು ಮತ್ತು ಪ್ರಭಾವ ಬೀರುವ ಶಕ್ತಿ ಇರುವವರು ಸಾಮಾಜಿಕ ಜಾಲತಾಣಗಳ ಮೂಲಕ ಯಾವುದೇ ಉತ್ಪನ್ನ ಅಥವಾ ಸೇವೆಯನ್ನು ಪ್ರಚಾರ ಮಾಡಿದಾಗ ಅದಕ್ಕೆ ಪ್ರಾಯೋಜಕರು/ಜಾಹೀರಾತುದಾರರಿಂದ ಹಣ ಪಡೆದುಕೊಳ್ಳುವುದಾದರೆ ಅದನ್ನು ಇನ್ನು ಮುಂದೆ ತಮ್ಮ ಕಾರ್ಯಕ್ರಮಗಳಲ್ಲಿ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಈ ಮಾರ್ಗಸೂಚಿ ಉಲ್ಲಂಘಿಸಿದರೆ ದಂಡ ಪಾವತಿಸಬೇಕಾಗುತ್ತದೆ, ಜೈಲುಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ತಾವು ಉಡುಗೊರೆಯಾಗಿ ಪಡೆದಿರುವುದನ್ನು ಸರಳವಾಗಿ ಹಾಗೂ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಉತ್ಪನ್ನವನ್ನು ಅನುಮೋದಿಸುವ ಸಂದರ್ಭದಲ್ಲಿಯೇ ಇದನ್ನೂ ತಿಳಿಸಬೇಕಾಗುತ್ತದೆ.

ಈ ವೇದಿಕೆಗಳಲ್ಲಿ ಹೆಚ್ಚಿನ ಸಮಯ ಕಳೆಯುವ ಗ್ರಾಹಕರು ವಂಚನೆಗೆ ಗುರಿಯಾಗದಂತೆ ನೋಡಿಕೊಳ್ಳಬೇಕಾಗಿದೆ

ಸಾಮಾಜಿಕ ಜಾಲತಾಣಗಳ ವ್ಯಾಪ್ತಿಯು ಕಳೆದ ಕೆಲವು ವರ್ಷಗಳಲ್ಲಿ ಬಹಳ ಹಿಗ್ಗಿದೆ. ಅದು ಇನ್ನಷ್ಟು ವಿಸ್ತರಿಸಲಿದೆ ಎಂಬುದೂ ನಿಜ. ಜನರು ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಹೊತ್ತು ಕಳೆಯುತ್ತಿದ್ದಾರೆ. ಕೆಲವರಿಗೆ ಇದು ಜೀವನದ ಅವಿಭಾಜ್ಯ ಚಟುವಟಿಕೆಯೂ ಹೌದು. ಎಲ್ಲ ವಯೋಮಾನದ ಹಾಗೂ ಎಲ್ಲ ಬಗೆಯ ಸಾಮಾಜಿಕ ಹಿನ್ನೆಲೆಯ ಜನರಿಗೂ ಈ ಮಾತು ಅನ್ವಯವಾಗುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ಲಕ್ಷಾಂತರ ಜನ ಬೆಂಬಲಿಗರನ್ನು ಪಡೆದಿರುವ, ಬೇರೆಯವರ ಮೇಲೆ ಪ್ರಭಾವ ಬೀರುವ ಸಾಮರ್ಥ್ಯವಿರುವವರನ್ನು ಬಳಸಿಕೊಳ್ಳುವ ಕಂಪನಿಗಳು, ಜನರು ಸಾಮಾಜಿಕ ಜಾಲತಾಣಗಳಲ್ಲಿ ಕಳೆಯುವ ಸಮಯದ ಲಾಭವನ್ನು ತಾವು ಪಡೆದುಕೊಳ್ಳಲು ಯತ್ನಿಸುತ್ತವೆ. ದೊಡ್ಡ ಸಂಖ್ಯೆಯಲ್ಲಿ ಬೆಂಬಲಿಗರನ್ನು ಹೊಂದಿರುವ, ಸಾಮಾಜಿಕ ಜಾಲತಾಣಗಳ ಮೂಲಕ ಪ್ರಭಾವ ಬೀರಬಲ್ಲ ಒಂದು ಲಕ್ಷಕ್ಕೂ ಹೆಚ್ಚಿನ ಜನ ಇದ್ದಾರೆ ಎಂಬ ಅಂದಾಜು ಇದೆ. ಸಾಮಾಜಿಕ ಜಾಲತಾಣಗಳ ಮೂಲಕ ಪ್ರಭಾವ ಬೀರುವವರು ನಡೆಸುವ ಒಟ್ಟು ವಹಿವಾಟಿನ ಮೊತ್ತವು 2022ರಲ್ಲಿ ₹ 1,275 ಕೋಟಿ ಆಗಿತ್ತು, ಇದು 2025ರ ವೇಳೆಗೆ ₹ 2,800 ಕೋಟಿಗೆ ಹೆಚ್ಚಾಗುತ್ತದೆ ಎಂಬ ಅಂದಾಜು ಇದೆ. ಡಿಜಿಟಲ್ ವೇದಿಕೆಗಳ ಮೂಲಕ ಉತ್ಪನ್ನಗಳು ಹಾಗೂ ಸೇವೆಗಳ ಪ್ರಚಾರಕ್ಕೆ ಮಾಡುವ ವೆಚ್ಚವು ಹೆಚ್ಚಾಗುತ್ತಿದೆ. ಹೀಗಾಗಿ, ಈ ವೇದಿಕೆಗಳಲ್ಲಿ ಹೆಚ್ಚಿನ ಸಮಯ ಕಳೆಯುವ ಗ್ರಾಹಕರು ವಂಚನೆಗೆ ಗುರಿಯಾಗದಂತೆ ನೋಡಿಕೊಳ್ಳುವ ಅಗತ್ಯ ಖಂಡಿತವಾಗಿಯೂ ಇದೆ.

ಇಲ್ಲಿ ಸೇವೆಗಳು ಹಾಗೂ ಉತ್ಪನ್ನಗಳನ್ನು ಬಳಕೆಗೆ ಅನುಮೋದಿಸುವವರ ವಿಶ್ವಾಸಾರ್ಹತೆಯು ಮಹತ್ವದ್ದಾಗುತ್ತದೆ. ತಾವು ಅನುಕರಣೀಯ ವ್ಯಕ್ತಿ ಎಂದು ಭಾವಿಸಿರುವವರು, ವಸ್ತು ಹಾಗೂ ಸೇವೆಗಳನ್ನು ಅನುಮೋದಿಸಿದ್ದಕ್ಕೆ ಏನು ಮೊತ್ತ ಪಡೆದುಕೊಳ್ಳುತ್ತಾರೆ ಎಂಬುದನ್ನು ತಿಳಿಯುವ ಹಕ್ಕು ಗ್ರಾಹಕರಿಗೆ ಇದೆ. ಮಾಹಿತಿ ಇದ್ದಾಗ ಅವರು ತೆಗೆದುಕೊಳ್ಳುವ ತೀರ್ಮಾನಗಳು ಹೆಚ್ಚು ಪ್ರಬುದ್ಧವಾಗಿರುತ್ತವೆ. ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಗ್ರಾಹಕರಿಗೆ ಈ ರೀತಿಯ ಮಾಹಿತಿ ಇರಬೇಕಾದ್ದು ಒಳ್ಳೆಯದು. ಸರ್ಕಾರ ರೂಪಿಸಿರುವ ಮಾರ್ಗಸೂಚಿಗಳು ಗ್ರಾಹಕ ಸಂರಕ್ಷಣಾ ಕಾಯ್ದೆಯ ಅಡಿಯಲ್ಲಿ ಬರುತ್ತವೆ. ಸಾಮಾಜಿಕ ಜಾಲತಾಣಗಳ ಮೂಲಕ ನಡೆಯುವ ಪ್ರಚಾರ ಚಟುವಟಿಕೆಗಳಲ್ಲಿ ನ್ಯಾಯಸಮ್ಮತವಲ್ಲದ ಯಾವುದೇ ಕೃತ್ಯಕ್ಕೆ ಅವಕಾಶ ಇಲ್ಲದಂತೆ ನೋಡಿಕೊಳ್ಳುವುದು ಇದರ ಉದ್ದೇಶ. ಪ್ರಭಾವ ಬೀರುವ ಸಾಮರ್ಥ್ಯ ಹೊಂದಿರುವವರು ಉತ್ಪನ್ನ, ಸೇವೆಗಳನ್ನು ಅನುಮೋದಿಸುವಾಗ ಅದಕ್ಕೆ ಹಣ ಪಡೆಯಲಾಗಿತ್ತೇ ಎಂಬುದನ್ನು ತಿಳಿಸಬೇಕು ಎಂದು ಭಾರತೀಯ ಜಾಹೀರಾತು ಗುಣಮಟ್ಟ ಮಂಡಳಿಯು 2021ರಲ್ಲಿ ನಿಯಮ ರೂಪಿಸಿತ್ತು. ಆದರೆ ಇದನ್ನು ಹಲವರು ಪಾಲಿಸಲಿಲ್ಲ. ಆದರೆ, ಸರ್ಕಾರ ಈಗ ರೂಪಿಸಿರುವ ಮಾರ್ಗಸೂಚಿಗಳು ಕಟ್ಟುನಿಟ್ಟಾಗಿ ಜಾರಿಗೆ ಬರಬಹುದು ಎಂಬ ನಿರೀಕ್ಷೆ ಇದೆ.

ದಿನದ ಟ್ವೀಟ್

ವಿನಾಯಿತಿ ಇರಬೇಕಿತ್ತು

ಹಣದುಬ್ಬರ ಏರಿಕೆ, ಉಳಿತಾಯಕ್ಕೆ ಕಡಿಮೆ ಬಡ್ಡಿ ದರ, ಡಿವಿಡೆಂಡ್ ಆದಾಯಕ್ಕೆ ತೆರಿಗೆಯು ಹಿರಿಯ ನಾಗರಿಕರಿಗೆ ಈಗಾಗಲೇ ಪೆಟ್ಟು ಕೊಟ್ಟಿವೆ. ಆದಾಯ ಮೂಲ ಇಲ್ಲದೆ ನಾವು ಹಿರಿಯ ನಾಗರಿಕರ ಉಳಿತಾಯ ಯೋಜನೆಯಲ್ಲಿ ಹೆಚ್ಚು ಹಣ ತೊಡಗಿಸುವುದು ಹೇಗೆ? ಈ ಬಜೆಟ್‌ನಲ್ಲಿ ಹಿರಿಯ ನಾಗರಿಕರಿಗೆ ಒಂದಿಷ್ಟು ವಿನಾಯಿತಿಗಳು ಇರಬೇಕಿತ್ತು. ನಿರ್ಮಲಾ ಸೀತಾರಾಮನ್ ಅವರೇ ಈ ಬಗ್ಗೆ ಗಮನಹರಿಸಿ.

ಆನಂದ ಗುಂಡೂರಾವ್, ಬಿ–ಪ್ಯಾಕ್ ಸದಸ್ಯ

ಕಿಡಿನುಡಿ

ಅತಿಯಾದ ಕ್ರಿಯಾಶೀಲತೆ ತೋರಿಸುವ ನಮ್ಮ ತನಿಖಾ ಸಂಸ್ಥೆಗಳು, ಅದಾನಿ ಸಮೂಹಕ್ಕೆ ಸಂಬಂಧಿಸಿದ ವ್ಯವಹಾರಗಳಲ್ಲಿ ಏನಾಗುತ್ತಿದೆ ಎಂಬುದನ್ನು ಪರಿಶೀಲಿಸಲು ಈಗಲಾದರೂ ಒಂದು ನಿಮಿಷದ ಸಮಯ ಕೊಡಬಹುದು ಎಂದು ಆಶಿಸುತ್ತೇನೆ. ಇದು ಸಾರ್ವಜನಿಕರ ಹಿತಾಸಕ್ತಿಗೆ ಸಂಬಂಧಿಸಿದ ವಿಷಯ. ಕಳಂಕರಹಿತವಾಗಿದ್ದ ನಮ್ಮ ಬಂಡವಾಳ ಮಾರುಕಟ್ಟೆಗಳ ವಿಶ್ವಾಸಾರ್ಹತೆಯ ಪ್ರಶ್ನೆ ಇದು.

ಶ್ರೀನಿವಾಸ ಅಲವಿಲ್ಲಿ, ಸಹ ಸಂಸ್ಥಾಪಕ, ಸಿಟಿಜನ್ಸ್ ಫಾರ್ ಬೆಂಗಳೂರು

25 ವರ್ಷಗಳ ಹಿಂದೆ
ಬುಧವಾರ, 4-2-1998

• **ಕೋಟಿ ಉದ್ಯೋಗ ಸೃಷ್ಟಿ, ಸ್ವದೇಶಿ ಆರ್ಥಿಕ ನೀತಿ**

ನವದೆಹಲಿ, ಫೆ. 3 (ಪಿಟಿಐ): ಅಯೋಧ್ಯೆಯಲ್ಲಿನ ವಿವಾದಿತ ಸ್ಥಳದಲ್ಲೇ ರಾಮ ಮಂದಿರ ನಿರ್ಮಾಣ, ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದಲ್ಲಿ ನೀಡಿರುವ ವಿಶೇಷ ಸ್ಥಾನಮಾನ ರದ್ದು; ಹಸಿವು–ಅನಕ್ಷರತೆ ನಿರ್ಮೂಲನೆ; ವರ್ಷಕ್ಕೆ ಕೋಟಿ ಉದ್ಯೋಗ ಸೃಷ್ಟಿ; ಸ್ವದೇಶಿ ಆರ್ಥಿಕ ನೀತಿಗೆ ಆದ್ಯತೆ; ಅಲ್ಪಸಂಖ್ಯಾತರಿಗೆ ಸಮಾನ ಅವಕಾಶ ಹಾಗೂ ಕೋಮುಗಲಭೆ ಪ್ರಕರಣಗಳ ಇತ್ಯರ್ಥಕ್ಕೆ ವಿಶೇಷ ನ್ಯಾಯಾಲಯ ಸ್ಥಾಪನೆ.

ಇವು ಮುಂಬರುವ ಲೋಕಸಭಾ ಚುನಾವಣೆಗೆ ಭಾರತೀಯ ಜನತಾ ಪಕ್ಷವು ಬಿಡುಗಡೆ ಮಾಡಿರುವ ಪ್ರಣಾಳಿಕೆಯ ಪ್ರಮುಖ ಭರವಸೆಗಳು.

ಆದರೆ ಸಂಘ ಪರಿವಾರದ ಸದಸ್ಯರು ಪ್ರಸ್ತಾಪಿಸಿದ, ಇಡೀ ರಾಷ್ಟ್ರಕ್ಕೆ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರಬೇಕು ಎಂಬ ಬೇಡಿಕೆ ಬಗ್ಗೆ ಪ್ರಣಾಳಿಕೆಯಲ್ಲಿ ಯಾವುದೇ ಪ್ರಸ್ತಾಪ ಇಲ್ಲ.

• **ಬಿಜೆಪಿಗೆ ತಾರಾದೇವಿ, ಮುಖೇಶ್ ಖನ್ನ**

ನವದೆಹಲಿ, ಫೆ. 3 (ಪಿಟಿಐ): ಕಾಂಗ್ರೆಸ್‌ನ ಮಾಜಿ ಸಚಿವರುಗಳಾದ ತಾರಾದೇವಿ ಸಿದ್ಧಾರ್ಥ, ಅಬ್ರಾರ್ ಅಹಮದ್ ಮತ್ತು ದೂರದರ್ಶನ ಮಹಾಭಾರತದ 'ಭೀಷ್ಮ ಪಿತಾಮಹ' ಮುಖೇಶ್ ಖನ್ನ ಅವರು ಇಂದು ಬಿಜೆಪಿ ಸೇರಿದ್ದಾರೆ.

50 ವರ್ಷಗಳ ಹಿಂದೆ
ಭಾನುವಾರ, 4-2-1973

• **ರಾಷ್ಟ್ರಕ್ಕೆಲ್ಲ ಒಂದೇ ಪ್ರಭುತ್ವ, ಒಂದೇ ಶಾಸನಸಭೆ ಇರಲಿ: ಗೋಳ್ವಾಲ್ಕರ್ ಪ್ರತಿಪಾದನೆ**

ಬೆಂಗಳೂರು, ಫೆ. 3– ರಾಷ್ಟ್ರಕ್ಕೆಲ್ಲಾ ಒಂದೇ ಪ್ರಭುತ್ವ, ಒಂದೇ ಶಾಸನಸಭೆ ಇರಬೇಕೆಂಬುದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಸಂಘ ಚಾಲಕ ಶ್ರೀ ಗೋಳ್ವಾಲ್ಕರ್ ಅವರ ನಿಲುವು.

'ಆದರೆ ರಾಜ್ಯಗಳ ಶಾಸನಸಭೆಗಳನ್ನೆಲ್ಲಾ ತೊಡೆದುಹಾಕಲು ಸಂವಿಧಾನ ತಿದ್ದುಪಡಿ ಮಾಡುವಂತೆ ಹೇಳುವ ಧೈರ್ಯ ಯಾರಿಗೂ ಇಲ್ಲ. ಭಾರತಕ್ಕೆಲ್ಲಾ ಒಂದೇ ಸರ್ಕಾರ ಹೊಂದೋಣ. ಆಡಳಿತ ಅನುಕೂಲಕ್ಕೆ ತಕ್ಕಂತೆ ರಾಷ್ಟ್ರವನ್ನು ವಲಯಗಳಾಗಿ ವಿಂಗಡಿಸಬಹುದು' ಎನ್ನುತ್ತಾರೆ.

'ವಲಯಗಳು ಕೆಲವೇ ಆಗಬಹುದು, ಹಲವು ಆಗಬಹುದು. ಜನತೆ ಒಂದು, ಸರ್ಕಾರ ಒಂದು, ಶಾಸನಸಭೆ ಒಂದು ಆಗಬೇಕು' ಎಂದು ಪತ್ರಿಕಾಗೋಷ್ಠಿಯಲ್ಲಿ ಪ್ರತಿಪಾದಿಸಿದರು. 'ಪ್ರಜಾಪ್ರಭುತ್ವ ದೃಷ್ಟಿಯಿಂದ ರಾಜ್ಯಗಳ ಶಾಸನಸಭೆಗಳಿರಬೇಕೆಂದು ವಾದಿಸುತ್ತಾರೆ. ಆದರೆ ಹಲವಾರು ರಾಜ್ಯ ಘಟಕಗಳಿರುವುದಕ್ಕೂ ಪ್ರಜಾಪ್ರಭುತ್ವಕ್ಕೂ ಏನು ಸಂಬಂಧವಿದೆಯೋ ಗೊತ್ತಿಲ್ಲ' ಎಂದರು.

• **ರಾಜ್ಯಪಾಲರ ಮಧ್ಯಪ್ರವೇಶ, ಇಲ್ಲವಾದರೆ ರಾಜ್ಯದಾದ್ಯಂತ ಸತ್ಯಾಗ್ರಹ**

ಬೆಂಗಳೂರು, ಫೆ. 3– ಕ್ಷಾಮದ ದವಡೆಗೆ ಸಿಕ್ಕಿರುವ ಜನ ಮತ್ತು ಜಾನುವಾರುಗಳನ್ನು ರಕ್ಷಿಸಲು ಸರ್ಕಾರಕ್ಕೆ ಶಕ್ತಿ ಸಾಮರ್ಥ್ಯ ಇಲ್ಲವೆಂದು ಎಂ.ಪಿ.ಸಿ.ಸಿ (ಸಂಸ್ಥಾ) ಇಂದು ಇಲ್ಲಿ ಟೀಕಿಸಿ, ರಾಜ್ಯಪಾಲರು ಮಧ್ಯ ಪ್ರವೇಶಿಸದಿದ್ದರೆ ರಾಜ್ಯದಲ್ಲಿ ಶಾಂತಿಯುತ ಸತ್ಯಾಗ್ರಹ ಹೂಡಲು ನಿರ್ಧರಿಸಿತು.

ಆರ್ಥಿಕ ಪ್ರಗತಿಯ ಫಲದ ನ್ಯಾಯಯುತ ಹಂಚಿಕೆಯೂ ಸರ್ಕಾರದ ಹೊಣೆಯೇ ಆಗಿದೆ

ಸಾಮಾನ್ಯರ ಆತಂಕ ಮತ್ತು ಬಜೆಟ್ ಸ್ಪಂದನ

ವಿಶ್ಲೇಷಣೆ
ಟಿ.ಎಸ್. ವೇಣುಗೋಪಾಲ್

ನಿರ್ಮಲಾ ಸೀತಾರಾಮನ್ ಅವರ 2023–24ರ ಬಜೆಟ್ ಚುನಾವಣೆ ಮೇಲೆ ದೃಷ್ಟಿ ನೆಟ್ಟಿರುತ್ತದೆ ಎಂಬುದು ಅನೇಕರ ಅಭಿಪ್ರಾಯವಾಗಿತ್ತು. ಅದು ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ನಿಜವಾಗಿದೆ. ಬರಲಿರುವ ಚುನಾವಣೆಗಳ ಹಿನ್ನೆಲೆಯಲ್ಲಿ ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚಿನ ಬೆಂಬಲ ಸಿಗಬಹುದು ಎಂದೂ ನಿರೀಕ್ಷಿಸಲಾಗಿತ್ತು. ಆದರೆ ಈ ನಿರೀಕ್ಷೆ ಹುಸಿಯಾಗಿದೆ. ಸರ್ಕಾರಕ್ಕೆ ಚುನಾವಣೆ ಗೆಲ್ಲುವುದಕ್ಕೆ ಇಂತಹ ಜನಪರ ಕಾರ್ಯಕ್ರಮಗಳಿಗಿಂತ ಬೇರೆಯೇ ಯೋಜನೆ ಮನಸ್ಸಿನಲ್ಲಿ ಇದ್ದಿರಬಹುದು.

ಇದಕ್ಕೆ ತೆಕ್ಕೆಹಾಕಿಕೊಂಡಂತಹ ಇನ್ನೊಂದು ಪ್ರವೃತ್ತಿ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿದೆ. ದೇಶದ ಆರ್ಥಿಕತೆಯಲ್ಲಿ ರಾಜ್ಯಗಳ ಪಾತ್ರ ಕಡಿಮೆಯಾಗುತ್ತಿದೆ. ಆಡಳಿತ ಹೆಚ್ಚೆಚ್ಚು ಕೇಂದ್ರೀಕೃತವಾಗುತ್ತಿದೆ. ಇದು ಮುಖ್ಯವಾದ ಅಂಶ. ರಾಜ್ಯ ಸರ್ಕಾರಗಳ ಜೊತೆ ಚರ್ಚಿಸದೆಯೇ ಹಲವು ಯೋಜನೆಗಳನ್ನು ರೂಪಿಸುವ ಪ್ರವೃತ್ತಿ ಕೂಡ ಹೆಚ್ಚುತ್ತಿದೆ. ಆದರೆ ಅವುಗಳನ್ನು ಅನುಷ್ಠಾನಕ್ಕೆ ತರುವ ಜವಾಬ್ದಾರಿ ರಾಜ್ಯಗಳ ಮೇಲಿರುತ್ತದೆ. ಅದರ ಪರಿಣಾಮವನ್ನೂ ಅವೇ ಎದುರಿಸಬೇಕಾಗುತ್ತದೆ. ಇದು ಒಕ್ಕೂಟ ವ್ಯವಸ್ಥೆಯ ಪರಿಕಲ್ಪನೆಗೇ ವಿರುದ್ಧವಾದದ್ದು. ಈ ಬಜೆಟ್‌ನಲ್ಲೂ ಈ ಪ್ರವೃತ್ತಿ ಸ್ಪಷ್ಟವಾಗಿ ಕಾಣಿಸಿಕೊಂಡಿದೆ.

ರಾಜ್ಯ ಸರ್ಕಾರಗಳಿಗೆ ಬಂಡವಾಳದ ವೆಚ್ಚ ಭರಿಸಲು ದೊಡ್ಡ ಪ್ರಮಾಣದಲ್ಲಿ ಹಣವನ್ನು ನೀಡಲಾಗಿದೆ ಎಂದು ಹಣಕಾಸು ಸಚಿವರು ಹೇಳಿಕೊಂಡಿದ್ದಾರೆ. ಆದರೆ ವಾಸ್ತವವೆಂದರೆ, ರಾಜ್ಯಗಳಿಗೆ ವರ್ಗಾಯಿಸುತ್ತಿರುವ ಅನುದಾನದಲ್ಲಿ ಕಡಿತವಾಗಿದೆ. 2021-22ರಲ್ಲಿ ₹ 4,60,575 ಕೋಟಿಯಷ್ಟು ಮೊತ್ತವನ್ನು ರಾಜ್ಯ ಸರ್ಕಾರಗಳಿಗೆ ವರ್ಗಾಯಿಸಲಾಗಿತ್ತು. 2022-23ರಲ್ಲಿ ಅದು ₹ 3,67,204 ಕೋಟಿಗೆ ಇಳಿಯಿತು. ಈ ಸಲ ಅದು ₹ 3,59,470 ಕೋಟಿಯಾಗಿದೆ. ಹಾಗೆಯೇ ಒಟ್ಟಾರೆ ತೆರಿಗೆ ಸಂಗ್ರಹದಲ್ಲಿ ರಾಜ್ಯಗಳಿಗೆ ಸಿಗುತ್ತಿರುವ ಪಾಲು ಕೂಡ ಕಡಿಮೆಯಾಗುತ್ತಿದೆ.

ಸರ್ಕಾರವೇ ಒಪ್ಪಿಕೊಂಡ, 14ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ, ಒಟ್ಟು ತೆರಿಗೆಯಲ್ಲಿ ಶೇ 42ರಷ್ಟನ್ನು ರಾಜ್ಯ ಸರ್ಕಾರಗಳಿಗೆ ನೀಡಬೇಕಿತ್ತು. ಆದರೆ ಈ ಬಜೆಟ್‌ನಲ್ಲಿ ರಾಜ್ಯಗಳಿಗೆ ಸಿಗುತ್ತಿರುವುದು ಬರೀ ಶೇ 30.4ರಷ್ಟು. ಸಂಪನ್ಮೂಲ ಸಂಗ್ರಹಕ್ಕೆ ಇರುವ ದಾರಿಗಳು ಕಡಿಮೆಯಾದ್ದರಿಂದ ರಾಜ್ಯಗಳು ತಮ್ಮದೇ ಆದ ಜನಕಲ್ಯಾಣ ಯೋಜನೆಗಳನ್ನು ಹಮ್ಮಿಕೊಳ್ಳುವುದು ಕಷ್ಟವಾಗುತ್ತದೆ. ಕೇಂದ್ರವನ್ನು ಹೆಚ್ಚೆಚ್ಚು ಅವಲಂಬಿಸಬೇಕಾಗಿರುವುದು ಸುಭದ್ರ ಒಕ್ಕೂಟ ವ್ಯವಸ್ಥೆಯ ದೃಷ್ಟಿಯಿಂದ ಒಳ್ಳೆಯದಲ್ಲ. ಈ ಹಿನ್ನೆಲೆಯಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳ ಅನುಷ್ಠಾನದಲ್ಲಿ ಕೇಂದ್ರದ ಪಾತ್ರ ಮುಖ್ಯವಾಗುತ್ತದೆ. ಆ ದೃಷ್ಟಿಯಿಂದ ಈ ಬಜೆಟ್ ನಿರಾಶಾದಾಯಕವಾಗಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಮನರೇಗಾ), ಸಾಮಾಜಿಕ ಸುರಕ್ಷಾ ಪಿಂಚಣಿಗಳು, ಮಕ್ಕಳ ಪೌಷ್ಟಿಕಾಂಶ ಯೋಜನೆ ಹಾಗೂ ಹೆರಿಗೆ ಅನುಕೂಲಗಳು ಇವುಗಳಿಗೆ ಒಟ್ಟಾಗಿ ಮಾಡುತ್ತಿರುವ ಖರ್ಚು 20 ವರ್ಷಗಳ ಹಿಂದಿನ ಮಟ್ಟಕ್ಕೆ ಇಳಿದಿದೆ. ಉದ್ಯೋಗ ಸೃಷ್ಟಿ, ಪೌಷ್ಟಿಕತೆ, ಆರೋಗ್ಯ, ಶಿಕ್ಷಣದಂತಹ ಕ್ಷೇತ್ರಗಳಿಗೆ ಅನುದಾನ ಕಡಿತ ಆಗಿದೆ. ಕೆಲವು ಕಾರ್ಯಕ್ರಮಗಳಿಗೆ ಅನುದಾನದ ಹೆಚ್ಚಳವಾಗಿದ್ದರೂ ಹಣದುಬ್ಬರದ ಪ್ರಮಾಣ ಗಣನೆಗೆ ತೆಗೆದುಕೊಂಡರೆ ಅದು ಕೂಡ ಕಡಿಮೆಯಾಗಿದೆಯೆಂದು ಹೇಳಬಹುದು. ಗ್ರಾಮೀಣಾಭಿವೃದ್ಧಿ ಸಚಿವಾಲಯದ ಅನುದಾನವನ್ನು ಶೇ 13ರಷ್ಟು ಕಡಿತ ಮಾಡಲಾಗಿದ್ದು, ಅದನ್ನು ₹ 1.81 ಲಕ್ಷ ಕೋಟಿಯಿಂದ ₹ 1.57 ಲಕ್ಷ ಕೋಟಿಗೆ ಇಳಿಸಲಾಗಿದೆ. ಹಾಗೆಯೇ ರಾಷ್ಟ್ರೀಯ ಆಹಾರ ಸುರಕ್ಷಾ ಕಾಯ್ದೆಯ ಬಾಬ್ತನ್ನು ₹ 2.15 ಲಕ್ಷ ಕೋಟಿಯಿಂದ ₹ 1.35 ಲಕ್ಷ ಕೋಟಿಗೆ ಇಳಿಸಲಾಗಿದೆ. ಹಾಗಾಗಿ ಕೊರೊನಾ ಸಮಯದಲ್ಲಿ ಕೊಡುತ್ತಿದ್ದ ತಲಾ 5 ಕೆ.ಜಿ. ಪಡಿತರ ಮುಂದುವರಿಯುವ ಸಾಧ್ಯತೆ ಕಡಿಮೆ.

ಭಾರತದ ಜಿಡಿಪಿ ಗಾತ್ರವು ವಿಶ್ವದಲ್ಲಿ ಐದನೆಯ ಅತಿದೊಡ್ಡದು ಎಂದು ಹೇಳಿಕೊಂಡರೂ 81 ಕೋಟಿ ಜನರಿಗೆ ಪುಕ್ಕಟೆ ಪಡಿತರ ಕೊಡಬೇಕಾದ ಸ್ಥಿತಿಯಲ್ಲಿ ನಾವಿದ್ದೇವೆ ಅನ್ನುವ ವಾಸ್ತವವನ್ನು ನಿರ್ಲಕ್ಷಿಸುವುದಕ್ಕೆ ಸಾಧ್ಯವಿಲ್ಲ. ಹಾಗಾಗಿಯೇ ಆಹಾರಕ್ಕೆ ನೀಡುವ ಸಬ್ಸಿಡಿಯಲ್ಲಿ ₹ 80 ಸಾವಿರ ಕೋಟಿಯಷ್ಟು ಕಡಿಮೆಯಾಗಿರುವುದು ಟೀಕೆಗೆ ಗುರಿಯಾಗಿದೆ. ಅದು ಇಂದು ದೇಶವನ್ನು ಕಾಡುತ್ತಿರುವ ಅಪೌಷ್ಟಿಕತೆ ಹಾಗೂ ಹಸಿವಿನ ಸಮಸ್ಯೆಯ ಹಿನ್ನೆಲೆಯಲ್ಲಿ ಗಂಭೀರವಾದದ್ದು. ಇದರ ಪರಿಣಾಮವಾಗಿ ಗ್ರಾಮೀಣ ಕುಟುಂಬಗಳು ಮಾರುಕಟ್ಟೆಯ ಬೆಲೆ ತೆತ್ತು ಆಹಾರಧಾನ್ಯಗಳನ್ನು ಕೊಳ್ಳಬೇಕಾಗಬಹುದು. ಜೊತೆಗೆ ರೈತ ಸಂಘಟನೆಗಳು ಗುರುತಿಸಿರುವಂತೆ, ಇದರಿಂದ ಆಹಾರಧಾನ್ಯಗಳ ಸಂಗ್ರಹದಲ್ಲೂ ಇಳಿಕೆಯಾಗುತ್ತದೆ.

ಗ್ರಾಮೀಣ ಬಡವರಿಗೆ ಜೀವನಕ್ಕೆ ಆಸರೆಯಾಗಿದ್ದ ಮನರೇಗಾ ಅನುದಾನವು ₹ 89,000 ಕೋಟಿಯಿಂದ ₹ 60,000 ಕೋಟಿಗೆ ಇಳಿದಿದೆ. ಮನರೇಗಾ ಸಂಘರ್ಷ ಮೋರ್ಚಾದ ನಿಖಿಲ್ ಡೆ ಅವರ ಪ್ರಕಾರ 'ಇದು ಕೊಲೆ. ಸರ್ಕಾರ ಯೋಜನೆಯನ್ನು ಕೊಲ್ಲುತ್ತಿದೆ. ಪ್ರತೀ ಕುಟುಂಬಕ್ಕೆ ನೂರು ದಿನದ ಕೂಲಿಯನ್ನು ಲೆಕ್ಕ ಹಾಕಿದರೆ ₹ 1.76 ಲಕ್ಷ ಕೋಟಿ ಬೇಕಾಗುತ್ತದೆ. ಸಾಮಗ್ರಿಗಳ ಖರ್ಚು ಸೇರಿ ಅದು ₹ 2.46 ಲಕ್ಷ ಕೋಟಿಯಷ್ಟಾಗುತ್ತದೆ. ಅದಕ್ಕೆ ಇನ್ನೂ ಪಾವತಿಸದೇ ಉಳಿದಿರುವ ₹ 25,800 ಕೋಟಿ ಸೇರಿದರೆ ₹ 2.72 ಲಕ್ಷ ಕೋಟಿಯಾಗುತ್ತದೆ. ಆದರೆ ಈಗ ನಿಗದಿಗೊಳಿಸಿರುವುದು ಕೇವಲ ₹ 60,000 ಕೋಟಿ. ಆ ಮೊತ್ತದಲ್ಲಿ ಹೆಚ್ಚೆಂದರೆ ಪ್ರತೀ ಕುಟುಂಬಕ್ಕೆ 48 ದಿನಗಳ ಉದ್ಯೋಗ ನೀಡಬಹುದು'. ನಿರುದ್ಯೋಗದ ಪ್ರಮಾಣ ತೀವ್ರವಾಗುತ್ತಿರುವ ಈ ಸಮಯದಲ್ಲಿ ಇದರಿಂದ ಸಮಸ್ಯೆ ಇನ್ನಷ್ಟು ಬಿಗಡಾಯಿಸುತ್ತದೆ. ಸರ್ಕಾರ ಈ ಯೋಜನೆಗಳಲ್ಲಿ ಹೆಚ್ಚಿನ ಹಣ ತೊಡಗಿಸಬೇಕು. ಅಷ್ಟೇ ಅಲ್ಲ ನಗರ ಪ್ರದೇಶಗಳಲ್ಲೂ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ದಿಸೆಯಲ್ಲಿ ಯೋಚಿಸಬೇಕು.

ಹಣದುಬ್ಬರದ ಪ್ರಮಾಣವನ್ನು ಗಮನಕ್ಕೆ ತೆಗೆದುಕೊಂಡರೆ, ರಾಷ್ಟ್ರೀಯ ಆರೋಗ್ಯ ಯೋಜನೆಗೆ ಹಾಗೂ ಶಿಕ್ಷಣಕ್ಕೆ ಮಾಡಿರುವ ಹೆಚ್ಚಳವೂ ಕಡಿಮೆಯೇ. ಸಾರ್ವಜನಿಕ ಆರೋಗ್ಯ ವಿಮಾ ಯೋಜನೆಯಾದ ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆಗೆ 2022ರಲ್ಲಿ ₹ 8,270 ಕೋಟಿ ಖರ್ಚು ಮಾಡಲಾಗಿತ್ತು. ಆದರೆ ಈ ಬಜೆಟ್ಟಿನಲ್ಲಿ ಅದಕ್ಕೆ ₹ 3,365 ಕೋಟಿಗಳನ್ನು ಮೀಸಲಿಡಲಾಗಿದೆ. ಹಾಗಾಗಿ ಈಗಾಗಲೇ ವಿಮೆ ಪಡೆದುಕೊಂಡವರ ಆತಂಕ ಸಹಜವಾದದ್ದು.

ರೈತರ ವಿಷಯದಲ್ಲೂ ಹೀಗೆಯೇ ಆಗಿದೆ. ಅಲ್ಲಿಯ ಅಂಕಿ ಅಂಶಗಳು ತಮಾಷೆಯಾಗಿವೆ. ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಕೊಡುವ ಉದ್ದೇಶದಿಂದ ದೊಡ್ಡದಾಗಿ ಪ್ರಾರಂಭಿಸಿದ್ದ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಗೆ ಕಳೆದ ಬಜೆಟ್‌ನಲ್ಲಿ ₹ 1,500 ಕೋಟಿ ತೆಗೆದಿರಿಸಲಾಗಿತ್ತು. ಅದು, ಈ ವರ್ಷ ಕೇವಲ ಒಂದು ಲಕ್ಷ ರೂಪಾಯಿಗೆ ಇಳಿದಿದೆ. ಪಿಎಂ ಕಿಸಾನ್ ಪಾವತಿ ಯೋಜನೆಯಲ್ಲಿ ಪ್ರತೀ ರೈತರಿಗೆ ನೀಡುವ ಹಣವನ್ನು ₹ 6000ದಿಂದ ₹ 8000ಕ್ಕೆ ಹೆಚ್ಚಿಸುವುದಾಗಿ ಹೇಳಲಾಗಿದೆ. ಆದರೆ ಅದಕ್ಕೆ ತೆಗೆದಿರಿಸುವ ಮೊತ್ತದಲ್ಲಿ ಹೆಚ್ಚಳ ಆಗಿಲ್ಲ!

ದುರಂತವೆಂದರೆ, ವೃದ್ಧರಿಗೆ ನೀಡುತ್ತಿರುವ ಪಿಂಚಣಿಯ ಮೊತ್ತದಲ್ಲಿ 16 ವರ್ಷಗಳಿಂದ ಯಾವುದೇ ಬದಲಾವಣೆ ಆಗಿಲ್ಲ. ಈಗಲೂ ತಿಂಗಳಿಗೆ ₹ 200ನ್ನೇ ನೀಡಲಾಗುತ್ತಿದೆ. ಒಟ್ಟಾರೆಯಾಗಿ ಈ ಎಲ್ಲ ಜನಕಲ್ಯಾಣ ಕಾರ್ಯಕ್ರಮಗಳೂ ಸಾಮಾನ್ಯ ಜನರ ಜೀವನಮಟ್ಟವನ್ನು ಪ್ರಭಾವಿಸುವ ಕಾರ್ಯಕ್ರಮಗಳು. ಆರೋಗ್ಯ, ಶಿಕ್ಷಣ ಇವುಗಳು ಸಾಮಾಜಿಕವಾಗಿ ಅನುಕೂಲಕರ ಮಾತ್ರವಲ್ಲ, ಆರ್ಥಿಕವಾಗಿಯೂ ಪರಿಣಾಮ ಬೀರುತ್ತವೆ. ಇಂತಹ ಕಾರ್ಯಕ್ರಮಗಳು ಜನರಲ್ಲಿ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುತ್ತವೆ. ಗ್ರಾಹಕರ ಸರಕಿಗೆ ಬೇಡಿಕೆ ಹೆಚ್ಚುತ್ತದೆ. ಅದರಿಂದ ಉತ್ಪಾದನೆಯೂ ಹೆಚ್ಚುತ್ತದೆ. ಸರಕು ಉತ್ಪಾದನೆಯಲ್ಲಿ ಗಣನೀಯ ಇಳಿಕೆ ಕಾಣುತ್ತಿರುವ ಈ ಸಂದರ್ಭದಲ್ಲಿ ಇದು ಮುಖ್ಯ. ಅದು ನೇರವಾಗಿ ಖಾಸಗಿ ಹೂಡಿಕೆಯನ್ನೂ ಹೆಚ್ಚಿಸಬಲ್ಲದು. ಉದ್ಯೋಗ ಸೃಷ್ಟಿಯೂ ಸಾಧ್ಯವಾಗಬಹುದು. ಜೊತೆಗೆ ಅಸಮಾನತೆ ಹೆಚ್ಚುತ್ತಿರುವ ಈ ಸಮಯದಲ್ಲಿ ಇಂತಹ ಜನಕಲ್ಯಾಣ ಕಾರ್ಯಕ್ರಮಗಳನ್ನು ಹೆಚ್ಚಿಸುವುದು, ಅದರಲ್ಲಿ ಹಣ ತೊಡಗಿಸುವುದು ಸರ್ಕಾರಗಳ ನೈತಿಕ ಜವಾಬ್ದಾರಿಯೂ ಹೌದು. ಆರ್ಥಿಕ ಪ್ರಗತಿಯನ್ನು ಸಾಧ್ಯವಾಗಿಸುವುದಷ್ಟೇ ಅಲ್ಲದೆ ಪ್ರಗತಿಯ ಫಲದ ನ್ಯಾಯಯುತ ಹಂಚಿಕೆಯೂ ಸರ್ಕಾರದ ಹೊಣೆ.

ಬಂಡವಾಳದ ವೆಚ್ಚವನ್ನು ಹೆಚ್ಚಿಸಿ, ಪ್ರಗತಿಯನ್ನು ಸಾಧಿಸಬಹುದೆನ್ನುವ ಮಾರ್ಗ ಸುಭದ್ರ ಆರ್ಥಿಕತೆಯನ್ನು ಕಟ್ಟಿಕೊಡುವುದಿಲ್ಲ. ಇದನ್ನು ಇತ್ತೀಚಿನ ಬೆಳವಣಿಗೆ ತೋರಿಸಿದೆ. ಜೊತೆಗೆ ಅಸಮಾನತೆಯನ್ನು ತೀವ್ರಗೊಳಿಸುತ್ತದೆ ಅನ್ನುವುದನ್ನೂ ಚರಿತ್ರೆ ತಿಳಿಸಿದೆ. ಬೆಳವಣಿಗೆಯ ಪ್ರಕ್ರಿಯೆಯ ಫಲ ಎಲ್ಲರಿಗೂ ಸಿಗಬೇಕು.

ಚುರುಮುರಿ

ಓಲ್ಡ್ ಔಟು, ಗೋಲ್ಡ್ ಹೈಟು!

• ತುರುವೇಕೆರೆ ಪ್ರಸಾದ್

ಪರ್ಮೇಶಿ ಪೇಪರ್ ಹಿಡ್ಕೊಂಡು ಕೂತಿದ್ದ. ಪದ್ದಮ್ಮ ಬಂದ್ರು: 'ಏನ್ರೀ ನಿಮಗೇನನಿಸುತ್ತೆ ಬಜೆಟ್ಟು?'

'ನನಗೆ ಏನು ಅನಿಸಿ ಏನು ಪ್ರಯೋಜನ? ನನ್ನ ಮೂತಿಗೆ ಮೈಕ್ ಹಿಡಿದು ಕೇಳೋರು ಯಾರು? ಎಲ್ಲಾ ಮೊಸರನ್ನ ಮೆತ್ತೋರೇ! ಕೆಲವರು ಬಜೆಟ್‌ನ ಅಬ್ಬಬ್ಬಾ ಅಂತಾರೆ. ಕೆಲವು ಜುಬ್ಬಾಗಳು ಡಬ್ಬಾ ಅಂತಾರೆ. ಇದೆಲ್ಲಾ ಇದ್ದಿದ್ದೇ!' ಅಂದ ಪರ್ಮೇಶಿ.

'ನನಗೂ ಯಾಕೋ ಈ ಬಜೆಟ್ ಸಪ್ಪೆ ಅಂತಲೇ ಅನಿಸ್ತಿದೆ ಕಣ್ರೀ'.

'ಯಾಕೇ... ನಿಮಗೆ ಮಹಿಳಾ ಸಮ್ಮಾನ್ ಠೇವಣಿ ಬರ್ತಿದೆಯಲ್ಲ. 2 ಲಕ್ಷ ರೂಪಾಯಿ ಇಟ್ರೆ 7.5 ಪರ್ಸೆಂಟ್ ಬಡ್ಡಿ ಕಣೆ'.

'ಅಯ್ಯೋ! ಠೇವಣಿ ಇಡಕ್ಕೆ 2 ಲಕ್ಷ ಎಲ್ಲಿಂದ ತರೋದು?'

'ಇಲ್ಲಿ ನಮ್ ರಾಜಕೀಯ ಪಕ್ಷದೋರು ಸ್ತ್ರೀ ಶಕ್ತಿ ಸಂಘಗಳ ಸಾಲ ಮನ್ನಾ ಮಾಡ್ತಾರಲ್ಲ, ಅದನ್ನೇ ಠೇವಣಿ ಇಟ್ರಾಯ್ತು'.

'ಒಟ್ನಲ್ಲಿ ಹೆಂಗಸರು ಠೇವಣಿ ಇಟ್ರೇನೆ ಗಂಡಸರ ಠೇವಣಿ ಉಳಿಯೋದು ಅನ್ನೋ ಹಾಗಾಗಿದೆ. ಹಣಕಾಸು ಸಚಿವರೂ ಒಬ್ರು ಹೆಂಗ್ಸಾಗಿ ಹೆಂಗಸರ ಸೆಂಟಿಮೆಂಟೇ ಅರ್ಥ ಆಗಿಲ್ಲವಲ್ರೀ? ಚಿಮಣಿ, ಕರಿಮಣಿ ಎರಡೂ ಹೆಂಗಸರ ಭಾವನಾತ್ಮಕ ವಿಷಯಗಳು. ಅವೆರಡರ ರೇಟೂ ಜಾಸ್ತಿ ಮಾಡೋದು ಸರಿನೇನ್ರೀ?'

'ಅಯ್ಯೋ ನನ್ ಕಷ್ಟ ನನಗೆ, ಅರ್ಥ ಸಚಿವರು ಬೇಡ ಗುಜರಿ ವಾಹನ, ಗುಜರಿ ರಾಜಕೀಯ ಅಂತ ಹೇಳಿದಾರೆ. ನನ್ ವೆಹಿಕಲ್ ಕತೆ ಏನು ಅಂತ ಯೋಚ್ನೆ ಆಗಿದೆ...'

'ಆ ಪುಲ್ಲಿಂಗ್ ಇಲ್ಲದ ಡಬ್ಬ ಗಾಡಿನ ಗುಜರಿಗೆ ಎಸೀರಿ. ಈಗ ಚುನಾವಣಾ ಟೈಮು... ಸಾಲ ಕೊಡ್ಸಕ್ಕೆ ನಾ ಮುಂದು ತಾ ಮುಂದು ಅಂತ ಪಕ್ಷಗಳು ಟೊಂಕ ಕಟ್ಟಿ ನಿಂತಿವೆ. ಸಾಲ ಮಾಡಿ ಒಂದು ಕಾರೇ ತಗೊಳ್ಳಿ. ಹಾಗೇ ನನಗೊಂದಿಷ್ಟು ಚಿನ್ನ ಕೊಡಿಸಿ'.

'ಚಿನ್ನನಾ? ಅದಕ್ಕೆಲ್ಲಿಂದ ದುಡ್ಡು ತರೋದು?'

'ಬಜೆಟ್ಟಲ್ಲಿ ಮೋದಿ ಟ್ಯಾಕ್ಸ್ ರಿಯಾಯಿತಿ ಕೊಟ್ಟಿದಾರಲ್ಲ. 7 ಲಕ್ಷದವರೆಗೆ ಟ್ಯಾಕ್ಸೇ ಇಲ್ವಲ್ಲ. ಆ ಉಳಿಯೋ ಟ್ಯಾಕ್ಸಲ್ಲಿ ನನಗೆ ಚಿನ್ನ ಕೊಡ್ಸಿದ್ರಾಯ್ತು' ನಕ್ಕರು ಪದ್ದಮ್ಮ, ಪರ್ಮೇಶಿ ಆಕಾಶ ನೋಡಿದ.

ಸಂಗತ

ಇವ ಆಗಂತುಕನಲ್ಲ, ಅಪರೂಪದ ಅತಿಥಿ

'ಗ್ರೀನ್ ಕಾಮೆಟ್' ಎಂಬ ಧೂಮಕೇತು ಇದೀಗ ಧರೆಯ ಅತಿಥಿ

• ಬಿ.ಎಸ್.ಭಗವಾನ್

ಕಾಲ, ಉಬ್ಬರವಿಳಿತ ಯಾರಿಗೂ ಕಾಯವು. ಅಂತೆಯೇ ಆಗಾಗ ಭೂಮಿಯತ್ತ ಬರುವ ಧೂಮಕೇತುಗಳು. ನಮ್ಮ ಬದುಕನ್ನು ಧೂಮಕೇತುವಿಗೆ ಹೋಲಿಸುವುದಿದೆ. ರಾತ್ರಿಯ ಆಗಸದಲ್ಲಿ ಬಹುತೇಕ ಯಾರೂ ಗಮನಿಸದಂತೆ ಧೂಮಕೇತು ಹಾದುಹೋಗಿರುತ್ತದೆ. ಧೂಮಕೇತುಗಳು ಅಥವಾ ಬಾಲಚುಕ್ಕಿಗಳು ಸೌರವ್ಯೂಹದ ವಿಶಿಷ್ಟ ಸದಸ್ಯ ಕಾಯಗಳು. ವಿಶೇಷವಾಗಿ ಮಂಜು, ಮೀಥೇನ್, ಕಾರ್ಬನ್ ಡೈ ಆಕ್ಸೈಡ್, ದೂಳು ಹೊತ್ತ ಅವು 'ಕೊಳಕು ಹಿಮಬಂಡೆಗಳು'.

'ಕೋಮಾ' ಎಂಬ ಬೀಜಕೇಂದ್ರ (ತಲೆ), ಸೂರ್ಯನ ಬಳಿ ಬಂದಂತೆ ಬೆಳೆಸಿಕೊಳ್ಳುವ ಉದ್ದನೆಯ ಬಾಲ, ಚಿತ್ರವಿಚಿತ್ರ ಚಹರೆ ಮುಂದೇನು ವಿಪತ್ತೋ ಎಂಬ ಭಯ ಹುಟ್ಟಿಸುತ್ತದೆ. ಆದರೆ ವಾಸ್ತವವೆಂದರೆ, ಧೂಮಕೇತುವನ್ನೂ ಒಳಗೊಂಡಂತೆ ಭೂಮಿಯನ್ನು ಬಾಧಿಸುವ ಯಾವುದೇ ಖಗೋಳ ವಿದ್ಯಮಾನಗಳಿಲ್ಲ. ಬದಲಿಗೆ ಅವೆಲ್ಲ ನಮ್ಮ ಕುತೂಹಲ ಸೆರೆಹಿಡಿಯುವ ಹಾಗೂ ನಾವು ನೋಡಿ ಆನಂದಿಸಿ, ಅರಿಯಬಹುದಾದ ಅಪೂರ್ವ ಅವಕಾಶಗಳು. ಧೂಮಕೇತುವೊಂದು ಗೋಚರಿಸಲಿದೆಯೆಂದರೆ ಜ್ಞಾನದ ಬುತ್ತಿಯೇ ತೆಲೆಬರುತ್ತಿದೆ ಎಂದರ್ಥ.

ಇದೀಗ 'ಗ್ರೀನ್ ಕಾಮೆಟ್' ಎಂಬ ಧೂಮಕೇತು ಧರೆಯ ಅತಿಥಿ. ಸ್ಯಾಂಡಿಯಾಗೊದ ಒರೆಗಾನ್ ಖಗೋಳ ವೀಕ್ಷಣಾಲಯದಲ್ಲಿ 'ಜೇಮ್ಸ್ ವೆಬ್ ಟೆಲಿಸ್ಕೋಪ್' ಎಂಬ ಅತ್ಯಾಧುನಿಕ ದೂರದರ್ಶಕ ಬಳಸಿ ವಿಜ್ಞಾನಿಗಳು 2022ರ ಮಾರ್ಚ್ 2ರಂದು ಈ ಧೂಮಕೇತುವನ್ನು ಪತ್ತೆಹಚ್ಚಿದರು. ಒಂದೂವರೆ ಕಿ.ಮೀ. ಅಡ್ಡಗಲದ ತಲೆಯುಳ್ಳ ಈ ಧೂಮಕೇತುವಿನ ಬಾಲವು ಲಕ್ಷಾಂತರ ಕಿ.ಮೀ.ತನಕ ಬೆಳೆಯಬಹುದು. ಪ್ರತೀ 50,000 ವರ್ಷಗಳಿಗೊಮ್ಮೆ ಅದು ಸೂರ್ಯನನ್ನು ದೀರ್ಘವೃತ್ತಾಕಾರದ ಕಕ್ಷೆಯಲ್ಲಿ ಬಳಸುತ್ತದೆ.

ಹಿಂದಿನ ಬಾರಿ ಈ ಹಸಿರು ಬಾಲಕೇತು ಬಂದಿದ್ದಾಗ ಸುಮಾರು ಒಂದು ಲಕ್ಷ ವರ್ಷಗಳಷ್ಟು ಹಿಂದೆ ಜೀವಿಸಿದ್ದ ನಿಯಾಂಡರ್ತಲ್ ಅಥವಾ ಪ್ರಾಗ್ ಶಿಲಾಯುಗದ ಮಾನವರು ಭೂಗ್ರಹದಲ್ಲಿ ಅಲ್ಲಲ್ಲಿ ಅಡ್ಡಾಡುತ್ತಿದ್ದರು. ನೇರ ನಡೆಯಲೂ ಬಾರದ ಅವರು ಆಗತಾನೆ ಆಫ್ರಿಕಾದಿಂದ ಹೊರಬಂದಿದ್ದರು. ಅವರಾದರೋ ಅತಿಥಿಯನ್ನು ಕಂಡಿದ್ದರು ಎನ್ನುವಂತಿಲ್ಲ. ಏಕೆಂದರೆ ದುರ್ಬೀನು, ದೂರದರ್ಶಕಗಳು ಅವರಿಗೆ ಎಲ್ಲಿಂದ ಬರಬೇಕು? ಗ್ರೀನ್ ಕಾಮೆಟ್‌ನ ಕಕ್ಷೆಯ ಉತ್ಕೇಂದ್ರತೆ (eccentricity) ಎಷ್ಟು ಅಧಿಕವೆಂದರೆ, ಅದು ಮತ್ತೆ ಭೂಮಿಯತ್ತ ಬರುವ ಸಾಧ್ಯತೆ ಅತ್ಯಲ್ಪ. ಹಾಗಾಗಿ ಈ ಹಸಿರು ನೆಂಟನನ್ನು ಕಣ್ತುಂಬಿಕೊಳ್ಳುವ ಯೋಗ ಹಾಲಿ ಮತ್ತು ಕೊನೆಯ ಮಾನವ ಪೀಳಿಗೆ ನಮ್ಮದೆನ್ನೋಣ.

ಕೆಲ ಧೂಮಕೇತುಗಳಿಗೆ ಶಿರೋಭಾಗದಲ್ಲಿ ಹಸಿರು ಕಾಂತಿ ಏಕೆ? ವಿವರಣೆಗೆ ಖಗೋಳ ವಿಜ್ಞಾನಿಗಳು ತೊಂಬತ್ತು ವರ್ಷಗಳವರೆಗೆ ಹೆಣಗಾಡಿದರು. ಕಡೆಗೆ ಧರೆಯಲ್ಲೇ ಕ್ಷಣಿಕವಾಗಿ ಅಸ್ತಿತ್ವವಿದ್ದು ಇಲ್ಲವಾಗುವ, ಗ್ರಹಿಕೆಗೆ ನಿಲುಕದ ಅಣುವೊಂದು ಒಗಟು ಬಿಡಿಸಲು ಕೀಲಿಕೈಯಾಯಿತು. ಹಸಿರು ಪಚ್ಚೆಯ ಬಣ್ಣ ಧೂಮಕೇತುವಿನ ರಾಸಾಯನಿಕ ರಚನೆಯನ್ನು ಬಿಂಬಿಸುವುದು. ಸೂರ್ಯರಶ್ಮಿ ಮತ್ತು 'ಕೋಮಾ'ದಲ್ಲಿನ ಇಂಗಾಲ ಮೂಲ ಅಣುಗಳ ಸಂಘರ್ಷದ ಪರಿಣಾಮವೇ ಕಣ್ಣಿಗೆ ತಂಪೆರೆಯುವ ಆಕರ್ಷಕ ಹಸಿರು.

'ಕಾಮೆಟ್ ಗ್ರೀನ್' ಜನವರಿ ಕೊನೆಯ ವಾರದಿಂದಲೇ ಗೋಚರಿಸಲಾರಂಭಿಸಿದೆ. ಮುಸ್ಸಂಜೆಯ ನಂತರ ಮರುದಿನದ ಮುಂಬೆಳಗಿನ ತನಕ ವೀಕ್ಷಿಸಲು ಯುಕ್ತ ಸಮಯ. ಫೆಬ್ರುವರಿ 2ರಂದು ಉತ್ತರಾರ್ಧ ಗೋಳಾಕಾಶದಲ್ಲಿ 45 ಡಿಗ್ರಿ ಎತ್ತರದಲ್ಲಿ ಅತಿಥಿಯನ್ನು ಕಾಣಬಹುದಿತ್ತು. ಫೆಬ್ರುವರಿ ಮೊದಲ ವಾರದವರೆಗೆ ಅದನ್ನು ವೀಕ್ಷಿಸಬಹುದು. ನಂತರ ಅದು 'ದೀರ್ಘಕಂಠ' ಎಂದು ಗುರುತಿಸಲ್ಪಡುವ ಮಸುಕಾದ ನಕ್ಷತ್ರಪುಂಜದ ಹಿನ್ನೆಲೆಯಲ್ಲಿ ಪಯಣಿಸುತ್ತದೆ. ವಿರಳಾತೀತ ಮಿತ್ರನನ್ನು ಬೀಳ್ಕೊಡದೇ ವಿಧಿಯಿಲ್ಲ.

ದುರ್ದೈವವೆಂದರೆ, ಆಕಾಶ ನೋಡುವುದಕ್ಕೆ ನೂಕುನುಗ್ಗಲೇಕೆ ಎನ್ನುವ ದಿನಗಳು ಈಗಿಲ್ಲ. ಪ್ರಕೃತಿಕೃತ ಅಡೆತಡೆಗಳಿಗೆ ಏನೂ ಮಾಡಲಾಗದು. ಆದರೆ ನಮ್ಮ ಕೈಯಾರೆ ಆಗುವ ವಿಘ್ನಗಳು? ಮನುಷ್ಯಕೃತ ಪರಿಸರ ಮಾಲಿನ್ಯಗಳ ಯಾದಿಗೆ ಬೆಳಕಿನ ಮಾಲಿನ್ಯವೂ ಸೇರಿಬಿಟ್ಟಿದೆ. ಸೂರ್ಯ, ಚಂದ್ರರ ಉದಯ, ಅಸ್ತಗಳನ್ನು ಸವಿಯಲು ನಗರಪ್ರದೇಶಗಳನ್ನು ಬಿಟ್ಟು ದೂರ ಹೋದರೂ ಕತ್ತಲೆಯ ಅಭಾವ ಅಟ್ಟಿಸಿಕೊಂಡು ಬಂದಿರುತ್ತದೆ! ಹಾಗಾಗಿ ಮಾಧ್ಯಮದಲ್ಲಿ ವರದಿಯಾಗುವ ಆಗಸದ ಅಚ್ಚರಿಗಳನ್ನು ಕಂಡು ರೋಚಕಗೊಳ್ಳಬೇಕಷ್ಟೆ.

ಸೌರವ್ಯೂಹದ ರಚನೆಯ ನಿಗೂಢತೆ ಭೇದಿಸಲು ಧೂಮಕೇತುಗಳ ವಿಸ್ತೃತ ಅಧ್ಯಯನ ಅನಿವಾರ್ಯ. ಇತಿಹಾಸದಾದ್ಯಂತ ಘಟಿಸಿದ ಅನಾಹುತ, ಅನರ್ಥ, ವಿಪತ್ತುಗಳಿಗೆಲ್ಲ ಧೂಮಕೇತುಗಳನ್ನು ಕಟಕಟೆಯಲ್ಲಿ ನಿಲ್ಲಿಸಲಾಗಿದೆ. ಇತಿಹಾಸಕಾರರಿರಲಿ, ಖಗೋಳತಜ್ಞರೂ ಕಾಕತಾಳೀಯಕ್ಕೆ ಮಾರುಹೋಗಿದ್ದುಂಟು! ಆಗಸ ಆಪ್ತವಾಗಬೇಕೆ ವಿನಾ ಆತಂಕಕ್ಕೆ ಎಡೆಯಾಗಬಾರದು.

ಅಂತರಿಕ್ಷ ತೆರೆದ ಮನಸ್ಸಿನ ಪ್ರತಿರೂಪ. ಈ ವಿರಾಟ್ ರಂಗಸ್ಥಳದಲ್ಲಿ ಪ್ರತ್ಯಕ್ಷವಾಗಿ ನೇಪಥ್ಯಕ್ಕೆ ಸರಿಯುವ ಧೂಮಕೇತುಗಳು ಬದುಕಿನ ನಶ್ವರತೆಯನ್ನು ಬೋಧಿಸುತ್ತವೆ. ಬಾನ ಗುಡಿಸುವ ಪೊರಕೆಗಳೆಂದರೂ ಸರಿಯೆ, ಒಂದಷ್ಟು ಸಂದೇಶ ಬಿತ್ತುತ್ತವೆ ಅವು. ಎಮರ್ಸನ್ ಮಹಾಕವಿಯ ಉದ್ಗಾರ 'ಆಕಾಶದಂತಹ ಆಖೈರು ಚಿತ್ರಶಾಲೆ ಮತ್ತೊಂದಿಲ್ಲ'.

ತಮ್ಮ ಆಯುಷ್ಯದ ಮುಂದೆ ಮನುಷ್ಯನದು ಅತ್ಯಲ್ಪ, ನಗಣ್ಯ ಎಂದು ಸಾರುವ ಧೂಮಕೇತುಗಳಿಗೂ ಅಳಿವು ತಪ್ಪಿದ್ದಲ್ಲ. ಸೌರವ್ಯೂಹದ ಅನ್ಯ ಬಲಶಾಲಿ ಆಕಾಶಕಾಯಗಳಿಗೆ ಬಡಿದೊ, ಗುರುತ್ವಕ್ಕೆ ಸ್ವತಃ ಛಿದ್ರಗೊಂಡೊ, ಇಲ್ಲವೆ ತಮ್ಮಲ್ಲಿನ ಬಾಷ್ಪಶೀಲ ಸಾಮಗ್ರಿಗಳನ್ನು ಕಳೆದುಕೊಂಡೊ ಅವು ಕಾಲಾಂತರದಲ್ಲಿ ಅವಸಾನ ಹೊಂದಲೇಬೇಕು, ಹೊಂದುತ್ತವೆ.

ವಾಚಕರ ವಾಣಿ

ಜನರನ್ನು ಗುತ್ತಿಗೆ ಪಡೆದಂತೆ ವರ್ತಿಸದಿರಿ

ವಿಶ್ವಾಸಾರ್ಹ ಪ್ರಾದೇಶಿಕ ಪಕ್ಷವೊಂದರ ಅವಶ್ಯಕತೆಯನ್ನು ಪ್ರಸ್ತಾಪಿಸಿರುವ ತಿಪ್ಪೂರು ಪುಟ್ಟೇಗೌಡ ಅವರು (ವಾ.ವಾ., ಜ. 31), 'ಕಳಂಕ ತೊಡೆದರಷ್ಟೇ ಜನರ ವಿಶ್ವಾಸ ಗಳಿಕೆ ಸಾಧ್ಯ' ಎಂದು ಹೇಳಿದ್ದಾರೆ. ಹೌದು, ಇದು ಸಮಯೋಚಿತ ಹಾಗೂ ನಾಡಿನ ಜನರ ಆಶಯ ಕೂಡ. ರಾಷ್ಟ್ರೀಯ ಪಕ್ಷಗಳ ರಾಜ್ಯ ನೇತಾರರ ದೈನಂದಿನ ಹಗರಣಗಳು, ಸಿ.ಡಿ.ಗಳು, ಪರಸ್ಪರ ಅಸಹ್ಯವೆನಿಸುವಂತಹ ಮಾತುಗಳು ಜನರಿಗೆ ವಾಕರಿಕೆ ಉಂಟಾಗುವಂತೆ ಮಾಡುತ್ತಿವೆ. ಇನ್ನು ಚುನಾವಣೆ ಮುಗಿಯುವುದರೊಳಗಾಗಿ ಏನೇನು ಅವಾಂತರಗಳು ಸೃಷ್ಟಿಯಾಗಲಿವೆಯೋ ಎಂದು ಆತಂಕವಾಗುತ್ತಿದೆ. ಚುನಾವಣೆ ಕಾಲದ ಘೋಷಣೆಗಳು, ಪ್ರಲೋಭನೆಗಳು, ಶಂಕುಸ್ಥಾಪನೆಗಳು, ಪ್ರಚಾರ, ಪ್ರವಾಸಗಳು, ಯಾತ್ರೆಗಳು, ಮತೀಯ ಪ್ರಚೋದನೆಗಳು ಮತ್ತೊಂದು ರೀತಿಯ ಹೇವರಿಕೆಯನ್ನು ಹುಟ್ಟಿಸುತ್ತಿವೆ. ಭ್ರಷ್ಟಾಚಾರವಂತೂ ಸರ್ವರನ್ನೂ ಆವರಿಸಿಕೊಂಡಿದೆ. ನಾಡಿನ ಜನರಿಗೆ ಯಾರು ಹೇಗೆ ಎನ್ನುವುದು ಗೊತ್ತು. ಚುನಾವಣೆಗೆ ಮೊದಲೇ ಜನರನ್ನು ಗುತ್ತಿಗೆ ಪಡೆದವರಂತೆ ಯಾರೂ ವರ್ತಿಸುವುದು ಅಥವಾ ಮಾತನಾಡುವುದು ಬೇಡ.

ಪ್ರಾದೇಶಿಕ ಜೆಡಿಎಸ್ ಪಕ್ಷವು ಕೌಟುಂಬಿಕ, ಜಾತಿಯ ತೆವಲುಗಳಿಂದ ಮುಕ್ತವಾಗುತ್ತಿಲ್ಲ. ಉತ್ತರ ಕರ್ನಾಟಕದ ಕೆಲವು ನಿಜ ಜಾತ್ಯತೀತರನ್ನು ಅದು ಪೋಷಿಸಿ, ಪ್ರೋತ್ಸಾಹಿಸಿ ತಾನೂ ಜಾತ್ಯತೀತವಾಗಿ ಬೆಳೆಯುತ್ತಾ ಬಂದಿದ್ದರೆ ಹಾಗೂ ನಾಡು ನುಡಿ ಕುರಿತು ನೈಜ ಬದ್ಧತೆ, ಕಾಳಜಿಯನ್ನು ತೋರಿಸುತ್ತಾ ಬಂದಿದ್ದರೆ ನಾಡಿನ ತುಂಬ ಜನ ಅದನ್ನು ಬೆಂಬಲಿಸದೇ ಇರುತ್ತಿರಲಿಲ್ಲ. ಆಗ ನೆರೆ ರಾಜ್ಯಗಳಂತೆ ಕರ್ನಾಟಕಕ್ಕೂ ಒಂದು ಸ್ವಾಭಿಮಾನಿ ಪ್ರಾದೇಶಿಕ ರಾಜಕೀಯ ಪಕ್ಷ ಸಿಕ್ಕಂತೆ ಆಗುತ್ತಿತ್ತು. ಈಗ ಕೇವಲ ಅಡ್ಡಗೋಡೆ ಮೇಲೆ ಕುಳಿತು ಆಟವಾಡುವ ನಿರೀಕ್ಷೆಯನ್ನು ಇಟ್ಟುಕೊಂಡು ಚುನಾವಣೆಯಲ್ಲಿ ಸ್ಪರ್ಧಿಸುವ ಪಕ್ಷವಾಗಿ ಅದು ಮಾರ್ಪಟ್ಟಿದೆ. ಅದರ ಆಚೆ ಅದು ಬೆಳೆಯುವಂತೆ ಕಾಣುವುದಿಲ್ಲ.

ವೆಂಕಟೇಶ ಮಾಚಕನೂರ, ಧಾರವಾಡ

ಎಲ್ಲ ವಾಹನಗಳಿಗೂ ಇರಲಿ ವೇಗಮಿತಿ

ಬೆಂಗಳೂರಿನ ಬನ್ನೇರುಘಟ್ಟ ಮುಖ್ಯ ರಸ್ತೆಯಲ್ಲಿ ಸಂಭವಿಸಿದ ದುರಂತದಲ್ಲಿ ತಾಯಿ, ಮಗಳು ತಮ್ಮ ಕಾರಿನೊಳಗೇ ಸಾವನ್ನಪ್ಪಿರುವುದು ಅತ್ಯಂತ ನೋವಿನ ಸಂಗತಿ. ರಾಜಧಾನಿಯಲ್ಲಿ ಒಂದು ತಿಂಗಳ ಅವಧಿಯಲ್ಲಿ ಸಂಭವಿಸುತ್ತಿರುವ ಇಂಥ ಎರಡನೇ ದುರಂತ ಇದು. ಮೆಟ್ರೊ ಕಾಮಗಾರಿಯ ಪಿಲ್ಲರ್ ಕೆಳಗೆ ಸಿಲುಕಿ ದಾವಣಗೆರೆ ಮೂಲದ ತಾಯಿ, ಮಗು ಮರಣ ಹೊಂದಿದ್ದರು. ಇಷ್ಟೆಲ್ಲಾ ಆದರೂ ಟ್ರಾಫಿಕ್ ವ್ಯವಸ್ಥೆಯಲ್ಲಿ ಗಮನಾರ್ಹ ಬದಲಾವಣೆಗಳೇನೂ ಕಂಡುಬಂದಿಲ್ಲ. ನೂರಾರು ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ಹಾಕುತ್ತಾರೆಯೇ ವಿನಾ ನಗರವ್ಯಾಪ್ತಿಯಲ್ಲಿ ಎಲ್ಲಾ ವಾಹನಗಳ ವೇಗಮಿತಿಯನ್ನು ಕಡಿಮೆ ಮಾಡಲು ಯಾರೂ ಕ್ರಮ ಕೈಗೊಂಡಿಲ್ಲ. ಯಾವುದೇ ರಸ್ತೆ ಇರಲಿ, ಯಾವುದೇ ವಾಹನವಿರಲಿ ವೇಗಮಿತಿ ಗಂಟೆಗೆ ಇಂತಿಷ್ಟು ಕಿ.ಮೀ. ಮೀರಕೂಡದೆಂಬ ಕಾನೂನನ್ನು ಜಾರಿಗೊಳಿಸಬೇಕಾಗಿದೆ.

ಒಂದು ಕೋಟಿಗೂ ಅಧಿಕ ಜನಸಂಖ್ಯೆಯಿರುವ ಬೆಂಗಳೂರಿನಂಥ ನಗರದಲ್ಲಿ, ಒಂದೊಮ್ಮೆ ಖಾಲಿಯಿರುವ ರಸ್ತೆಯಲ್ಲಿ ಸಹ ವೇಗದಿಂದ ಚಲಿಸುವ ವಾಹನಗಳಿಂದ ಕಾಕತಾಳೀಯವಾಗಿ ಅಪಘಾತ ಸಂಭವಿಸುವ ಸಾಧ್ಯತೆ ಇರುತ್ತದೆ. ಬೃಹದಾಕಾರದ ಜೆ.ಸಿ.ಬಿ. ಯಂತ್ರಗಳು, ಸಿಮೆಂಟ್ ಮಿಕ್ಸರ್‌ಗಳು, ಟ್ರ್ಯಾಕ್ಟರ್‌ಗಳು, ಕಸದ ಲಾರಿಗಳು, ಕಸದ ರಿಕ್ಷಾಗಳು ಎಗ್ಗಿಲ್ಲದೆ ಅತ್ಯಂತ ವೇಗವಾಗಿ ನಗರಮಿತಿಯಲ್ಲಿ ಚಲಿಸುವುದನ್ನು ನೋಡುತ್ತಿರುತ್ತೇವೆ. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು.

ಎ.ವಿ.ಮುರಳೀಧರ ಆಚಾರ್ಯ, ಬೆಂಗಳೂರು

ಬಸ್ ಕಾರ್ಯಾಚರಣೆಯ ಮಾಹಿತಿ ಇರಲಿ

ರಾಜ್ಯ ರಸ್ತೆ ಸಾರಿಗೆ ನಿಗಮಗಳ ಬಸ್ಸುಗಳು ಮತ್ತು ಖಾಸಗಿ ವಲಯದ ಬಸ್ಸುಗಳಲ್ಲಿ ಬಸ್ಸಿನ ಸಂಖ್ಯೆ ನಮೂದಿಸಲಾಗಿರುತ್ತದೆ. ಸಾರಿಗೆ ನಿಗಮಗಳ ಕೆಲವು ಬಸ್ಸುಗಳಲ್ಲಿ ಯಾವ ಡಿಪೊಗೆ ಸಂಬಂಧಿಸಿದ್ದು ಎಂಬ ಮಾಹಿತಿಯೂ ಇರುತ್ತದೆ. ಆದರೆ, ಈ ಬಸ್ಸುಗಳು ಯಾವ ವರ್ಷ ಪ್ರಯಾಣಕ್ಕಾಗಿ ರಸ್ತೆಗೆ ಇಳಿದಿವೆ ಎಂಬುದು ಮಾತ್ರ ನಮೂದಾಗಿರುವುದಿಲ್ಲ. ಈಗ ದಿನಂಪ್ರತಿ ರಸ್ತೆ ಅಪಘಾತಗಳು ಹೆಚ್ಚಾಗುತ್ತಿರುವುದಕ್ಕೆ ಪ್ರಮುಖ ಕಾರಣಗಳಲ್ಲಿ, ಈ ಬಸ್ಸುಗಳು ಹಳೆಯವಾಗಿರುವುದೂ ಸೇರಿದೆ. ಹೀಗಾಗಿ, ಜನರಿಗೆ ಇಂತಹದ್ದೊಂದು ಮಾಹಿತಿಯ ಅಗತ್ಯ ಇರುತ್ತದೆ.

ಎಲ್ಲ ಬಸ್ಸುಗಳಲ್ಲೂ ಅವು ಕಾರ್ಯಾಚರಣೆಗೆ ಇಳಿದ ದಿನಾಂಕ, ಎಲ್ಲಿಯವರೆಗೆ ಬಸ್ಸು ಸಂಚಾರಕ್ಕೆ ಯೋಗ್ಯವಾಗಿದೆ ಎಂಬುದನ್ನು ಕಡ್ಡಾಯವಾಗಿ ಹಿಂಬದಿಯಲ್ಲಿ ನಮೂದಿಸುವಂತೆ ನೋಡಿಕೊಳ್ಳಬೇಕು. ಆಗ ಆ ಬಸ್ಸಿನಲ್ಲಿ ತಾವು ಪ್ರಯಾಣಿಸಬಹುದೇ ಬೇಡವೇ ಎಂಬುದನ್ನು ನಿರ್ಧರಿಸಲು ಪ್ರಯಾಣಿಕರಿಗೆ ಸಾಧ್ಯವಾಗುತ್ತದೆ. ಪ್ರಯಾಣಿಕರ ಹಿತದೃಷ್ಟಿಯಿಂದ ಇಂತಹದ್ದೊಂದು ಉಪಕ್ರಮ ಅಗತ್ಯ.

ಮಾನ್ವಿ, ಬಳ್ಳಾರಿ

ಅದೃಶ್ಯ ಮತದಾರರ ನಿರ್ಲಕ್ಷ್ಯ ಸಲ್ಲದು

ಚುನಾವಣೆಗೆ ಮೊದಲು ಎಲ್ಲ ಪಕ್ಷಗಳು 'ಉಚಿತ' ಕೊಡುಗೆಗಳನ್ನು ನೀಡುವ ಭರವಸೆ ನೀಡಿ ಮತ ಸೆಳೆಯಲು ಮುಂದಾಗುತ್ತವೆ. ಆಡಳಿತ ಪಕ್ಷವೂ ತನ್ನ ಇತಿಮಿತಿಯಲ್ಲಿ ಜಾತಿವಾರು ಮತವಾರು ನಿಗಮಗಳಿಗೆ ನಿಂತಲ್ಲಿಯೇ ಕೋಟಿ ಕೋಟಿ ಅನುದಾನ ಪ್ರಕಟಿಸುತ್ತದೆ. ಆದರೆ ಕನ್ನಡ ನಾಡಿನ ಸಂಸ್ಕೃತಿಗೆ ಮತ್ತು ಜ್ಞಾನಕ್ಕೆ ದೇಗುಲವಾದ ಗ್ರಂಥಾಲಯ ಇಲಾಖೆಯನ್ನು, ಲೇಖಕರು, ಪ್ರಕಾಶಕರು ಮತ್ತು ಲಕ್ಷ ಲಕ್ಷ ಪುಸ್ತಕಪ್ರೇಮಿಗಳನ್ನು ಕಡೆಗಣಿಸುವುದು ದಿಗ್ಭ್ರಮೆ ಮೂಡಿಸುತ್ತದೆ. ಕಳೆದ ವರ್ಷ ಪರಿಶಿಷ್ಟ ಜಾತಿ ಯೋಜನೆಯಲ್ಲಿ ಪುಸ್ತಕ ಕೊಳ್ಳಲು ನೀಡಿದ ಅನುದಾನ ಕೇವಲ ಒಂದು ಕೋಟಿ! ಏಕಗವಾಕ್ಷಿ ಅಡಿ ಬಿಡುಗಡೆ ಮಾಡುವ ಹಣ ಕೇವಲ ಕೆಲವು ಕೋಟಿ. ಇಲ್ಲಿ ಇರುವುದು ಹಣದ ಅಭಾವಕ್ಕಿಂತ ಹೆಚ್ಚಾಗಿ ಮುಂದಾಲೋಚನೆಯ ಅಭಾವ. ಇದು ಒಂದು ಮತವನ್ನೂ ಗಳಿಸಲಾರದು ಎನ್ನುವ ಭ್ರಮೆ ಇರಬಹುದೇ?

ಇದೇ ತಪ್ಪು ಲೆಕ್ಕಾಚಾರ. ಇಲ್ಲಿಯ ಫಲಾನುಭವಿಗಳು ಅದೃಶ್ಯ ಮತದಾರರು. ಜಾತಿ ಧರ್ಮ ಮೀರಿದ ಓದಿನ ಸಂಸ್ಕೃತಿಯ ಹರಿಕಾರರು. ಇವರು ಚಲಾಯಿಸುವ ಮತಗಳೇ ಸೋಲು, ಗೆಲುವಿನ ತಕ್ಕಡಿ. ಇವರೇ ಹೊಸ ಪುಸ್ತಕಗಳನ್ನು ಓದಿ ಒಲಿದು, ನೀಡಿದ ಪಕ್ಷವನ್ನು ಮೆಚ್ಚುವವರು. ಇಲ್ಲಿ ಕೇವಲ ಸ್ವಲ್ಪ ನೀಡಿ ಬಹಳಷ್ಟನ್ನು ಪಡೆಯುವುದು ಸಾಧ್ಯ.

ಸತ್ಯಬೋಧ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಯುಜಿಸಿ (ವಿದೇಶಿ ಉನ್ನತ ವಿದ್ಯಾಸಂಸ್ಥೆಗಳನ್ನು ಭಾರತದಲ್ಲಿ ಸ್ಥಾಪಿಸಿ ನಡೆಸುವುದು) ನಿಯಮಗಳು–2023 ಕರಡು ಸಿದ್ಧ

ವಿದೇಶಿ ವಿದ್ಯಾಸಂಸ್ಥೆಗಳಿಗೆ ಕೆಂಪು ಹಾಸು

ಪ್ರಜಾವಾಣಿ ವಾರ್ತೆ

ವಿದೇಶಿ ವಿದ್ಯಾಸಂಸ್ಥೆಗಳು ಭಾರತದಲ್ಲಿ ಕ್ಯಾಂಪಸ್ ಆರಂಭಿಸುವುದಕ್ಕಾಗಿ ಕರಡು ನಿಯಮಗಳನ್ನು ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ರೂಪಿಸಿದೆ. ಸರ್ಕಾರವು ಅಧಿಸೂಚನೆ ಹೊರಡಿಸುವ ಮೂಲಕ ಇದು ಶೀಘ್ರವೇ ಜಾರಿಗೆ ಬರುವ ಸಾಧ್ಯತೆ ಇದೆ. ಆದರೆ, ಈ ನಿಯಮಗಳ ಕುರಿತಂತೆ ಹಲವು ಆಕ್ಷೇಪಗಳನ್ನು ಶಿಕ್ಷಣ ತಜ್ಞರು ವ್ಯಕ್ತಪಡಿಸಿದ್ದಾರೆ. ವಿದೇಶಿ ವಿದ್ಯಾಸಂಸ್ಥೆಗಳನ್ನು ಆರಂಭಿಸಲು ಅನುವು ಮಾಡಿ ಕೊಡುವುದು ಕಳವಳಕಾರಿ ಬೆಳವಣಿಗೆ ಎಂದು ಹಲವರು ಪರಿಣತರು ಅಭಿಪ್ರಾಯಪಟ್ಟಿದ್ದಾರೆ.

ಕಾಯ್ದೆ ಇಲ್ಲ

ಇಂತಹುದೊಂದು ಮಹತ್ವದ ನಿರ್ಧಾರವನ್ನು ಸಂಸತ್ತಿನಲ್ಲಿ ಕಾಯ್ದೆ ರೂಪಿಸುವ ಮೂಲಕ ಜಾರಿಗೆ ತರಲಾಗಿಲ್ಲ. ಬದಲಿಗೆ ಯುಜಿಸಿ ನಿಯಮಗಳನ್ನು ರೂಪಿಸಿದೆ. ಸರ್ಕಾರ ಅಧಿಸೂಚನೆ ಹೊರಡಿಸಿದರೆ ಅದು ಜಾರಿಗೆ ಬಂದು ಬಿಡುತ್ತದೆ. ಇದು ಸರಿಯಾದ ಕ್ರಮ ಅಲ್ಲ ಎಂದು ಶಿಕ್ಷಣ ತಜ್ಞರಲ್ಲಿ ಹಲವರು ಪ್ರತಿಪಾದಿಸಿದ್ದಾರೆ. ಇಂತಹ ಪ್ರಮುಖ ನಿರ್ಧಾರದ ಸಾಧಕ–ಬಾಧಕಗಳ ಕುರಿತು ಸಂಸತ್ತಿನಲ್ಲಿ ಆಮೂಲಾಗ್ರ ಚರ್ಚೆ ಆಗಬೇಕಾದುದು ಅಗತ್ಯವಾಗಿತ್ತು. ರಾಜ್ಯ ಸರ್ಕಾರಗಳು ಕೂಡ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವಾಗ ಮಸೂದೆ ರೂಪಿಸಿ, ವಿಧಾನಮಂಡಲದಲ್ಲಿ ಅದನ್ನು ಚರ್ಚಿಸಿ ಜಾರಿಗೆ ತರುತ್ತವೆ. ಬೀದರ್, ಹಾವೇರಿ, ಕೊಡಗು, ಚಾಮರಾಜನಗರ, ಹಾಸನ, ಕೊಪ್ಪಳ ಮತ್ತು ಬಾಗಲಕೋಟೆಯಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಕ್ಕೆ ಕರ್ನಾಟಕ ಸರ್ಕಾರವು ಮುಂದಾಗಿತ್ತು. ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆಗೆ ತಿದ್ದುಪಡಿ ತರುವ ಮೂಲಕವೇ ಈ ನಿರ್ಧಾರವನ್ನು ಇತ್ತೀಚೆಗೆ ಕೈಗೊಳ್ಳಲಾಗಿದೆ.

ನಿಯಮಗಳನ್ನು ರೂಪಿಸುವುದರ ಮೂಲಕ ಕೈಗೊಳ್ಳುವ ನಿರ್ಧಾರಗಳು ದುರ್ಬಳಕೆ ಆಗುವ ಅಪಾಯ ಹೆಚ್ಚು. ಏಕೆಂದರೆ, ಯಾವುದೇ ಸಂದರ್ಭದಲ್ಲಿ ಈ ನಿಯಮಗಳನ್ನು ಬದಲಾಯಿಸುವ ಅವಕಾಶ ಇರುತ್ತದೆ. ಆದರೆ, ಕಾಯ್ದೆಯ ಮೂಲಕ ಇದು ಜಾರಿಗೆ ಬಂದಿದ್ದರೆ ಬದಲಾವಣೆಯನ್ನು ಕೂಡ ಸಂಸತ್ತಿನಲ್ಲಿ ಚರ್ಚಿಸಿಯೇ ಮಾಡಬೇಕಾಗುತ್ತದೆ.

ಪ್ರತಿವರ್ಷ ವಿದೇಶಗಳಿಗೆ ಹೋದ ಭಾರತೀಯ ವಿದ್ಯಾರ್ಥಿಗಳು



ಅಸ್ಪಷ್ಟ ನಿಯಮಗಳು

ಕರಡು ನಿಯಮಗಳು ಅಸ್ಪಷ್ಟವಾಗಿವೆ ಮತ್ತು ನಿಖರತೆ ಇಲ್ಲ ಎಂಬುದು ಈ ನಿಯಮಗಳ ಕುರಿತು ಇರುವ ಇನ್ನೊಂದು ಆಪಾದನೆ. ವಿದೇಶಿ ವಿದ್ಯಾಸಂಸ್ಥೆಗಳಿಗೆ ತಮ್ಮ ಶುಲ್ಕವನ್ನು ನಿರ್ಧರಿಸುವ ಹಕ್ಕನ್ನು ನೀಡಲಾಗಿದೆ. ಆದರೆ, ಈ ವಿದ್ಯಾಸಂಸ್ಥೆಗಳು ನಿಗದಿ ಮಾಡುವ ಶುಲ್ಕವು 'ನ್ಯಾಯಯುತವಾಗಿರಬೇಕು' ಎಂದು ನಿಯಮವು ಹೇಳುತ್ತದೆ. ಈ 'ನ್ಯಾಯಯುತ' ಎಂಬುದಕ್ಕೆ ಯಾವುದೇ ವ್ಯಾಖ್ಯಾನ ಇಲ್ಲ. ಹಾಗಾದರೆ, ಶುಲ್ಕವು ನ್ಯಾಯಯುತ ಎಂದು ತೀರ್ಮಾನಿಸುವುದು ಹೇಗೆ?

ವಿದೇಶಿ ವಿಶ್ವವಿದ್ಯಾಲಯಗಳು ಜಾಗತಿಕ ಮಟ್ಟದ ರ್‍ಯಾಂಕಿಂಗ್–500ರ ಒಳಗೆ ಇರಬೇಕು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳು ಅವು ಇರುವ ದೇಶದಲ್ಲಿ ಪ್ರತಿಷ್ಠಿತವಾಗಿರಬೇಕು ಎಂದು ನಿಯಮದಲ್ಲಿ ಇದೆ. 'ಪ್ರತಿಷ್ಠಿತ' ಎಂಬುದನ್ನು ನಿರ್ಧರಿಸುವುದು ಹೇಗೆ ಎಂಬುದನ್ನು ನಿಯಮವು ವಿವರಿಸಿಲ್ಲ. ಭಾರತದಲ್ಲಿ ಕ್ಯಾಂಪಸ್ ಆರಂಭಿಸುವ ವಿದ್ಯಾಸಂಸ್ಥೆಯು ನೀಡುವ ಶಿಕ್ಷಣದ ಗುಣಮಟ್ಟವು ಆ ಸಂಸ್ಥೆಯು ಮೂಲ ದೇಶದಲ್ಲಿ ನೀಡುವ ಶಿಕ್ಷಣದ ಗುಣಮಟ್ಟಕ್ಕೆ ಸಮಾನವಾಗಿರಬೇಕು ಎಂದು ಹೇಳಲಾಗಿದೆ. ಎರಡೂ ಕಡೆಯಲ್ಲಿ ಗುಣಮಟ್ಟ ಒಂದೇ ರೀತಿ ಇದೆಯೇ ಎಂಬುದನ್ನು ಅಳೆಯುವುದು ಹೇಗೆ ಎಂಬುದರ ಕುರಿತು ನಿಯಮಗಳಲ್ಲಿ ಏನನ್ನೂ ಹೇಳಲಾಗಿಲ್ಲ.

ರಾಷ್ಟ್ರೀಯ ಹಿತಾಸಕ್ತಿ ಅಥವಾ ದೇಶದ ಶಿಕ್ಷಣದ ಗುಣಮಟ್ಟಕ್ಕೆ ಧಕ್ಕೆ ಆಗುವಂತಹ ಯಾವುದೇ ಕೋರ್ಸ್ ಅನ್ನು ಕಲಿಸಬಾರದು ಎಂಬ ನಿಯಮ ಇದೆ. ಆದರೆ, ರಾಷ್ಟ್ರೀಯ ಹಿತಾಸಕ್ತಿ ಎಂದರೆ ಏನು ಎಂಬುದನ್ನು ಇಲ್ಲಿ ವಿವರಿಸಲಾಗಿಲ್ಲ. ಜೊತೆಗೆ, 'ರಾಷ್ಟ್ರೀಯ ಹಿತಾಸಕ್ತಿ' ಎಂಬ ವಿಚಾರವನ್ನು ವಿದ್ಯಾಸಂಸ್ಥೆಗಳಲ್ಲಿ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂಬ ಆಪಾದನೆಯು ಇತ್ತೀಚಿನ ವರ್ಷಗಳಲ್ಲಿ ಹಲವು ಬಾರಿ ಕೇಳಿ ಬಂದಿದೆ. 'ರಾಷ್ಟ್ರೀಯ ಹಿತಾಸಕ್ತಿ' ಎಂಬುದನ್ನು ಅಸ್ಪಷ್ಟವಾಗಿ ಉಲ್ಲೇಖಿಸಿದರೆ, ಮುಂದೆ ಅದು ದುರ್ಬಳಕೆಗೆ ಅವಕಾಶ ಉಂಟು ಮಾಡಿಕೊಡಬಹುದು.

ಬೋಧಕರ ವಲಸೆ

ಬೋಧಕ ಹುದ್ದೆಗೆ ವಿದೇಶಿಯರ ಜೊತೆಗೆ ಭಾರತೀಯರನ್ನೂ ನೇಮಿಸಲು ಅವಕಾಶ ಕೊಡಲಾಗಿದೆ. ಸಿಬ್ಬಂದಿಗೆ ನೀಡುವ ವೇತನದ ಕುರಿತೂ ಸಂಸ್ಥೆಯೇ ನಿರ್ಧಾರ ತೆಗೆದುಕೊಳ್ಳಬಹುದು. ಹಾಗಾಗಿ, ಪ್ರತಿಭಾವಂತ ಬೋಧಕರಿಗೆ ಆಕರ್ಷಕವಾದ ವೇತನ ದೊರೆಯಬಹುದು. ದೇಶದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರತಿಭಾವಂತ ಪ್ರಾಧ್ಯಾಪಕರು ಇದ್ದಾರೆ. ಅಂತಹ ಪ್ರತಿಭೆ ಇರುವ ಇನ್ನಷ್ಟು ಪ್ರಾಧ್ಯಾಪಕರ ಅಗತ್ಯವೂ ಇದೆ. ವಿದೇಶಿ ವಿದ್ಯಾಸಂಸ್ಥೆಗಳು ದೊಡ್ಡ ಮೊತ್ತದ ವೇತನದ ಕೊಡುಗೆ ಮುಂದಿರಿಸಿದರೆ ದೇಶದ ವಿದ್ಯಾಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಪ್ರತಿಭಾವಂತರು ವಿದೇಶಿ ಸಂಸ್ಥೆಗಳನ್ನು ಸೇರಿಕೊಳ್ಳಬಹುದು. ಇದರಿಂದಾಗಿ ಭಾರತದ ಸಂಸ್ಥೆಗಳ ಶಿಕ್ಷಣದ ಗುಣಮಟ್ಟ ಇನ್ನಷ್ಟು ಕೆಳಕ್ಕೆ ಕುಸಿಯಬಹುದು.

ಸಮಾನ ಅವಕಾಶಕ್ಕೆ ಕತ್ತರಿ

ದೇಶದ ವಿದ್ಯಾಸಂಸ್ಥೆಗಳಲ್ಲಿ ಸಾಮಾಜಿಕ ನ್ಯಾಯ ಪಾಲನೆ ಆಗುತ್ತದೆ. ಪರಿಶಿಷ್ಟ ಜಾತಿ, ಪಂಗಡಗಳು, ಹಿಂದುಳಿದ ವರ್ಗಗಳು, ಪ್ರಬಲ ಜಾತಿಗಳಲ್ಲಿರುವ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ದೊರಕುತ್ತದೆ. ಸರ್ಕಾರ ನಡೆಸುವ ವಿದ್ಯಾಸಂಸ್ಥೆಗಳಲ್ಲಿ ದೊಡ್ಡ ಶುಲ್ಕ ಇರುವುದಿಲ್ಲ. ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಕೂಡ ಶಿಷ್ಯವೇತನದಂತಹ ವ್ಯವಸ್ಥೆ ಇದೆ. ವಿದೇಶಿ ವಿದ್ಯಾಸಂಸ್ಥೆಗಳು ವಿದ್ಯಾರ್ಥಿ ವೇತನ ನೀಡಬಹುದು ಎಂದು ನಿಯಮದಲ್ಲಿ ಇದೆ. ಆದರೆ, ನೀಡುವುದು ಆ ಸಂಸ್ಥೆಯ ನಿರ್ಧಾರಕ್ಕೆ ಬಿಟ್ಟ ವಿಚಾರ. ಹೀಗಾಗಿ, ವಿದೇಶಿ ವಿದ್ಯಾಸಂಸ್ಥೆಗಳು ವಿಧಿಸುವ ಶುಲ್ಕವನ್ನು ಭರಿಸಬಲ್ಲ ವಿದ್ಯಾರ್ಥಿಗಳಿಗೆ ಮಾತ್ರ ಇಂತಹ ವಿದ್ಯಾ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯುವುದು ಸಾಧ್ಯವಾಗಬಹುದು.

ವಿದೇಶಗಳಲ್ಲಿ 13 ಲಕ್ಷ ವಿದ್ಯಾರ್ಥಿಗಳು

2022ರ ನವೆಂಬರ್ ಅಂತ್ಯದ ವೇಳೆಗೆ 79 ದೇಶಗಳ ಶೈಕ್ಷಣಿಕ ಸಂಸ್ಥೆಗಳಲ್ಲಿ ಓದುತ್ತಿರುವ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಮಾಡುತ್ತಿರುವ ಭಾರತೀಯ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ 13.24 ಲಕ್ಷದಷ್ಟಿದೆ. ಈ ಹಿಂದಿನ ವರ್ಷಗಳಲ್ಲಿ ಅಧ್ಯಯನಕ್ಕೆಂದು ಅಲ್ಲಿಗೆ ಹೋದ ವಿದ್ಯಾರ್ಥಿಗಳ ಸಂಖ್ಯೆಯೂ ಇದರಲ್ಲಿ ಸೇರಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮಾಹಿತಿ ನೀಡಿದೆ. 2018ರಲ್ಲಿ ಈ ಸಂಖ್ಯೆ 7.75 ಲಕ್ಷದಷ್ಟು ಇತ್ತು. ನಂತರದ ವರ್ಷಗಳಲ್ಲಿ ಈ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ.



ತಾರತಮ್ಯಕ್ಕೆ ದಾರಿ

ವಿದೇಶಿ ವಿದ್ಯಾಸಂಸ್ಥೆಗಳಿಗೆ ತಮ್ಮದೇ ಆದ ಪಠ್ಯಕ್ರಮ ಹೊಂದುವ ಅವಕಾಶ ಕೊಡಲಾಗಿದೆ. ಶುಲ್ಕವನ್ನೂ ಆ ಸಂಸ್ಥೆಗಳೇ ನಿರ್ಧರಿಸಬಹುದು. ಆದರೆ, ದೇಶೀಯ ವಿಶ್ವವಿದ್ಯಾಲಯಗಳು ಮತ್ತು ಉನ್ನತ ವಿದ್ಯಾಸಂಸ್ಥೆಗಳಿಗೆ ಹಲವು ಹತ್ತು ನಿಯಂತ್ರಣಗಳಿವೆ. ಡೀಮ್ಡ್ ಎನಿಸಿಕೊಂಡ ವಿದ್ಯಾಸಂಸ್ಥೆಗಳು ಕೂಡ ಸಂಪೂರ್ಣ ಸ್ವತಂತ್ರವೇನೂ ಅಲ್ಲ. ವಿದೇಶಿ ವಿದ್ಯಾಸಂಸ್ಥೆಗಳು ಇಲ್ಲಿ ಬಂದು ನೆಲೆಯಾದರೆ, ಎರಡು ರೀತಿಯ ಶಿಕ್ಷಣ ವ್ಯವಸ್ಥೆ ಜಾರಿಗೆ ಬರಲಿದೆ. ನಮ್ಮ ದೇಶದಲ್ಲಿ ಸರ್ಕಾರಿ ಮತ್ತು ಖಾಸಗಿ ಎಂಬ ಎರಡು ರೀತಿಯ, ಎರಡು ಗುಣಮಟ್ಟದ ವ್ಯವಸ್ಥೆ ಈಗಾಗಲೇ ಜಾರಿಯಲ್ಲಿದೆ. ಉನ್ನತ ಶಿಕ್ಷಣದಲ್ಲಿ ವಿದೇಶಿ ವಿದ್ಯಾಸಂಸ್ಥೆಯಲ್ಲಿ ಕಲಿತವರು ಎಂಬ ಮತ್ತೊಂದು ವರ್ಗ ಹುಟ್ಟಿಕೊಳ್ಳಲು ಇದು ಕಾರಣವಾಗುತ್ತದೆ.

ಜಾಗತಿಕ ಶ್ರೇಯಾಂಕ 500ರ ಒಳಗಿರಬೇಕು

ಭಾರತದಲ್ಲಿ ಕ್ಯಾಂಪಸ್ ತೆರೆಯಲು ಬಯಸುವ ವಿದೇಶಿ ವಿಶ್ವವಿದ್ಯಾಲಯಗಳು ಜಾಗತಿಕ ವಿವಿ ಶ್ರೇಯಾಂಕದಲ್ಲಿ ಮೊದಲ 500ರ ಒಳಗೆ ಇರಬೇಕು. ಅವು ಭಾರತದಲ್ಲಿ ನೀಡಲು ಬಯಸುವ ಕೋರ್ಸ್‌ಗಳೂ ಜಾಗತಿಕವಾಗಿ ಉತ್ತಮ ಶ್ರೇಯಾಂಕ ಹೊಂದಿರಬೇಕು. ಉನ್ನತ ಶಿಕ್ಷಣ ಸಂಸ್ಥೆಗಳೂ ಭಾರತದಲ್ಲಿ ಕ್ಯಾಂಪಸ್ ತೆರೆಯಬಹುದು. ಅಂತಹ ಸಂಸ್ಥೆಗಳ ಮೂಲ ಕ್ಯಾಂಪಸ್‌ಗಳು ತಮ್ಮ ದೇಶದಲ್ಲಿ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾಗಿರಬೇಕು ಎಂದು ಯುಜಿಸಿ ತನ್ನ ಕರಡು ನಿಯಮಗಳಲ್ಲಿ ಷರತ್ತುಗಳನ್ನು ವಿಧಿಸಿದೆ.

ಈ ವಿಶ್ವವಿದ್ಯಾಲಯಗಳು ತಮ್ಮ ಮೂಲ ಕ್ಯಾಂಪಸ್‌ನಲ್ಲಿ ನೀಡುವ ಕೋರ್ಸ್‌ಗಳನ್ನೇ ಭಾರತದಲ್ಲೂ ನೀಡಬೇಕು. ಮೂಲ ಕ್ಯಾಂಪಸ್‌ನಲ್ಲಿ ನೀಡಲಾಗುವ ಶಿಕ್ಷಣದ್ದೇ ಗುಣಮಟ್ಟದ ಶಿಕ್ಷಣವನ್ನು ಭಾರತದ ಕ್ಯಾಂಪಸ್‌ನಲ್ಲೂ ನೀಡಬೇಕು. ಭಾರತದಲ್ಲಿನ ಕ್ಯಾಂಪಸ್‌ನಲ್ಲಿ ನೀಡಲಾಗುವ ಕೋರ್ಸ್‌ಗಳಿಗೆ, ಮೂಲ ಕ್ಯಾಂಪಸ್‌ನಲ್ಲಿನ ಕೋರ್ಸ್‌ಗಳಿಗೆ ಇರುವ ಮಾನ್ಯತೆಯನ್ನೇ ನೀಡಬೇಕು. ಮೂಲ ಕ್ಯಾಂಪಸ್‌ನಲ್ಲಿ ಅಧ್ಯಯನ ಮಾಡಿದ ಕೋರ್ಸ್‌ಗಳಿಗೆ ನೀಡುವ ಪ್ರಮಾಣ ಪತ್ರಕ್ಕೆ ನೀಡುವ ಮಾನ್ಯತೆಯನ್ನೇ, ಭಾರತದಲ್ಲಿನ ಕ್ಯಾಂಪಸ್‌ನಲ್ಲಿ ನೀಡುವ ಕೋರ್ಸ್‌ಗಳ ಪ್ರಮಾಣಪತ್ರಕ್ಕೆ ನೀಡಬೇಕು. ಭಾರತದ ಕ್ಯಾಂಪಸ್‌ನಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ, ಹೆಚ್ಚಿನ ಅಧ್ಯಯನ ಮತ್ತು ನೇಮಕಾತಿಯಲ್ಲಿ ತೊಡಕಾಗಬಾರದು. ಈ ಎಲ್ಲವನ್ನೂ ಪೂರೈಸುವ ಜವಾಬ್ದಾರಿ ವಿದೇಶಿ ವಿಶ್ವವಿದ್ಯಾಲಯಗಳದ್ದು ಎಂದು ಯುಜಿಸಿ ಹೇಳಿದೆ.

ಭಾರತದಲ್ಲಿ ಕ್ಯಾಂಪಸ್ ತೆರೆಯಲು ಅನುಮತಿ ಕೋರಿ ಅರ್ಜಿ ಸಲ್ಲಿಸುವಾಗ, ಕ್ಯಾಂಪಸ್ ತೆರೆಯಲು ಬಂಡವಾಳವನ್ನು ಹೇಗೆ ಹೊಂದಿಸಿಕೊಳ್ಳಲಾಗುತ್ತದೆ ಎಂಬ ವಿಸ್ತೃತ ಮಾಹಿತಿಯನ್ನು ವಿದೇಶಿ ವಿಶ್ವವಿದ್ಯಾಲಯಗಳು ನೀಡಬೇಕಾಗುತ್ತದೆ. ಬೋಧನೆಗೆ ವಿದೇಶಿ ಸಂಪನ್ಮೂಲ ವ್ಯಕ್ತಿಗಳನ್ನು ಕ್ಯಾಂಪಸ್‌ನಲ್ಲಿ ಇರಿಸುವ ಮಾಹಿತಿಯನ್ನು ಒದಗಿಸಬೇಕಾಗುತ್ತದೆ. ಬೋಧನೆ ಮತ್ತು ಸಂಶೋಧನಾ ಸಂಪನ್ಮೂಲ ವ್ಯಕ್ತಿಗಳಾಗಿ ಭಾರತೀಯರನ್ನೂ ನೇಮಕ ಮಾಡಿಕೊಳ್ಳಲು ಅವಕಾಶವಿರಬೇಕು. ಆದರೆ, ಇದಕ್ಕೆ ಸಂಬಂಧಿಸಿದಂತೆ ತನ್ನದೇ ನಿಯಮಗಳನ್ನು ರೂಪಿಸಿಕೊಳ್ಳಲು ವಿದೇಶಿ ವಿಶ್ವವಿದ್ಯಾಲಯಗಳು ಸ್ವತಂತ್ರವಾಗಿವೆ ಎಂದು ಕರಡು ನಿಯಮಗಳಲ್ಲಿ ವಿವರಿಸಲಾಗಿದೆ.

ಭಾರತದಲ್ಲಿ ಕ್ಯಾಂಪಸ್ ತೆರೆಯಲು ನೀಡಲಾಗುವ ಅನುಮತಿ 10 ವರ್ಷಗಳ ಅವಧಿಯದ್ದಾಗಿರುತ್ತದೆ. ಅನುಮತಿ ಪಡೆದ ಎರಡು ವರ್ಷಗಳ ಒಳಗೆ ಕ್ಯಾಂಪಸ್ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಬೇಕು. ವಿದೇಶಿ ವಿಶ್ವವಿದ್ಯಾಲಯಗಳು ಭಾರತದಲ್ಲಿ ಕ್ಯಾಂಪಸ್ ನಡೆಸಲು, ಎರಡನೇ ವರ್ಷದ ನಂತರ ಯುಜಿಸಿಗೆ ವಾರ್ಷಿಕ ಶುಲ್ಕವನ್ನು ಪಾವತಿಸಬೇಕು. ಶುಲ್ಕದ ಪ್ರಮಾಣವನ್ನು ನಿಗದಿಪಡಿಸುವ ಮತ್ತು ಕಾಲಕಾಲಕ್ಕೆ ಪರಿಷ್ಕರಿಸುವ ಅಧಿಕಾರವನ್ನು ಯುಜಿಸಿ ಕಾಯ್ದಿರಿಸಿಕೊಳ್ಳಲು ಕರಡು ನಿಯಮಗಳಲ್ಲಿ ಅವಕಾಶ ಮಾಡಿಕೊಡಲಾಗಿದೆ.

ಅನುಮತಿಗೆ ಮುನ್ನ ದಾಖಲಾತಿ ಇಲ್ಲ

- ಭಾರತದಲ್ಲಿ ಕ್ಯಾಂಪಸ್ ತೆರೆಯಲು ಬಯಸುವ ವಿದೇಶಿ ವಿಶ್ವವಿದ್ಯಾಲಯವು, ಅದಕ್ಕಾಗಿ ಯುಜಿಸಿಯಿಂದ ಅನುಮತಿ ಪಡೆದುಕೊಳ್ಳದೇ ವಿದ್ಯಾರ್ಥಿಗಳಿಂದ ಶುಲ್ಕ ಸಂಗ್ರಹಿಸುವಂತಿಲ್ಲ, ದಾಖಲಾತಿ ಪ್ರಕ್ರಿಯೆಯನ್ನೂ ಆರಂಭಿಸುವಂತಿಲ್ಲ
- ವಿದೇಶಿ ವಿದ್ಯಾಲಯಗಳು ಭಾರತದಲ್ಲಿ ಕ್ಯಾಂಪಸ್ ತೆರೆದು, ಅಲ್ಲಿ ನೀಡುವ ಕೋರ್ಸ್‌ಗಳನ್ನು ಭೌತಿಕವಾಗಿಯೇ ನಡೆಸಬೇಕು. ಭಾರತೀಯ ಕ್ಯಾಂಪಸ್‌ಗೆ ದಾಖಲಾದ ವಿದ್ಯಾರ್ಥಿಗಳಿಗೆ ಆನ್‌ಲೈನ್ ಕೋರ್ಸ್ ನೀಡುವಂತಿಲ್ಲ. ಅಂತಹ ಕೋರ್ಸ್‌ಗಳನ್ನು 'ದೂರಶಿಕ್ಷಣ' ಸ್ವರೂಪದಲ್ಲೂ ಒದಗಿಸುವಂತಿಲ್ಲ
- ಭಾರತದ ಉನ್ನತ ಶಿಕ್ಷಣ ಗುಣಮಟ್ಟ ಮಾನದಂಡಗಳಿಗೆ ಧಕ್ಕೆಯಾಗುವಂತಹ ಕೋರ್ಸ್‌ಗಳನ್ನು ನೀಡುವಂತಿಲ್ಲ
- ಭಾರತದ ರಾಷ್ಟ್ರೀಯ ಹಿತಾಸಕ್ತಿಗೆ ಧಕ್ಕೆಯಾಗುವಂತಹ ಕೋರ್ಸ್‌ಗಳನ್ನು ನೀಡುವಂತಿಲ್ಲ
- ಭಾರತದ ರಾಷ್ಟ್ರೀಯ ಭದ್ರತೆ, ಸಾರ್ವಭೌಮತೆ, ಭಾರತದ ಮಿತ್ರ ರಾಷ್ಟ್ರಗಳೊಂದಿಗೆ ಸ್ನೇಹ–ಸಂಬಂಧ, ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗುವ ರೀತಿಯಲ್ಲಿ ಈ ವಿಶ್ವವಿದ್ಯಾಲಯಗಳು ಕಾರ್ಯನಿರ್ವಹಿಸುವಂತಿಲ್ಲ

ವಿದ್ಯಾರ್ಥಿಗಳ ಭವಿಷ್ಯಕ್ಕೆ ಖಾತರಿ

ವಿದೇಶಿ ವಿಶ್ವವಿದ್ಯಾಲಯಗಳ ಭಾರತೀಯ ಕ್ಯಾಂಪಸ್‌ನಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಔದ್ಯೋಗಿಕ ಭವಿಷ್ಯದ ಖಾತರಿಗಾಗಿ ಕೆಲವು ಷರತ್ತುಗಳನ್ನು ಕರಡು ನಿಯಮಗಳಲ್ಲಿ ಸೇರಿಸಲಾಗಿದೆ.

ಭಾರತದ ಕ್ಯಾಂಪಸ್‌ನಲ್ಲಿ ಆರಂಭಿಸುವ ಕೋರ್ಸ್‌ಗಳನ್ನು, ಯುಜಿಸಿಯ ಪೂರ್ವಾನುಮತಿ ಪಡೆಯದೆಯೇ ಸ್ಥಗಿತಗೊಳಿಸಬಾರದು. ಕೋರ್ಸ್ ಅನ್ನು ಸ್ಥಗಿತಗೊಳಿಸಲೇಬೇಕಾದ ಅನಿವಾರ್ಯ ಎದುರಾದರೆ, ಸಮಾನ ಶೈಕ್ಷಣಿಕ ಮಾನ್ಯತೆ ಇರುವ ಪರ್ಯಾಯ ಕೋರ್ಸ್‌ನ ವ್ಯವಸ್ಥೆಯನ್ನು ವಿದ್ಯಾರ್ಥಿಗಳಿಗೆ ಮಾಡಿಕೊಡಬೇಕು ಎಂದು ಯುಜಿಸಿ ಹೇಳಿದೆ. ಇಂತಹ ಕೋರ್ಸ್‌ಗಳಿಗೆ ದಾಖಲಾದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವರ್ಷ ಮತ್ತು ಆರ್ಥಿಕ ನಷ್ಟಗಳು ಆಗಬಾರದು ಎಂಬುದು ಈ ಷರತ್ತಿನ ಉದ್ದೇಶ ಎಂದು ವಿಶ್ಲೇಷಿಸಲಾಗಿದೆ.

ಆಧಾರ: ಯುಜಿಸಿ ಕರಡು ಮಾರ್ಗಸೂಚಿ, ಪಿಟಿಐ, ಲೋಕಸಭೆ ಮತ್ತು ರಾಜ್ಯಸಭೆಗೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ನೀಡಿದ ಮಾಹಿತಿಗಳು, ಪಿಐಬಿ, ಪಿಟಿಐ

ಸಿನಿ ಬಿಟ್ಸ್

ಆಶಿಕಾ as ಇಶಿಕಾ!

ಸ್ಯಾಂಡಲ್‌ವುಡ್‌ನ 'ಪಟಾಕಿ ಪೋರಿ' ಟಾಲಿವುಡ್‌ನಲ್ಲಿ ಮಿಂಚಲು ಸಜ್ಜಾಗುತ್ತಿದ್ದಾರೆ. ಆಶಿಕಾ ರಂಗನಾಥ್ ಅವರ ಚೊಚ್ಚಲ ತೆಲುಗು ಸಿನಿಮಾ 'ಅಮಿಗೋಸ್' ಫೆ.10ರಂದು ಬಿಡುಗಡೆ ಆಗುತ್ತಿದೆ. ಸದ್ಯ ಇದೇ ಸಿನಿಮಾ ಪ್ರಚಾರದಲ್ಲಿ ಆಶಿಕಾ ತೊಡಗಿಸಿಕೊಂಡಿದ್ದಾರೆ.

ರಾಜೇಂದ್ರ ರೆಡ್ಡಿ ನಿರ್ದೇಶನದ ಈ ಚಿತ್ರದಲ್ಲಿ ತೆಲುಗಿನ ಖ್ಯಾತ ನಟ ನಂದಮೂರಿ ಕಲ್ಯಾಣ್ ರಾಮ್ ಅವರ ಜೊತೆಗೆ ತೆರೆ ಹಂಚಿಕೊಂಡಿದ್ದಾರೆ ಆಶಿಕಾ. ಈ ಸಿನಿಮಾದಲ್ಲಿ 'ಇಶಿಕಾ' ಎಂಬ ಪಾತ್ರದಲ್ಲಿ ಅವರು ಕಾಣಿಸಿಕೊಳ್ಳುತ್ತಿದ್ದಾರೆ. ಇತ್ತೀಚೆಗಷ್ಟೇ ಬಿಡುಗಡೆಯಾದ ಚಿತ್ರದ 'ಎನ್ನೋ ರಾತ್ರುಲೊಸ್ತಾಯಿ' ಹಾಡು ಹಿಟ್ ಆಗಿದೆ. ಹಾಡಿನಲ್ಲಿ ಆಶಿಕಾ ಗ್ಲ್ಯಾಮರ್‌ಗೆ ನೋಡುಗರು ಫಿದಾ ಆಗಿದ್ದಾರೆ. ಸ್ಯಾಂಡಲ್‌ವುಡ್, ಕಾಲಿವುಡ್ ಬಳಿಕ ಇದೀಗ ಟಾಲಿವುಡ್‌ನಲ್ಲೂ 'ಚುಟು ಚುಟು' ಬೆಡಗಿ ಮಿಂಚಲಿದ್ದಾರೆ.

ಸದ್ಯ 'ಸಿಂಪಲ್' ಸುನಿ ನಿರ್ದೇಶನದ 'ಗತವೈಭವ' ಚಿತ್ರದಲ್ಲಿ ತೊಡಗಿಸಿಕೊಂಡಿರುವ ಆಶಿಕಾ, ತಮಿಳಿನಲ್ಲಿ ನಟ ಸಿದ್ಧಾರ್ಥ್ ಅವರ ಜೊತೆಗೂ ಹೊಸ ಸಿನಿಮಾವೊಂದನ್ನು ಮಾಡುತ್ತಿದ್ದಾರೆ. ಮತ್ತೊಂದು ತಮಿಳು ಸಿನಿಮಾಗೂ ಕಾಲ್‌ಶೀಟ್ ನೀಡಿದ್ದಾರೆ. ಆಶಿಕಾ ಲೀಡ್‌ನಲ್ಲಿ ನಟಿಸಿರುವ ಕನ್ನಡದ 'O2' ಸಿನಿಮಾ ತೆರೆಗೆ ಬರಲು ಸಜ್ಜಾಗಿದೆ. ❖

ಆಶಿಕಾ ರಂಗನಾಥ್

ನೈಜ ಘಟನೆಗಳ ಸುತ್ತ 'ಪಾಲಾರ್'

ಕೋಲಾರ, ದೇವನಹಳ್ಳಿ ಸುತ್ತಮುತ್ತ ಶೋಷಿತ ವರ್ಗದಲ್ಲಿ ನಡೆದ ಕಥೆಯನ್ನಿಟ್ಟುಕೊಂಡು ಜೀವಾ ನವೀನ್ ಅವರು ನಿರ್ದೇಶಿಸಿರುವ 'ಪಾಲಾರ್' ಫೆ.24ರಂದು ತೆರೆಕಾಣಲಿದೆ.

ಈ ಚಿತ್ರವನ್ನು ಸತ್ಯ ಸಿನಿ ಡಿಸ್ಟ್ರಿಬ್ಯೂಟರ್ಸ್ ಮೂಲಕ ಮಂಜುನಾಥ್ ಅವರು ಬಿಡುಗಡೆ ಮಾಡುತ್ತಿದ್ದಾರೆ. 'ಸುಮಾರು ವರ್ಷಗಳ ಹಿಂದೆ ಕೋಲಾರ ಮತ್ತು ದೇವನಹಳ್ಳಿ ಭಾಗದಲ್ಲಿ ನಡೆದ ನೈಜ ಘಟನೆಗಳನ್ನು ಆಧರಿಸಿ ಈ ಚಿತ್ರಕಥೆ ಹೆಣೆದಿದ್ದೇವೆ. ಇದೊಂದು ಮಹಿಳಾ ಪ್ರಧಾನ, ಸಂಘರ್ಷದ, ಹೋರಾಟದ ಕಥನ. ಕಥೆ, ಸಿನಿಮಾ ಮೇಲೆ ನಂಬಿಕೆಯಿದೆ. ಪಾಲಾರ್ ನದಿಗೂ ನಮ್ಮ ಕಥೆಗೂ ಸಂಬಂಧವಿಲ್ಲ. ಒಂದು ರೂಪಕವಾಗಿ ಅದನ್ನು ಬಳಸಿದ್ದೇವೆ. ಅಲ್ಲದೆ ಪಾಲಾರ್ ಎಂಬ ಕಾಲ್ಪನಿಕ ಹಳ್ಳಿಯಲ್ಲಿ ನಡೆಯುವ ಕಥೆ' ಎನ್ನುತ್ತಾರೆ ಜೀವಾ ನವೀನ್. ತೆಲುಗಿನ 'ಸಿನಿಮಾ ಬಂಡಿ' ನಟ, ಗಾಯಕಿ ವೈ.ಜಿ. ಉಮಾ ಅವರು ಈ ಚಿತ್ರದಲ್ಲಿ ಮುಖ್ಯಪಾತ್ರದಲ್ಲಿ ನಟಿಸಿದ್ದಾರೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5220

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಹೆಬ್ಬೆರಳ ಪಕ್ಕದ ಬೆರಳು (5)
3. ಮುಂದೆ ಬರಲಿರುವ ಕಾಲ (3)
5. ತಲೆ ಎತ್ತಿದಾಗ ಕಾಣಿಸಿದ ಶೀರ್ಷಿಕೆ (5)
7. ಒಳ್ಳೆಯ ಹಾದಿ (3)
9. ಚರ್ಚೆಯಲ್ಲಿ ಕೊನೆಗೊಂಡ ಮಾತುಕತೆ (3)
11. ಲಗ್ನಕ್ಕೊಂದು ಪರ್ಯಾಯ ಪದ (3)
13. ಲೋಹದ ಹಕ್ಕಿಯಲ್ಲಿ ಕೈಗೊಳ್ಳುವ ಪಯಣ (5)
15. ಅವಳಿಗಾಗಿ ಖರೀದಿಸಿದ ಬಟ್ಟೆ! (3)
16. ಈತ ವರದಿಯನ್ನು ಸಿದ್ಧಪಡಿಸುವವನು (5)

ಮೇಲಿಂದ ಕೆಳಕ್ಕೆ

1. ಹೀಗೆ ವ್ಯಕ್ತಗೊಳಿಸು (4)
2. ಕೊನೆಗೆ ಹಿತವಿದ್ದರೂ ಇಲ್ಲದುದು! (3)
4. ವಿಶೇಷವಾದ ದ್ರೋಹ (3)
6. ಪಂಡಿತ ಇಲ್ಲಿದ್ದಾನೆ (3)
8. ಪಟ್ಟಣದಲ್ಲಿಯೇ ಅಧಿಕಾರವನ್ನು ಹುಡುಕಿ! (2)
9. ಸಾವಧಾನವಾಗಿ ಮಾಡಿಕೊಂಡಿರುವ ರಾಜಿ (3)
10. ಚನ್ನಾಗಿ ಮಾತನಾಡುವವನು ತಿರುಗಿದ್ದಾನಲ್ಲಾ! (2)
12. ಒಬ್ಬರ ಕೈಯಿಂದ ಇನ್ನೊಬ್ಬರ ಕೈಗೆ ಬದಲಾಯಿಸುವಿಕೆ (4)
13. ಆಂದೋಳನ ಹೀಗೆ ಬಂದಿದೆ (3)
14. ನರನು ಪ್ರವೇಶಿದ ಷಹರು (3)



5219ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಆಸ್ಥಾನಿಕ 3.ನಟ್ಟಡವಿ 5.ವರಾಹ 6.ಜನಿವಾರ 8.ತಿಮಿಂಗಿಲ 10.ಕಲರವ 12.ಗುರುಕುಲ 13.ನಕುಲ 16.ಹರಿಕಾರ 17.ಜಿತೇಂದ್ರಿಯ

ಮೇಲಿಂದ ಕೆಳಕ್ಕೆ: 1.ಆಸ್ತೆ 2.ಕಡವರ 3.ನಖಹತಿ 4.ವಿಷ 7.ನಿಷ್ಫಲ 9.ಗಿಟಕು 11.ವನಚರ 12.ಗುಲಗಂಜಿ 14.ದಾಹ 15.ಲಯ

ಸುಡೊಕು 5606

8			1		2		6	
				3				9
2		4				1		
	6	8		5			4	1
						7	9	
9	4			2				
3				8		9		5
		6					8	
	8		3		5			2

5605 ಸುಡೊಕು

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4	5	7	3	6	8	9	1	2
9	8	1	5	7	2	3	4	6
6	3	2	9	4	1	7	5	8
3	7	4	2	8	9	1	6	5
5	2	9	4	1	6	8	3	7
1	6	8	7	3	5	2	9	4
2	9	3	8	5	4	6	7	1
7	4	6	1	2	3	5	8	9
8	1	5	6	9	7	4	2	3

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಫೆಬ್ರುವರಿ 4, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಶುಕ್ಲ ಚತುರ್ದಶಿ ಗಂ. 21-30 ನಕ್ಷತ್ರ: ಪುನರ್ವಸು ಗಂ. 09-16 ಯೋಗ: ಪ್ರೀತಿ ಗಂ. 13-52, ಕರಣ: ಗರಜೆ ಗಂ. 08-15, ಮಕರ ಮಾಸದ 21 ನೇ ದಿನ.

ರಾಹುಕಾಲ : ಬೆಳಿಗ್ಗೆ 09-00 – 10-30

ಸೂರ್ಯೋದಯ : 07-00 ಸೂರ್ಯಾಸ್ತ : 06-28

ಮುಸ್ಲಿಂ ದಿನಾಂಕ : 12 ರಜಬ್

ಅದೃಷ್ಟ ಸಂಖ್ಯೆ : 2, 6

ಮೇಷ: ಉದ್ಯೋಗದಲ್ಲಿ ಗುಂಪಿಗೆ ಎದುರಾಗಿರುವ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಪ್ರಯತ್ನ ಮಾಡಿ. ತಾಯಿಯ ಆಶೀರ್ವಾದದಿಂದ ಆ ಕೆಲಸ ಸಾಧ್ಯವಾಗುವುದು. ಹೊಸ ಬಂಡವಾಳ ಹೂಡಿಕೆಗೆ ಉತ್ತಮ ಸಮಯ.

ವೃಷಭ: ವಿದ್ಯಾರ್ಥಿಗಳಿಗೆ ಅತಿ ಹೆಚ್ಚಿನ ಓದಿನಿಂದಾಗಿ ಬೇಸರಗೊಂಡು ಬದಲಾವಣೆಯನ್ನು ಬಯಸುವಂತಾಗಲಿದೆ. ಸಮಯ ಪ್ರಜ್ಞೆಯಿಂದ ಕಾರ್ಯನಿರ್ವಹಿಸುವುದರಿಂದ ಶುಭವಾಗುವುದು. ತೈಲ ಉತ್ಪನ್ನಗಳ ಮಾರಾಟದಿಂದ ಲಾಭ.

ಮಿಥುನ: ಇಂದಿನ ದಿನದವರೆಗೂ ಜೀವನದಲ್ಲಿ ಬೇರೆಯವರ ಹಿಡಿತದಿಂದ ಬಳಲಿರುವ ನಿಮಗೆ ಆ ಸಮಸ್ಯೆಯಿಂದ ಹೊರಬರುವ ಅವಕಾಶಗಳು ಇಂದು ಎದುರಾಗುವುದು. ಅಧಿಕ ಪ್ರಯತ್ನದಿಂದ ನಿವೇಶನ ಕೊಳ್ಳಲಿದ್ದೀರಿ.

ಕರ್ಕಾಟಕ: ದೇವರ ಅನುಗ್ರಹದಿಂದ ಹಳೆಯದಾದ ಹಾಗೂ ಕೌಟುಂಬಿಕವಾದ ಮುಖ್ಯ ಕೆಲಸವೊಂದನ್ನು ಪೂರ್ಣಗೊಳಿಸುವಿರಿ. ವೈದ್ಯ ವಿದ್ಯಾರ್ಥಿಗಳು ಓದಿನಲ್ಲಿ ಹೆಚ್ಚಿನ ಪರಿಶ್ರಮ ವಹಿಸುವುದು ಅಗತ್ಯವಾಗುತ್ತದೆ.

ಸಿಂಹ: ಮಕ್ಕಳ ವಿಷಯದಲ್ಲಿ ಹೆಚ್ಚಿನ ಕಾಳಜಿಯನ್ನು ತೋರಿದಲ್ಲಿ ಅವರ ಭವಿಷ್ಯಕ್ಕೆ ಉತ್ತಮವಾಗುವುದು. ಪುಸ್ತಕ ಓದುವ ಹವ್ಯಾಸ ಹೊಂದಿದವರಿಗೆ ಉತ್ತಮವಾದ ಅಭಿರುಚಿಗೆ ತಕ್ಕಂತಹ ಪುಸ್ತಕವು ದೊರಕುವುದು.

ಕನ್ಯಾ: ದೈನಂದಿನ ಬದುಕಿನಲ್ಲಿ ವಿಘ್ನಗಳು ಎದುರಾಗುತ್ತದೆ. ಕ್ರೀಡಾಪಟುಗಳಿಗೆ ಪಂದ್ಯದಲ್ಲಿ ಹೆಚ್ಚಿನ ಜಯ ಪ್ರಾಪ್ತಿಯಾಗುವುದು. ಕುಟುಂಬದ ಸದಸ್ಯರೊಂದಿಗೆ ಶುಭ ಕಾರ್ಯದ ನಿಮಿತ್ತ ದೂರದ ಊರಿಗೆ ಪ್ರಯಾಣ ಸಂಭವಿಸುವುದು.

ತುಲಾ: ಆಪ್ತರ ಸಲಹೆ ತೆಗೆದುಕೊಂಡು ಮಾಡಿದ ಕೆಲಸ ಸಮಸ್ಯೆ ಇಲ್ಲದೆ ಮುಕ್ತಾಯ ಹಂತ ತಲುಪುವುದು. ವ್ಯಾಪಾರದಲ್ಲಿ ಲಾಭ ನಷ್ಟದ ಮಿಶ್ರಫಲ ಕಾಣುವಿರಿ. ಕೃಷಿಗೆ ಸಂಬಂಧಪಟ್ಟ ಕಾರ್ಯಗಳು ಬಿಡುವಿಲ್ಲದೆ ನಡೆಯಲಿದೆ.

ವೃಶ್ಚಿಕ: ಬುದ್ಧಿವಂತಿಕೆಯಿಂದ ಬೆಟ್ಟದಂತಹ ಸಮಸ್ಯೆಗಳು ಪರಿಹಾರ ಕಾಣಲಿವೆ. ಪತ್ರಿಕೆಯವರ ಸಹಕಾರದಿಂದ ನಿಮ್ಮ ಕೆಲಸಕ್ಕೆ ಹೆಚ್ಚಿನ ಪ್ರಚಾರ ಲಭಿಸುವುದು. ಹಣ ಉಳಿತಾಯದ ಸನ್ಮಾರ್ಗಗಳನ್ನು ಕಂಡುಕೊಳ್ಳುವಿರಿ,

ಧನು: ಧಾರ್ಮಿಕ ವಿಚಾರದ ಆಚರಣೆಯ ಬಗ್ಗೆ ಆಸಕ್ತಿ ಮೂಡಲಿದೆ. ನೀರಿಗೆ ಸಂಬಂಧಿಸಿದ ಸಮಸ್ಯೆ ನಿವಾರಣೆಗೊಳ್ಳುವ ಹಂತಕ್ಕೆ ಬರಲಿದೆ. ಶಿಕ್ಷಕ ವೃತ್ತಿ ನಡೆಸಿ ವಿದ್ಯಾದಾನ ಮಾಡುವವರಿಗೆ ಸೂಕ್ತ ಗೌರವಾದರ ದೊರೆಯಲಿದೆ.

ಮಕರ: ದೂರ ಸಂಚಾರದಲ್ಲಿ ವ್ಯಥಾ ಖರ್ಚುಗಳಿದ್ದರೂ ಸಂತೋಷ ಇರಲಿದೆ. ಆರ್ಥಿಕವಾಗಿ ನಿಮ್ಮ ಆದಾಯ ಯಾವುದೇ ರೀತಿಯ ಏರಿಳಿತಗಳಿಲ್ಲದೆ ಸಮನಾಗಿರುವುದು. ಚಾಲಕ ವೃತ್ತಿ ನಡೆಸುವವರು ಈ ದಿನ ಜಾಗೃತರಾಗಿರಿ.

ಕುಂಭ: ಇತರರ ಭಾವನೆಗಳಿಗೆ ಹೆಚ್ಚಿನ ಆದ್ಯತೆ ಕೊಡಲು ಕಲಿಯಬೇಕಾಗುತ್ತದೆ. ಕ್ಷಣಿಕ ಸುಖಗಳಿಗೆ ಗಮನ ನೀಡದೆ ಗಂಭೀರವಾಗಿ ಆಲೋಚಿಸಿ. ಮಹಿಳೆಯರಿಗೆ ಸ್ವತಂತ್ರ ಉದ್ಯಮದ ಹಾದಿ ಸುಗಮವಾಗುವುದು.

ಮೀನ: ಶತ್ರುಗಳ ಬಣ್ಣ ಬಯಲಾಗುವುದು ಸಂತೋಷಕ್ಕೆ ಕಾರಣವಾಗುತ್ತದೆ. ಆಸ್ತಿ ವಿಷಯಗಳು ನಿರಾತಂಕವಾಗಿ ಬಗೆಹರಿಯುವುದು. ಅದರಿಂದಾಗಿ ಮನೆಯಲ್ಲಿ ನೆಮ್ಮದಿಯ ವಾತಾವರಣ ವೃದ್ಧಿಯಾಗಲಿದೆ.

ಷೇರುಪೇಟೆ ವಹಿವಾಟು 909



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,610
ಇಂದಿನ ಅಂತ್ಯ	17,854
▲	244
ದಿನದ ಗರಿಷ್ಠ	17,870

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹63
ಮೈಸೂರು	
100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1620)
ಸೋಯಾ (ರಿಫೈನ್ಡ್)	₹1162 (1160)
ಸೂರ್ಯಕಾಂತಿ (ರಿಫೈನ್ಡ್)	₹1170 (1180)
ಪಾಮೋಲಿನ್	₹930 (918)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹138.50
ಆರ್‌ಎಸ್‌ಎಸ್-5	₹134
ಗುಡ್ ಲಾಟ್	₹129

(ಪ್ರತಿ ಕೆ.ಜಿಗೆ)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1200-1400
ಮಧ್ಯಮ	₹1000-1200
ಸಣ್ಣ	₹500-1000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹526-628
ದ್ವಿತಳಿ (ಬಿ.ವಿ)	₹325-789

ಎಸ್‌ಬಿಐ ಲಾಭ ಶೇ 62ರಷ್ಟು ಹೆಚ್ಚಳ

ಮುಂಬೈ (ಪಿಟಿಐ): ಸರ್ಕಾರಿ ಸ್ವಾಮ್ಯದ ಅತಿದೊಡ್ಡ ಬ್ಯಾಂಕ್ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಪ್ರಸಕ್ತ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹ 15,477 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ಲಾಭವು ಶೇಕಡ 62ರಷ್ಟು ಹೆಚ್ಚಾಗಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ತೆರಿಗೆ ನಂತರದ ಲಾಭವು ₹ 14,205 ಕೋಟಿ ಆಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹ 8,432 ಕೋಟಿ ಲಾಭ ಆಗಿತ್ತು.

ಬ್ಯಾಂಕ್‌ನ ಒಟ್ಟು ವರಮಾನ ₹ 78,351 ಕೋಟಿಯಿಂದ ₹ 98,084 ಕೋಟಿಗೆ ಏರಿಕೆ ಕಂಡಿದೆ. ಕಾರ್ಯಾಚರಣೆ ವೆಚ್ಚವು ₹ 20,839 ಕೋಟಿಯಿಂದ ₹ 24,317 ಕೋಟಿಗೆ ಏರಿಕೆ ಆಗಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ. ನಿವ್ವಳ ಬಡ್ಡಿ ವರಮಾನ ಶೇ 24.05ರಷ್ಟು ಹೆಚ್ಚಾಗಿ ₹38,069 ಕೋಟಿಗೆ ತಲುಪಿದೆ.

ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತವು ಡಿಸೆಂಬರ್ ತ್ರೈಮಾಸಿಕದಲ್ಲಿ ₹ 1,586 ಕೋಟಿಗೆ ಇಳಿಕೆ ಆಗಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣವು ಶೇ 3.52 ರಿಂದ ಶೇ 3.14ಕ್ಕೆ ಇಳಿಕೆ ಕಂಡಿದೆ.

ರೂಪಾಯಿ ಮೌಲ್ಯ ವೃದ್ಧಿ

ನವದೆಹಲಿ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಶುಕ್ರವಾರ 12 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹82.08ರಂತೆ ವಿನಿಮಯಗೊಂಡಿತು. ತೈಲ ದರ ಇಳಿಕೆ ಮತ್ತು ದೇಶಿ ಷೇರುಪೇಟೆ ಚೇತರಿಕೆ ಕಂಡಿದ್ದು, ರೂಪಾಯಿಗೆ ಬೆಂಬಲ ನೀಡಿತು.

ಹೊಸ ವಹಿವಾಟಿಗೆ ಮಂದಗತಿಯ ಬೇಡಿಕೆ

ತಗ್ಗಿದ ಸೇವಾ ಚಟುವಟಿಕೆ

ಮುಖ್ಯಾಂಶಗಳು

- 18ನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಚಲನೆ
- ಹೊಸ ವಹಿವಾಟಿಗೆ ತಗ್ಗಿದ ಅಂತರರಾಷ್ಟ್ರೀಯ ಬೇಡಿಕೆ

ನವದೆಹಲಿ (ಪಿಟಿಐ): ಹೊಸ ವಹಿವಾಟುಗಳಿಗೆ ಬೇಡಿಕೆಯು ಮಂದಗತಿಯಲ್ಲಿ ಇರುವುದರಿಂದ ಜನವರಿಯಲ್ಲಿ ದೇಶದ ಸೇವಾ ವಲಯದ ಬೆಳವಣಿಗೆಯು ತುಸು ಇಳಿಕೆ ಕಂಡಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ಹೇಳಿದೆ.

ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಸರ್ವಿಸಸ್ ಪಿಎಂಐ ಬ್ಯುಸಿನೆಸ್ ಆ್ಯಕ್ಟಿವಿಟಿ ಇಂಡೆಕ್ಸ್ 2022ರ ಡಿಸೆಂಬರ್‌ನಲ್ಲಿ 58.5 ಇದ್ದಿದ್ದು 2023ರ ಜನವರಿಯಲ್ಲಿ 57.2ಕ್ಕೆ ಇಳಿಕೆ ಕಂಡಿದೆ.

ಕಂಪನಿಗಳಿಗೆ ಸಿಗುತ್ತಿರುವ ಹೊಸ ವಹಿವಾಟುಗಳು ದೇಶಿ ಮಟ್ಟಕ್ಕೆ ಸೀಮಿತವಾಗಿವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೊಸ ವಹಿವಾಟುಗಳಿಗೆ ಬೇಡಿಕೆ ಇಳಿಕೆ ಕಾಣುತ್ತಿದೆ ಎಂದು ಹೇಳಿದೆ.

ವಲಯದ ಮುನ್ನೋಟದ ಕುರಿತು ಕಂಪನಿಗಳ ವಿಶ್ವಾಸದ ಮಟ್ಟವು ಕಡಿಮೆ ಇರುವುದು ಉದ್ಯೋಗ ಸೃಷ್ಟಿಗೆ ಅಡ್ಡಿಯಾಗುವ ಸಾಧ್ಯತೆ ಇದೆ ಎಂದೂ ಸಂಸ್ಥೆಯು ತಿಳಿಸಿದೆ.

ಕಳೆದ ವರ್ಷದ ಡಿಸೆಂಬರ್‌ಗೆ ಹೋಲಿಸಿದರೆ ಈ ವರ್ಷದ ಜನವರಿಯಲ್ಲಿ ಸೂಚ್ಯಂಕ ಇಳಿಕೆ ಕಂಡಿದೆ. ಹೀಗಿದ್ದರೂ ದೀರ್ಘಾವಧಿಯ ಸರಾಸರಿ 53.5ಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿಯೇ ಇದೆ. ಬೇಡಿಕೆಯು ಅನುಕೂಲಕರ ಸ್ಥಿತಿಯಲ್ಲಿ ಇರುವುದರ ಜೊತೆಗೆ ಹೊಸ ವಹಿವಾಟುಗಳು ಕಂಪನಿಗಳಿಗೆ ಸಿಗುತ್ತಿರುವುದರಿಂದ ಸರಾಸರಿ ಬೆಳವಣಿಗೆ ಮಟ್ಟಕ್ಕಿಂತ ಹೆಚ್ಚಿಗೆ ಬೆಳವಣಿಗೆ ದಾಖಲಾಗಿದೆ.

ವರ್ಷದ ಆರಂಭದಲ್ಲಿ ಸೇವಾ ವಲಯದ ಒಟ್ಟು ಬೆಳವಣಿಗೆಯ ವೇಗವು ತುಸು ತಗ್ಗಿದೆ ಎಂದು ಸಂಸ್ಥೆಯ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ. ಲಿಮಾ ಹೇಳಿದ್ದಾರೆ.

ವೆಚ್ಚವು ನಿಧಾನಗತಿಯ ಏರಿಕೆ ಕಂಡಿದೆ. ಸಕಾರಾತ್ಮಕ ಭಾವನೆಯು ಆರು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿದೆ. ವಲಯದ ಬೆಳವಣಿಗೆಯು ಈಗಿರುವ ಮಟ್ಟದಲ್ಲಿಯೇ ಇರಲಿದೆ ಎಂದು ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಕಂಪನಿಗಳಲ್ಲಿ ಶೇ 80ರಷ್ಟು ಕಂಪನಿಗಳು ಅಭಿಪ್ರಾಯಪಟ್ಟಿವೆ.

ತಯಾರಿಕೆ ಮತ್ತು ಸೇವಾ ವಲಯದ ಒಟ್ಟಾರೆ ಬೆಳವಣಿಗೆಯನ್ನು ತಿಳಿಸುವ ಕಂಪೋಸಿಟ್ ಪಿಎಂಐ ಔಟ್‌ಪುಟ್ ಇಂಡೆಕ್ಸ್ 2022ರ ಡಿಸೆಂಬರ್‌ನಲ್ಲಿ 59.4 ಇದ್ದಿದ್ದು 2023ರ ಜನವರಿಯಲ್ಲಿ 57.5ಕ್ಕೆ ಇಳಿಕೆ ಕಂಡಿದೆ. ಹೀಗಿದ್ದರೂ ದೀರ್ಘಾವಧಿಯ ಸರಾಸರಿ 54.1ಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿಯೇ ಇದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	12500-25000
ಹಳತು	48000-54500
ಹೊಸತು	22500-40000
ಚಿತ್ರದುರ್ಗ	
ಆಪಿ	45600-46000
ಬೆಟ್ಟೆ	35100-35500
ಕೆಂಪುಗೋಟು	30000-30400
ರಾಶಿ	45100-45500
ಕುಮಟ	
ಚಿಪ್ಪು	27089-31899
ಕೋಕ	20109-29699
ಹಳೆಚಾಲಿ	36509-39099
ಹೊಸಚಾಲಿ	33509-36129
ಕುಂದಾಪುರ	
ಹಳೆಚಾಲಿ	40000-49500
ಹೊಸಚಾಲಿ	30000-37500
ಶಿವಮೊಗ್ಗ	
ಬೆಟ್ಟೆ	46900-53100
ಗೊರಬಲು	18659-35399
ರಾಶಿ	355296-46599
ಸರಕು	43009-81400
ಸಿದ್ದಾಪುರ	
ಬಿಳಿಗೋಟು	27299-33599
ಚಾಲಿ	38399-39899
ಕೋಕ	26699-31899
ಕೆಂಪುಗೋಟು	30899-33369
ರಾಶಿ	42599-46099
ತಟ್ಟಿಬೆಟ್ಟೆ	38189-44889
ಶಿರಸಿ	
ಬೆಟ್ಟೆ	36099-43089
ಬಿಳಿಗೋಟು	21699-33699
ಚಾಲಿ	33399-41500
ಕೆಂಪುಗೋಟು	24099-36099
ರಾಶಿ	40399-45709
ಯಲ್ಲಾಪುರ	
ಬಿಳಿಗೋಟು	24012-32651
ಹಳೆಚಾಲಿ	35899-41333
ಹೊಸಚಾಲಿ	32612-35400
ಕೋಕ	15969-30099
ಕೆಂಪುಗೋಟು	26099-34969
ರಾಶಿ	45650-51399
ತಟ್ಟಿಬೆಟ್ಟೆ	38330-43469

ಐಟಿಸಿ ಲಾಭ ಶೇ 23ರಷ್ಟು ಏರಿಕೆ

ನವದೆಹಲಿ (ಪಿಟಿಐ): ಐಟಿಸಿ ಲಿಮಿಟೆಡ್‌ನ ಡಿಸೆಂಬರ್ ತ್ರೈಮಾಸಿಕದ ನಿವ್ವಳ ಲಾಭದಲ್ಲಿ ಶೇಕಡ 23.09ರಷ್ಟು ಏರಿಕೆ ಆಗಿದ್ದು, ಲಾಭವು ₹ 5,070 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ₹ 4,118 ಕೋಟಿ ನಿವ್ವಳ ಲಾಭ ಗಳಿಸಿತ್ತು.

ಷೇರುದಾರರಿಗೆ ಕಂಪನಿಯು ಪ್ರತಿ ಷೇರಿಗೆ ₹ 6ರಷ್ಟು ಮಧ್ಯಂತರ ಲಾಭಾಂಶ ಘೋಷಣೆ ಮಾಡಿದೆ.

ಕಂಪನಿಯ ಕಾರ್ಯಾಚರಣೆ ವರಮಾನವು ಶೇ 3.56ರಷ್ಟು ಬೆಳವಣಿಗೆ ಕಂಡಿದ್ದು ₹ 19,020 ಕೋಟಿಗೆ ತಲುಪಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಲಾಗಿದೆ. ‘ಗ್ರಾಮೀಣ ಪ್ರದೇಶಗಳಲ್ಲಿ ಬೇಡಿಕೆಯು ಮಂದವಾಗಿದೆ. ಆದರೆ ಅದು ಹೆಚ್ಚಳ ಕಾಣುತ್ತಿದೆ’ ಎಂದು ಕಂಪನಿ ತಿಳಿಸಿದೆ.

ಕಂಪನಿಯ ವೆಚ್ಚಗಳು ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 3.29ರಷ್ಟು ಕಡಿಮೆ ಆಗಿವೆ. ಸಿಗರೇಟ್ ವಹಿವಾಟನ್ನು ಒಳಗೊಂಡಿರುವ ಎಫ್‌ಎಂಸಿಜಿ ವಹಿವಾಟುಗಳಿಂದ ಕಂಪನಿಯು ₹ 12,934 ಕೋಟಿ ವರಮಾನ ಗಳಿಸಿದೆ. ಸಿಗರೇಟು ವಹಿವಾಟಿನಿಂದ ಕಂಪನಿಗೆ ₹ 8,085 ಕೋಟಿ ವರಮಾನ ಬಂದಿದೆ. ಎಫ್‌ಎಂಸಿಜಿ ವಹಿವಾಟಿನ ಭಾಗವಾಗಿರುವ ಪ್ಯಾಕ್ ಮಾಡಿರುವ ಆಹಾರ, ಕುರುಕಲು, ಪಾನೀಯ ಮುಂತಾದವುಗಳ ಮಾರಾಟದಿಂದ ಕಂಪನಿಯು ₹ 4,848 ಕೋಟಿ ವರಮಾನ ಗಳಿಸಿದೆ.

ಕಂಪನಿಯ ಹೋಟೆಲ್ ವಹಿವಾಟುಗಳಿಂದ ಬರುವ ವರಮಾನವು ಶೇ 49.19ರಷ್ಟು ಹೆಚ್ಚಾಗಿದ್ದು ₹ 739 ಕೋಟಿಗೆ ತಲುಪಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

909 ಅಂಶ ಜಿಗಿತ ಕಂಡ ಸೆನ್ಸೆಕ್ಸ್

ಷೇರುಪೇಟೆಯಲ್ಲಿ ಬ್ಯಾಂಕಿಂಗ್, ಹಣಕಾಸು ವಲಯದ ಷೇರು ಗಳಿಕೆ ಹೆಚ್ಚಳ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಶುಕ್ರವಾರ ಶೇಕಡ 1ರಷ್ಟು ಗಳಿಕೆ ಕಂಡು ವಹಿವಾಟು ಅಂತ್ಯಗೊಳಿಸಿವೆ. ಬ್ಯಾಂಕಿಂಗ್ ಮತ್ತು ಹಣಕಾಸು ವಲಯದ ಷೇರುಗಳನ್ನು ಹೂಡಿಕೆದಾರರು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿದ್ದರಿಂದಾಗಿ ಸಕಾರಾತ್ಮಕ ವಹಿವಾಟು ನಡೆಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 909 ಅಂಶ ಜಿಗಿತ ಕಂಡು 60,841 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 244 ಅಂಶ ಹೆಚ್ಚಾಗಿ 17,854 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ಅಮೆರಿಕದ ಫೆಡರಲ್ ರಿಸರ್ವ್‌ನ ಹೇಳಿಕೆಯು ನೀಡಿರುವ ಸೂಚನೆಯಂತೆ, ಬಡ್ಡಿದರ ಹೆಚ್ಚಳ ಮಾಡುವ ಪ್ರಕ್ರಿಯೆಯ ಕೊನೆಯ ಹಂತದಲ್ಲಿ ಇದೆ ಎಂದು ಹೂಡಿಕೆದಾರರು ಭಾವಿಸಿದ್ದಾರೆ. ಇದರಿಂದಾಗಿ ಷೇರುಪೇಟೆಗಳು ಗಳಿಕೆ ಕಂಡುಕೊಂಡವು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ದಿನದ ವಹಿವಾಟಿನಲ್ಲಿ ಬಿಎಸ್‌ಇ ಸ್ಮಾಲ್‌ಕ್ಯಾಪ್ ಶೇ 0.47ರಷ್ಟು ಮತ್ತು ಮಿಡ್ ಕ್ಯಾಪ್ ಶೇ 0.04ರಷ್ಟು ಇಳಿಕೆ ಕಂಡಿತು. ವಲಯವಾರು, ಗ್ರಾಹಕ ಬಳಕೆ ವಸ್ತುಗಳು ಶೇ 2.61, ಹಣಕಾಸು ಸೇವೆಗಳು ಶೇ 2.15, ಬ್ಯಾಂಕಿಂಗ್ ಶೇ 2.02, ಸೇವೆಗಳು ಶೇ 1.64ರಷ್ಟು ಏರಿಕೆ ಕಂಡಿವೆ.

ಜಾಗತಿಕ ಮಟ್ಟದಲ್ಲಿ, ಸೋಲ್ ಮತ್ತು ಟೋಕಿಯೊ ಷೇರುಪೇಟೆಗಳು ಗಳಿಕೆ ಕಂಡರೆ, ಶಾಂಘೈ ಮತ್ತು ಹಾಂಗ್‌ಕಾಂಗ್ ಷೇರುಪೇಟೆಗಳ ವಹಿವಾಟು ಇಳಿಕೆ ಕಂಡಿತು. ಯುರೋಪ್‌ನಲ್ಲಿ ಬಹುತೇಕ ಷೇರುಪೇಟೆಗಳ ವಹಿವಾಟು ಇಳಿಮುಖವಾಗಿತ್ತು.

ಬ್ರೆಂಟ್ ಕಚ್ಚಾ ತೈಲ ದರ ಶೇ 0.44ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 82.52 ಡಾಲರ್‌ಗೆ ತಲುಪಿತು.

ಕಂಪನಿಗಳ ನಷ್ಟ (%)	
ಅದಾನಿ ಟ್ರಾನ್ಸ್‌ಮಿಷನ್	10
ಅದಾನಿ ಗ್ರೀನ್ ಎನರ್ಜಿ	10
ಅದಾನಿ ಪವರ್	5
ಅದಾನಿ ಟೋಟಲ್ ಗ್ಯಾಸ್	5
ಅದಾನಿ ವಿಲ್ಮರ್	4.99
ಎನ್‌ಡಿಟಿವಿ	4.98

ಕಂಪನಿಗಳ ಗಳಿಕೆ (%)	
ಅದಾನಿ ಪೋರ್ಟ್ಸ್	7.98
ಅಂಬುಜಾ ಸಿಮೆಂಟ್ಸ್	6.03
ಎಸಿಸಿ	4.39
ಅದಾನಿ ಎಂಟರ್‌ಪ್ರೈಸಸ್	1.25

(ಶುಕ್ರವಾರದ ವಹಿವಾಟಿನಲ್ಲಿ ಇಳಿಕೆ, ಗಳಿಕೆ)

ಅದಾನಿ: ಮುಂದುವರಿದ ನಷ್ಟ

ಅದಾನಿ ಸಮೂಹದ ಕಂಪನಿಗಳ ಮೇಲೆ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯ ವರದಿಯ ಪರಿಣಾಮವು ಶುಕ್ರವಾರವೂ ಮುಂದುವರಿಯಿತು. ಅದಾನಿ ಸಮೂಹದ 10 ಕಂಪನಿಗಳಲ್ಲಿ ಶುಕ್ರವಾರ ಆರು ಕಂಪನಿಗಳ ಷೇರು ಮೌಲ್ಯ ಇಳಿಕೆ ಕಂಡರೆ, ನಾಲ್ಕು ಕಂಪನಿಗಳು ಗಳಿಕೆ ಕಂಡುಕೊಂಡಿವೆ.

ಅದಾನಿ ಎಂಟರ್‌ಪ್ರೈಸಸ್ ಕಂಪನಿಯನ್ನು ಫೆಬ್ರುವರಿ 7ರಿಂದ ಅನ್ವಯಿಸುವಂತೆ ಸುಸ್ಥಿರತೆಯ ಸೂಚ್ಯಂಕದಿಂದ ಕೈಬಿಡುವುದಾಗಿ ಎಸ್ ಆ್ಯಂಡ್ ಪಿ ಡೋ ಜೋನ್ಸ್ ಶುಕ್ರವಾರ ಹೇಳಿದೆ.

ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯ ವರದಿಯ ಬಳಿಕ ಮುಂಬೈ ಮತ್ತು ರಾಷ್ಟ್ರೀಯ ಷೇರುಪೇಟೆಗಳು ಅದಾನಿ ಸಮೂಹದ ಅದಾನಿ ಎಂಟರ್‌ಪ್ರೈಸಸ್, ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷಲ್ ಎಕನಾಮಿಕ್ ಜೋನ್ ಮತ್ತು ಅಂಬುಜಾ ಸಿಮೆಂಟ್ಸ್ ಕಂಪನಿಗಳನ್ನು ಅಲ್ಪಾವಧಿಗೆ ಹೆಚ್ಚುವರಿ ನಿಗಾ ವ್ಯವಸ್ಥೆಗೆ ಒಳಪಡಿಸಿವೆ. ಆ ಬಳಿಕ ಜೋ ಡೋನ್ಸ್ ಈ ನಿರ್ಧಾರ ತೆಗೆದುಕೊಂಡಿದೆ.

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹14800
ಎಸಿ	₹7280
ಆರ್‌ಪಿ	₹9500
ಆರ್‌ಸಿ	₹4800

ಮುಂಬೈ ಧಾರಣೆ

ಶೇಂಗಾ

3–2–2023

ಜಾವಾ 70/80(ಹೊಸ)	12250-12300
ಜಾವಾ 80/90(ಹೊಸ)	11250-11300
ದಪ್ಪ ಮಧ್ಯಪ್ರದೇಶ(ಹೊಸ)	10650-10750
ದಪ್ಪ ಗುಜರಾತ್(ಹೊಸ)	11700-11800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1630)
ಒಂದು ವಾರದ ಡೆಲಿವರಿ	1645 (1625)
ಸೋಯಾ ಕಚ್ಚಾ	1070 (1065)
ಪಾಮ್ ವಾರದ ಡೆಲಿವರಿ	928 (916)
ಸೂರ್ಯಕಾಂತಿ ಎಣ್ಣೆ ಕಚ್ಚಾ	1060 (1060)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 57,200 (58,550)
ಬೆಳ್ಳಿ ಕೆ.ಜಿ 69,400 (71,550)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕರ್ಣಾಟಕ ಬ್ಯಾಂಕ್ ನಿವ್ವಳ ಲಾಭ ₹ 300 ಕೋಟಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಪ್ರಸಕ್ತ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ಕರ್ಣಾಟಕ ಬ್ಯಾಂಕ್ ₹ 300.63 ಕೋಟಿ ನಿವ್ವಳ ಲಾಭ ದಾಖಲಿಸಿದೆ. ಇದು ಹಿಂದಿನ ವರ್ಷದ ಇದೇ ಅವಧಿಯ ಲಾಭಕ್ಕೆ ಹೋಲಿಸಿದರೆ ಶೇಕಡ 105.32ರಷ್ಟು ಹೆಚ್ಚು.

ಹಿಂದಿನ ವರ್ಷದ ಅಕ್ಟೋಬರ್–ಡಿಸೆಂಬರ್ ಅವಧಿಯಲ್ಲಿ ನಿವ್ವಳ ಲಾಭವು ₹ 146.42 ಕೋಟಿ ಆಗಿತ್ತು. ತೃತೀಯ ತ್ರೈಮಾಸಿಕದ ಅಂತ್ಯಕ್ಕೆ (ಒಟ್ಟು ಒಂಬತ್ತು ತಿಂಗಳ ಅವಧಿಯಲ್ಲಿ) ವಾರ್ಷಿಕ ಶೇ 118.68ರ ವೃದ್ಧಿ ದರದೊಂದಿಗೆ ₹ 826.15 ಕೋಟಿ ನಿವ್ವಳ ಲಾಭ ಗಳಿಸಿ ದಾಖಲೆ ಮಾಡಿದೆ ಎಂದು ಪ್ರಕಟಣೆ ತಿಳಿಸಿದೆ.

ಶತಮಾನದ ಸಂಭ್ರಮದಲ್ಲಿರುವ ಬ್ಯಾಂಕ್ ಈ ತ್ರೈಮಾಸಿಕದಲ್ಲೂ ಹೊಸ ದಾಖಲೆಯನ್ನು ನಿರ್ಮಿಸಿದೆ. ಬ್ಯಾಂಕ್‌ನ ಸರ್ವಾಂಗೀಣ ಕಾರ್ಯಕ್ಷಮತೆಗೆ ಈ ಫಲಿತಾಂಶ ಸಾಕ್ಷಿಯಾಗಿದೆ

ಮಹಾಬಲೇಶ್ವರ ಎಂ.ಎಸ್., ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ

ಹಿಂದಿನ ವರ್ಷ ಇದೇ ಅವಧಿಯಲ್ಲಿ ನಿವ್ವಳ ಲಾಭ ₹ 377.79 ಕೋಟಿ ಆಗಿತ್ತು.

‘ಬ್ಯಾಂಕಿನ ಸ್ವತ್ತುಗಳ ಗುಣಮಟ್ಟದಲ್ಲೂ ಗಮನಾರ್ಹ ವೃದ್ಧಿ ಆಗಿದೆ. ಬ್ಯಾಂಕ್‌ನ ಸ್ಥೂಲ ಅನುತ್ಪಾದಕ ಸ್ವತ್ತುಗಳು 8 ಅಂಶಗಳಷ್ಟು ಕಡಿಮೆಯಾಗಿದ್ದು, ಶೇ 3.28ಕ್ಕೆ ಇಳಿಕೆಯಾಗಿದೆ. ನಿವ್ವಳ ಅನುತ್ಪಾದಕ ಆಸ್ತಿಯು ಶೇ1.66ಕ್ಕೆ ಇಳಿದಿದೆ’ ಎಂದು ಪ್ರಕಟಣೆ ಹೇಳಿದೆ.

2022ರ ಡಿಸೆಂಬರ್ ಅಂತ್ಯಕ್ಕೆ ಬ್ಯಾಂಕ್‌ನ ಒಟ್ಟು ವ್ಯವಹಾರವು ಶೇ 9.79ರ ದರದಲ್ಲಿ ವೃದ್ಧಿ ಕಂಡಿದ್ದು, ₹1,47,128 ಕೋಟಿಗೆ ಏರಿದೆ.

ಬ್ಯಾಂಕಿನ ಠೇವಣಿಗಳು ಶೇ 7.86ರ ದರದಲ್ಲಿ ವೃದ್ಧಿ ಕಂಡು, ₹84,596.40 ಕೋಟಿ ಆಗಿದೆ. ಮುಂಗಡ ಶೇ 12.51ರಷ್ಟು ಏರಿಕೆಯಾಗಿ ₹ 62,532.11 ಕೋಟಿಗೆ ತಲುಪಿದೆ.

ಅಮೆರಿಕದ ವಾಯುಪ್ರದೇಶದಲ್ಲಿ ಚೀನಿ ಶಂಕಿತ ಬೇಹುಗಾರಿಕೆ ಬಲೂನು ಪತ್ತೆ

ವಾಷಿಂಗ್ಟನ್ (ಎಪಿ): ಅಮೆರಿಕದ ವಾಯು ಪ್ರದೇಶದಲ್ಲಿ ಶಂಕಿತ ಬೇಹುಗಾರಿಕೆಯ ಚೀನಿ ಬಲೂನು ಒಂದೆರಡು ದಿನಗಳವರೆಗೆ ಹಾರಾಟ ನಡೆಸಿದೆ ಎಂದು ಪೆಂಟಗನ್ ವರದಿ ಹೇಳಿದೆ.

‘ಶಂಕಿತ ಬೇಹುಗಾರಿಕೆ ಬಲೂನ್ ಅನ್ನು ಪತ್ತೆ ಹಚ್ಚಿದರೂ ಅದನ್ನು ಹೊಡೆದು ಉರುಳಿಸಲಿಲ್ಲ. ಬಲೂನ್‌ಗೆ ಶೂಟ್ ಮಾಡಿದರೆ ಅದರ ಅವಶೇಷಗಳಿಂದ ನೆಲದ ಮೇಲಿದ್ದವರಿಗೆ ಹಾನಿಯಾಗುತ್ತಿತ್ತು. ಆ ಕಾರಣಕ್ಕಾಗಿ ಶೂಟ್ ಮಾಡದಿರಲು ರಕ್ಷಣಾ ಸಚಿವಾಲಯ ಪೆಂಟಗನ್ ನಿರ್ಧರಿಸಿತು’ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

‘ರಹಸ್ಯವಾಗಿ ಮಾಹಿತಿಗಳನ್ನು ಸಂಗ್ರಹಿಸಲು ಚೀನಿ ಬಲೂನು ಅತ್ಯಂತ ಸೂಕ್ಷ್ಮ ಸ್ಥಳಗಳ ಮೇಲೆ ಹಾರಾಟ ನಡೆಸಿದೆ. ದೇಶದಲ್ಲಿ ಅಣ್ವಸ್ತ್ರ ಕ್ಷಿಪಣಿಗಳನ್ನು ನೆಲೆಗೊಳಿಸಿರುವ ಪ್ರಮುಖ ಮೂರು ಸ್ಥಳಗಳಲ್ಲಿ ಒಂದೆನಿಸಿದ ಮೊಂಟಾನಾದ ವಾಯುಪ್ರದೇಶದಲ್ಲಿ ಬಲೂನು ಹಾರಾಟ ನಡೆಸಿರುವುದು ಪತ್ತೆಯಾಗಿದೆ. ಮೊಂಟೊನಾದಲ್ಲಿ ಮಾಲ್ಮ್‌ಸ್ಟ್ರಾರ್ಮ್ ವಾಯು ಪಡೆಯ ನೆಲೆಯೂ ಇದೆ. ಪತ್ತೆಹಚ್ಚಲಾದ ಬಲೂನು ಚೀನಾದ ಹೈ ಆಲ್ಟಿಟ್ಯೂಡ್ ಬಲೂನು ಎನ್ನುವ ಬಗ್ಗೆ ಅಮೆರಿಕಕ್ಕೆ ಬಲವಾದ ವಿಶ್ವಾಸವಿದೆ’ ಎಂದು ಹೆಸರು ಬಹಿರಂಗಪಡಿಸಲು ಬಯಸದ, ರಕ್ಷಣಾ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಪೆಂಟಗನ್ ವರದಿಗಾರರಿಗೆ ತಿಳಿಸಿದರು.

ಅಮೆರಿಕದ ವಾಯು ಪ್ರದೇಶದಲ್ಲಿ ಕಾಣಿಸಿದ್ದ ಶಂಕಿತ ಬೇಹುಗಾರಿಕೆಯ ಚೀನಿ ಬಲೂನು –ಎಎಫ್‌ಪಿ ಚಿತ್ರ

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಚೀನಾ ಪ್ರವಾಸ ಕೈಗೊಳ್ಳುವ ಕೆಲವು ದಿನಗಳ ಮುಂಚಿತವಾಗಿ ಈ ಸಂಗತಿಯನ್ನು ಪೆಂಟಗನ್ ಪ್ರಕಟಿಸಿದೆ. ಇದು ಬ್ಲಿಂಕನ್ ಅವರ ಚೀನಾ ಪ್ರವಾಸದ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆ ಎಂಬುದು ಸ್ಪಷ್ಟವಾಗಿಲ್ಲ. ಪ್ರವಾಸದ ಬಗ್ಗೆ ವಿದೇಶಾಂಗ ಇಲಾಖೆಯೂ ಔಪಚಾರಿಕ ಘೋಷಣೆ ಮಾಡಿಲ್ಲ.

‘ಬಲೂನ್ ಪತ್ತೆಯಾದ ತಕ್ಷಣವೇ ಹೊಡೆದುರುಳಿಸಲು ಆದೇಶ ನೀಡಿ, ಎಫ್–22 ಸೇರಿ ಯುದ್ಧ ವಿಮಾನಗಳನ್ನು ಸಜ್ಜುಗೊಳಿಸಲಾಗಿತ್ತು. ಬಲೂನ್ ಜನ ದಟ್ಟಣೆಯ ಮೊಂಟಾನಾದ ವಾಯು ಪ್ರದೇಶದಲ್ಲಿತ್ತು. ಅದರಲ್ಲಿ ಏನಿದೆ ಎನ್ನುವುದೂ ಸ್ಪಷ್ಟವಾಗಿರಲಿಲ್ಲ. ಅದನ್ನು ಹೊಡೆದುರುಳಿಸಿದರೆ ಅದರ ಅವಶೇಷಗಳಿಂದ ಜನರಿಗೆ ತೊಂದರೆ ಆಗುತ್ತದೆ ಎನ್ನುವ ಕಾರಣಕ್ಕಾಗಿ ಪೆಂಟಗನ್ ಬಲೂನ್ ಹೊಡೆದುರುಳಿಸದಿರಲು ಸಲಹೆ ನೀಡಿತು’ ಎಂದು ರಕ್ಷಣಾ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ವಾಯು ಪ್ರದೇಶದಲ್ಲಿ ಹಾರಾಡುತ್ತಿದ್ದ ಬಿಳಿ ಬಣ್ಣದ ದೊಡ್ಡ ಬಲೂನ್‌ನ ಛಾಯಾಚಿತ್ರವನ್ನು ‘ದಿ ಬಿಲ್ಲಿಂಗ್ಸ್ ಗೆಜೆಟ್’ ಛಾಯಾಗ್ರಾಹಕ ಲ್ಯಾರಿ ಮೇಯರ್ ಸೆರೆ ಹಿಡಿದಿದ್ದಾರೆ. ಶಂಕಿತ ಬೇಹುಗಾರಿಕೆ ಬಲೂನ್ ಬಗ್ಗೆ ‘ಎನ್‌ಬಿಸಿ ನ್ಯೂಸ್’ ಮೊದಲು ವರದಿ ಮಾಡಿದೆ.

ದಿಕ್ಕುತಪ್ಪಿದ ವಾಯುನೌಕೆ: ಚೀನಾ ವಿಷಾದ

ಬೀಜಿಂಗ್/ಹಾಂಗ್‌ಕಾಂಗ್ (ಎಪಿ/ರಾಯಿಟರ್ಸ್): ನಾಗರಿಕ ಹವಾಮಾನ ಪರೀಕ್ಷೆ ಮತ್ತು ಇತರ ವೈಜ್ಞಾನಿಕ ಉದ್ದೇಶಗಳಿಗಾಗಿ ಹಾರಿಬಿಟ್ಟಿರುವ ವಾಯುನೌಕೆ (ಬಲೂನ್) ದಿಕ್ಕು ತಪ್ಪಿ, ಅಮೆರಿಕದ ವಾಯು ಪ್ರದೇಶದ ಮೇಲೆ ಹಾರಾಟ ನಡೆಸಿದೆ. ಇದು ವಿಷಾದನೀಯ ಎಂದು ಚೀನಾ ಶುಕ್ರವಾರ ಹೇಳಿದೆ.

ಚೀನಾದ ವಿದೇಶಾಂಗ ಸಚಿವಾಲಯವು ಶುಕ್ರವಾರ ತಡವಾಗಿ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ‘ಅನಿರೀಕ್ಷಿತ ಪರಿಸ್ಥಿತಿಯನ್ನು ಸರಿಯಾಗಿ ನಿರ್ವಹಿಸಲು ಅಮೆರಿಕದ ಜತೆಗೆ ಮಾತುಕತೆ ಮುಂದುವರಿಸಲಾಗುವುದು’ ಎಂದು ತಿಳಿಸಿದೆ.

ವೀಳ್ಯದೆಲೆ ದುಬಾರಿ

ಪ್ರಜಾವಾಣಿ ವಾರ್ತೆ

ತೋವಿನಕೆರೆ (ತುಮಕೂರು): ಇಲ್ಲಿನ ಸಂತೆಯಲ್ಲಿ ಶುಕ್ರವಾರ ವೀಳ್ಯದೆಲೆ ಒಂದು ಕಟ್ಟಿಗೆ (100 ಎಲೆಗಳು) ₹ 160ರಂತೆ ದಾಖಲೆ ಬೆಲೆಗೆ ಮಾರಾಟವಾಯಿತು.

ಕೆಲವು ದಿನಗಳಿಂದ ವೀಳ್ಯದೆಲೆ ಬೆಲೆ ಹೆಚ್ಚಾಗುತ್ತಿದೆ. ಇತ್ತೀಚೆಗೆ ಒಂದು ಕಟ್ಟು ₹ 150ರವರೆಗೂ ಏರಿಕೆ ಕಂಡಿತ್ತು. ಈಗ ಮತ್ತಷ್ಟು ಹೆಚ್ಚಳವಾಗಿದೆ.

ರೈತರೇ ಸಂತೆಗೆ ಎಲೆ ತಂದು ಮಾರಾಟ ಮಾಡುತ್ತಾರೆ. ರೈತರಿಂದ ಖರೀದಿಸಿದ ವ್ಯಾಪಾರಿಗಳು ಚಿಲ್ಲರೆಯಾಗಿ ಒಂದು ಕಟ್ಟಿಗೆ ₹ 200ರಿಂದ ₹ 250ರ ವರೆಗೆ ಮಾರಾಟ ಮಾಡುತ್ತಿದ್ದಾರೆ.

ತೋವಿನಕೆರೆ ಸುತ್ತಮುತ್ತ ಹೆಚ್ಚಾಗಿ ವೀಳ್ಯದೆಲೆ ಬೆಳೆಯಲಾಗುತ್ತಿದೆ. ಸಂತೆಯಲ್ಲಿ ವ್ಯಾಪಾರ ಜೋರಾಗಿ ನಡೆಯುತ್ತದೆ. ಜಿಲ್ಲೆಯಷ್ಟೇ ಅಲ್ಲದೆ ಆಂಧ್ರಪ್ರದೇಶದ ಹಿಂದೂಪುರ ಭಾಗದ ಜನರು ಬಂದು ಖರೀದಿಸುತ್ತಾರೆ. ಬೇಡಿಕೆಗೆ ತಕ್ಕಷ್ಟು ಆವಕ ಇಲ್ಲದಿರುವುದು ಬೆಲೆ ಹೆಚ್ಚಳಕ್ಕೆ ಕಾರಣವಾಗಿದೆ.

ಐಎಂಎಫ್ ಷರತ್ತು ಒಪ್ಪಲೇಬೇಕು: ಪಾಕ್ ಪ್ರಧಾನಿ ಶೆಹಬಾಜ್

ಪೆಶಾವರ (ಎಎಫ್‌ಪಿ): ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ವಿಧಿಸುವ ಕಲ್ಪನೆಗೂ ಮೀರಿದ ಷರತ್ತುಗಳನ್ನು ಸರ್ಕಾರ ಒಪ್ಪಿಕೊಳ್ಳಲೇಬೇಕಿದೆ ಎಂದು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಹೇಳಿದ್ದಾರೆ.

ಪಾಕಿಸ್ತಾನಕ್ಕೆ ಹಣಕಾಸಿನ ನೆರವು ನೀಡುವ ಕುರಿತ ಮಾತುಕತೆಗಾಗಿ ಐಎಂಎಫ್‌ನ ನಿಯೋಗವು ಇತ್ತೀಚೆಗೆ ಪಾಕಿಸ್ತಾನಕ್ಕೆ ಭೇಟಿ ನೀಡಿತ್ತು. ತೆರಿಗೆ ಹೆಚ್ಚಳ ಮತ್ತು ಸಬ್ಸಿಡಿ ಕಡಿತಕ್ಕೆ ಸಂಬಂಧಿಸಿದಂತೆ ಐಎಂಎಫ್ ಒತ್ತಾಯಿಸಿತ್ತು. ಇದಕ್ಕೆ ಸರ್ಕಾರ ವಿರೋಧಿಸಿತ್ತು.

ಈ ಬಗ್ಗೆ ಪ್ರತಿಕ್ರಿಯಿಸಿದ ಷರೀಫ್, ‘ನಮ್ಮ ಆರ್ಥಿಕ ಸವಾಲು ಊಹಿಸಲೂ ಅಸಾಧ್ಯವಾಗಿದೆ. ಹೀಗಾಗಿ ಐಎಂಎಫ್‌ನ ಷರತ್ತುಗಳನ್ನು ಒಪ್ಪಿಕೊಳ್ಳಲೇಬೇಕಿದೆ’ ಎಂದು ಹೇಳಿದ್ದಾರೆ.

ಪಾಕಿಸ್ತಾನ ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದು, ವಿದೇಶಿ ವಿನಿಮಯ ಸಂಗ್ರಹ ₹25,461 ಕೋಟಿಗೆ (3.1 ಬಿಲಿಯನ್ ಡಾಲರ್) ಕುಸಿದಿದೆ ಎಂದು ಕೇಂದ್ರೀಯ ಬ್ಯಾಂಕ್ ಇತ್ತೀಚೆಗೆ ಹೇಳಿದೆ.

ಉಗ್ರ ದಾಳಿ ತಡೆಯುವಲ್ಲಿ ವಿಫಲ– ಷರೀಫ್ (ಇಸ್ಲಾಮಾಬಾದ್ ವರದಿ): ‘100ಕ್ಕೂ ಹೆಚ್ಚು ಜನರನ್ನು ಬಲಿಪಡೆದ ಪೆಶಾವರ ಹತ್ಯಾಕಾಂಡವನ್ನು ತಡೆಯುವಲ್ಲಿ ನಾವು ವಿಫಲರಾಗಿದ್ದೇವೆ’ ಎಂದು ಪ್ರಧಾನಿ ಷರೀಫ್ ಒಪ್ಪಿಕೊಂಡಿದ್ದಾರೆ.

‘ಚೆಕ್‌ಪೋಸ್ಟ್‌ನಲ್ಲಿ ಭದ್ರತಾ ಲೋಪದಿಂದ ಈ ಕೃತ್ಯ ನಡೆದಿದೆ. ಸತ್ಯವನ್ನು ಒಪ್ಪಿಕೊಳ್ಳಲು ಹಿಂಜರಿಕೆ ಇಲ್ಲ’ ಎಂದು ಅವರು ಹೇಳಿರುವುದಾಗಿ ಡಾನ್ ಪತ್ರಿಕೆ ವರದಿ ಮಾಡಿದೆ.

ಸಂಕ್ಷಿಪ್ತ ಸುದ್ದಿ

ಪಾಕಿಸ್ತಾನ: ಎಲ್ಲಾ ಚೀನಿಯರಿಗೂ ಭದ್ರತೆ ಸಾಧ್ಯವಿಲ್ಲ

ಲಾಹೋರ್(ಪಿಟಿಐ): ಪಂಜಾಬ್ ಪ್ರಾಂತ್ಯದಲ್ಲಿ ನೆಲೆಸಿರುವ ಚೀನಾದ ಎಲ್ಲಾ ಪ್ರಜೆಗಳಿಗೆ ಭದ್ರತೆ ನೀಡಲು ಸಾಧ್ಯವಿಲ್ಲ. ಪ್ರಾಂತ್ಯದಲ್ಲಿ ನೆಲೆಸಿರುವವರು ಮತ್ತು ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ ಚೀನಿಯರು ಖಾಸಗಿ ಭದ್ರತಾ ಕಂಪನಿಗಳಿಂದ ಭದ್ರತಾ ಸಿಬ್ಬಂದಿಯನ್ನು ನೇಮಿಸಿಕೊಳ್ಳುವುದು ಉತ್ತಮ ಎಂದು ಗೃಹ ಇಲಾಖೆ ನಿರ್ದೇಶನ ನೀಡಿದೆ.

ಪೇಶಾವರದ ಮಸೀದಿಯಲ್ಲಿ ನಡೆದ ಭೀಕರ ಆತ್ಮಾಹುತಿ ದಾಳಿಯ ಬಳಿಕ ಈ ಸೂಚನೆ ನೀಡಿದೆ.

ಶ್ರೀಲಂಕಾ ಸ್ವಾತಂತ್ರ್ಯ ದಿನಾಚರಣೆಗೆ ಕೇಂದ್ರ ಸಚಿವ

ಕೊಲಂಬೊ (ಪಿಟಿಐ): ‘ಶ್ರೀಲಂಕಾದ 75ನೇ ಸ್ವಾತಂತ್ರ್ಯ ದಿನಾಚರಣೆ ಶನಿವಾರ ನಡೆಯಲಿದ್ದು, ಕೇಂದ್ರ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ವಿ. ಮುರಳೀಧರನ್ ಅವರು ಭಾರತವನ್ನು ಪ್ರತಿನಿಧಿಸಲಿದ್ದಾರೆ’ ಎಂದು ಶ್ರೀಲಂಕಾ ಅಧಿಕಾರಿಗಳು ತಿಳಿಸಿದ್ದಾರೆ.

‘ಇದೇ ವೇಳೆ ಮುರಳೀಧರನ್ ಅವರು ಶ್ರೀಲಂಕಾದ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಹಾಗೂ ವಿದೇಶಾಂಗ ಸಚಿವ ಅಲಿ ಸಬ್ರಿ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆಗಳನ್ನು ನಡೆಸಲಿದ್ದಾರೆ’ ಎಂದು ಅವರು ಶುಕ್ರವಾರ ಮಾಹಿತಿ ನೀಡಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Building

North

ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿ ರುವ ಅಲಂಕಾರ ಪರ್‌ಲ್ ಪ್ಲಾಜಾದಲ್ಲಿನ ಶಾಪ್ ನಂ. 222 ಮತ್ತು 90 ಮಾರಾಟಕ್ಕಿವೆ. ಸಂಪರ್ಕಿಸಿ : 9833146444

Residential/ Commercial

East

ಬಳ್ಳಾರಿ ಬೆಂಗಳೂರು ರಸ್ತೆಯಲ್ಲಿನ ಶ್ರೀ ವರಲಕ್ಷ್ಮೀ ಬಡಾವಣೆಯಲ್ಲಿ ಬುಡಾ ಅನುಮೋದಿತ /ರೇರಾ ನೋಂದಾಯಿತ ಸಂಪೂರ್ಣ ಅಭಿವೃದ್ಧಿಪಡಿಸಲಾದ ನಿವೇಶನಗಳು (18 ನಿವೇಶನಗಳು - 22000 ಚ. ಅ.) ಮಾರಾಟಕ್ಕೆ ಲಭ್ಯವಿರುತ್ತವೆ. ಅಪಾರ್ಟ್‌ಮೆಂಟ್ ನಿರ್ಮಾಣಕ್ಕೆ ಸೂಕ್ತ, ಕನ್‌ಸ್ಟ್ರಕ್ಷನ್‌ಗೆ ಸಿದ್ಧ. ಭವಿಷ್ಯದಲ್ಲಿ ಉತ್ತಮ ಬೆಲೆ. ಬ್ಯಾಂಕ್ ಲೋನ್ ಸೌಲಭ್ಯವಿದೆ. ಆಸಕ್ತಿಯುಳ್ಳವರು ಮಾಲೀಕರನ್ನು ಸಂಪರ್ಕಿಸಬಹುದು - 9949533633.

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ : 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree - Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000 -56,000/- ವಸತಿಯೂಟದೊಂದಿಗೆ 9035520339/ 9036125229

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/ 9611225344

ಪ್ರವಾಸ

Travel

02.03.2023 ರಿಂದ 6 ದಿನಗಳು ದುಬೈ,ಅಬುಧಾಬಿ ಶಾಪಿಂಗ್ ಫೆಸ್ಟಿವಲ್ ಸ್ಪೆಷಲ್. 05.05.2023 ರಿಂದ 7/10 ದಿನಗಳು ಥೈಲ್ಯಾಂಡ್ ಮಲೇಶಿಯಾ,ಸಿಂಗಾಪುರ್ ಬ್ಯಾಂಕಾಕ್ ಪಟ್ಟಾಯ ಕೊಲಾಲಾಂಪುರ. 02.04.2023 ರಿಂದ 6 ದಿನಗಳು ಕಲ್ಕತ್ತಾ,ಭುವನೇಶ್ವರ್ ಪೂರಿಜಗನ್ನಾಥ್ ಕೋನಾರ್ಕ್. 11.04.2023 ರಿಂದ 8/10 ದಿನಗಳು ನೇಪಾಳ ಪಶುಪತಿನಾಥ ಮುಕ್ತಿನಾಥ ಕಾಟ್ಮಂಡು ಪೋಕ್ರಾ,ಲುಂಬಿನಿ ಗೋರಕ್‌ಪುರ್. 29.04.2023 ರಿಂದ 6/8 ದಿನಗಳು ಕಾಶಿ,ಗಯಾ, ಪ್ರಯಾಗ,ಅಯೋಧ್ಯ ನೈಮಿಶರಣ್ಯ ಹಾಗು ಚಾರ್‌ಧಾಮ್ ಅಮರನಾಥ್ ಗ್ರೂಪ್ ಪ್ರವಾಸಗಳಿಗಾಗಿ ಸಂಪರ್ಕಿಸಿ: ತತ್ವಮಸಿ ಟೂರ್ಸ್ 7795787484 9480158233

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ಮಾಘ ಸ್ನಾನ ಪ್ರಯುಕ್ತ 02.02.2023 26.02.2023 06.03.2023 ಅಲಹಾಬಾದ್ ಕಾಶಿ,ಬುದ್ಧಗಯಾ. 11.02.2023 ಮಹಾಶಿವರಾತ್ರಿ ನೇಪಾಳ ಪಶುಪತಿನಾಥ್ ದರ್ಶನ. 26.02.2023 ಸೋಮನಾಥ ದ್ವಾರಕಾ ನಿಷ್ಕಳಂಕ ಮಾಹದೇವ,ಓಂಕಾರೇಶ್ವರ್ ಮಂಹಾಕಾಳೇಶ್ವರ್. 17.04.2023 23.04.2023 ಚಾರ್ಧಾಮ್ ಸಮೇತ ಪ್ರವಾಸ. ಏಪ್ರಿಲ್ ಮೇ ಜೂನ್ ತಿಂಗಳಲ್ಲಿ ಉತ್ತರ ಭಾರತ ಪ್ರವಾಸಗಳಿಗೆ ಸಂಪರ್ಕಿಸಿ. ವಿಷ್ಣನ್ ಟ್ರಾವಲ್ ಏಜೆನ್ಸಿ ಬೆಂಗಳೂರು-4. 26574131 8317446683 9686708171

15.03.2023 6ದಿನಗಳು ವಿಮಾನದಲ್ಲಿ,A/c Busನಲ್ಲಿ ಕಾಶಿ,ಗಯಾ, ಬೋಧಗಯಾ ಅಯೋಧ್ಯ ಅಲಹಾಬದ್,(ಕೆಲವೇ ಸೀಟುಗಳಿವೆ)28000/ ಪ್ರತಿತಿಂಗಳು ಅಂಡಮಾನ್ ಹವಳದ್ವೀಪ ಹಡಗು/ವಿಮಾನದಲ್ಲಿ. Royal_Package ''ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'' 9845560219/ 9739847429.

ಭವಿಷ್ಯ

Astrology

ಸ್ತ್ರೀ_ವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ ಭವಿಷ್ಯ, ಖಚಿತ ಪರಿಹಾರ, ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್, 8722756967.

★॥ಶ್ರೀಕ್ಷೇತ್ರ, ಧರ್ಮಸ್ಥಳದಿಂದ॥★ ನೇರಪರಿಹಾರ ಉಚಿತ_ಸಲಹೆ ಖಚಿತ ಪರಿಹಾರ ನಿಮ್ಮಸಮಸ್ಯೆ ಏನೇಯಿರಲಿ ಎಷ್ಟೇಕಠಿಣವಾಗಿರಲಿ 3ದಿನದಲ್ಲಿ ಪರಿಹಾರ ಶತಸಿದ್ಧ. ಸಂಪರ್ಕಿಸಿ: ಮಂಜುನಾಥ್‌ಭಟ್ 9880522577

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ, ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ, ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9844174018

Book Your Classifieds Ads
Online
Log in to
dhclassifieds.com
Contact :
9845114560 : 9731810277
9901641752 : 9886213331
080 - 45557163 / 164
DH ಪ್ರಜಾವಾಣಿ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
To place your ad in Prajavani Classifieds
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿರಿ:
9845114560 : 9731810277
080 - 45557163 / 164

ವಿರೋಧ ಪಕ್ಷಗಳಿಂದ ಪ್ರತಿಭಟನೆ • ಉಭಯ ಸದನಗಳ ಕಲಾಪ ಸೋಮವಾರಕ್ಕೆ ಮುಂದೂಡಿಕೆ

ಅದಾನಿ 'ವಂಚನೆ': ಚರ್ಚೆಗೆ ಬಿಗಿಪಟ್ಟು

ಪ್ರಜಾವಾಣಿ ವಾರ್ತೆ

ನವದೆಹಲಿ: 'ಅದಾನಿ ಸಮೂಹದ ವಂಚನೆ'ಯ ಹಗರಣದಿಂದಾಗಿ ಹೂಡಿಕೆದಾರ ಎಸ್‌ಬಿಐ ಮತ್ತು ಎಲ್‌ಐಸಿಗೆ ಆಗಿರುವ ನಷ್ಟದ ಕುರಿತ ಚರ್ಚೆಗೆ ಸರ್ಕಾರ ಅವಕಾಶ ನೀಡದಿರುವುದನ್ನು ವಿರೋಧಿಸಿ ವಿಪಕ್ಷಗಳ ಸಂಸದರಲ್ಲಿ ಒಗ್ಗಟ್ಟಿನ ಪ್ರತಿಭಟನೆಯನ್ನು ಎರಡನೇ ದಿನಕ್ಕೆ ಮುಂದುವರಿಸಿದರು. ಇದರಿಂದ ಶುಕ್ರವಾರವೂ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಕಲಾಪ ಸುಗಮವಾಗಿ ನಡೆಯಲಿಲ್ಲ. ಪ್ರತಿಪಕ್ಷಗಳ ಪ್ರತಿಭಟನೆ, ಗದ್ದಲದಿಂದಾಗಿ ಉಭಯ ಸದನಗಳ ಕಲಾಪವನ್ನು ಸೋಮವಾರಕ್ಕೆ ಮುಂದೂಡಲಾಯಿತು.

ಅದಾನಿ ಸಮೂಹದ ಹಗರಣದ ಬಗ್ಗೆ ಜಂಟಿ ಸದನ ಸಮಿತಿ (ಜೆಪಿಸಿ) ಇಲ್ಲವೇ ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯ ತನಿಖೆ ಮತ್ತು ತಕ್ಷಣದ ಚರ್ಚೆಗೆ ಅವಕಾಶ ನೀಡುವಂತೆ ಆಗ್ರಹಿಸಿ ಪ್ರತಿಪಕ್ಷಗಳ ಸದಸ್ಯರು, ಲೋಕಸಭೆ ಮತ್ತು ರಾಜ್ಯಸಭೆಯಲ್ಲೂ ಪ್ರತಿಭಟಿಸಿದರು. ಉಭಯ ಸದನಗಳಲ್ಲಿ ಬೆಳಿಗ್ಗೆ ಮತ್ತು ಮಧ್ಯಾಹ್ನ ಕಲಾಪ ಆರಂಭದಲ್ಲಿ ಇದೇ ಸನ್ನಿವೇಶ ಮರುಕಳುಸಿತು.

ರಾಜ್ಯಸಭೆಯಲ್ಲಿ ಸಭಾಧ್ಯಕ್ಷ ಜಗದೀಪ್ ಧನಕರ್ ಅವರು, ಚರ್ಚೆಗೆ ಅವಕಾಶ ಕೋರಿದ್ದ 15 ಸಂಸದರ ನೋಟಿಸ್‌ಗಳನ್ನು ನಿಯಮಾನುಸಾರವಿಲ್ಲವೆಂಬ ಕಾರಣ ನೀಡಿ ತಿರಸ್ಕರಿಸಿದರು. ಇದು ಪ್ರತಿಪಕ್ಷಗಳ ಸಂಸದರ ತೀವ್ರ ಪ್ರತಿಭಟನೆಗೆ ಕಾರಣವಾಯಿತು. ಆಗ ಕಲಾಪವನ್ನು ಮಧ್ಯಾಹ್ನ 2.30ರವರೆಗೆ ಮುಂದೂಡಿದ ಸಭಾಧ್ಯಕ್ಷರು, 'ಸಂಸತ್ತು, ಜನರ ಆಶೋತ್ತರಗಳನ್ನು ಸಾಕಾರಗೊಳಿಸಲು ಚರ್ಚಿಸುವ, ಪರಾಮರ್ಶಿಸುವ ಸ್ಥಳವಾಗಿದೆ. ಗದ್ದಲ ಎಬ್ಬಿಸುವ ಸ್ಥಳವಲ್ಲ' ಎಂದು ಕಟುವಾಗಿ ಹೇಳಿದರು.

ಮಧ್ಯಾಹ್ನ ಮತ್ತೆ ಕಲಾಪ ಸೇರಿದಾಗ ಪ್ರತಿಪಕ್ಷಗಳು ತಮ್ಮ ಬೇಡಿಕೆಗೆ ಪಟ್ಟು ಹಿಡಿದರು. ಆಗ ಧನಕರ್, 'ಕಲಾಪಕ್ಕೆ ಅಡ್ಡಿಪಡಿಸಿ ಸಾರ್ವಜನಿಕ ಹಣ ಪೋಲು ಮಾಡುವುದು ದುರದೃಷ್ಟಕರ' ಎಂದು ಟೀಕಿಸಿದರು.

ಧನಕರ್ ಅವರ ಈ ಹೇಳಿಕೆಗಳನ್ನು ಪ್ರತಿಪಕ್ಷಗಳ ಸಂಸದರು ಟೀಕಿಸಿದರು. ಧನಕರ್ ಅವರ ಎಚ್ಚರಿಕೆ ಹೊರತಾಗಿಯೂ ಸಭಾಧ್ಯಕ್ಷರ ಪೀಠದ ಮುಂದಿನ ಆವರಣಕ್ಕೆ ಎಎಪಿಯ ಸಂಸದ ಸಂಜಯ್ ಸಿಂಗ್ ಧಾವಿಸಿದರು. ಮತ್ತೆ ಕಲಾಪ ಮುಂದೂಡುವಾಗ ಧನಕರ್ ಅವರು, ಸಭಾಧ್ಯಕ್ಷರ ಪೀಠದ ಆವರಣಕ್ಕೆ ಧಾವಿಸುವವರ ಮೇಲೆ ಕ್ರಮದ ಎಚ್ಚರಿಕೆ ನೀಡಿದರು.

ಲೋಕಸಭೆಯಲ್ಲೂ ಇದೇ ರೀತಿ ಪ್ರತಿಪಕ್ಷಗಳ ಸಂಸದರು, ಕಾರ್ಪೊರೇಟ್ ದೈತ್ಯ ಅದಾನಿ ಸಮೂಹದ 'ವಂಚನೆಗಳ' ವಿರುದ್ಧ ತನಿಖೆಗೆ ಒತ್ತಾಯಿಸಿ, ಪ್ರತಿಭಟಿಸಿದರು. ಕಲಾಪದಲ್ಲಿ ಭಾಗಿಯಾಗುವಂತೆ ಮಾಡಿದ ಮನವಿಗೆ ಪ್ರತಿಭಟನಾನಿರತ ಸಂಸದರು ಕಿವಿಗೊಡದಿದ್ದಾಗ ಸ್ಪೀಕರ್ ಓಂ ಬಿರ್ಲಾ ಅವರು ಕಲಾಪವನ್ನು ಮಧ್ಯಾಹ್ನಕ್ಕೆ ಮುಂದೂಡಿದರು. ಮಧ್ಯಾಹ್ನ ಕಲಾಪ ಮತ್ತೆ ಸೇರಿದಾಗಲೂ ಸಂಸದರು ಪ್ರತಿಭಟನೆ ಮುಂದುವರಿಸಿದಾಗ, ಸ್ಪೀಕರ್ ಪೀಠದಲ್ಲಿದ್ದ ರಾಜೇಂದ್ರ ಅಗರ್‌ವಾಲ್ ಕಲಾಪವನ್ನು ಸೋಮವಾರಕ್ಕೆ ಮುಂದೂಡಿದರು.

ಅದಾನಿ ಸಮೂಹದ ವಂಚನೆಯ ಬಿಕ್ಕಟ್ಟು ಕುರಿತು ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ನವದೆಹಲಿಯಲ್ಲಿ ಶುಕ್ರವಾರ ವಿರೋಧ ಪಕ್ಷಗಳ ನಾಯಕರು ಸಭೆ ನಡೆಸಿದರು – ಪಿಟಿಐ ಚಿತ್ರ

'ಸ್ನೇಹಿತನ ರಕ್ಷಣೆಗಾಗಿ ಚರ್ಚೆಯಿಂದ ಪ್ರಧಾನಿ ಮೋದಿ ಪಲಾಯನ'

ನವದೆಹಲಿ (ಪಿಟಿಐ): 'ದೇಶದ ಜನರ ಎಲ್‌ಐಸಿ–ಎಸ್‌ಬಿಐನಲ್ಲಿ ಹೂಡಿಕೆ ಮಾಡಿದ್ದ ಹಣ, ಅದಾನಿ ಸಮೂಹದ ವಂಚನೆಯಿಂದಾಗಿ ಮುಳುಗುತ್ತಿದೆ. ಸಾರ್ವಜನಿಕರ ಪರ ಧ್ವನಿ ಎತ್ತಲು ಮತ್ತು ಹೂಡಿಕೆದಾರರ ಆತಂಕದ ಬಗ್ಗೆ ಚರ್ಚಿಸಲು ವಿರೋಧ ಪಕ್ಷಗಳು ಬಯಸುತ್ತಿವೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ತನ್ನ ಸ್ನೇಹಿತನ ರಕ್ಷಣೆಗಾಗಿ ಚರ್ಚೆಗೆ ಬಾರದೇ ಪಲಾಯನ ಮಾಡುತ್ತಿದ್ದಾರೆ' ಎಂದು ವಿರೋಧ ಪಕ್ಷಗಳು ಶುಕ್ರವಾರ ಆರೋಪಿಸಿವೆ.

ರಾಜ್ಯಸಭೆಯಲ್ಲಿನ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ಶುಕ್ರವಾರ ಆರ್‌ಜೆಡಿ, ಡಿಎಂಕೆ, ಎಎಪಿ, ಎಸ್‌ಪಿ, ಬಿಆರ್‌ಎಸ್, ಶಿವಸೇನಾ (ಠಾಕ್ರೆ), ಜೆಡಿಯು, ಎನ್‌ಸಿಪಿ ಸೇರಿ 16 ವಿಪಕ್ಷಗಳ ನಾಯಕರು ಸಭೆ ನಡೆಸಿ, ಸಾರ್ವಜನಿಕರ ಬಂಡವಾಳಕ್ಕೆ ಸಂಬಂಧಿಸಿದ ಅದಾನಿ ವಂಚನೆಯ ಹಗರಣದ ಸಮಗ್ರ ತನಿಖೆಗೆ ಆಗ್ರಹಿಸಿದರು.

'ವಂಚನೆ ಹೊರಬರುತ್ತಿದ್ದಂತೆ ಡೌ ಜೋನ್ಸ್ ಅದಾನಿ ಸಮೂಹವನ್ನು ಸುಸ್ಥಿರ ಸೂಚ್ಯಂಕಗಳಿಂದ ಕೈಬಿಟ್ಟಿತು. ಅದಾನಿ ವಿರುದ್ಧ ಪ್ರಪಂಚದಾದ್ಯಂತ ಕ್ರಮ ಕೈಗೊಳ್ಳಲಾಗುತ್ತಿದೆ. ಆದರೆ, ಪ್ರಧಾನಿ ಮಾತ್ರ ಮೌನವಾಗಿದ್ದಾರೆ. ಸೆಬಿ, ಇ.ಡಿ, ಆರ್‌ಬಿಐ ಮತ್ತು ಎಸ್‌ಎಫ್‌ಐಒ ಈಗ ಎಲ್ಲಿವೆ? ಕೇಂದ್ರ ಯಾವಾಗ ಕ್ರಮ ತೆಗೆದುಕೊಳ್ಳುತ್ತದೆ' ಎಂದು ಪ್ರಶ್ನಿಸಿ ಕಾಂಗ್ರೆಸ್ ಟ್ವೀಟ್ ಮಾಡಿದೆ.

ಸರ್ಕಾರಕ್ಕೆ ನಂಟಿಲ್ಲ: ಸಚಿವ ಜೋಶಿ

ನವದೆಹಲಿ (ರಾಯಿಟರ್ಸ್): 'ಅದಾನಿ ಸಮೂಹದ ಬಿಕ್ಕಟ್ಟಿನ ವಿಷಯಕ್ಕೂ ಮತ್ತು ಕೇಂದ್ರ ಸರ್ಕಾರಕ್ಕೂ ಯಾವುದೇ ಸಂಬಂಧವಿಲ್ಲ. ಅಮೆರಿಕದ ಸಂಶೋಧನಾ ಸಂಸ್ಥೆ ಹಿಂಡನ್‌ಬರ್ಗ್ ಪ್ರಕಟಿಸಿದ ವರದಿಯ ನಂತರ ಅದಾನಿ ಸಮೂಹದ ಷೇರುಗಳು ಕುಸಿದಿರುವುದು ಸರ್ಕಾರಕ್ಕೆ ಸಂಬಂಧಿಸಿದ್ದಲ್ಲ' ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಅಮಿತ್ ಶಾ ಭೇಟಿಯಾದ ರಮೇಶ ಜಾರಕಿಹೊಳಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾದ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರು ತಮ್ಮ ವಿರುದ್ಧದ ಸಿ.ಡಿ. ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸುವಂತೆ ಮನವಿ ಮಾಡಿದರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ನಾನು ಗೃಹ ಸಚಿವರನ್ನು ಭೇಟಿ ಮಾಡಿ ದಾಖಲೆಗಳನ್ನು ನೀಡಿದ್ದೇನೆ. ಪ್ರಕರಣವನ್ನು ಸಿಬಿಐಗೆ ಒಪ್ಪಿಸುವಂತೆ ಮನವಿ ಮಾಡಿದ್ದೇನೆ' ಎಂದರು.

ಸಿಬಿಐ ಮೂಲಕ ಪ್ರಕರಣದ ತನಿಖೆ ನಡೆಸಲು ಗೃಹ ಸಚಿವರು ಒಪ್ಪಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರಿಸಲು ಅವರು ನಿರಾಕರಿಸಿದರು.

ತಮ್ಮ ರಾಜಕೀಯ ವರ್ಚಸ್ಸು ಹಾಳು ಮಾಡಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಈ ಸಿ.ಡಿ. ಮಾಡಿಸಿದ್ದಾರೆ ಎಂಬುದಾಗಿ ಗೃಹ ಸಚಿವರಲ್ಲಿ ಜಾರಕಿಹೊಳಿ ದೂರಿದರು ಎಂದು ಆಪ್ತ ಮೂಲಗಳು ತಿಳಿಸಿವೆ.

'ನನ್ನ ಹಾಗೂ ಯುವತಿಗೆ ಸಂಬಂಧಿಸಿದ ಸಿ.ಡಿ ಮಾಡಿಸಿದ್ದು ಇದೇ ಮಹಾನಾಯಕ. ರಮೇಶ ಜಾರಕಿಹೊಳಿಯನ್ನು ಜೈಲಿಗೆ ಕಳಿಸಲು ₹40 ಕೋಟಿ ಖರ್ಚು ಮಾಡುತ್ತೇನೆ ಎಂದು ಮಹಾನಾಯಕ ಹೇಳಿದ ಆಡಿಯೊ ನನ್ನ ಬಳಿ ಇದೆ. ನನ್ನ ಪ್ರಕರಣದಲ್ಲಿರುವ ಆ ಹುಡುಗಿ, ಶ್ರವಣ್ ಮತ್ತು ನರೇಶ್, ಕನಕಪುರದ ಗ್ರಾನೈಟ್ ಉದ್ಯಮಿ, ಅವನ ಕಾರ್ ಚಾಲಕ ಪರಶಿವಮೂರ್ತಿ, ಮಂಡ್ಯದ ಇಬ್ಬರು ನಾಯಕರು ಆರೋಪಿಗಳು. ಹಾಗಾಗಿ, ಈ ಪ್ರಕರಣ ಸಿಬಿಐಗೆ ಒಪ್ಪಿಸಲು ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತೇನೆ' ಎಂದು ರಮೇಶ ಜಾರಕಿಹೊಳಿ ಬೆಳಗಾವಿಯಲ್ಲಿ ಸೋಮವಾರ ಹೇಳಿದ್ದರು. ರಮೇಶ್ ಅವರ ಆರೋಪವನ್ನು ಶಿವಕುಮಾರ್ ನಿರಾಕರಿಸಿದ್ದರು.

ಬಾಲ್ಯವಿವಾಹ ಪ್ರಕರಣ– 2,044 ಜನರ ಬಂಧನ

ಗುವಾಹಟಿ (ಅಸ್ಸಾಂ): 'ರಾಜ್ಯದಲ್ಲಿ 4 ಸಾವಿರಕ್ಕೂ ಹೆಚ್ಚು ಬಾಲ್ಯವಿವಾಹ ಪ್ರಕರಣಗಳು ದಾಖಲಾಗಿದ್ದು, ಈ ಸಂಬಂಧ ಇದುವರೆಗೆ 2,044 ಜನರನ್ನು ಬಂಧಿಸಲಾಗಿದೆ' ಎಂದು ಅಸ್ಸಾಂ ಸಿ.ಎಂ ಹಿಮಂತ ಬಿಸ್ವಾ ಶರ್ಮಾ ಶುಕ್ರವಾರ ಹೇಳಿದ್ದಾರೆ.

'ಬಂಧನ ಕಾರ್ಯಾಚರಣೆಯು ಶುಕ್ರವಾರ ಬೆಳಿಗ್ಗೆ ಆರಂಭವಾಗಿದ್ದು, ಮುಂದಿನ 4–5 ದಿನಗಳವರೆಗೆ ಮುಂದುವರಿಯಲಿದೆ' ಎಂದು ತಿಳಿಸಿದ್ದಾರೆ.

ರಾಜ್ಯ ಸಚಿವ ಸಂಪುಟವು ಜ.23ರಂದು ಬಾಲ್ಯವಿವಾಹ ಪ್ರಕರಣಗಳ ಅಪರಾಧಿಗಳ ವಿರುದ್ಧ ಕ್ರಮ ಕೈಗೊಳ್ಳಲು ನಿರ್ಧಾರ ಕೈಗೊಂಡಿತ್ತು.

ಜಮ್ಮು–ಕಾಶ್ಮೀರದ ದೊಡಾ ಜಿಲ್ಲೆಯ ನಯೀ ಬಸ್ತಿ ಪ್ರದೇಶದಲ್ಲಿನ ಕೆಲ ಮನೆಗಳಲ್ಲಿ ಬಿರುಕು ಉಂಟಾಗಿದೆ – ಪಿಟಿಐ ಚಿತ್ರ

ದೋಡಾ: ಬಿರುಕು ಬಿಟ್ಟ ಮನೆಗಳು

ದೋಡಾ/ಜಮ್ಮು (ಪಿಟಿಐ): ಜಮ್ಮು–ಕಾಶ್ಮೀರದ ದೊಡಾ ಜಿಲ್ಲೆಯ ಕೆಲವೆಡೆ ಮನೆಗಳು ಬಿರುಕು ಬಿಟ್ಟಿದ್ದು, 19 ಕುಟುಂಬಗಳನ್ನು ಸ್ಥಳಾಂತರಿಸಲಾಗಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಕಿಶ್ತ್ವಾರ್– ಬಟೋಟೆ ರಾಷ್ಟ್ರೀಯ ಹೆದ್ದಾರಿ ಸೇರಿದಂತೆ ದೋಡಾದಿಂದ 30 ಕಿ.ಮೀ. ದೂರದಲ್ಲಿರುವ ನಯೀ ಬಸ್ತಿ ಗ್ರಾಮದಲ್ಲಿರುವ ಮಸೀದಿ ಹಾಗೂ ಬಾಲಕಿಯರ ಧಾರ್ಮಿಕ ಶಿಕ್ಷಣ ಕೇಂದ್ರವು ಸುರಕ್ಷಿತವಾಗಿಲ್ಲ ಎಂದು ಜಿಲ್ಲಾಡಳಿತ ಘೋಷಿಸಿದೆ.

ಕೆಲ ದಿನಗಳ ಹಿಂದೆ ಗ್ರಾಮದಲ್ಲಿ ಕೆಲವು ಮನೆಗಳು ಬಿರುಕುಬಿಟ್ಟಿದ್ದವು, ಆದರೆ, ಗುರುವಾರ ಭೂಕುಸಿತವು ಉಲ್ಬಣಗೊಂಡಿದ್ದು ಬಿರುಕುಬಿಟ್ಟ ಮನೆಗಳ ಸಂಖ್ಯೆ 21ಕ್ಕೆ ಏರಿದೆ.

'19 ಸಂತ್ರಸ್ತ ಕುಟುಂಬಗಳನ್ನು ನಾವು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದ್ದೇವೆ. ನಾವು ಪರಿಸ್ಥಿತಿಯನ್ನು ಗಮನಿಸುತ್ತಿದ್ದೇವೆ ಮತ್ತು ಅವರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಅಗತ್ಯ ಕ್ರಮಗಳನ್ನು ತೆಗೆದುಕೊಂಡಿದ್ದೇವೆ' ಎಂದು ಥಾತ್ರಿಯ ಉಪವಿಭಾಗೀಯ ಮ್ಯಾಜಿಸ್ಟ್ರೇಟ್ ಅಥರ್ ಅಮೀನ್ ಜರ್ಗರ್ ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಹಾಗೂ ಹಿರಿಯ ಪೊಲೀಸ್ ವರಿಷ್ಠಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದರು.

'ಅದಾನಿ'ಗೆ ಸಾಲ: ಪ್ರಕ್ರಿಯೆ ಬಿಗಿ?

ಒಂದನೇ ಪುಟದಿಂದ...

ಸಮೂಹವು ಹೊಸ ಸಾಲ ಕೋರಿದರೆ, ಆರೋಪಗಳ ಕುರಿತು ಪ್ರಶ್ನೆಗಳನ್ನು ಕೇಳಲಾಗುತ್ತದೆ. ಅದಾದ ನಂತರದಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುತ್ತದೆ ಎಂದು ಬ್ಯಾಂಕಿಂಗ್ ಮೂಲಗಳು ಹೇಳಿವೆ. ಈ ವಿಚಾರವಾಗಿ ಎಸ್‌ಬಿಐ ಹಾಗೂ ಅದಾನಿ ಸಮೂಹದಿಂದ ಪ್ರತಿಕ್ರಿಯೆ ಸಿಕ್ಕಿಲ್ಲ.

'ಕ್ಷುಲ್ಲಕ ಸಂಗತಿಗೆ ಅತಿಯಾದ ಪ್ರತಿಕ್ರಿಯೆ': ಅರ್ಥ ವ್ಯವಸ್ಥೆಯ ಅಗಾಧ ವ್ಯಾಪ್ತಿಯನ್ನು ಗಮನಿಸಿ ಹೇಳುವುದಾದರೆ, ಅದಾನಿ ಸಮೂಹದ ಕಂಪನಿಗಳ ಷೇರುಮೌಲ್ಯ ಕುಸಿತದ ಕಾರಣದಿಂದಾಗಿ ಷೇರು ಮಾರುಕಟ್ಟೆಯಲ್ಲಿ ಆಗಿರುವ ಅಸ್ಥಿರತೆಯು 'ಕ್ಷುಲ್ಲಕ ಸಂಗತಿಗೆ ವ್ಯಕ್ತವಾಗಿರುವ ಅತಿಯಾದ ಪ್ರತಿಕ್ರಿಯೆ' ಎಂದು ಕೇಂದ್ರ ಹಣಕಾಸು ಕಾರ್ಯದರ್ಶಿ ಟಿ.ವಿ. ಸೋಮನಾಥನ್ ಹೇಳಿದ್ದಾರೆ.

'ಹಣಕಾಸಿನ ಸ್ಥಿರತೆಯ ದೃಷ್ಟಿಯಿಂದ ಹೇಳುವುದಾದರೆ, ಕಳವಳ ಬೇಕಿಲ್ಲ. ಬ್ಯಾಂಕ್‌ಗಳಲ್ಲಿ ಠೇವಣಿ ಇರಿಸಿದವರು ಅಥವಾ ವಿಮಾ ಕಂಪನಿಗಳಲ್ಲಿ ಹೂಡಿಕೆ ಮಾಡಿರುವವರು ಅಥವಾ ಈ ಎರಡು ವಲಯಗಳಲ್ಲಿ ಹೂಡಿಕೆ ಮಾಡಿರುವವರು ಕಳವಳ ಹೊಂದಬೇಕಿಲ್ಲ' ಎಂದು ಅವರು ಹೇಳಿದ್ದಾರೆ.

'ಹೂಡಿಕೆದಾರರ ವಿಶ್ವಾಸಕ್ಕೆ ಧಕ್ಕೆಯಿಲ್ಲ': ದೇಶದ ಷೇರುಪೇಟೆಗಳು ಅಗತ್ಯ ಪ್ರಮಾಣದ ನಿಯಂತ್ರಣ ವ್ಯವಸ್ಥೆಯನ್ನು ಹೊಂದಿವೆ. ಅದಾನಿ ಸಮೂಹಕ್ಕೆ ಸಂಬಂಧಿಸಿದ ಆರೋಪಗಳು ಹೂಡಿಕೆದಾರರ ವಿಶ್ವಾಸದ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಹೂಡಿಕೆದಾರರಲ್ಲಿ ಈ ಮೊದಲು ಇದ್ದ ವಿಶ್ವಾಸವೇ ಈಗಲೂ ಮುಂದುವರಿಯುತ್ತದೆ ಎಂಬುದು ತಮ್ಮ ಭಾವನೆ ಎಂದು ಅವರು ನ್ಯೂಸ್18 ವಾಹಿನಿಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

ಎಲ್‌ಐಸಿಯು ಮಾಡಿರುವ ಹೂಡಿಕೆ ಹಾಗೂ ಎಸ್‌ಬಿಐ ನೀಡಿರುವ ಸಾಲವು ಮಿತಿಯೊಳಗೆ ಇದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ. 'ಅದಾನಿ ಸಮೂಹದ ಕಂಪನಿಗಳ ಸಾಲ ಪಡೆಯುವ ಸಾಮರ್ಥ್ಯದ ಮೇಲೆ ತಕ್ಷಣಕ್ಕೆ ಯಾವುದೇ ಪರಿಣಾಮ ಆಗದು' ಎಂದು ಫಿಚ್ ರೇಟಿಂಗ್ಸ್ ಹೇಳಿದೆ.

ಆಡಳಿತಾತ್ಮಕ ಕ್ರಮ: 'ಸುಪ್ರೀಂ' ಎಚ್ಚರಿಕೆ

ಕೊಲಿಜಿಯಂ ನೀಡಿದ್ದ ಶಿಫಾರಸು ಅನುಮೋದನೆ ವಿಳಂಬಕ್ಕೆ ಅಸಮಾಧಾನ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಹೈಕೋರ್ಟ್ ನ್ಯಾಯಮೂರ್ತಿಗಳ ವರ್ಗಾವಣೆ ಮತ್ತು ಹೈಕೋರ್ಟ್‌ನ ಇಬ್ಬರು ನ್ಯಾಯಮೂರ್ತಿಗಳಿಗೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಬಡ್ತಿ ಸಂಬಂಧ ಕೊಲಿಜಿಯಂ ನೀಡಿರುವ ಶಿಫಾರಸನ್ನು ಅನುಮೋದನೆ ಮಾಡದಿದ್ದಲ್ಲಿ, ಆಡಳಿತಾತ್ಮಕ ಹಾಗೂ ನ್ಯಾಯಾಂಗೀಯ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಆದರೆ ಅದು ಅಷ್ಟೊಂದು ಹಿತಕರವಾಗಿ ಇರುವುದಿಲ್ಲ' ಎಂದು ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ಎಚ್ಚರಿಕೆ ನೀಡಿದೆ.

ಬೆಂಗಳೂರು ವಕೀಲರ ಸಂಘ ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿಯ ವಿಚಾರಣೆ ವೇಳೆ ಕೇಂದ್ರದ ವಿಳಂಬ ಧೋರಣೆ ಕುರಿತು ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಹಾಗೂ ಅಭಯ್ ಎಸ್. ಓಕಾ ಅವರಿದ್ದ ಪೀಠವು, 'ಅಹಿತಕರವಾದ, ಕಠಿಣ ನಿರ್ಧಾರವನ್ನು ತೆಗೆದುಕೊಳ್ಳುವಂತೆ ಮಾಡಬೇಡಿ' ಎಂದಿತು.

ಹೈಕೋರ್ಟ್ ನ್ಯಾಯಮೂರ್ತಿಗಳ ವರ್ಗಾವಣೆ ಹಾಗೂ ಸುಪ್ರೀಂ ಕೋರ್ಟ್‌ಗೆ ನ್ಯಾಯಮೂರ್ತಿಗಳ ನೇಮಕದ ಕುರಿತು ಕೊಲಿಜಿಯಂ ನೀಡಿರುವ ಶಿಫಾರಸಿಗೆ ಶೀಘ್ರವೇ ಅನುಮೋದನೆ ನೀಡುವುದಾಗಿ ಸರ್ಕಾರದ ಪರ ಹಾಜರಿದ್ದ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರು ತಿಳಿಸಿದರು.

ನ್ಯಾಯಮೂರ್ತಿಗಳಾದ ಪಂಕಜ್ ಮಿಥಾಲ್, ಸಂಜಯ್ ಕರೋಲ್, ಪಿ.ವಿ. ಸಂಜಯ್ ಕುಮಾರ್, ಅಹ್ಸಾನುದ್ದೀನ್ ಅಮಾನುಲ್ಲಾ ಹಾಗೂ ಮನೋಜ್ ಮಿಶ್ರಾ ಅವರಿಗೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಬಡ್ತಿ ನೀಡುವಂತೆ ಕೊಲಿಜಿಯಂ 2022ರ ಡಿ. 13ರಂದು ಶಿಫಾರಸು ಮಾಡಿತ್ತು.

ಅಲಹಾಬಾದ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ರಾಜೇಶ್ ಬಿಂದಾಲ್ ಹಾಗೂ ಗುಜರಾತ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅರವಿಂದ್ ಕುಮಾರ್ ಅವರಿಗೂ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಬಡ್ತಿ ನೀಡಬೇಕು ಎಂದು ಕೊಲಿಜಿಯಂ ಜನವರಿ 31ರಂದು ಶಿಫಾರಸು ಮಾಡಿತ್ತು.

ವರ್ಗಾವಣೆ ಸಂಬಂಧ ಸೆಪ್ಟೆಂಬರ್ ಹಾಗೂ ನವೆಂಬರ್‌ನಲ್ಲಿ ಸುಮಾರು 10 ಶಿಫಾರಸುಗಳನ್ನು ಕೊಲಿಜಿಯಂ ಮಾಡಿತ್ತು. ಈ ವಿಷಯದಲ್ಲಿ ಕೇಂದ್ರ ಸರ್ಕಾರದ ಪಾತ್ರವು ಅತ್ಯಲ್ಪವಾದದ್ದು. ಆದರೂ, 'ಕೊಲಿಜಿಯಂ ಶಿಫಾರಸುಗಳಿಗೆ ಅನುಮೋದನೆ ನೀಡದೆ, ವಿಳಂಬ ಮಾಡುತ್ತಿರುವುದು ಕೆಟ್ಟ ಸಂದೇಶ ನೀಡುತ್ತಿದೆ. ಇದನ್ನು ಕೊಲಿಜಿಯಂ ಎಂದೂ ಒಪ್ಪುವುದಿಲ್ಲ' ಎಂದೂ ನ್ಯಾಯಾಲಯ ಹೇಳಿದೆ.

'ಎಲ್ಲಕ್ಕಿಂತ ಗಂಭೀರವಾದ ವಿಚಾರ'

'ಹೈಕೋರ್ಟ್ ನ್ಯಾಯಮೂರ್ತಿಗಳ ವರ್ಗಾವಣೆ ಕುರಿತು ಕೇಂದ್ರ ಸರ್ಕಾರವು ನಿರ್ಧಾರ ತೆಗೆದುಕೊಳ್ಳದೇ ಇರುವುದು ಎಲ್ಲಕ್ಕಿಂತಲೂ ಹೆಚ್ಚು ಗಂಭೀರವಾದ ವಿಚಾರವಾಗಿದೆ' ಎಂದು ನ್ಯಾಯಾಲಯ ಹೇಳಿದೆ.

'ನಾವು ಕಠಿಣ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ನೀವು ಅವಕಾಶ ನೀಡಬಾರದು' ಎಂದು ಸುಪ್ರೀಂ ಕೋರ್ಟ್ ಹೇಳಿತು. 'ಪ್ರಕ್ರಿಯೆ ಶೀಘ್ರವೇ ಪೂರ್ಣಗೊಳ್ಳಲಿದೆ. ಹಾಗಾಗಿ ಏನನ್ನೂ ದಾಖಲಿಸಿಕೊಳ್ಳಬೇಡಿ' ಎಂದು ಅಟಾರ್ನಿ ಜನರಲ್ ಅವರು ನ್ಯಾಯಾಲಯಕ್ಕೆ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಲಯವು, 'ಈ ಪ್ರಕ್ರಿಯೆ ಯಾವಾಗಿನಿಂದಲೂ ನಡೆಯುತ್ತಿದೆ. ಆದರೆ, ಯಾವಾಗ ಇದು ಪೂರ್ಣಗೊಳ್ಳಲಿದೆ? ಹಲವು ವರ್ಷಗಳಿಂದ ಈ ಪ್ರಕ್ರಿಯೆ ನಡೆಯುತ್ತಲೇ ಇದೆ' ಎಂದಿತು. ಕೊಲಿಜಿಯಂ ಶಿಫಾರಸುಗಳಿಗೆ ಅನುಮೋದನೆ ನೀಡಲು ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಒಂದು ವಾರದ ಅವಕಾಶ ನೀಡಿತು.

ಸಮವಸ್ತ್ರ ಧರಿಸಿ ಬಂದ ಶಾಸಕರು

ಶಾಲಾ ವಿದ್ಯಾರ್ಥಿಗಳಿಗೆ ಇನ್ನೂ ಸಮವಸ್ತ್ರ ವಿತರಿಸದ ಸರ್ಕಾರದ ಕ್ರಮವನ್ನು ಖಂಡಿಸಿ ಪುದುಚೇರಿಯಲ್ಲಿ ಶಾಲಾ ಸಮವಸ್ತ್ರ ಹಾಗೂ ಬ್ಯಾಗ್ ಧರಿಸಿ ಸೈಕಲ್‌ನಲ್ಲಿ ಕಲಾಪಕ್ಕೆ ಬಂದ ಡಿಎಂಕೆ ಶಾಸಕರು – ಪಿಟಿಐ ಚಿತ್ರ

'ಮುಸ್ಲಿಮರಿಂದ ಹಿಂದೂ ಮಹಿಳೆಯರ ಅಪಹರಣ'

ಜೈಪುರ (ಪಿಟಿಐ): 'ಮುಸ್ಲಿಮರು ಭಯೋತ್ಪಾದನೆ ಚಟುವಟಿಕೆಯಲ್ಲಿ ನಿರತರಾಗಿದ್ದಾರೆ ಮತ್ತು ಹಿಂದೂ ಮಹಿಳೆಯರನ್ನು ಅಪಹರಿಸುತ್ತಿದ್ದಾರೆ' ಎಂದು ಬಾಬಾ ರಾಮದೇವ್ ಆರೋಪಿಸಿದ್ದಾರೆ.

ಬಾರ್ಮರ್‌ನಲ್ಲಿ ಗುರುವಾರ ನಡೆದ ಸಂತರ ಸಭೆಯಲ್ಲಿ ಅವರು ಹಿಂದೂ ಧರ್ಮದೊಂದಿಗೆ ಇಸ್ಲಾಂ, ಕ್ರೈಸ್ತ ಧರ್ಮಗಳನ್ನು ಹೋಲಿಸಿ ಮಾತನಾಡಿದರು.

ಹಿಂದೂ ಧರ್ಮವು ತನ್ನ ಅನುಯಾಯಿಗಳಿಗೆ ಒಳ್ಳೆಯದನ್ನು ಮಾಡಲು ಕಲಿಸಿದರೆ, ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮಗಳು ಮತಾಂತರದ ಗೀಳನ್ನು ಹೊಂದಿವೆ ಎಂದು ಹೇಳಿದರು.

'ಮುಸ್ಲಿಮರು ದಿನಕ್ಕೆ ಐದು ಬಾರಿ ನಮಾಜ್ ಮಾಡುತ್ತಾರೆ ಮತ್ತು ನಂತರ ಅವರು ಏನು ಬೇಕಾದರೂ ಮಾಡುತ್ತಾರೆ. ಅವರು ಹಿಂದೂ ಯುವತಿಯರನ್ನು ಅಪಹರಿಸಿ, ಎಲ್ಲಾ ರೀತಿಯ ಪಾಪ ಕೃತ್ಯಗಳನ್ನು ಮಾಡುತ್ತಾರೆ. ನಂತರ ಅವರಿಗೆ ನಮಾಜ್ ಸಲ್ಲಿಸುವುದನ್ನು ಕಲಿಸಲಾಗಿದೆ. ಹಿಂದೂ ಧರ್ಮದಲ್ಲಿ ಈ ರೀತಿ ಇಲ್ಲ' ಎಂದು ಹೇಳಿದರು.

ಅವರ ಭಾಷಣದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

'ನಾನು ಯಾರನ್ನೂ ಟೀಕಿಸುತ್ತಿಲ್ಲ. ಕೆಲವರು ಇಡೀ ಜಗತ್ತನ್ನು ಇಸ್ಲಾಂಗೆ ಪರಿವರ್ತಿಸುವ ಬಗ್ಗೆ ಮಾತನಾಡುತ್ತಾರೆ ಮತ್ತು ಇತರರು ಜಗತ್ತನ್ನು ಕ್ರಿಶ್ಚಿಯನ್ ಧರ್ಮಕ್ಕೆ ಪರಿವರ್ತಿಸಲು ಬಯಸುತ್ತಾರೆ. ಈ ನಂಬಿಕೆಗಳಿಗೆ ಬೇರೆ ಯಾವುದೇ ಕಾರ್ಯಸೂಚಿ ಇಲ್ಲ' ಎಂದರು.

ರೈಲ್ವೆ: ರಾಜ್ಯಕ್ಕೆ ₹ 7,561 ಕೋಟಿ ಅನುದಾನ

ಒಂದನೇ ಪುಟದಿಂದ...

ಮೈಸೂರು–ಚಾಮರಾಜನಗರ ಮಾರ್ಗವನ್ನು ಮೆಟ್ಟುಪಾಳ್ಯಂ ವರೆಗೆ ವಿಸ್ತರಿಸುವ ಮಾರ್ಗಕ್ಕೆ ₹50 ಕೋಟಿ ಪ್ರಕಟಿಸಲಾಗಿದೆ. ಟ್ರ್ಯಾಕ್‌ಗಳ ದುರಸ್ತಿಗೆ ₹790 ಕೋಟಿ, ರೈಲ್ವೆ ಮೇಲ್ಸೇತುವೆ ಹಾಗೂ ಕೆಳ ಸೇತುವೆಗಳ ನಿರ್ಮಾಣಕ್ಕೆ ₹242 ಕೋಟಿ ನಿಗದಿಪಡಿಸಲಾಗಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಹಗ್ಗಜಗ್ಗಾಟದಿಂದ ಕೆಲವು ಯೋಜನೆಗಳಿಗೆ ಹಲವು ವರ್ಷಗಳಿಂದ ನಿಗದಿತ ಅನುದಾನ ಒದಗಿಸಿರಲಿಲ್ಲ. ಈ ವರ್ಷ ಇಂತಹ ಯೋಜನೆಗಳಿಗೆ ಅನುದಾನ ಕೊಡಲಾಗಿದೆ. ಹಲವು ಯೋಜನೆಗಳಿಗೆ ರಾಜ್ಯ ಸರ್ಕಾರ ತನ್ನ ಪಾಲನ್ನು ಒದಗಿಸಬೇಕಿದೆ.

ಈ ವರ್ಷ ಹೊಸದಾಗಿ ಮಾರಿಕುಪ್ಪಂ– ಕುಪ್ಪಂ ಮಾರ್ಗವನ್ನು ಪ್ರಸ್ತಾಪಿಸಲಾಗಿದ್ದು, ಕೇಂದ್ರ ಸರ್ಕಾರವೇ ಇದಕ್ಕೆ ₹200 ಕೋಟಿ ಕೊಡಲಿದೆ.

ಅಂಕಿ–ಅಂಶಗಳು

32 ಕರ್ನಾಟಕದಲ್ಲಿ ವಿವಿಧ ಹಂತದಲ್ಲಿರುವ ರೈಲ್ವೆ ಯೋಜನೆಗಳು

21 ಹೊಸ ಮಾರ್ಗಗಳು

11 ದ್ವಿಪಥ ಕಾಮಗಾರಿಗಳು

4,330 ಕಿ.ಮೀ 32 ಯೋಜನೆಗಳ ಒಟ್ಟು ಉದ್ದ

₹49,330 ಕೋಟಿ ಈ ಯೋಜನೆಗಳ ವೆಚ್ಚ

ಯಾವ ಮಾರ್ಗಕ್ಕೆ ಎಷ್ಟು ಅನುದಾನ (ರಾಜ್ಯ ಪಾಲು, ಠೇವಣಿ ಸೇರಿ)

ಹೊಸ ಮಾರ್ಗ	ಕಿ.ಮೀ	ಮೊತ್ತ (₹ಕೋಟಿಗಳಲ್ಲಿ)
ಕೊಟ್ಟೂರು–ಹರಿಹರ	65	1.50
ಕಡೂರು–ಚಿಕ್ಕಮಗಳೂರು–ಸಕಲೇಶಪುರ	92	145
ಹಾಸನ–ಬೆಂಗಳೂರು	166	33
ಹುಬ್ಬಳ್ಳಿ–ಅಂಕೋಲಾ	167	12
ರಾಯದುರ್ಗ–ತುಮಕೂರು	213	350
ಬಾಗಲಕೋಟೆ–ಕುಡಚಿ	142	360
ತುಮಕೂರು–ದಾವಣಗೆರೆ	199	420
ವೈಟ್‌ಫೀಲ್ಡ್–ಕೋಲಾರ	52	10
ಮಾರಿಕುಪ್ಪಂ–ಕುಪ್ಪಂ	23	200
ಗದಗ–ವಾಡಿ	252	350
ಶಿವಮೊಗ್ಗ–ಶಿಕಾರಿಪುರ–ರಾಣೆಬೆನ್ನೂರು	103	150
ಹಾಸನ–ಬೇಲೂರು	32	60
ಬೆಳಗಾವಿ–ಧಾರವಾಡ	73	10

'ಸ್ಥಳೀಯ ಆಹಾರ'

'ದಕ್ಷಿಣ ಭಾರತದ ರೈಲುಗಳಲ್ಲಿ ಉತ್ತರ ಭಾರತದ ಆಹಾರಗಳನ್ನು ಒದಗಿಸುತ್ತಿರುವ ಬಗ್ಗೆ ದೂರುಗಳು ಬಂದಿದ್ದವು. ಹೀಗಾಗಿ, ರೈಲಿನಲ್ಲಿ ಆಯಾ ಪ್ರದೇಶದ ಆಹಾರಗಳನ್ನೇ ಒದಗಿಸಲು ತೀರ್ಮಾನಿಸಲಾಗಿದೆ' ಎಂದು ಅಶ್ವಿನಿ ವೈಷ್ಣವ್ ತಿಳಿಸಿದರು.

'ಚಾಲ್ತಿ ಯೋಜನೆಗೆ ಹೆಚ್ಚು ಹಣ'

'ದ್ವಿಪಥ, ವಿದ್ಯುದ್ದೀಕರಣ ಕಾಮಗಾರಿಗೆ ಹೆಚ್ಚಿನ ಅನುದಾನ ಒದಗಿಸಿರುವುದು ಉತ್ತಮ ಬೆಳವಣಿಗೆ. ಈ ಅನುದಾನ ಬಳಸಿಕೊಂಡು 2024ರ ಒಳಗೆ ಮಾರ್ಗಗಳ ವಿದ್ಯುದ್ದೀಕರಣ ಕಾಮಗಾರಿಯನ್ನು ಪೂರ್ಣಗೊಳಿಸಬಹುದು ಎಂದು ರೈಲ್ವೆ ಹೋರಾಟಗಾರ ಕೃಷ್ಣಪ್ರಸಾದ್ ತಿಳಿಸಿದರು.

ದ್ವಿಪಥ–ಪ್ರಮುಖ ಕಾಮಗಾರಿಗಳು (₹ಕೋಟಿಗಳಲ್ಲಿ)

ಹೊಸ ಮಾರ್ಗ	ಕಿ.ಮೀ	ಮೊತ್ತ
ಬೆಂಗಳೂರು–ಕೆ.ಆರ್.ಪುರ	23	250
ಹೊಸಪೇಟೆ–ಲೊಂಡಾ–ವಾಸ್ಕೊ	352	400
ಗದಗ–ಹೊಟ್ಗಿ	284	170
ಹುಬ್ಬಳ್ಳಿ–ಚಿಕ್ಕಜಾಜೂರು	190	150
ಯಶವಂತಪುರ–ಚನ್ನಸಂದ್ರ	21	85
ಧರ್ಮಾವರಂ–ಪೆನುಕೊಂಡ	41	120
ಬೈಯಪ್ಪನಹಳ್ಳಿ–ಹೊಸೂರು	48	100

ವಿದ್ಯುದ್ದೀಕರಣ ಕಾಮಗಾರಿ (₹ಕೋಟಿಗಳಲ್ಲಿ)

ಯೋಜನೆ	ಮೊತ್ತ
ಗದಗ–ಹೊಟ್ಗಿ	110
ಚಿಕ್ಕಬಾಣಾವರ–ಹುಬ್ಬಳ್ಳಿ	128
ಬೀರೂರು–ತಾಳಗುಪ್ಪ	56
ಹಾಸನ–ಮಂಗಳೂರು	134
ಮೀರಜ್–ಲೋಂಡಾ	182
ಹೊಸಪೇಟೆ–ವಾಸ್ಕೊ	20
ಚಿಕ್ಕಬಾಣಾವರ–ಹಾಸನ	77

ಸಂಕ್ಷಿಪ್ತ ಸುದ್ದಿ

ಶಾರದಾ ಚಿಟ್ ಫಂಡ್: ₹6 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು

ನವದೆಹಲಿ (ಪಿಟಿಐ): ಶಾರದಾ ಚಿಟ್‌ಫಂಡ್ ಹಗರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮುಖಂಡ ಪಿ.ಚಿದಂಬರಂ ಅವರ ಪತ್ನಿ ನಳಿನಿ ಚಿದಂಬರಂ, ಸಿಪಿಎಂ ಮಾಜಿ ಶಾಸಕ ದೇವೇಂದ್ರನಾಥ್ ಬಿಸ್ವಾಸ್ ಮತ್ತು ಅಸ್ಸಾಂನ ಮಾಜಿ ಸಚಿವ ದಿವಂಗತ ಅಂಜನ್ ದತ್ತಾ ಒಡೆತನ ಕಂಪನಿಯ ಫಲಾನುಭವಿಗಳಿಗೆ ಸೇರಿದ₹ 6 ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಜಾರಿ ನಿರ್ದೇಶನಾಲಯ ಶುಕ್ರವಾರ ತಿಳಿಸಿದೆ.

ಮುಂಬೈ ದಾಳಿ; ಎನ್‌ಐಎಗೆ ಬೆದರಿಕೆ ಇಮೇಲ್

ಮುಂಬೈ (ಪಿಟಿಐ): ತಾಲಿಬಾನ್ ಜೊತೆ ನಂಟು ಹೊಂದಿರುವ ವ್ಯಕ್ತಿಯೊಬ್ಬ ಮುಂಬೈನಲ್ಲಿ ದಾಳಿ ನಡೆಸುವುದಾಗಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ)ಗೆ ಇಮೇಲ್ ಕಳುಹಿಸಿದ್ದಾನೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಪಾಕ್ ಡ್ರೋನ್ ಹೊಡೆದುರುಳಿಸಿದ ಬಿಎಸ್‌ಎಫ್ ಪಡೆ

ಅಮೃತಸರ: ಪಂಜಾಬ್‌ನ ಅಂತರರಾಷ್ಟ್ರೀಯ ಗಡಿಯಿಂದ ಭಾರತಕ್ಕೆ ಪ್ರವೇಶಿಸುತ್ತಿದ್ದ ಮಾದಕ ಪದಾರ್ಥಗಳನ್ನು ಹೊತ್ತೊಯ್ಯುತ್ತಿದ್ದ ಪಾಕಿಸ್ತಾನದ ಡ್ರೋನ್ ಅನ್ನು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಯೋಧರು ಶುಕ್ರವಾರ ಹೊಡೆದುರುಳಿಸಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕ್ವಾಡ್‌ಕಾಪ್ಟರ್ ಡ್ರೋನ್‌ನಲ್ಲಿದ್ದ ಶಂಕಿತ ಹೆರಾಯಿನ್ ಹೊಂದಿರುವ ಮೂರು ಕೆ.ಜಿ. ತೂಕದ ಪ್ಯಾಕೆಟ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಬಿಎಸ್‌ಎಫ್ ವಕ್ತಾರರು ತಿಳಿಸಿದ್ದಾರೆ.

'ಐ ಡ್ರಾಪ್' ಹಿಂದಕ್ಕೆ

ನವದೆಹಲಿ (ಪಿಟಿಐ): ಅಮೆರಿಕದಲ್ಲಿ ಜನರ ದೃಷ್ಟಿ ಹಾನಿ ಮತ್ತು ಸಾವಿಗೆ ಕಾರಣವಾದ ಆರೋಪ ಎದುರಿಸುತ್ತಿರುವ 'ಐ ಡ್ರಾಪ್' (ಕಣ್ಣಿನ ಔಷಧಿ) ಅನ್ನು ಚೆನ್ನೈನ ಮೂಲದ ಗ್ಲೋಬಲ್ ಫಾರ್ಮಾ ಹೆಲ್ತ್ ಕೇರ್ ಹಿಂಪಡೆದಿದೆ.

ಕಲಾತಪಸ್ವಿ ಕೆ. ವಿಶ್ವನಾಥ್

• ಎಸ್. ಸೂರ್ಯಪ್ರಕಾಶ ಪಂಡಿತ್

ನುಡಿ ನಮನ

ಕೆ. ವಿಶ್ವನಾಥ್ ಎಂದಕೂಡಲೇ ನೆನಪಾಗುತ್ತದೆ, 'ಶಂಕರಾಭರಣಂ.'

ಭಾರತೀಯ ಚಿತ್ರರಂಗಕ್ಕೇ ಅಪೂರ್ವ ಆಭರಣದಂತೆ ಕಂಗೊಳಿಸಿದ ಚಿತ್ರ ಶಂಕರಾಭರಣಂ; ಈ ತೆಲುಗು ಚಲನಚಿತ್ರದ ನಿರ್ದೇಶಕರೇ ಕೆ. ವಿಶ್ವನಾಥ್.

ಕಲೆಯನ್ನು ವಸ್ತುವನ್ನಾಗಿಸಿಕೊಂಡ ಚಿತ್ರಗಳು ಎಂದರೆ ಅವು 'ಆರ್ಟ್ ಸಿನಿಮಾ'ಗಳ ಗುಂಪಿಗೆ ಸೇರಿರಲೇಬೇಕು ಎಂದು ಎಣಿಸುತ್ತೇವೆ. ಆದರೆ ವಿಶ್ವನಾಥ್ ಅವರು 'ಕಮರ್ಷಿಯಲ್ ಸಿನಿಮಾ'ಗಳ 'ವ್ಯಾಕರಣ'ದಲ್ಲಿಯೇ ಸಿನಿಮಾಗಳನ್ನು ನಿರ್ದೇಶಿಸಿ, ಯಶಸ್ಸು ಗಳಿಸಿದ್ದು ವಿಶೇಷ.

ಹಿಂದಿನ ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ರೇಪಲ್ಲಿಯಲ್ಲಿ 1930ರ ಫೆಬ್ರುವರಿ 19ರಂದು ಜನಿಸಿದ ಕೆ. ವಿಶ್ವನಾಥ್ ಅವರು ಚಿತ್ರರಂಗವನ್ನು ಸಹಾಯಕ ನಿರ್ದೇಶಕರಾಗಿ ಪ್ರವೇಶಿಸಿದರು (1951). 1965ರಲ್ಲಿ ತೆರೆಕಂಡ 'ಆತ್ಮಗೌರವಂ' ಅವರ ನಿರ್ದೇಶನದ ಮೊದಲ ಚಿತ್ರ. ಅನಂತರ 'ಚೆಲ್ಲಿಲಿ ಕಾಪುರಂ', 'ಶಾರದಾ' ಮುಂತಾದ ಚಿತ್ರಗಳನ್ನು ನಿರ್ದೇಶಿಸಿದರು. ಈ ಚಿತ್ರಗಳೆಲ್ಲವೂ ಸ್ತ್ರೀಪಾತ್ರ ಪ್ರಧಾನವಾದಂಥವು. ಹೆಣ್ಣನ್ನು ಅಬಲೆಯೆಂದು ಚಿತ್ರಿಸಲಿಲ್ಲ; ಗಂಡಿಗೆ ಹೆಣ್ಣಿನ ಆಶ್ರಯ ಇಲ್ಲದಿದ್ದರೆ ಅವನ ಜೀವನಕ್ಕೆ ಅರ್ಥವೇ ದಕ್ಕದು ಎಂಬುದನ್ನು ಅವರು ಧ್ವನಿಪೂರ್ಣವಾಗಿ ಕಾಣಿಸಿದವರು.

'ಶಂಕರಾಭರಣಂ' 1980ರಲ್ಲಿ ತೆರೆ ಕಂಡ ಚಿತ್ರ. ಈ ಸಂಗೀತಪ್ರಧಾನ ಚಿತ್ರ ವಿಶ್ವನಾಥ್ ಅವರ ವೃತ್ತಿಜೀವನಕ್ಕೆ ಮಾತ್ರವಲ್ಲದೆ, ಹಿನ್ನೆಲೆ ಗಾಯಕ ಎಸ್. ಪಿ. ಬಾಲಸುಬ್ರಹ್ಮಣ್ಯಂ ಅವರ ವೃತ್ತಿಜೀವನಕ್ಕೂ ಮಹತ್ತರವಾದ ಕೊಡುಗೆಯನ್ನು ನೀಡಿತು; ಮುಂದೆ ಅವರ 'ಸಿರಿವೆನ್ನೆಲ' ಚಿತ್ರಕ್ಕೆ ಹಾಡುಗಳನ್ನು ಒದಗಿಸಿದ ಸೀತಾರಾಮ ಶಾಸ್ತ್ರಿ, ಚಲನಚಿತ್ರರಂಗದಲ್ಲಿ 'ಸಿರಿವೆನ್ನಲ' ಸೀತಾರಾಮ ಶಾಸ್ತ್ರಿ ಎಂಬುದಾಗಿಯೇ ಸ್ಥಿರವಾದರು. 'ಸ್ವಾತಿ ಕಿರಣಂ' ಚಿತ್ರದಲ್ಲಿ 'ಮಾಸ್ಟರ್' ಮಂಜುನಾಥ್ ಅವರನ್ನು ಕಾಣಿಸಿದ ರೀತಿಯೂ ಅನನ್ಯವಾಗಿದೆ.

ವಿಶ್ವನಾಥ್ ಅವರು ಕಲೆಯನ್ನು ಕೇವಲ ಆರಾಧಕತೆಯಿಂದ ನಿರೂಪಿಸಲು ಹೊರಡಲಿಲ್ಲ; ಭಾರತೀಯ ಕಲೆಗೂ ಇಲ್ಲಿಯ ಜೀವನಕ್ಕೂ ನೇರ ನಂಟಿದೆ ಎಂಬುದನ್ನು ಅವರ ಒಂದೊಂದು ಚಿತ್ರಗಳೂ ಸ್ಥಾಪಿಸಿವೆ. 'ಕಲೆಯಿರುವುದು ಕಲೆಗಾಗಿ ಅಲ್ಲ; ಕಲೆ ಇರುವುದು ಜೀವನದ ಸೌಂದರ್ಯವನ್ನು ಕಾಣುವುದಕ್ಕಾಗಿ' ಎಂಬ ಭಾರತೀಯ ಕಲಾಸೂತ್ರದ ಮಹಾಭಾಷ್ಯಕಾರ ಕೆ. ವಿಶ್ವನಾಥ್. ನೈಜವಾದ ಕಲೆಗೂ ಕಲಾನುಭವಕ್ಕೂ ಜಾತಿ, ಮತ, ಭಾಷೆ, ಅಂತಸ್ತು, ದೇಶ – ಮುಂತಾದ ಸಂಕುಚಿತ ವಿವರಗಳ ಗೊಡವೆಯಿಲ್ಲ ಎಂಬುದನ್ನೂ ಅವರು ಕಾಣಿಸಿದರು. 'ಸೂತ್ರಧಾರುಲು', 'ಸ್ವಯಂಕೃಷಿ', 'ಶುಭಸಂಕಲ್ಪಂ' ಚಿತ್ರಗಳನ್ನು ಇಲ್ಲಿ ಮೆಲುಕು ಹಾಕಬಹುದು. ಯಾವ ವೃತ್ತಿಯೂ ತನ್ನಷ್ಟಕ್ಕೆ ತಾನೇ ಜ್ಯೇಷ್ಠವೂ ಅಲ್ಲ, ಕನಿಷ್ಠವೂ ಅಲ್ಲ; ನಾವು ಅದನ್ನು ಎಷ್ಟು ಗೌರವಿಸುತ್ತೇವೆ ಎಂಬುದರಿಂದ ಅದಕ್ಕೆ ತಕ್ಕಂತೆ ಗೌರವಸ್ಥಾನ ದಕ್ಕುತ್ತದೆ ಎಂಬ ಕಾಯಕ ಸಿದ್ಧಾಂತವನ್ನು ಈ ಚಿತ್ರಗಳು ಎತ್ತಿಹಿಡಿಯುತ್ತವೆ. ಕಲಾಸಾಧನೆಯೇ ಜೀವನದ ಗುರಿಯಲ್ಲ; ಅಂತರಂಗದ ಪಾಕವೇ ಜೀವನ ಆನಂದರಾಗದ ನಿಜವಾದ ಶ್ರುತಿ ಎಂಬುದರ ಸಂದೇಶವನ್ನು 'ಸ್ವಾತಿಕಿರಣಂ'ನಲ್ಲಿ ಕಾಣಬಹುದು.

ವಿಶ್ವನಾಥ್ ಅವರಿಗೆ ಹಲವು ಪ್ರಶಸ್ತಿಗಳು ಬಂದಿವೆ. ಆದರೆ ಜನಮಾಸದಲ್ಲಿ ಅವರು ಎಂದಿಗೂ ಕಲಾತಪಸ್ವಿಯಾಗಿಯೇ ನೆಲೆಯಾಗಿರುತ್ತಾರೆ. 'ಸ್ವರ್ಣಕಮಲಂ', 'ಆಪದ್ಬಾಂಧವುಡು', 'ಶ್ರುತಿಲಯಲು', 'ಸಿರಿಸಿರಿ ಮುವ್ವ', 'ಸ್ವರಾಭಿಷೇಕಂ' – ಇಂಥ ಹತ್ತಾರು ಚಿತ್ರಗಳಿಂದ ಅವರು ಅಮರರಾಗಿದ್ದಾರೆ. ಅವರ 'ಸಾಗರಸಂಗಮಂ' ಚಿತ್ರದ ಭರತವಾಕ್ಯದ ಸಾರಾಂಶ ಹೀಗಿದೆ: 'ಕಲಾವಿದನ ಭೌತಿಕ ಕಾಯಕ್ಕೆ ಮುಪ್ಪು–ಸಾವುಗಳಿವೆಯೇ ಹೊರತು ಅವನ ಯಶಸ್ಸಿನ ಶರೀರಕ್ಕೆ ಅವು ಇರದು.' ಈ ಮಾತು ಕೆ. ವಿಶ್ವನಾಥ್ ಅವರಿಗೂ ಸಲ್ಲುತ್ತದೆ.

'ಶಂಕರಾಭರಣಂ' ಖ್ಯಾತಿಯ ವಿಶ್ವನಾಥ್ ಇನ್ನಿಲ್ಲ

ಒಂದನೇ ಪುಟದಿಂದ...

ಚಿತ್ರರಂಗಕ್ಕೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಅವರಿಗೆ ಪದ್ಮಶ್ರೀ (1992) ಪ್ರಶಸ್ತಿ ನೀಡಲಾಗಿತ್ತು. 2017ರಲ್ಲಿ ಅವರು ದಾದಾ ಸಾಹೇಬ್ ಫಾಲ್ಕೆ ಪುರಸ್ಕಾರಕ್ಕೆ ಭಾಜನರಾಗಿದ್ದರು. ಅವರು ನಿರ್ದೇಶಿಸಿದ ಮೊದಲ ಚಿತ್ರ 'ಆತ್ಮ ಗೌರವಮ್'. ಈ ಚಿತ್ರಕ್ಕೆ ಪ್ರತಿಷ್ಠಿತ ನಂದಿ ಪ್ರಶಸ್ತಿ ಲಭಿಸಿತ್ತು. ಇದಕ್ಕೂ ಮೊದಲು ಅವರು 'ಪಾತಾಳ ಭೈರವಿ' ಚಿತ್ರಕ್ಕೆ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುವ ಮೂಲಕ ಚಿತ್ರ ನಿರ್ದೇಶನ ಕ್ಷೇತ್ರಕ್ಕೆ ಪದಾರ್ಪಣೆ ಮಾಡಿದ್ದರು.

ಅವರು 1930ರ ಫೆಬ್ರುವರಿ 19ರಂದು ಗುಂಟೂರು ಬಳಿಯ ಪೆದಪುಲಿವರ್ರು ಎಂಬಲ್ಲಿ ಜನಿಸಿದ್ದರು. ಅವರು ಖ್ಯಾತ ಗಾಯಕ ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರ ಸೋದರ ಸಂಬಂಧಿ.

'ಸಾಗರಸಂಗಮಂ', 'ಸ್ವಾತಿ ಮುತ್ಯಂ', 'ಸಪ್ತಪದಿ', 'ಸ್ವಾತಿ ಕಿರಣಂ', 'ಸಿರಿ ಸಿರಿ ಮುವ್ವ' ಹಾಗೂ 'ಸಿರಿ ವೆನ್ನಲ' ಚಿತ್ರಗಳು ಅವರಿಗೆ ಅಪಾರ ಖ್ಯಾತಿ ತಂದುಕೊಟ್ಟ ಚಿತ್ರಗಳು. ವಿಶ್ವನಾಥ್ ನಿರ್ದೇಶಿಸಿದ ಚಿತ್ರಗಳು ಕಲಾತ್ಮಕವಾಗಿ ಮಾತ್ರವಲ್ಲ, ಹಣ ಗಳಿಕೆ ದೃಷ್ಟಿಯಿಂದಲೂ ಭಾರಿ ಯಶಸ್ವಿಯಾಗಿದ್ದವು. ಅವರ ಚಿತ್ರಗಳಿಗೆ ಹಲವಾರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪ್ರಶಸ್ತಿಗಳು ಕೂಡ ಸಂದಿವೆ.

ಖ್ಯಾತ ನಟರಾದ ಕೆ.ಚಿರಂಜೀವಿ, ಕಮಲ್ ಹಾಸನ್ ಅವರು ವಿಶ್ವನಾಥ್ ಅವರನ್ನು 'ಗುರು' ಎಂದೇ ಕರೆಯುತ್ತಿದ್ದರು. ವಿಶ್ವನಾಥ್ ಅವರು ತಮ್ಮ ಚಿತ್ರಗಳಲ್ಲಿ ಭಾರತೀಯ ಸಂಗೀತ, ನೃತ್ಯ ಹಾಗೂ ಇತರ ಕಲಾ ಪ್ರಕಾರಗಳ ಶ್ರೇಷ್ಠತೆಯನ್ನು ಕಟ್ಟಿಕೊಡುತ್ತಿದ್ದರು. ಸಮಕಾಲೀನ ಕಲೆಗಳಿಗೂ ಅವರ ಚಿತ್ರಗಳಲ್ಲಿ ಸ್ಥಾನ ಇರುತ್ತಿತ್ತು. ಸಾಮಾಜಿಕ–ಸಾಂಸ್ಕೃತಿಕ ಸಂಘರ್ಷಗಳು, ಮಾನವೀಯ ಸಂಬಂಧಗಳ ಗಾಢ ಚಿತ್ರಣದಿಂದಾಗಿಯೂ ಅವರ ಚಿತ್ರಗಳು ಗಮನ ಸೆಳೆಯುತ್ತವೆ.

ದೇಶದಲ್ಲಿ ಪಾಶ್ಚಿಮಾತ್ಯ ಸಂಗೀತ ಹೆಚ್ಚು ಜನಪ್ರಿಯಗೊಂಡಿದ್ದ ಸಂದರ್ಭದಲ್ಲಿ ಅವರು ಶಂಕರಾಭರಣಂ ಚಿತ್ರವನ್ನು ನಿರ್ದೇಶಿಸಿದರು. ಕರ್ನಾಟಕ ಸಂಗೀತವೇ ಕಥಾವಸ್ತುವಾಗಿದ್ದ ಈ ಚಿತ್ರ ಅಪಾರ ಯಶಸ್ಸು ಗಳಿಸಿತಲ್ಲದೇ, ಅಂದಿನ ಪೀಳಿಗೆ ಕರ್ನಾಟಕ ಸಂಗೀತದಲ್ಲಿ ಆಸಕ್ತಿ ತಳೆಯುವಂತೆ ಮಾಡುವಲ್ಲಿಯೂ ಯಶಸ್ವಿಯಾಗಿತ್ತು. ವಿಶ್ವನಾಥ್ ಅವರು ಒಂಬತ್ತು ಹಿಂದಿ ಚಿತ್ರಗಳನ್ನು ನಿರ್ದೇಶಿಸಿದ್ದರು. ಬಹುತೇಕ ಚಿತ್ರಗಳು ತೆಲುಗಿನಲ್ಲಿ ಯಶಸ್ಸು ಕಂಡಿದ್ದ ಅವರ ನಿರ್ದೇಶನದಲ್ಲಿ ಮೂಡಿ ಬಂದ ಚಿತ್ರಗಳೇ ಆಗಿದ್ದವು. 2010ರಲ್ಲಿ ತೆರೆಗೆ ಬಂದ 'ಶುಭಪ್ರದಂ' ಅವರ ನಿರ್ದೇಶನದ ಕೊನೆಯ ಚಿತ್ರ.

ರಣಜಿ ಕ್ರಿಕೆಟ್: ಉತ್ತರಾಖಂಡ ಎದುರು ಕರ್ನಾಟಕಕ್ಕೆ ಬೃಹತ್ ಜಯ; ವೈಶಾಖ, ಶ್ರೇಯಸ್‌ಗೆ ತಲಾ ಮೂರು ವಿಕೆಟ್

ಕಿರೀಟಧಾರಣೆಗೆ ಎರಡು ಹೆಜ್ಜೆ ಬಾಕಿ

• ಗಿರೀಶ ದೊಡ್ಡಮನಿ

ಬೆಂಗಳೂರು: ಎಂಟು ವರ್ಷಗಳ ನಂತರ ರಣಜಿ ಟ್ರೋಫಿ ಜಯಿಸುವ ತನ್ನ ಕನಸು ನನಸಾಗಬೇಕಾದರೆ ಕರ್ನಾಟಕ ತಂಡವು ಇನ್ನೆರಡು ಹೆಜ್ಜೆಗಳನ್ನು ಕ್ರಮಿಸಬೇಕಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ ಕರ್ನಾಟಕವು ಇನಿಂಗ್ಸ್ ಮತ್ತು 281 ರನ್‌ಗಳಿಂದ ಉತ್ತರಾಖಂಡ ಬಳಗವನ್ನು ಮಣಿಸಿತು. ಇದೇ 8ರಿಂದ ನಡೆಯುವ ಸೆಮಿಫೈನಲ್‌ನಲ್ಲಿ ತಂಡವು ಆಡಲಿದೆ. ಅದರಲ್ಲಿ ಜಯಿಸಿ, ಫೈನಲ್‌ನಲ್ಲಿಯೂ ಮೇಲುಗೈ ಸಾಧಿಸಿದರೆ ತಂಡಕ್ಕೆ ರಣಜಿ ಕಿರೀಟ ಒಲಿಯಲಿದೆ.

ಹೋದ ಋತುವಿನಲ್ಲಿ ಎಂಟರ ಘಟ್ಟದಲ್ಲಿಯೇ ತಂಡವು ಸೋಲನುಭವಿಸಿತ್ತು. ಕಳೆದ ಐದು ಟೂರ್ನಿಗಳಲ್ಲಿ ಎಂಟರ ಘಟ್ಟದಲ್ಲಿ ಎರಡು ಮತ್ತು ನಾಲ್ಕರ ಘಟ್ಟದಲ್ಲಿ ಮೂರುಸಲ ಸೋತಿತ್ತು. ಈ ಸಲ ಸಿ ಗುಂಪಿನಲ್ಲಿ 35 ಅಂಕ ಗಳಿಸಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇಟ್ಟಿತ್ತು. ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 490 ರನ್‌ಗಳ ಮುನ್ನಡೆಯನ್ನು ಕರ್ನಾಟಕ ಸಾಧಿಸಿತ್ತು. 3ನೇ ದಿನದಾಟವಾದ ಗುರುವಾರ ಸಂಜೆ 2ನೇ ಇನಿಂಗ್ಸ್‌ನಲ್ಲಿ ಉತ್ತರಾಖಂಡ, 3 ವಿಕೆಟ್ ಕಳೆದುಕೊಂಡು 106 ರನ್ ಗಳಿಸಿತ್ತು.

4ನೇ ದಿನದಾಟದಲ್ಲಿ ಆತಿಥೇಯ ಬೌಲಿಂಗ್ ಪಡೆಯು ಊಟದ ವಿರಾಮಕ್ಕೆ ಸರಿಯಾಗಿ ಕರ್ನಾಟಕದ ಗೆಲುವನ್ನು ಖಚಿತಪಡಿಸಿದರು. ಮೂರನೇ ದಿನದಂತ್ಯಕ್ಕೆ ಕ್ರೀಸ್‌ನಲ್ಲಿ ಉಳಿದಿದ್ದ ದಿಕ್ಷಾಂಶು ನೇಗಿ ವಿಕೆಟ್ ಅನ್ನು ಏಳನೇ ಓವರ್‌ನಲ್ಲಿ ವೆಂಕಟೇಶ್ ಕೆಡವಿದರು. ನಂತರ 86 ರನ್‌ಗಳು ಸೇರುವಷ್ಟರಲ್ಲಿ ಉಳಿದ ಬ್ಯಾಟರ್‌ಗಳನ್ನು ಪೆವಿಲಿಯನ್‌ಗೆ ಕಳಿಸುವಲ್ಲಿ ಬೌಲರ್‌ಗಳು ಯಶಸ್ವಿಯಾದರು. ವೈಶಾಖ ಮತ್ತು ಸ್ಪಿನ್ನರ್ ಶ್ರೇಯಸ್ ಗೋಪಾಲ್ ತಲಾ ಮೂರು ವಿಕೆಟ್ ಗಳಿಸಿ ಉತ್ತರಾಖಂಡ ಇನಿಂಗ್ಸ್‌ಗೆ ತೆರೆಯೆಳೆದರು.

'ನಮ್ಮ ಬೌಲಿಂಗ್ ಪಡೆಗೆ ಈ ಜಯದ ಶ್ರೇಯ ಸೇರಬೇಕು. ಮೊದಲ ಇನಿಂಗ್ಸ್‌ನಲ್ಲಿ ಕೇವಲ 116 ರನ್‌ಗಳಿಗೆ ಉತ್ತರಾಖಂಡವನ್ನು ನಿಯಂತ್ರಿಸಿದ್ದು ಜಯದ ಹಾದಿ ಸುಲಭವಾಯಿತು. ವಿದ್ವತ್, ವೈಶಾಖ ಹಾಗೂ ಎಂ. ವೆಂಕಟೇಶ್ ಅವರ ಬೌಲಿಂಗ್ ಅಮೋಘವಾಗಿತ್ತು' ಎಂದು ಪಂದ್ಯದ ನಂತರ ನಾಯಕ ಮಯಂಕ್ ಸುದ್ದಿಗಾರರಿಗೆ ತಿಳಿಸಿದರು.

ಮೊದಲ ಇನಿಂಗ್ಸ್‌ನಲ್ಲಿ ಶತಕ ಗಳಿಸಿದ್ದ ಶ್ರೇಯಸ್ ಬಗ್ಗೆಯೂ ಮೆಚ್ಚುಗೆ ವ್ಯಕ್ತಪಡಿಸಿದ ಅವರು, 'ಮೊದಲಿನಿಂದಲೂ ಅವರೊಬ್ಬ ಬ್ಯಾಟರ್ ಆಗಿ ನೀಡಿದ ಕಾಣಿಕೆ ಮಹತ್ವದ್ದಾಗಿದೆ' ಎಂದರು.

ವಿಕೆಟ್ ಗಳಿಸಿದ ವೈಶಾಖ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಉತ್ತರಾಖಂಡ: 116 (55.4 ಓವರ್‌ಗಳಲ್ಲಿ)

ಕರ್ನಾಟಕ: 606 (162.5 ಓವರ್‌ಗಳಲ್ಲಿ)

ಎರಡನೇ ಇನಿಂಗ್ಸ್: ಉತ್ತರಾಖಂಡ: 209 (73.4 ಓವರ್‌ಗಳಲ್ಲಿ)

ದಿಕ್ಷಾಂಶು ಸಿ ಶರತ್ ಬಿ ವೆಂಕಟೇಶ್ 29 (84ಎ, 4X4), ಸ್ವಪ್ನಿಲ್ ಸಿಂಗ್ ದೇವದತ್ತ ಬಿ ವೈಶಾಖ 51 (100ಎ, 4X7, 6X1, ಆದಿತ್ಯ ಸಿ ವೆಂಕಟೇಶ್ ಬಿ ವೈಶಾಖ 28 (57ಎ, 4X3), ಅಖಿಲ್ ಸಿ ದೇವದತ್ತ ಬಿ ವೈಶಾಖ 10 (32ಎ, 4X2), ಅಭಯ್ ಎಲ್‌ಬಿಡಬ್ಲ್ಯು ಶ್ರೇಯಸ್ 15 (24ಎ, 4X1, 6X1), ಮಯಂಕ್ ಔಟಾಗದೆ 11 (17ಎ, 6X1), ನಿಖಿಲ್ ಎಲ್‌ಬಿಡಬ್ಲ್ಯು ಶ್ರೇಯಸ್ 0 (4ಎ), ಧಪೋಲಾ ಬಿ ಶ್ರೇಯಸ್ 0 (2ಎ). **ಇತರೆ** 22 (ಬೈ 8, ಲೆಗ್‌ಬೈ 13, ನೋಬಾಲ್ 1)

ವಿಕೆಟ್ ಪತನ: 4–120 (ದಿಕ್ಷಾಂಶು ನೇಗಿ; 47.2), 5–144 (ಸ್ವಪ್ನಿಲ್ ಸಿಂಗ್; 54.5), 6–165 (ಅಖಿಲ್ ರಾವತ್; 64.1), 7–194 (ಅಭಯ್ ನೇಗಿ; 69.2), 8–194 (ಆದಿತ್ಯ ತಾರೆ; 70.3), 9–195 (ನಿಖಿಲ್ ಕೊಹ್ಲಿ;71.6), 10–209 (ದೀಪಕ್ ಧಪೋಲಾ; 73.4)

ಬೌಲಿಂಗ್: ವಿದ್ವತ್ ಕಾವೇರಪ್ಪ 15–7–30–2, ವಿಜಯಕುಮಾರ್ ವೈಶಾಖ 20–4–55–3, ಕೃಷ್ಣಪ್ಪ ಗೌತಮ್ 12–3–33–0, ಎಂ. ವೆಂಕಟೇಶ್ 14-2-44-2, ಶ್ರೇಯಸ್ ಗೋಪಾಲ್ 12.4–1–26–3

ಫಲಿತಾಂಶ: ಕರ್ನಾಟಕಕ್ಕೆ ಇನಿಂಗ್ಸ್ ಮತ್ತು 281 ರನ್‌ಗಳ ಜಯ

ಸೆಮಿಫೈನಲ್‌ನಲ್ಲಿ ಬಂಗಾಳ–ಮಧ್ಯಪ್ರದೇಶ ಹಣಾಹಣಿ

ಬಂಗಾಳ ಮತ್ತು ಮಧ್ಯಪ್ರದೇಶ ತಂಡಗಳು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ಕೋಲ್ಕತ್ತದಲ್ಲಿ ನಡೆದ ಪಂದ್ಯದ ನಾಲ್ಕನೇ ದಿನವಾದ ಶುಕ್ರವಾರ ಬಂಗಾಳ ತಂಡವು 9 ವಿಕೆಟ್‌ಗಳಿಂದ ಜಾರ್ಖಂಡ್ ಎದುರು ಜಯಿಸಿತು.

ಇಂದೋರ್‌ನಲ್ಲಿ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ ಮಧ್ಯಪ್ರದೇಶ ತಂಡವು ಆಂಧ್ರ ವಿರುದ್ಧ 5 ವಿಕೆಟ್‌ಗಳಿಂದ ಜಯಿಸಿತು.

ಆಂಧ್ರ ತಂಡದ ಹನುಮವಿಹಾರಿ ಅವರು ತಮ್ಮ ಒಂದು ಕೈನ ಮೂಳೆ ಮುರಿದಿದ್ದರೂ ಇನ್ನೊಂದು ಕೈಯಲ್ಲಿಯೇ ಬ್ಯಾಟ್ ಬೀಸಿದರು. ಮೊದಲ ಇನಿಂಗ್ಸ್‌ನಲ್ಲಿ 27 ಹಾಗೂ ಎರಡನೇ ಇನಿಂಗ್ಸ್‌ನಲ್ಲಿ 15 ರನ್ ಗಳಿಸಿದರು.

ಕ್ವಾರ್ಟರ್‌ಫೈನಲ್ ಸುತ್ತಿನ ಮೂರು ಪಂದ್ಯಗಳೂ ನಾಲ್ಕನೇ ದಿನವೇ ಮುಕ್ತಾಯವಾದವು.

ರೋಚಕ ಘಟ್ಟದಲ್ಲಿ ಪಂದ್ಯ: ರಾಜ್‌ಕೋಟ್‌ನಲ್ಲಿ ನಡೆಯುತ್ತಿರುವ ಸೌರಾಷ್ಟ್ರ ಮತ್ತು ಪಂಜಾಬ್ ನಡುವಣ ಪಂದ್ಯವು ಸದ್ಯ ರೋಚಕ ಘಟ್ಟ ತಲುಪಿದೆ. ಪಂದ್ಯದ ಕೊನೆಯ ದಿನವಾದ ಶನಿವಾರ ಫಲಿತಾಂಶ ಸ್ಪಷ್ಟವಾಗಲಿದೆ. ಈ ಪಂದ್ಯದಲ್ಲಿ ಜಯಿಸುವ ತಂಡವು ಕರ್ನಾಟಕದ ಎದುರು ಸೆಮಿಫೈನಲ್‌ನಲ್ಲಿ ಆಡಲಿದೆ.

ಸಂಕ್ಷಿಪ್ತ ಸ್ಕೋರು; ಕೋಲ್ಕತ್ತ: ಮೊದಲ ಇನಿಂಗ್ಸ್: ಜಾರ್ಖಂಡ್ 173. ಬಂಗಾಳ: 328.ಎರಡನೇ ಇನಿಂಗ್ಸ್: ಜಾರ್ಖಂಡ್: 221. ಬಂಗಾಳ: 12.4 ಓವರ್‌ಗಳಲ್ಲಿ 1 ವಿಕೆಟ್‌ಗೆ 69 (ಅಭಿಮನ್ಯು ಈಶ್ವರನ್ ಔಟಾಗದೆ 28, ಸುದೀಪ್ ಕುಮಾರ್ ಗರೇಮಿ ಔಟಾಗದೆ 26, ರಾಹುಲ್ ಶುಕ್ಲಾ 24ಕ್ಕೆ1) ಫಲಿತಾಂಶ: ಬಂಗಾಳ ತಂಡಕ್ಕೆ 9 ವಿಕೆಟ್‌ಗಳ ಜಯ.

ಇಂದೋರ್: ಮೊದಲ ಇನಿಂಗ್ಸ್: ಆಂಧ್ರ: 379. ಮಧ್ಯಪ್ರದೇಶ: 228. ಎರಡನೇ ಇನಿಂಗ್ಸ್: ಆಂಧ್ರ: 93 (ಅಶ್ವಿನ್ ಹೆಬ್ಬಾರ್ 35, ಹನುಮವಿಹಾರಿ 15, ಕುಮಾರ್ ಕಾರ್ತಿಕೇಯ 41ಕ್ಕೆ2, ಆವೇಶ್ ಖಾನ್ 4) ಮಧ್ಯಪ್ರದೇಶ: 77 ಓವರ್‌ಗಳಲ್ಲಿ 5ಕ್ಕೆ245 (ಯಶ್ ದುಬೆ 58, ರಜತ್ ಪಾಟೀದಾರ್ 55, ಸಾರಾಂಶ್ ಜೈನ್ 28, ಶುಭಂ ಶರ್ಮಾ 40, ಲಲಿತ್ ಮೋಹನ್ 91ಕ್ಕೆ2, ಪೃಥ್ವಿರಾಜ್ ಯರಾ 50ಕ್ಕೆ2) ಫಲಿತಾಂಶ: ಮಧ್ಯಪ್ರದೇಶಕ್ಕೆ 5 ವಿಕೆಟ್‌ಗಳ ಜಯ.

ರಾಜ್‌ಕೋಟ್: ಮೊದಲ ಇನಿಂಗ್ಸ್: ಸೌರಾಷ್ಟ್ರ: 303. ಪಂಜಾಬ್: 431. ಎರಡನೇ ಇನಿಂಗ್ಸ್: ಸೌರಾಷ್ಟ್ರ: 120.1 ಓವರ್‌ಗಳಲ್ಲಿ 379 (ವಸವದಾ 77, ಚಿರಾಗ್ ಜಾನಿ 77, ಪ್ರೇರಕ್ ಮಂಕಡ್ 88, ಪಾರ್ಥ್ ಬುತ್ 51, ವಿನಯ್ ಚೌಧರಿ 179ಕ್ಕೆ7) ಪಂಜಾಬ್: 23 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 52 (ಪ್ರಭಸಿಮ್ರನ್ ಸಿಂಗ್ 22, ಪುಕರಾಜ್ ಮಾನ್ ಬ್ಯಾಟಿಂಗ್ 17, ಸಿದ್ಧಾರ್ಥ್ ಕೌಲ್ ಬ್ಯಾಟಿಂಗ್ 2)

2023–2024 ರ ಬಜೆಟ್ !

ಆಸ್ಟ್ರೇಲಿಯಾಗೆ 'ಅಶ್ವಿನ್ ಪ್ರತಿರೂಪ' ಮಹೀಷ್ ನೆರವು

ನವದೆಹಲಿ/ಬೆಂಗಳೂರು (ಪಿಟಿಐ): ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಅವರ ಶೈಲಿಯನ್ನೇ ಅನುಕರಿಸಿ ಬೌಲಿಂಗ್ ಮಾಡುವ ಮಹೀಷ್ ಪಿತಿಯಾ ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಸ್ಪಿನ್ ಬೌಲಿಂಗ್ ಮಾರ್ಗದರ್ಶಕರಾಗಿ ನೇಮಕಗೊಂಡಿದ್ದಾರೆ.

21 ವರ್ಷದ ಮಹೀಷ್ ಅವರು ಪ್ರವಾಸಿ ಬ್ಯಾಟರ್‌ಗಳಿಗೆ ನೆಟ್ಸ್‌ನಲ್ಲಿ ಬೌಲಿಂಗ್ ಮಾಡುತ್ತಿದ್ದಾರೆ. ಭಾರತದ ಅನುಭವಿ ಸ್ಪಿನ್ನರ್ ಅಶ್ವಿನ್ ಅವರನ್ನು ಎದುರಿಸುವಲ್ಲಿ ಆಸ್ಟ್ರೇಲಿಯಾ ಆಟಗಾರರು ಈ ಹಿಂದೆಯೂ ಬಹಳಷ್ಟು ಸಲ ವೈಫಲ್ಯ ಅನುಭವಿಸಿದ್ದರು.

ಬೆಂಗಳೂರಿನ ಹೊರವಲಯದಲ್ಲಿರುವ ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಕಳೆದೆರಡು ದಿನಗಳಿಂದ ಅಭ್ಯಾಸ ನಡೆಸುತ್ತಿದೆ. ಇದೇ 9ರಂದು ಆರಂಭವಾಗಲಿರುವ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಆಡಲು ಸಿದ್ಧತೆ ನಡೆಸಿದೆ.

ಮಹೀಷ್ ಗುಜರಾತ್‌ನ ಜುನಾಗಢದವರು. ಅವರ ಊರಿನಲ್ಲಿ ಟಿ.ವಿ. ಇರಲಿಲ್ಲ. 11 ವರ್ಷದವರೆಗೂ ಕ್ರಿಕೆಟ್ ನೋಡಿರಲಿಲ್ಲ. 2013ರಲ್ಲಿ ಅವರು ಮೊದಲ ಬಾರಿಗೆ ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಣ ಪಂದ್ಯವನ್ನು ವೀಕ್ಷಿಸಿದರು. ಕ್ರಿಕೆಟ್ ಆಟದ ಪ್ರೀತಿ ಬೆಳೆಯಿತು. ಒಳ್ಳೆಯ ಸ್ಪಿನ್ನರ್ ಆಗಿ ರೂಪುಗೊಂಡರು. ಹೋದ ಡಿಸೆಂಬರ್‌ನಲ್ಲಿ ಬರೋಡಾ ತಂಡದ ಮೂಲಕ ಅವರು ಪ್ರಥಮ ದರ್ಜೆ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದರು. ಅವರು ಬೌಲಿಂಗ್ ಮಾಡುವ ದೃಶ್ಯ ತುಣುಕುಗಳನ್ನು ಆಸ್ಟ್ರೇಲಿಯಾ ತಂಡದವರು ನೋಡಿದ್ದರು. ಅದರಿಂದಾಗಿ ಅವರ ನೆರವು ಪಡೆದುಕೊಂಡರು.

ಮಹೀಷ್ ಪಿತಿಯಾ

ಆಸ್ಟ್ರೇಲಿಯಾ ತಂಡಕ್ಕೆ ಸೈಡ್ ಆರ್ಮ್ ಥ್ರೋ ಪರಿಣತರಾಗಿ ಕೆಲಸ ಮಾಡುತ್ತಿರುವ ಪ್ರಿತೇಶ್ ಜೋಶಿ ಅವರು ಮಹೀಷ್ ಬಗ್ಗೆ ಸಹಾಯಕ ಕೋಚ್ ಆ್ಯಂಡ್ರೆ ಬೊರೊವಿಚ್ ಅವರ ಗಮನ ಸೆಳೆದರು. ಜೋಶಿ ಹೈದರಾಬಾದ್ ತಂಡದ ಎಡಗೈ ಸ್ಪಿನ್ನರ್ ಮೆಹರೋತ್ರಾ ಶಶಾಂಕ್ ಅವರನ್ನು ನೆರವು ಸಿಬ್ಬಂದಿಯಾಗಿ ತಂಡಕ್ಕೆ ಕರೆತಂದಿದ್ದರು.

ಟೆಸ್ಟ್ ಪಂದ್ಯಗಳು ನಾಗಪುರ (ಫೆ 9–13), ನವದೆಹಲಿ (ಫೆ. 17–21), ಧರ್ಮಶಾಲಾ (ಮಾರ್ಚ್ 1–5) ಮತ್ತು ಅಹಮದಾಬಾದ್‌ನಲ್ಲಿ (ಮಾರ್ಚ್ 9–13) ನಡೆಯಲಿವೆ.

ಸಂಕ್ಷಿಪ್ತ ಸುದ್ದಿ

ಫುಟ್‌ಬಾಲ್: ಭಾರತ ಯುವ ತಂಡಕ್ಕೆ ಭರ್ಜರಿ ಜಯ

ಢಾಕಾ (ಪಿಟಿಐ): ಮೂವರು ಆಟಗಾರ್ತಿಯರು ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಭಾರತ ಮಹಿಳಾ ಫುಟ್‌ಬಾಲ್ ತಂಡದವರು 20 ವರ್ಷದೊಳಗಿನವರ ಸ್ಯಾಫ್ ಫುಟ್ ಬಾಲ್ ಚಾಂಪಿಯನ್‌ಷಿಪ್‌ನ ಮೊದಲ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿದರು.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಭಾರತ 12–0ಯಿಂದ ಭೂತಾನ್ ತಂಡವನ್ನು ಪರಾಭವಗೊಳಿಸಿತು. ವಿಜೇತ ತಂಡದ ಪರ ನೇಹಾ (45 + 2, 55 ಮತ್ತು 90ನೇ ನಿಮಿಷ), ಅನಿತಾಕುಮಾರಿ (50, 69 ಮತ್ತು 78ನೇ ನಿ.) ಮತ್ತು ಲಿಂಡಾ ಕೊಮ್ (61, 63 ಮತ್ತು 75ನೇ ನಿ.) ತಲಾ ಮೂರು ಗೋಲು ಹೊಡೆದರು.

ಅಪೂರ್ಣಾ ನಾರ್ಜರಿ (29 ಮತ್ತು 36ನೇ ನಿ.) ಮತ್ತು ನೀತು ಲಿಂಡಾ (43ನೇ ನಿ.) ಗೆಲುವಿಗೆ ಕಾಣಿಕೆ ನೀಡಿದರು. ಭಾನುವಾರ ನಡೆಯುವ ಪಂದ್ಯದಲ್ಲಿ ಭಾರತ ತಂಡವು ಬಾಂಗ್ಲಾದೇಶ ಸವಾಲು ಎದುರಿಸಲಿದೆ.

ಖೇಲೊ ಇಂಡಿಯಾ: ಯಶಸ್ವಿನಿಗೆ ಕಂಚು

ಬೆಂಗಳೂರು: ಕರ್ನಾಟಕದ ಯಶಸ್ವಿನಿ ಘೋರ್ಪಡೆ ಅವರು ಖೇಲೊ ಇಂಡಿಯಾ ಕ್ರೀಡಾಕೂಟದ ಟೇಬಲ್ ಟೆನಿಸ್ ಸ್ಪರ್ಧೆಯ ಸಿಂಗಲ್ಸ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

ಮಧ್ಯಪ್ರದೇಶದ ಭೋಪಾಲ್‌ನಲ್ಲಿ ನಡೆಯುತ್ತಿರುವ ಕ್ರೀಡಾಕೂಟದ ಮಹಿಳೆಯರ ಸಿಂಗಲ್ಸ್ ವಿಭಾಗದ ಕಂಚಿನ ಪದಕದ ಪ್ಲೇ ಆಫ್‌ನಲ್ಲಿ ಯಶಸ್ವಿನಿ 11-7, 8-11, 11-6, 11-8, 12-10ರಿಂದ ಹರಿಯಾಣದ ಪ್ರಿತೋಕಿ ಚಕ್ರವರ್ತಿ ಅವರನ್ನು ಸೋಲಿಸಿದರು.

ಕ್ವಾರ್ಟರ್‌ಫೈನಲ್‌ನಲ್ಲಿ ಕರ್ನಾಟಕದ ಆಟಗಾರ್ತಿ 11-6, 11-7, 11-4, 7-11, 11-7ರಿಂದ ಹರಿಯಾಣದ ಸುಹಾನಾ ಸೈನಿ ಅವರನ್ನು ಮಣಿಸಿದ್ದರು. ಸೆಮಿಫೈನಲ್‌ನಲ್ಲಿ ಯಶಸ್ವಿನಿ 7–11, 9–11, 6–11, 7–11ರಿಂದ ದೆಹಲಿಯ ಲಕ್ಷಿತ್ ಎದುರು ಸೋತಿದ್ದರು.

ಯೋಗೇಂದ್ರ ಆಯ್ಕೆ

ಬೆಂಗಳೂರು: ಮೈಸೂರು ಅಥ್ಲೆಟಿಕ್ಸ್ ಕ್ಲಬ್ ಕಾರ್ಯದರ್ಶಿ ಮಾದಪ್ಪ ಯೋಗೇಂದ್ರ ಅವರು ರಾಷ್ಟ್ರೀಯ ಮಾಸ್ಟರ್ಸ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಗೆ ಆಯ್ಕೆಯಾಗಿದ್ದಾರೆ.

ಮಾಸ್ಟರ್ಸ್ ಅಥ್ಲೆಟಿಕ್ ಚಾಂಪಿಯನ್‌ಷಿಪ್ ಕೋಲ್ಕತ್ತದ ಸಾಲ್ಟ್‌ಲೇಕ್ ಕ್ರೀಡಾಂಗಣದಲ್ಲಿ ಫೆಬ್ರುವರಿ 13ರಿಂದ 19ರವರೆಗೆ ನಡೆಯಲಿದೆ. 60 ವರ್ಷಕ್ಕಿಂತ ಮೇಲಿನವರ 2000 ಮೀಟರ್ಸ್ ಸ್ಟೀಪಲ್‌ಚೇಸ್ ವಿಭಾಗದಲ್ಲಿ ಯೋಗೇಂದ್ರ ಸ್ಪರ್ಧಿಸಲಿದ್ದಾರೆ.

ಬೆಂಗಳೂರು– ಕೋಲ್ಕತ್ತ ಸೆಣಸು

ಪ್ರೈಮ್ ವಾಲಿಬಾಲ್ ಲೀಗ್ ಚಾಂಪಿಯನ್‌ಷಿಪ್ 2ನೇ ಆವೃತ್ತಿ: ಇಂದು ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೈಮ್ ವಾಲಿಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಎರಡನೇ ಆವೃತ್ತಿಯ ಟೂರ್ನಿಗೆ ಶನಿವಾರ ಇಲ್ಲಿ ಚಾಲನೆ ಲಭಿಸಲಿದ್ದು, ಎಂಟು ತಂಡಗಳು ಪ್ರಶಸ್ತಿಗಾಗಿ ಪೈಪೋಟಿ ನಡೆಸಲಿವೆ.

ಈ ಬಾರಿ ಮೂರು ನಗರಗಳಲ್ಲಿ ಪಂದ್ಯಗಳು ಆಯೋಜನೆಯಾಗಿದ್ದು, ಬೆಂಗಳೂರು ಲೆಗ್‌ನ ಪಂದ್ಯಗಳು ಫೆ.4 ರಿಂದ 12ರ ವರೆಗೆ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜನೆಯಾಗಿವೆ.

ಶನಿವಾರ ಸಂಜೆ 7ಕ್ಕೆ ನಡೆಯಲಿರುವ ಉದ್ಘಾಟನಾ ಪಂದ್ಯದಲ್ಲಿ ಬೆಂಗಳೂರು ಟಾರ್ಪಿಡೋಸ್ ಮತ್ತು ಕೋಲ್ಕತ್ತ ಥಂಡರ್‌ಬೋಲ್ಟ್ಸ್ ತಂಡಗಳು ಎದುರಾಗಲಿವೆ.

ಮುಂಬೈ ಮಿಟಿಯೋರ್ಸ್, ಕ್ಯಾಲಿಕಟ್ ಹೀರೋಸ್, ಅಹಮದಾಬಾದ್ ಡಿಫೆಂಡರ್ಸ್, ಹೈದರಾಬಾದ್ ಬ್ಲ್ಯಾಕ್‌ಹಾಕ್ಸ್, ಕೊಚ್ಚಿ ಬ್ಲೂ ಸ್ಪೈಕರ್ಸ್ ಮತ್ತು ಚೆನ್ನೈ ಬ್ಲಿಟ್ಜ್ ಲೀಗ್‌ನಲ್ಲಿ ಪಾಲ್ಗೊಂಡಿರುವ ಇತರ ತಂಡಗಳಾಗಿವೆ.

ಬೆಂಗಳೂರಿನಲ್ಲಿ ಒಟ್ಟು 10 ಪಂದ್ಯಗಳು ಆಯೋಜನೆಯಾಗಿವೆ. ಎರಡನೇ ಲೆಗ್‌ನ ಪಂದ್ಯಗಳು ಹೈದರಾಬಾದ್‌ನಲ್ಲಿ ಫೆ.15 ರಿಂದ 21ರ ವರೆಗೆ ನಡೆಯಲಿವೆ. ಮೂರನೇ ಹಾಗೂ ಕೊನೆಯ ಲೆಗ್‌ನ ಪಂದ್ಯಗಳು ಮತ್ತು ನಾಕೌಟ್ ಹೋರಾಟ ಕೊಚ್ಚಿಯಲ್ಲಿ ಫೆ.24 ರಿಂದ ಮಾರ್ಚ್5ರ ವರೆಗೆ ಆಯೋಜನೆಯಾಗಿವೆ.

28 ಲೀಗ್, ಎರಡು ಸೆಮಿಫೈನಲ್ ಮತ್ತು ಫೈನಲ್ ಸೇರಿದಂತೆ ಒಟ್ಟು 31 ಪಂದ್ಯಗಳು ನಡೆಯಲಿವೆ. ಮೊದಲ ಆವೃತ್ತಿಯ ಟೂರ್ನಿಯಲ್ಲಿ ಕೋಲ್ಕತ್ತ ಥಂಡರ್‌ಬೋಲ್ಟ್ಸ್ ಚಾಂಪಿಯನ್ ಆಗಿತ್ತು. ಅಶ್ವಲ್ ರೈ ನೇತೃತ್ವದ ತಂಡ ಈ ಬಾರಿಯೂ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದೆ.

ಟ್ರೋಫಿ ಅನಾವರಣ: ಲೀಗ್‌ನ ಟ್ರೋಫಿ ಅನಾವರಣ ಕಾರ್ಯಕ್ರಮ ಶುಕ್ರವಾರ ನಡೆಯಿತು. ಎಲ್ಲ ಎಂಟೂ ತಂಡಗಳ ನಾಯಕರು ಪಾಲ್ಗೊಂಡರು.

ಈ ವೇಳೆ ಮಾತನಾಡಿದ ಲೀಗ್‌ನ ಸಿಇಒ ಜಾಯ್ ಭಟ್ಟಾಚಾರ್ಯ, 'ಲೀಗ್‌ನ ಎರಡನೇ ಆವೃತ್ತಿಯ ಪಂದ್ಯಗಳು ಮೂರು ನಗರಗಳಲ್ಲಿ ನಡೆಯಲಿದ್ದು, ವಾಲಿಬಾಲ್ ಜನಪ್ರಿಯತೆಯನ್ನು ಇನ್ನಷ್ಟು ಹೆಚ್ಚಿಸಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪಂದ್ಯಗಳ ನೇರ ಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಟ್ರೋಫಿ ಅನಾವರಣ ಸಮಾರಂಭದಲ್ಲಿ ವಿವಿಧ ತಂಡಗಳ ನಾಯಕರಾದ (ಎಡದಿಂದ) ಗುರು ಪ್ರಶಾಂತ್ (ಹೈದರಾಬಾದ್ ಬ್ಲ್ಯಾಕ್‌ಹಾಕ್ಸ್), ಮುತ್ತುಸ್ವಾಮಿ (ಅಹಮದಾಬಾದ್ ಡಿಫೆಂಡರ್ಸ್), ನವೀನ್ ರಾಜಾ ಜೇಕಬ್ (ಚೆನ್ನೈ ಬ್ಲಾಸ್ಟರ್ಸ್), ಪಂಕಜ್ ಶರ್ಮಾ (ಬೆಂಗಳೂರು ಟಾರ್ಪಿಡೋಸ್), ಅಶ್ವಲ್ ರೈ (ಕೋಲ್ಕತ್ತ ಥಂಡರ್‌ಬೋಲ್ಟ್ಸ್), ಎ.ಕಾರ್ತಿಕ್ (ಮುಂಬೈ ಮಿಟಿಯೋರ್ಸ್), ಎಡ್ವರ್ಡೊ ರೊಮೇ (ಕೊಚ್ಚಿ ಬ್ಲೂ ಸ್ಪೈಕರ್ಸ್) ಮತ್ತು ಮ್ಯಾಟ್ ಹಿಲ್ಲಿಂಗ್ (ಕ್ಯಾಲಿಕಟ್ ಹೀರೋಸ್) ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು ಲೆಗ್ ಪಂದ್ಯಗಳು

ದಿನಾಂಕ	ಪಂದ್ಯ	ಆರಂಭ
ಫೆ.4	ಬೆಂಗಳೂರು ಟಾರ್ಪಿಡೋಸ್-ಕೋಲ್ಕತ್ತ ಥಂಡರ್‌ಬೋಲ್ಟ್ಸ್	ಸಂಜೆ 7
ಫೆ.5	ಮುಂಬೈ ಮಿಟಿಯೋರ್ಸ್-ಕ್ಯಾಲಿಕಟ್ ಹೀರೋಸ್	ಸಂಜೆ 7
ಫೆ.6	ಅಹಮದಾಬಾದ್ ಡಿಫೆಂಡರ್ಸ್-ಹೈದರಾಬಾದ್ ಬ್ಲ್ಯಾಕ್‌ಹಾಕ್ಸ್	ಸಂಜೆ 7
ಫೆ.7	ಕೊಚ್ಚಿ ಬ್ಲೂ ಸ್ಪೈಕರ್ಸ್-ಚೆನ್ನೈ ಬ್ಲಿಟ್ಜ್	ಸಂಜೆ 7
ಫೆ.8	ಕೋಲ್ಕತ್ತ ಥಂಡರ್‌ಬೋಲ್ಟ್ಸ್-ಹೈದರಾಬಾದ್ ಬ್ಲ್ಯಾಕ್‌ಹಾಕ್ಸ್	ಸಂಜೆ 7
ಫೆ.9	ಅಹಮದಾಬಾದ್ ಡಿಫೆಂಡರ್ಸ್-ಬೆಂಗಳೂರು ಟಾರ್ಪಿಡೋಸ್	ಸಂಜೆ 7
ಫೆ.10	ಚೆನ್ನೈ ಬ್ಲಿಟ್ಜ್-ಮುಂಬೈ ಮಿಟಿಯೋರ್ಸ್	ಸಂಜೆ 7
ಫೆ.11	ಕ್ಯಾಲಿಕಟ್ ಹೀರೋಸ್-ಹೈದರಾಬಾದ್ ಬ್ಲ್ಯಾಕ್‌ಹಾಕ್ಸ್	ಸಂಜೆ 7
ಫೆ.12	ಮುಂಬೈ ಮಿಟಿಯೋರ್ಸ್-ಬೆಂಗಳೂರು ಟಾರ್ಪಿಡೋಸ್	ಸಂಜೆ 7
ಫೆ.12	ಕೋಲ್ಕತ್ತ ಥಂಡರ್‌ಬೋಲ್ಟ್ಸ್-ಕೊಚ್ಚಿ ಬ್ಲೂ ಸ್ಪೈಕರ್ಸ್	ರಾತ್ರಿ 9.30

ಬಿಎಫ್‌ಸಿ: ಗುರುಪ್ರೀತ್ ಒಪ್ಪಂದ ವಿಸ್ತರಣೆ

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಫ್ರಾಂಚೈಸ್ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಜೊತೆಗೆ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು ಅವರ ಒಪ್ಪಂದ ಐದು ವರ್ಷ ವಿಸ್ತರಣೆಯಾಗಿದೆ.

ಭಾರತ ರಾಷ್ಟ್ರೀಯ ತಂಡದ ಗೋಲ್‌ಕೀಪರ್ ಆಗಿರುವ ಗುರುಪ್ರೀತ್, ತಾವು 31ನೇ ವಯಸ್ಸಿಗೆ ಕಾಲಿಡುವ ದಿನವೇ ಒಪ್ಪಂದ ವಿಸ್ತರಿಸಿಕೊಂಡಿದ್ದಾರೆ. ಈ ಒಪ್ಪಂದದ ಪ್ರಕಾರ ಅವರು 2028ರವರೆಗೆ ಕ್ಲಬ್ ಪರ ಆಡಲಿದ್ದಾರೆ.

ಮಾರ್ಚ್ 18ರಂದು ಐಎಸ್‌ಎಲ್ ಫೈನಲ್: ಈ ಬಾರಿಯ ಐಎಸ್‌ಎಲ್ ಟೂರ್ನಿಯ ಫೈನಲ್ ಮಾರ್ಚ್ 18ರಂದು ನಡೆಯಲಿದೆ ಎಂದು ಆಯೋಜಕರು ಶುಕ್ರವಾರ ತಿಳಿಸಿದ್ದಾರೆ.

ಲೀಗ್ ಹಂತದ ಪಂದ್ಯಗಳು ಮುಗಿದ ಬಳಿಕ ಮಾರ್ಚ್ 3 ಮತ್ತು 4ರಂದು ಎರಡು ಪ್ಲೇ ಆಫ್ ಪಂದ್ಯಗಳು ನಡೆಯಲಿವೆ.

ಆರ್ಚರಿ ಟ್ರಯಲ್ಸ್ 12ಕ್ಕೆ

ಬೆಂಗಳೂರು: ಕರ್ನಾಟಕ ಅಮೆಚೂರ್ ಆರ್ಚರಿ ಸಂಸ್ಥೆಯು ರಾಷ್ಟ್ರೀಯ ಸೀನಿಯರ್ ಕಾಂಪೌಂಡ್ ಹಾಗೂ ರಿಕರ್ವ್ ಆರ್ಚರಿ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ತಂಡದ ಆಯ್ಕೆಗಾಗಿ ಟ್ರಯಲ್ಸ್ ಆಯೋಜಿಸಲಿದೆ.

ಕಂಠೀರವ ಕ್ರೀಡಾಂಗಣದಲ್ಲಿ ಫೆಬ್ರುವರಿ 12ರಂದು ಟ್ರಯಲ್ಸ್ ನಡೆಯಲಿದೆ. ಪುರುಷ ಮತ್ತು ಮಹಿಳೆಯರಿಗಾಗಿ ರಾಷ್ಟ್ರೀಯ ಚಾಂಪಿಯನ್‌ಷಿಪ್ ಗುಜರಾತ್‌ನಲ್ಲಿ ಮಾರ್ಚ್ 9ರಿಂದ 18ರವರೆಗೆ ನಡೆಯಲಿದೆ.

ಆರ್ಚರಿಪಟುಗಳು ರಾಜ್ಯ ಆರ್ಚರಿ ಸಂಸ್ಥೆಯ ಗೌರವ ಕಾರ್ಯದರ್ಶಿ ಟಿ. ಅನಂತರಾಜು (080-2227-5656) ಅವರಲ್ಲಿ ಇದೇ 10ರೊಳಗೆ ನೋಂದಾಯಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬ್ಯಾಡ್ಮಿಂಟನ್: ಪ್ರಣೀತ್‌ಗೆ ಸೋಲು

ಬ್ಯಾಂಕಾಕ್ (ಪಿಟಿಐ): ಭಾರತದ ಬಿ.ಸಾಯಿ ಪ್ರಣೀತ್, ಥಾಯ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಸೋತರು.

ಶುಕ್ರವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಚೀನಾದ ಲಿ ಶಿ ಫೆಂಗ್ 21–17, 21–23, 21–18 ರಲ್ಲಿ ಭಾರತದ ಆಟಗಾರನನ್ನು ಮಣಿಸಿ ಸೆಮಿಫೈನಲ್ ಪ್ರವೇಶಿಸಿದರು. .

ಮುಂಬೈ ರೇಸ್

ಲಾರ್ಡ್ ಫ್ರಾಂಕೆಲ್ ಗೆಲ್ಲುವ ನಿರೀಕ್ಷೆ

ಸ್ಕ್ಯಾಶರ್ ಟ್ರೋಫಿ ಶನಿವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಲಾರ್ಡ್ ಫ್ರಾಂಕೆಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

1ನೇ ರೇಸ್: ಹ್ಯಾರಿಯೆಟ್ 1, ಡಿವೈನ್ ಸೋಲ್ 7, ಹೌಸ್ ಆಫ್ ಲಾರ್ಡ್ಸ್ 3
2ನೇ ರೇಸ್: ಮೈಟಿ ವಿಂಗ್ಸ್ 9, ಫೆನಾಮ್ 1, ರೂಬಿಕ್ ಸ್ಟಾರ್ 4
3ನೇ ರೇಸ್: ಜಿಯೋಗ್ರಾಫಿಕ್ 2, ಕಾಸ್ಟಾನೆಡ 5, ಆಲ್ಫಾ ಜೀನ್ 1
4ನೇ ರೇಸ್: ರಿಸ್ಟ್ರೆಟ್ಟೋ 6, ಅನ್‌ಟೈಟಲ್ಡ್ 4, ಸೂಪರ್ ಇಂಪೋಸ್ 2
5ನೇ ರೇಸ್: ಲಾರ್ಡ್ ಫ್ರಾಂಕೆಲ್ 4, ಥನ್‌ಬರ್ಗ್ 6, ರಾಸ್‌ಪುಟಿನ್ 5
6ನೇ ರೇಸ್: ಜೆಟ್ ಟೈಫೂನ್ 1, ಫಿಡಾಟೊ 7, ಸ್ಕೈ ಹಾಕ್ 9
7ನೇ ರೇಸ್: ಸಿಂಗರ್ ಸಾರ್ಜೆಂಟ್ 12, ಕ್ಲಾಡಿಯಸ್ 11, ಕಿಂಗ್ಸ್ ಬೆಸ್ಟ್ 6
8ನೇ ರೇಸ್: ಮಿಡಾಸ್ ಟಚ್ 4, ತೂಫಾನ್ 7, ವಾಲ್ಟರ್ 3

ಉತ್ತಮ ಬೆಟ್: ಜೆಟ್ ಟೈಫೂನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
5,6,7,8	5,6,7	6,7,8

ಲಕ್ಷ್ಯ ಅಭಿಮಾನಿ ಗಾವಸ್ಕರ್!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಯುವ ಬ್ಯಾಡ್ಮಿಂಟನ್ ಆಟಗಾರ ಲಕ್ಷ್ಯ ಸೇನ್ ಅವರಿಗೆ ಹೊಸ ಅಭಿಮಾನಿಯೊಬ್ಬರು ಲಭಿಸಿದ್ದಾರೆ. ಅವರು ಬೇರಾರೂ ಅಲ್ಲ. ಕ್ರಿಕೆಟ್ ದಿಗ್ಗಜ ಸುನಿಲ್ ಗಾವಸ್ಕರ್!

ಗಾವಸ್ಕರ್ ಅವರು ಗುರುವಾರ ಇಲ್ಲಿನ ಪ್ರಕಾಶ್ ಪಡುಕೋಣೆ ಬ್ಯಾಡ್ಮಿಂಟನ್ ಅಕಾಡೆಮಿಗೆ ಭೇಟಿ ನೀಡಿ, ಸೇನ್ ಒಳಗೊಂಡಂತೆ ಯುವ ಸ್ಪರ್ಧಿಗಳ ಜತೆ ಕೆಲ ಸಮಯ ಕಳೆದಿದ್ದಾರೆ.

ಸೇನ್ ಜತೆಗಿರುವ ಫೋಟೊವನ್ನು ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಪ್ರಕಟಿಸಿರುವ ಅವರು, 'ನನ್ನ ಹೊಸ ಬ್ಯಾಡ್ಮಿಂಟನ್ ಹೀರೊ ಲಕ್ಷ್ಯ ಸೇನ್. ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಪ್ರಕಾಶ್ ಪಡುಕೋಣೆ ಬಳಿಕ ಏಕೈಕ ಹೀರೊ ಇವರು' ಎಂದು ಬರೆದುಕೊಂಡಿದ್ದಾರೆ.

'ಆಲ್ ಇಂಗ್ಲೆಂಡ್ ಓಪನ್ ಮತ್ತು ಥಾಮಸ್ ಕಪ್ ಟೂರ್ನಿಯಲ್ಲಿ ನಿನ್ನ ಆಟವನ್ನು ನೋಡಿದ್ದೇನೆ. ಈ ಹಿಂದೆ ಪ್ರಕಾಶ್ ಪಡುಕೋಣೆ ಅಭಿಮಾನಿಯಾಗಿದ್ದೆ. ಈಗ ನಿನ್ನ ಅಭಿಮಾನಿ' ಎಂದು ಗಾವಸ್ಕರ್ ಅವರು ಲಕ್ಷ್ಯಗೆ ಹೇಳಿದ್ದಾಗಿ, ಕೋಚ್ ವಿಮಲ್ ಕುಮಾರ್ ತಿಳಿಸಿದರು.

'ದಿಗ್ಗಜ ಕ್ರೀಡಾಪಟುವೊಬ್ಬರಿಂದ ಅಂತಹ ಮಾತನ್ನು ಕೇಳುವುದು ನಿಜಕ್ಕೂ ಸಂತಸ ಉಂಟುಮಾಡಿದೆ. ಯಾವ ರೀತಿ ಪ್ರತಿಕ್ರಿಯಿಸಬೇಕು ಎಂದೇ ತಿಳಿಯುತ್ತಿಲ್ಲ' ಎಂದು ಲಕ್ಷ್ಯ ಹೇಳಿದ್ದಾರೆ.

ಸುನಿಲ್ ಗಾವಸ್ಕರ್ ಮತ್ತು ಲಕ್ಷ್ಯ ಸೇನ್ –ಇನ್‌ಸ್ಟಾಗ್ರಾಂ ಚಿತ್ರ

ಡೇವಿಸ್ ಕಪ್: ಯೂಕಿಗೆ ಸೋಲು

ಹಿಲರ್ಡ್, ಡೆನ್ಮಾರ್ಕ್ (ಪಿಟಿಐ): ಭಾರತ ತಂಡವು ಡೇವಿಸ್ ಕಪ್ ಟೆನಿಸ್ ಪಂದ್ಯದ ಮೊದಲ ದಿನವಾದ ಶುಕ್ರವಾರ 0–1ರಿಂದ ನಿರಾಸೆ ಅನುಭವಿಸಿತು.

ಡೆನ್ಮಾರ್ಕ್ ವಿರುದ್ಧ ನಡೆಯುತ್ತಿರುವ ವಿಶ್ವ ಗುಂಪು 1ರ ಪ್ಲೇ ಆಫ್‌ನ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಹಣಾಹಣಿಯಲ್ಲಿ ಭಾರತದ ಯೂಕಿ ಭಾಂಬ್ರಿ 2–6, 2–6ರಿಂದ ಹೋಲ್ಗರ್ ರೂನ್ ವಿರುದ್ಧ ಸೋತರು.

ಮುಂದಿನ ಸಿಂಗಲ್ಸ್ ಪಂದ್ಯದಲ್ಲಿ ಭಾರತದ ಸುಮಿತ್ ನಗಾಲ್ ಅವರು ಆಗಸ್ಟ್ ಹೊಮ್‌ಗ್ರೇನ್ ಎದುರು ಆಡುವರು.

ಕ್ರಿಕೆಟ್: ಜೋಗಿಂದರ್ ನಿವೃತ್ತಿ

ನವದೆಹಲಿ (ಪಿಟಿಐ): ಚೊಚ್ಚಲ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಮಧ್ಯಮ ವೇಗಿ ಜೋಗಿಂದರ್ ಶರ್ಮಾ ಅವರು ಕ್ರಿಕೆಟ್‌ನ ಎಲ್ಲ ಮಾದರಿಗಳಿಗೆ ನಿವೃತ್ತಿ ಘೋಷಿಸಿದ್ದಾರೆ.

2004 ರಿಂದ 2007ರ ಅವಧಿಯಲ್ಲಿ ಅವರು ತಲಾ ನಾಲ್ಕು ಏಕದಿನ ಮತ್ತು ಟಿ20 ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದು, ಐದು ವಿಕೆಟ್ ಗಳಿಸಿದ್ದಾರೆ. ದೇಸಿ ಕ್ರಿಕೆಟ್‌ನಲ್ಲಿ ಹರಿಯಾಣ ತಂಡವನ್ನು ಪ್ರತಿನಿಧಿಸಿದ್ದರು.

'2002 ರಿಂದ 2017ರ ವರೆಗಿನ ಪಯಣವು ನನ್ನ ಜೀವನದ ಅದ್ಭುತ ವರ್ಷಗಳಾಗಿದ್ದವು. ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸಲು ಸಾಧ್ಯವಾದದ್ದು ನನಗೆ ಲಭಿಸಿದ ಬಲುದೊಡ್ಡ ಗೌರವ' ಎಂದು 39 ವರ್ಷದ ಅವರು ಶುಕ್ರವಾರ 'ಟ್ವೀಟ್' ಮಾಡಿದ್ದಾರೆ.

2007ರ ಟಿ20 ವಿಶ್ವಕಪ್ ಫೈನಲ್‌ನಲ್ಲಿ ಭಾರತ– ಪಾಕಿಸ್ತಾನ ಪೈಪೋಟಿ ನಡೆಸಿತ್ತು. ಅಂತಿಮ ಓವರ್‌ನಲ್ಲಿ ಪಾಕ್ ಗೆಲುವಿಗೆ 13 ರನ್‌ಗಳು ಬೇಕಿದ್ದವು. ಒಂದು ವಿಕೆಟ್ ಕೈಯಲ್ಲಿತ್ತು. ಈ ವೇಳೆ ಭಾರತ ತಂಡದ ನಾಯಕ ಮಹೇಂದ್ರ ಸಿಂಗ್ ಧೋನಿ ಅವರು ಚೆಂಡನ್ನು ಜೋಗಿಂದರ್‌ಗೆ ನೀಡಿದ್ದರು.

ಜೋಗಿಂದರ್ ಶರ್ಮಾ

ವೈಡ್‌ನೊಂದಿಗೆ ಓವರ್ ಆರಂಭಿಸಿದ್ದ ಜೋಗಿಂದರ್ ಮುಂದಿನ ಎಸೆತದಲ್ಲಿ ಯಾವುದೇ ರನ್ ನೀಡಲಿಲ್ಲ. ಎರಡನೇ ಎಸೆತವನ್ನು ಮಿಸ್ಬಾ ಉಲ್ ಹಕ್ ಸಿಕ್ಸರ್‌ಗೆ ಅಟ್ಟಿದ್ದರು. ಪಾಕ್ ಗೆಲುವಿಗೆ ನಾಲ್ಕು ಎಸೆತಗಳಲ್ಲಿ ಆರು ರನ್‌ಗಳು ಬೇಕಿದ್ದವು. ಮೂರನೇ ಎಸೆತವನ್ನು ಸ್ಕೂಪ್ ಮಾಡುವ ಪ್ರಯತ್ನದಲ್ಲಿ ಮಿಸ್ಬಾ ಅವರು ಶ್ರೀಶಾಂತ್‌ಗೆ ಕ್ಯಾಚ್‌ಕೊಟ್ಟಿದ್ದರು. ಐದು ರನ್‌ಗಳಿಂದ ಗೆದ್ದಿದ್ದ ಭಾರತ ಟ್ರೋಫಿ ಎತ್ತಿಹಿಡಿದಿತ್ತು.

ಆದರೆ ಆ ಪಂದ್ಯದ ಬಳಿಕ ಜೋಗಿಂದರ್‌ಗೆ ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸುವ ಅವಕಾಶ ಲಭಿಸಲಿಲ್ಲ. ಐಪಿಎಲ್‌ನಲ್ಲಿ ಅವರು ಚೆನ್ನೈ ಸೂಪರ್ ಕಿಂಗ್ಸ್ ತಂಡದ ಪರ ಆಡಿದ್ದಾರೆ. ಹರಿಯಾಣ ಪೊಲೀಸ್ ಇಲಾಖೆಯಲ್ಲಿ ಡಿಎಸ್‌ಪಿಯಾಗಿ ಕೆಲಸ ಆರಂಭಿಸಿದ ಬಳಿಕ ಕ್ರಿಕೆಟ್‌ನಿಂದ ದೂರವಾಗಿದ್ದರು.

ಹಾಕಿ: ವಿ.ರಾಜಾ ಕ್ಲಬ್ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘಟಿತ ಆಟವಾಡಿದ ವಿ.ರಾಜಾ ಹಾಕಿ ಕ್ಲಬ್ ತಂಡದವರು ಕೆಎಸ್‌ಎಚ್‌ಎ ಸೂಪರ್ ಡಿವಿಷನ್ ಹಾಕಿ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿದರು.

ಶುಕ್ರವಾರ ನಡೆದ ಪಂದ್ಯದಲ್ಲಿ ವಿ.ರಾಜಾ 5–0ಯಿಂದ ಜೂಡ್ ಫೆಲಿಕ್ಸ್ ಹಾಕಿ ಅಕಾಡೆಮಿ ಎದುರು ಗೆದ್ದಿತು. ವಿಜೇತ ತಂಡದ ಪರ ದೀಪಕ್ (7, 13ನೇ ನಿಮಿಷ) ಎರಡು ಗೋಲು ದಾಖಲಿಸಿದರು. ಪ್ರವೀಣ್ ಕುಮಾರ್ (29ನೇ ನಿ.), ದೀಪಕ್ ಕುಮಾರ್ (41ನೇ ನಿ.) ಮತ್ತು ರಾಧೇಶ್ಯಾಮ್ (44ನೇ ನಿ.) ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ರೇನ್‌ಬೊ ಹಾಕಿ ಕ್ಲಬ್ 2–1ರಿಂದ ಮೆಟ್ರೊ ಹಾಕಿ ಕ್ಲಬ್ ವಿರುದ್ಧ ಗೆದ್ದಿತು. ರೇನ್‌ಬೊ ತಂಡಕ್ಕಾಗಿ ಕಾರ್ತಿಕ್ ಎಂ. (24, 29ನೇ ನಿ.) ಗೋಲು ದಾಖಲಿಸಿದರು. ಮೆಟ್ರೊ ತಂಡಕ್ಕಾಗಿ ನಾಗಾರ್ಜುನ (20ನೇ ನಿ.) ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದರು.

ಶನಿವಾರ ನಡೆಯುವ ಪಂದ್ಯಗಳಲ್ಲಿ 5ಸಿ ಸ್ಪೋರ್ಟ್ಸ್ ಕ್ಲಬ್–ರೇನ್ ಬೊ ಹಾಕಿ ಕ್ಲಬ್ ಮತ್ತು ಶ್ಲೋಕ್ ಹಾಕಿ ಕ್ಲಬ್–ವಿ.ರಾಜಾ ಹಾಕಿ ಕ್ಲಬ್ ಸೆಣಸಲಿವೆ.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ (ರಿ.)
ಮೂಡುಬಿದಿರೆ, - 574 227 ಮಂಗಳೂರು, ದಕ್ಷಿಣ ಕನ್ನಡ
ಕ್ರೀಡಾ ಕ್ಷೇತ್ರದಲ್ಲಿ ಉಚಿತ ಶಿಕ್ಷಣದ ಅವಕಾಶ
2023-24ನೇ ಸಾಲಿನಲ್ಲಿ ಆಳ್ವಾಸ್ ಪ್ರೌಢಶಾಲೆ (ಕನ್ನಡ ಮತ್ತು ಇಂಗ್ಲೀಷ ಮಾಧ್ಯಮ) ಪದವಿಪೂರ್ವ, ಪದವಿ ಹಾಗೂ ಉನ್ನತ ವ್ಯಾಸಂಗದ ತರಗತಿಗಳಿಗೆ ದಾಖಲಾತಿ ಬಯಸುವ ಕ್ರೀಡಾ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆ ಮಾಡಿರುವ ಹಾಗೂ ಮಾಡಬಯಸುವ ಕ್ರೀಡಾಪಟುಗಳು ಕೂಡಲೇ ತಮ್ಮ ಕ್ರೀಡಾ ಸಾಧನೆ ದಾಖಲೆ, ಪೂರ್ಣ ವಿಳಾಸ, ದೂರವಾಣಿ ಸಂಖ್ಯೆ, ಭಾವಚಿತ್ರ ಸಹಿತ ತಮ್ಮ ಸ್ವವಿವರಗಳನ್ನು ಅಧ್ಯಕ್ಷರು, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ (ರಿ.) ಮೂಡಬಿದಿರೆ, ದಕ್ಷಿಣ ಕನ್ನಡ - 574 227 ಈ ವಿಳಾಸಕ್ಕೆ
ದಿನಾಂಕ 28-02-2023ರೊಳಗೆ ಅರ್ಜಿ ಸಲ್ಲಿಸುವಂತೆ ವಿನಂತಿಸಲಾಗಿದೆ.
ಆಯ್ಕೆ ನಡೆಯುವ ಕ್ರೀಡೆಗಳು
ಪ್ರಾಥಮಿಕ ಮತ್ತು ಪ್ರೌಢಶಾಲೆ (ಕನ್ನಡ ಮತ್ತು ಇಂಗ್ಲೀಷ ಮಾಧ್ಯಮ) ಅಥ್ಲೆಟಿಕ್ಸ್
ಪಿಯುಸಿ: ಅಥ್ಲೆಟಿಕ್ಸ್, ಕಬಡ್ಡಿ, ಖೋ ಖೋ, ವಾಲಿಬಾಲ್, ಬಾಲ್ ಬ್ಯಾಡ್ಮಿಂಟನ್
ಪದವಿ ಮತ್ತು ಸ್ನಾತಕೋತ್ತರ: ಅಥ್ಲೆಟಿಕ್ಸ್, ಕಬಡ್ಡಿ, ಖೋ ಖೋ, ಕುಸ್ತಿ, ವೈಟ್ ಲಿಫ್ಟಿಂಗ್, ವಾಲಿಬಾಲ್, ಹ್ಯಾಂಡ್ ಬಾಲ್, ಸಾಫ್ಟ್ ಬಾಲ್, ಥ್ರೋಬಾಲ್, ಬಾಲ್ ಬ್ಯಾಡ್ಮಿಂಟನ್
ಡಾ| ಎಂ. ಮೋಹನ್ ಆಳ್ವ
9620387666 | 8073037640 | 9742109257

ಕ್ಯಾನ್ಸರ್: ಭಯ ಬೇಡ ಜಾಗೃತರಾಗಿರಿ

ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸಲು ಮತ್ತು ಅದರ ತಡೆಗಟ್ಟುವಿಕೆಯನ್ನು ಉತ್ತೇಜಿಸಲು, ಪ್ರತಿ ವರ್ಷ ಫೆ 4 ರಂದು ವಿಶ್ವ ಕ್ಯಾನ್ಸರ್ ಜಾಗೃತಿ ದಿನ ಆಚರಿಸಲಾಗುತ್ತದೆ.

ಡಾ. ಸ್ಮಿತಾ ಜೆ.ಡಿ



ವಿಶ್ವ ಕ್ಯಾನ್ಸರ್ ಜಾಗೃತಿ ದಿನ

ಬದಲಾದ ಜೀವನಶೈಲಿ, ಮನೋಧೋರಣೆಗಳು ಮನುಷ್ಯನನ್ನು ಸ್ವಸ್ಥ ಬದುಕಿನಿಂದ ದೂರ ಉಳಿಯುವಂತೆ ಮಾಡುತ್ತವೆ. ಜೊತೆಗೆ ಅತಿಯಾಗಿ ಬಳಕೆಯಾಗುತ್ತಿರುವ ಆಹಾರ ಸಂರಕ್ಷಕಗಳು, ರಾಸಾಯನಿಕ ಪದಾರ್ಥಗಳು, ಕೃಷಿಯಲ್ಲಿನ ರಸಗೊಬ್ಬರ, ಕೀಟನಾಶಕಗಳು.. ಇವು ಮನುಷ್ಯರಲ್ಲಿ ಕ್ಯಾನ್ಸರ್‌ನಂತಹ ಮಾರಣಾಂತಿಕ ಆರೋಗ್ಯ ಸಮಸ್ಯೆಯನ್ನು ತಂದೊಡ್ಡಲು ಕಾರಣವಾಗುತ್ತವೆ.

ಕ್ಯಾನ್ಸರ್ ಹರಡಲು ಕಾರಣಗಳೇನು?

ಅತಿಯಾದ ತಂಬಾಕು ಸೇವನೆ, ಮದ್ಯಪಾನದ ವ್ಯಸನ, ಸೂರ್ಯನ ನೇರಳಾತೀತ ಕಿರಣಗಳಿಗೆ(ಯು. ವಿ ರೇಸ್) ಅತಿಯಾಗಿ ಶರೀರವನ್ನು ಒಡ್ಡುವುದು, ವಿಕಿರಣಗಳ ಬಳಕೆ, ದೇಹದಲ್ಲಿ ರೋಗ ನಿರೋಧಕ ಶಕ್ತಿಯ ಕೊರತೆ, ಅನುವಂಶಿಕತೆ.. ಇಂಥ ಹಲವು ಅಂಶಗಳು ಕ್ಯಾನ್ಸರ್ ಹರಡಲು ಕಾರಣವಾಗಬಹುದು.

ಅಧ್ಯಯನಗಳ ಪ್ರಕಾರ 2022ನೇ ಸಾಲಿನಲ್ಲಿ ದೇಶದಾದ್ಯಂತ 14.6 ಲಕ್ಷ ಮಂದಿಯಲ್ಲಿ ಕ್ಯಾನ್ಸರ್ ರೋಗ ಪತ್ತೆಯಾಗಿದೆ ಎಂದು ನ್ಯಾಷನಲ್ ಕ್ಯಾನ್ಸರ್ ರಿಜಿಸ್ಟ್ರಿ (ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್) ತನ್ನ ವರದಿಯಲ್ಲಿ ತಿಳಿಸಿದೆ. ಕ್ಯಾನ್ಸರ್‌ನಿಂದಾಗುವ ಮರಣ ಪ್ರಮಾಣ 2022ರಲ್ಲಿ 8.08 ಲಕ್ಷದಷ್ಟಿದ್ದು, 2025ರ ವೇಳೆ ಈ ಪ್ರಮಾಣ 15.7 ಲಕ್ಷಕ್ಕೆ ಏರಲಿದೆ ಎಂದು ಅಂದಾಜಿಸಿದೆ. ಪ್ರತಿ 9 ಭಾರತೀಯರಲ್ಲಿ ಒಬ್ಬರಿಗೆ ಜೀವಿತಾವಧಿಯಲ್ಲಿ ಕ್ಯಾನ್ಸರ್ ಕಾಣಿಸಿಕೊಳ್ಳುತ್ತದೆ. 68 ಪುರುಷರಲ್ಲಿ ಒಬ್ಬರಿಗೆ ಶ್ವಾಸಕೋಶದ ಕ್ಯಾನ್ಸರ್ ಮತ್ತು 29 ಸ್ತ್ರೀಯರಲ್ಲಿ ಒಬ್ಬರಿಗೆ ಸ್ತನ ಕ್ಯಾನ್ಸರ್ ಬಾಧಿಸುತ್ತದೆ ಎಂದು ಐಸಿಎಂಆರ್ ಅಧ್ಯಯನಗಳು ತಿಳಿಸಿವೆ.

ಕ್ಯಾನ್ಸರ್ ತಡೆ ಹೇಗೆ ?

- ಮೊದಲನೆಯದಾಗಿ ಕ್ಯಾನ್ಸರ್ ತಪಾಸಣೆ (SCREENING) ಮಾಡಿಸಿಕೊಳ್ಳಬೇಕು. ಯಾವುದೇ ಕ್ಯಾನ್ಸರ್ ಇರಲಿ, ಮೊದಲಿಗೆ ರೋಗ ಪತ್ತೆ ಮಾಡಿ, ತ್ವರಿತಗತಿಯಲ್ಲಿ ಚಿಕಿತ್ಸೆಗೆ ಒಳಗಾಗಬೇಕು.
- ಜೀವನ ಶೈಲಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕು. ಬೀಡಿ, ಸಿಗರೇಟು. ಹುಕ್ಕ ಸೇದುವುದು ಸೇರಿದಂತೆ ಎಲ್ಲ ರೀತಿಯ ತಂಬಾಕು ಸೇವನೆ (ಅಭ್ಯಾಸವಿದ್ದರೆ) ನಿಲ್ಲಿಸಬೇಕು. ಸರ್ಕಾರ, ಇವುಗಳ ಬಳಕೆಯಿಂದ ದೂರ ಉಳಿಯುವಂತೆ ಕಾನೂನು ಕ್ರಮಗಳನ್ನು ಅನುಷ್ಠಾನ ಮಾಡುವುದು ಅವಶ್ಯಕ. ಜನರಲ್ಲಿ ಈ ಬಗ್ಗೆ ಜಾಗೃತಿಯನ್ನೂ ಮೂಡಿಸಬೇಕು.
- ನಿತ್ಯ 30 ರಿಂದ 45 ನಿಮಿಷಗಳ ಕಾಲ ಲಘು ವ್ಯಾಯಾಮ ಮಾಡಬೇಕು. ಯೋಗ, ನಡಿಗೆ, ಏರೋಬಿಕ್ಸ್‌ನಂತಹ ಚಟುವಟಿಕೆಗಳು ವ್ಯಾಯಾಮದ ಭಾಗವಾಗಿರಬೇಕು.
- ಆಹಾರದಲ್ಲಿ ಸಂರಕ್ಷಕಗಳು(ಪ್ರಿಸರ್ವೆಟಿವ್), ರಾಸಾಯನಿಕಗಳು, ಕೃತಕ ಬಣ್ಣಗಳು, ಸೋಡ, ಅತಿಯಾದ ಸಕ್ಕರೆಯುಕ್ತ ಆಹಾರ ಪದಾರ್ಥಗಳು, ರುಚಿಯನ್ನು ಹೆಚ್ಚಿಸಬಲ್ಲ ರಾಸಾಯನಿಕಗಳ ಬಳಕೆಯನ್ನು ಮಿತಿಗೊಳಿಸಬೇಕು.
- ಸಾವಯವ ಕೃಷಿ ಉತ್ಪನ್ನಗಳನ್ನು ಬಳಸಬಹುದು. ಆಹಾರದಲ್ಲಿ ನವಣೆ, ಸಾಮೆ, ಸಜ್ಜೆಯಂತಹ ಸಿರಿಧಾನ್ಯಗಳ ಬಳಕೆ ಒಳ್ಳೆಯದು.
- ಊಟ, ಉಪಾಹಾರ ಕೊಂಡೊಯ್ಯುವ ಡಬ್ಬಿಗಳು ಪ್ಲಾಸ್ಟಿಕ್ ಮುಕ್ತವಾಗಿರಲಿ. ಊಟದ ತಟ್ಟೆ, ಲೋಟಗಳನ್ನೂ ಆ ಪಟ್ಟಿಗೆ ಸೇರಿಸಿಕೊಳ್ಳಿ.
- ರೋಗನಿರೋಧಕ ಶಕ್ತಿ ಹೆಚ್ಚಿಸುವ ಸಿಟ್ರಿಕ್ ಅಂಶವಿರುವ (ಹುಳಿಯುಕ್ತ ಹಣ್ಣುಗಳು), ಹಣ್ಣು, ನಾರಿನಂಶವಿರುವ ತರಕಾರಿಗಳು, ಸೊಪ್ಪು, ಹಾಲಿನ ಉತ್ಪನ್ನಗಳು, ಸೀಫುಡ್ ಹೆಚ್ಚಾಗಿ ಬಳಸಿ. ಇದರಿಂದ ದೇಹದಲ್ಲಿ 'ಫ್ರೀ ರಾಡಿಕಲ್ಸ್' ಅಂಶವನ್ನು ಕಡಿಮೆಯಾಗಿ, ಕ್ಯಾನ್ಸರ್ ಹರಡುವ ಜೀವಕೋಶಗಳ ಬೆಳವಣಿಗೆಯನ್ನು ಕುಂದಿಸಬಹುದು.
- ಶರೀರದ ಯಾವುದೇ ಭಾಗದಲ್ಲಿ ದೀರ್ಘಕಾಲ ಗಂಟು, ಮಚ್ಚೆಗಳು ಉಳಿದುಕೊಂಡಿದ್ದು, ಅವು ಯಾವುದೇ ಚಿಕಿತ್ಸೆಗಳಿಂದ ನಿವಾರಣೆಯಾಗದಿದ್ದರೆ ವೈದ್ಯರನ್ನು ಸಂಪರ್ಕಿಸಿ, ಜೊತೆಗೆ, ಕಾರಣವಿಲ್ಲದೆ ತೂಕ ಕಡಿಮೆಯಾಗುತ್ತಿದ್ದರೆ, ಪದೇ ಪದೇ ಸೋಂಕುಗಳಿಗೆ ಒಳಗಾಗುತ್ತಿದ್ದರೆ, ಕಡ್ಡಾಯವಾಗಿ ವೈದ್ಯರ ಬಳಿ ತಪಾಸಣೆಗೆ ಹೋಗುವುದು ಅತ್ಯವಶ್ಯಕ.

ಚಿಕಿತ್ಸೆಗಳಿವೆ

ಕ್ಯಾನ್ಸರ್‌ನಂತಹ ಆರೋಗ್ಯ ಸಮಸ್ಯೆಗೆ ಕಿಮೋಥೆರಪಿ, ಇಮ್ಯೂನೋತೆರಪಿ, ವಿಕಿರಣಗಳ ಚಿಕಿತ್ಸೆ, ಟಾರ್ಗೆಟೆಡ್ ತೆರಪಿ, ಸ್ಟೆಮ್ ಸೆಲ್ ಟ್ರಾನ್ಸ್‌ಪ್ಲಾಂಟ್ ಚಿಕಿತ್ಸೆಗಳು ಲಭ್ಯವಿವೆ. ಇದರಿಂದ ರೋಗಿಗೆ ಗುಣಮಟ್ಟದ ಜೀವನವನ್ನು ಕೊಡಲು ಸಾಧ್ಯವಿದೆ. ಆದ್ದರಿಂದ ಆರಂಭಿಕ ಹಂತದಲ್ಲಿ ರೋಗ ಪತ್ತೆ ಮಾಡಿ ಚಿಕಿತ್ಸೆಗೆ ಒಳಗಾಗುವುದು ಬಹಳ ಮುಖ್ಯ.

(ಲೇಖಕರು: ಓರಲ್ ಮೆಡಿಸಿನ್ ಹಾಗೂ ರೇಡಿಯಾಲಜಿ ತಜ್ಞರು)

ಕ್ರೀಡೆ

ಅಶ್ವ ಸವಾರಿಯ 'ಶ್ಲೋಕ'

ಬಸವರಾಜ ದಳವಾಯಿ

ಶ್ಲೋಕ್ ಜುಂಜುನ್‌ವಾಲಾ (ಎಡ)

ಮಕ್ಕಳಿಗೆ ಕುದುರೆಯೆಂದರೆ ಅಪಾರ ಆಕರ್ಷಣೆ ಇರುವುದು ಸಹಜ. ಆದರೆ ಈ ಹುಡುಗ ಶ್ಲೋಕ್ ಜುಂಜುನ್‌ವಾಲಾಗೆ ಅಶ್ವ, ಆಕರ್ಷಣೆಯಷ್ಟೇ ಅಲ್ಲ, ಜೀವನವೇ ಆಗಿಹೋಗಿದೆ. ಅದಕ್ಕಾಗಿಯೇ ಕುದುರೆ ಸವಾರಿಯಲ್ಲಿ ಪರಿಣತರಾಗುತ್ತಿದ್ದಾರೆ. ಮುಂಬೈನಿಂದ ಬೆಂಗಳೂರಿಗೆ ಬಂದು, ಇಲ್ಲಿನ ಎಂಬೆಸಿ ಇಂಟರ್‌ನ್ಯಾಷನಲ್ ರೈಡಿಂಗ್ ಸ್ಕೂಲ್‌ನಲ್ಲಿ ತರಬೇತಿ ಪಡೆಯುತ್ತಿರುವ ಶ್ಲೋಕ್ ಈಗ ಈಕ್ವೆಸ್ಟ್ರಿಯನ್‌ನಲ್ಲಿ ಹೆಜ್ಜೆಗುರುತು ಮೂಡಿಸುತ್ತಿದ್ದಾರೆ.

ಶ್ಲೋಕ್‌ಗೆ ಒಂಬತ್ತನೇ ವಯಸ್ಸಿನಲ್ಲಿಯೇ ಅಶ್ವ ಸವಾರಿಯಲ್ಲಿ ಆಸಕ್ತಿ ಬೆಳೆಯಿತು. ಪುಣೆಯಲ್ಲಿ ನಡೆದ ಶಿಬಿರಕ್ಕೆ ತೆರಳಿದ್ದಾಗ ಆಸೆಗೆ ಇನ್ನಷ್ಟು ರೆಕ್ಕೆ ಮೂಡಿತು. ತಂದೆ-ತಾಯಿಯ ಪ್ರೋತ್ಸಾಹವೂ ಪ್ರತಿಭೆಗೆ ನೀರೆರೆಯಿತು. 17 ವರ್ಷದ ಶ್ಲೋಕ್ ಅವರಿಗೆ ಮುಂಬೈನಲ್ಲಿದ್ದಾಗ ಹಲ್‌ಚಲ್ ನೆಚ್ಚಿನ ಅಶ್ವವಾಗಿತ್ತು. ಬೆಂಗಳೂರಿನಲ್ಲಿ ಇಗ್ನೇಶಿಯಸ್ ಹೆಸರಿನ ಕುದುರೆ ಸವಾರಿ ಮಾಡುತ್ತಾರೆ. ಎಂಬೆಸಿ ಇಂಟರ್‌ನ್ಯಾಷನಲ್ ರೈಡಿಂಗ್ ಸ್ಕೂಲ್‌ನಲ್ಲಿ ಆಶಿಶ್ ಲಿಮಯೆ ಮತ್ತು ಸಂಯೋಗಿತಾ ಲಿಮಯೆ ಅವರ ಬಳಿ ತರಬೇತಿ ಪಡೆಯುತ್ತಿರುವ ಶ್ಲೋಕ್, ಈ ಹಿಂದೆ ಬಾಬಿನ್ ಅವರ ಮಾರ್ಗದರ್ಶನದಲ್ಲಿ ಪಳಗಿದವರು.

ಸ್ಪರ್ಧೆಗಳಲ್ಲಿ ಈಗ ಎಂಬೆಸಿ ತಂಡವನ್ನು ಪ್ರತಿನಿಧಿಸುತ್ತಾರೆ. ಇತ್ತೀಚೆಗೆ ಭೋಪಾಲ್‌ನಲ್ಲಿ ನಡೆದ ರಾಷ್ಟ್ರೀಯ ಜೂನಿಯರ್ ಈಕ್ವೆಸ್ಟ್ರಿಯನ್ ಚಾಂಪಿಯನ್‌ಷಿಪ್‌ನಲ್ಲಿ(ಜೆಎನ್‌ಇಸಿ) ಸ್ಪರ್ಧಿಸಿದ್ದರು. 21 ವರ್ಷದೊಳಗಿನವರ ವಿಭಾಗದಲ್ಲಿ ಕಣಕ್ಕಿಳಿದಿದ್ದ ಶ್ಲೋಕ್ ವೈಯಕ್ತಿಕ ವಿಭಾಗದಲ್ಲಿ ಎರಡು ಚಿನ್ನ, ಒಂದು ಬೆಳ್ಳಿ ಮತ್ತು ತಂಡ ವಿಭಾಗದಲ್ಲಿ ಎರಡು ಚಿನ್ನದ ಪದಕ ಜಯಿಸಿದ್ದರು. ಕೂಟದಲ್ಲಿ ನಾಲ್ಕನೇ ಬಾರಿ ಸ್ಪರ್ಧಿಸಿದ್ದ ಅವರಿಗೆ ಶ್ರೇಷ್ಠ ರೈಡರ್ ಪುರಸ್ಕಾರ ಒಲಿದಿತ್ತು.

'ಭೋಪಾಲ್‌ನ ಪರಿಸರವೂ ಮನಸೆಳೆಯುವಂತಿತ್ತು. ನನಗಿಂತ ಅನುಭವಿ ಸ್ಪರ್ಧಿಗಳಿದ್ದ ಸ್ಪರ್ಧೆಯಲ್ಲಿ ಹೆಚ್ಚಿನ ಕೌಶಲಗಳನ್ನು ಕಲಿಯಲೂ ಅನುಕೂಲವಾಯಿತು. ವೈಯಕ್ತಿಕ ವಿಭಾಗದಲ್ಲಿ ನಾನು ಅಬ್ರಕಡಬ್ರ ಅಶ್ವ ಸವಾರಿ ಮಾಡಿದ್ದೆ. ಸಾಧ್ಯವಾದಷ್ಟು ಶ್ರೇಷ್ಠ ಸಾಮರ್ಥ್ಯ ತೋರಿದ್ದು ಸಂಭ್ರಮ ತಂದ ಗಳಿಗೆ' ಎಂದು ಶ್ಲೋಕ್ ನೆನಪಿಸಿಕೊಳ್ಳುತ್ತಾರೆ.

2021ರಲ್ಲಿ ಎಂಬೆಸಿ ಪ್ರೀಮಿಯರ್ ಲೀಗ್‌ನಲ್ಲಿ ಶ್ರೇಷ್ಠ ರೈಡರ್, 2021ರ ಜೆಎನ್‌ಇಸಿ ಜೂನಿಯರ್ ವಿಭಾಗದಲ್ಲಿ ಶ್ರೇಷ್ಠ ಅಶ್ವ ಸವಾರ ಪ್ರಶಸ್ತಿಗಳು ಅವರಿಗೆ ಒಲಿದಿದ್ದವು. ನೆದರ್ಲೆಂಡ್ಸ್‌ನ ಪೀಲ್‌ಬರ್ಜೆನ್ ಸಿಎಸ್‌ಐ 1 ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿ ನಾಲ್ಕನೇ ಸ್ಥಾನ ಗಳಿಸಿದ್ದು ಅವರ ಪ್ರಮುಖ ಸಾಧನೆಗಳಲ್ಲೊಂದು.

ಶೋ ಜಂಪಿಂಗ್, ಡ್ರೆಸಾಜ್ ಮತ್ತು ಕ್ರಾಸ್ ಕಂಟ್ರಿ ವಿಭಾಗಗಳನ್ನು ಒಳಗೊಂಡ ಇವೆಂಟಿಂಗ್ ಸ್ಪರ್ಧೆಯಲ್ಲಿ ದೇಶವನ್ನು ಪ್ರತಿನಿಧಿಸುವುದು ಶ್ಲೋಕ್ ಅವರ ಪ್ರಮುಖ ಕನಸು.

ಮಾರ್ಚ್‌ನಲ್ಲಿ 'ಟಿ.ವಿ ಕ್ರಿಕೆಟ್'

ಮಾರ್ಚ್‌ನಲ್ಲಿ ಅದ್ದೂರಿಯಾಗಿ ನಡೆಯಲಿದೆ ಟೆಲಿವಿಷನ್ ಪ್ರೀಮಿಯರ್ ಲೀಗ್. ಹಿರಿಯ ಕಲಾವಿದರು, ತಂತ್ರಜ್ಞರ ಬದುಕಿಗೆ ಆಸರೆಯಾಗುವ ಉದ್ದೇಶದಿಂದ ಎನ್-1 ಕ್ರಿಕೆಟ್ ಅಕಾಡೆಮಿಯ ನೇತೃತ್ವದಲ್ಲಿ ಈ ಪಂದ್ಯ ನಡೆಯಲಿದೆ. ಇತ್ತೀಚೆಗೆ ಪಂದ್ಯದ ಲೋಗೊ ಬಿಡುಗಡೆ ಮಾಡಲಾಯಿತು.

ಲೀಗ್ ಆಯೋಜಕ ಸುನೀಲ್ ಕುಮಾರ್ ಅವರು ಮಾತನಾಡಿ, 'ಕಳೆದ ಸೀಸನ್ ನಂತೆ ಈ ಸೀಸನ್‌ನಲ್ಲೂ ಎಲ್ಲಾ ಮಾಲೀಕರು ನಮ್ಮೊಂದಿಗೆ ಸಹಕರಿಸಿದ್ದಾರೆ. ಫೆ. 4ರಂದು ಆಟಗಾರರ ಹರಾಜು ನಡೆಯಲಿದೆ. ಆ ಬಳಿಕ ಜೆರ್ಸಿ ಬಿಡುಗಡೆ ನಡೆಯಲಿದೆ. 4 ದಿನ ಪಂದ್ಯಾವಳಿ ನಡೆಯುತ್ತದೆ. ಫೈನಲ್ ಪಂದ್ಯ ಹೊನಲು ಬೆಳಕಿನಲ್ಲಿ ನಡೆಯಲಿದೆ. ಗೆದ್ದ ತಂಡಕ್ಕೆ 4 ಲಕ್ಷ ನಗದು ಬಹುಮಾನ ಹಾಗೂ ಮ್ಯಾನ್ ಆಫ್ ದಿ ಸಿರೀಸ್ ಗೆ ಬೈಕ್ ಇರುತ್ತದೆ. ಪ್ರತಿ ಪಂದ್ಯಕ್ಕೂ ಆರೇಂಜ್ ಕ್ಯಾಪ್, ಪರ್ಪಲ್ ಕ್ಯಾಪ್ ಪಡೆದವರಿಗೆ ನಗದು ಬಹುಮಾನ ಕೂಡ ಇರುತ್ತದೆ. ಪಂದ್ಯದ ದಿನಾಂಕ ಶೀಘ್ರ ತಿಳಿಸಲಾಗುವುದು' ಎಂದರು.

'ಪ್ರತಿ ತಂಡದಲ್ಲೂ ಇಬ್ಬರು ಪಂದ್ಯ ರಾಯಭಾರಿಗಳಿರಲಿದ್ದಾರೆ. ರಿವ್ಯೂ ವ್ಯವಸ್ಥೆ, ಎಲ್ ಬಿಡಬ್ಲ್ಯು ಇರುತ್ತದೆ. 12 ಓವರ್‌ನ ಮ್ಯಾಚ್ ಆಗಿರುತ್ತದೆ. ಅಂತರರಾಷ್ಟ್ರೀಯಮಟ್ಟದಲ್ಲಿ ಹೇಗಿರುತ್ತದೆಯೋ ಹಾಗೆಯೇ ನಮ್ಮಲ್ಲೂ ಬಹುತೇಕ ಎಲ್ಲಾ ವ್ಯವಸ್ಥೆಗಳಿರುತ್ತವೆ' ಎಂದರು.

'ಎಂ.ಎಸ್.ಪಾಳ್ಯದ ಬಳಿಯಿರುವ ಅಶೋಕ್ ಇಂಟರ್ ನ್ಯಾಷನಲ್ ಮೈದಾನದಲ್ಲಿ ಪಂದ್ಯಗಳು ನಡೆಯುತ್ತದೆ. ಒಂದು ತಂಡದಲ್ಲಿ 13 ಸದಸ್ಯರಿರುತ್ತಾರೆ. ಪಂದ್ಯಗಳ ಆರಂಭಕ್ಕೂ ಮುನ್ನ ಅಭ್ಯಾಸ ಪಂದ್ಯಗಳು ಇರುತ್ತದೆ' ಎಂದರು.

ಫೈನಲ್ ದಿನ ಅಪ್ಪು ಅವರ ಹಾಡುಗಳ ಕಾರ್ಯಕ್ರಮವಿರಲಿದೆ. ಅದೇ ದಿನ ನಾವು ಈ ಬಾರಿ ಯಾವ ಕಲಾವಿದರಿಗೆ ಆರ್ಥಿಕವಾಗಿ ನೆರವಾಗುತ್ತೇವೆ ಎನ್ನುವುದನ್ನು ಹೇಳುತ್ತೇವೆ ಎಂದರು ಸುನಿಲ್ ಕುಮಾರ್.

ಇಂದು 'ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು'

ಕಥಾ ರಂಗಪ್ರಯೋಗ

ಮೈಸೂರಿನ ರಂಗಾಂತರಂಗ ಹಾಗೂ ಡಾ. ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನದ ಸಹಯೋಗದೊಂದಿಗೆ ಶನಿವಾರ ಸಂಜೆ ಜೆ.ಪಿ.ನಗರದ ರಂಗಶಂಕರದಲ್ಲಿ ಡಾ. ಬೆಸಗರಹಳ್ಳಿ ರಾಮಣ್ಣ ಅವರ ಕಥೆಗಳ ಆಧರಿತ 'ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು'- ಕಥಾ ರಂಪ್ರಯೋಗ ಆಯೋಜಿಸಲಾಗಿದೆ.

ಪರಿಕಲ್ಪನೆ/ರಂಗರೂಪ/ನಿರ್ದೇಶನ: ಸಿ.ಬಸವಲಿಂಗಯ್ಯ, ಹಾಡುಗಳು: ಡಾ. ಕೆ.ವೈ.ನಾರಾಯಣಸ್ವಾಮಿ, ರಂಗವಿನ್ಯಾಸ: ಎಚ್.ಕೆ.ದ್ವಾರಕಾನಾಥ್ ರಂಗಾಯಣ.

ಮೊದಲ ಪ್ರದರ್ಶನ: ಮಧ್ಯಾಹ್ನ 3.30ಕ್ಕೆ ಎರಡನೇ ಪ್ರದರ್ಶನ ಸಂಜೆ 7.30ಕ್ಕೆ ಟಿಕೆಟ್ ದರ: ₹150 ಹೆಚ್ಚಿನ ಮಾಹಿತಿಗೆ ಕೀರ್ತಿರಾಜ್, 9739919004 ಸಂಪರ್ಕಿಸಬಹುದು.

ನಾಳೆ ರಾಗಿಕಣ ಸಂತೆಯಲ್ಲಿ 'ಮೂರು ಮಗ್ಗುಲ ಮುಳ್ಳು' ನಾಟಕ

ನಗರದ ರಾಗಿಕಣ ಸಂತೆಯಲ್ಲಿ ಭಾನುವಾರ (ಜ.5),ಬೆಳಿಗ್ಗೆ 11ಕ್ಕೆ ಬೆಂಗಳೂರು ಸಮುದಾಯ ತಂಡದಿಂದ 'ಮೂರು ಮಗ್ಗುಲ ಮುಳ್ಳು' ಬೀದಿ ನಾಟಕ ಪ್ರದರ್ಶನವಿದೆ. ಕೇಂದ್ರ ಸರ್ಕಾರ 2020ರಲ್ಲಿ ಜಾರಿಗೆ ತಂದ ಮೂರು ಕೃಷಿ ಕಾಯ್ದೆಗಳು ಮತ್ತು ರೈತ ಸಮುದಾಯದ ಸ್ಥಿತಿಗತಿ ಕುರಿತು ಪ್ರಸ್ತುತಪಡಿಸುವುದೇ ನಾಟಕದ ಕಥಾವಸ್ತು. ಡಾ. ಬಿ.ಆರ್. ಮಂಜುನಾಥ್ ರಚಿಸಿರುವ ಈ ನಾಟಕವನ್ನು ಯೋಗೇಶ್ ಮಾಸ್ಟರ್ ನಿರ್ದೇಶಿಸಿದ್ದಾರೆ.

ಕುತೂಹಲ ಹೆಚ್ಚಿಸಿದ ಹೊಸ ಆ್ಯಪಲ್ ಐಫೋನ್ 15 ಪ್ರೊ

ತಂತ್ರಜ್ಞಾನ

ಪ್ರೀಮಿಯಂ ಸ್ಮಾರ್ಟ್‌ಫೋನ್ ಬ್ರ್ಯಾಂಡ್ ಆ್ಯಪಲ್, ಈ ವರ್ಷ ಐಫೋನ್ 15 ಸರಣಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಿದೆ. ಹೊಸ ಐಫೋನ್ ಸರಣಿ ಕುರಿತಂತೆ ಈಗಾಗಲೇ ಟೆಕ್ ಮಾರುಕಟ್ಟೆಯಲ್ಲಿ ಕುತೂಹಲ ಹೆಚ್ಚಿದೆ.

ಆ್ಯಪಲ್, ನೂತನ ಸರಣಿಯಲ್ಲಿ ನಾಲ್ಕು ಮಾದರಿಗಳನ್ನು ಬಿಡುಗಡೆ ಮಾಡುವ ನಿರೀಕ್ಷೆಯಿದೆ. ಅದರಲ್ಲೂ ಪ್ರೊ ಮತ್ತು ಪ್ರೊ ಮ್ಯಾಕ್ಸ್ ಆವೃತ್ತಿಗೆ ಹೆಚ್ಚಿನ ಬೇಡಿಕೆ ಇರುತ್ತದೆ.

ಹೀಗಾಗಿ, ಆ್ಯಪಲ್ 15 ಪ್ರೊ ಆವೃತ್ತಿಯ ವಿನ್ಯಾಸದಲ್ಲಿ ಹೆಚ್ಚಿನ ಬದಲಾವಣೆ ಮಾಡಲು ಮುಂದಾಗಿದೆ. ತೆಳುವಾದ ಹೊರವಿನ್ಯಾಸ, ಗರಿಷ್ಠ ಡಿಸ್‌ಪ್ಲೇ ಮತ್ತು ಕಡಿಮೆ ಬ್ಯಾಝೆಲ್ ಫ್ರೇಮ್ ಹೊಸ ವಿನ್ಯಾಸದಲ್ಲಿ ಗಮನ ಸೆಳೆಯಲಿದೆ.

ಮೂಲಗಳ ಪ್ರಕಾರ, ಆ್ಯಪಲ್ ಈ ವರ್ಷದ ಸೆಪ್ಟೆಂಬರ್‌ನಲ್ಲಿ ಹೊಸ ಐಫೋನ್ 15 ಸರಣಿ ಬಿಡುಗಡೆ ಮಾಡಲಿದೆ. ಕಳೆದ ಬಾರಿ ಬಿಡುಗಡೆಯಾಗಿರುವ ಐಫೋನ್ 14 ಪ್ರೊ ಮತ್ತು 14 ಪ್ರೊ ಮ್ಯಾಕ್ಸ್‌ಗೆ ಹೆಚ್ಚಿನ ಬೇಡಿಕೆ ಬಂದಿದ್ದು, ಜನಪ್ರಿಯತೆ ಹೆಚ್ಚಿರುವ ಹಿನ್ನೆಲೆಯಲ್ಲಿ, ಆ್ಯಪಲ್ ಈ ಬಾರಿ 15 ಪ್ರೊ ವಿನ್ಯಾಸ ಮತ್ತು ಕ್ಯಾಮೆರಾ ವ್ಯವಸ್ಥೆಯಲ್ಲಿ ಹೆಚ್ಚಿನ ವೈಶಿಷ್ಟ್ಯ ಪರಿಚಯಿಸಲು ಸಿದ್ಧತೆ ನಡೆಸಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ತೂಗು ತೋಟವ ಮಾಡಿ..!

ಕೈತೋಟ

'ಜಾಗ ಕಿರಿದು, ಆದರೂ ಕೈತೋಟ ಮಾಡುವ ಕನಸು ಹಿರಿದು. ಹಾಗಾದರೆ ಈಗ ಏನ್ಮಾಡೋದು?' - ಚಿಕ್ಕ ಮನೆಗಳು, ಅಪಾರ್ಟ್‌ಮೆಂಟ್/ ಫ್ಲ್ಯಾಟ್ ನಿವಾಸಿಗಳ ಪ್ರಶ್ನೆ ಇದು. ಇದಕ್ಕೆ ಚಿಂತಿಸುವುದು ಬೇಡ, ಕಿರಿದಾದ ಜಾಗದಲ್ಲೂ ಮನಸ್ಸಿಗೆ ಮುದ ನೀಡುವಂತಹ, ಮನೆಯಂಗಳದಲ್ಲಿ ಆಹ್ಲಾದಕರ ವಾತಾವರಣ ಸೃಷ್ಟಿಸುವಂತಹ ತೂಗು ತೋಟವನ್ನು ಮಾಡಲು ಸಾಧ್ಯವಿದೆ!

ಮನೆಯ ಅಂಗಳದಲ್ಲಿ ಎಲ್ಲೆಲ್ಲಿ ತುಸು ಬೆಳಕು ಬೀಳುವ ಜಾಗವಿರುತ್ತದೋ, ಅಲ್ಲಿರುವ ಗೋಡೆಗಳಿಗೆ, ಸೂರಿಗೆ ಹಗುರವಾದ ಕುಂಡಗಳನ್ನು ತೂಗುಬಿಟ್ಟು, ಅದರಲ್ಲಿ ಗಿಡಗಳನ್ನು ಬೆಳೆಸಬಹುದು. ಇದೇ ತೂಗು ತೋಟ ಅಥವಾ ಹ್ಯಾಂಗಿಂಗ್ ಗಾರ್ಡನ್.

ಈ ತೂಗು ತೋಟಕ್ಕೆ ಕುಂಡಗಳೇ ಆಗಬೇಕಿಲ್ಲ. ಮನೆಯಲ್ಲಿರುವ ವ್ಯರ್ಥವಾಗಿ ಬಿಸಾಡುವ ಬಕೆಟ್, ಟೇಬಲ್‌ಗಳ ಖಾನಿಗಳು, ಪೇಂಟ್ ಡಬ್ಬಗಳು, ಅಷ್ಟೇ ಏಕೆ, ನೀರು ಕುಡಿದು ಬಿಸಾಡುವ ಬಾಟಲಿಗಳಲ್ಲೂ ಗಿಡಗಳನ್ನು ಬೆಳೆಸಬಹುದು. ಇಂಥವುಗಳಲ್ಲಿ ಕ್ಯಾಕ್ಟಸ್ ಹಾಗೂ ಬಳ್ಳಿಯಾಗಿ ಹಬ್ಬುವ ಗಿಡಗಳನ್ನು ಬೆಳೆಸಬಹುದು.

ಹೇಗೆ ಮಾಡಬಹುದು? : ವ್ಯರ್ಥವಾಗಿರುವ ಪಿವಿಸಿ ಪೈಪ್‌ಗಳನ್ನು ಅಡ್ಡವಾಗಿ ಕತ್ತರಿಸಿ. ಅದರಲ್ಲಿ ಮಣ್ಣು-ಗೊಬ್ಬರ-ಮರಳು ಸಮಪ್ರಮಾಣದಲ್ಲಿ ಬೆರೆಸಿರುವ ಮಿಶ್ರಣವನ್ನು ತುಂಬಿ(ಕೊಕೊಪಿತ್ ಕೂಡ ಬಳಸಬಹುದು). ನಿಮಗೆ ಇಷ್ಟವಾದ ಬಳ್ಳಿಗಳಲ್ಲಿ ಅರಳುವ ಹೂವಿನ ಬೀಜಗಳನ್ನು ಹಾಕಿ. ಪೈಪ್‌ಗೆ ದಾರ ಕಟ್ಟಿ, ಸೂರಿಗೆ ತೂಗು ಹಾಕಿ. ವಾರ ಕಳೆಯುವುದರೊಳಗೆ ಬೀಜ ಚಿಗುರಿ, ಬಳ್ಳಿ ಬೆಳೆಯಲಾರಂಭಿಸುತ್ತದೆ. ಬೆಳೆಯುವ ಬಳ್ಳಿಗೆ ಆಸರೆ ನೀಡಿ. ಮನೆ ತುಂಬಾ ಹಸಿರಿನ ವಾತಾವರಣ ನಿರ್ಮಾಣವಾಗುತ್ತದೆ. ಆದರೆ, ನಿರ್ವಹಣೆಗೆ ಸಮಯ ಕೊಡಬೇಕು.

ಪೈಪ್‌ನಲ್ಲಿ ದೊಡ್ಡ ಗಿಡಗಳನ್ನು ಬೆಳೆಸುವುದಕ್ಕಿಂತ ಚಿಕ್ಕ ಗಿಡಗಳನ್ನು ಬೆಳೆಯುವುದು ಒಳ್ಳೆಯದು. ಸೂರ್ಯನ ಕಿರಣಗಳು ನೇರವಾಗಿ ಬೀಳುವ ಸ್ಥಳವನ್ನು ಆಯ್ಕೆ ಮಾಡಲು ಮರೆಯದಿರಿ.

ಬಳ್ಳಿಗಳನ್ನು ಹಬ್ಬಿಸಿ: ಕಿಟಕಿಗಳ ಕಂಬಿ, ಗೋಡೆಗಳಲ್ಲಿ ಮನಿ ಪ್ಲಾಂಟ್, ಅಲ್ಲಾಮಂಡ್ ಕ್ರೀಪರ್ (ಕೋಟೆ ಹೂವು), ಅಮೃತಬಳ್ಳಿ ಸೇರಿದಂತೆ ವಿವಿಧ ಗಿಡಗಳನ್ನು ಹಬ್ಬಿಸಬಹುದು. ಕಿಟಕಿಯ ಮೇಲೆ ಒಂದು ಕಂಬಿಯನ್ನು ಕಟ್ಟಿ ಅಲ್ಲಿ ಅವುಗಳನ್ನು ಜೋತುಬೀಳುವಂತೆ ಇಡಬೇಕು. ಕಿಟಕಿಯಿಂದ ಬರುವ ಗಾಳಿ ಬೆಳಕು ಬಳ್ಳಿಗಳ ನಡುವೆ ಹಾದು ಮನೆಯ ಪಡಸಾಲೆ ಪ್ರವೇಶಿಸುತ್ತದೆ. ಮನೆಯ ಆವರಣ ಅಹ್ಲಾದಕರವಾಗಿರುತ್ತದೆ.

'ತೂಗು ತೋಟ'ದಲ್ಲಿ ದೊಡ್ಡಪತ್ರೆ, ತುಳಸಿ, ಅಮೃತಬಳ್ಳಿಯಂತಹ ಔಷಧೀಯ ಗಿಡಗಳನ್ನು ಮತ್ತು ಕೆಲವು ಬಳ್ಳಿಗಳನ್ನು ಬೆಳೆಸಬಹುದು. ಇವುಗಳನ್ನು ಮನೆಯ ದ್ವಾರದ ಎದುರು ನೇತುಹಾಕಬಹುದು. ಈ ಗಿಡಗಳನ್ನು ಸವರಿಕೊಂಡು ಬರುವ ಗಾಳಿಯನ್ನು ಸೇವಿಸಿದರೆ, ಉತ್ತಮ ಆರೋಗ್ಯ ನಿಮ್ಮದಾಗುತ್ತದೆ. ಆಸಕ್ತಿ ಇದ್ದರೆ, ಲೆಟ್ಯೂಸ್, ಪುದೀನ, ಕೊತ್ತಂಬರಿಯಂತಹ ತರಕಾರಿಯನ್ನೂ ಬೆಳೆಸಬಹುದು. ಅಪಾರ್ಟ್‌ಮೆಂಟ್‌ಗಳಲ್ಲಿ ವಾಸವಿರುವವರಿಗೆ ಇದೊಂದು ಉತ್ತಮ ಆಯ್ಕೆ.

'ಕೊಕೊಪಿತ್' ಬೆಸ್ಟ್: ತೂಗು ತೋಟಗಳಲ್ಲಿ ಗಿಡಗಳನ್ನು ಬೆಳೆಸಲು ಮಣ್ಣು-ಗೊಬ್ಬರ-ಮರಳು ಮಿಶ್ರಣಕ್ಕಿಂತ ಕೊಕೊಪಿತ್ ಉತ್ತಮ ಮಾಧ್ಯಮ. ಕೊಕೊಪಿತ್ ಹಗುರವಾಗಿರುವುದರಿಂದ ಕುಂಡಗಳು/ ಪೈಪ್ ಮೇಲೆ ಭಾರ ಬೀಳುವುದಿಲ್ಲ. ಸುಲಭವಾಗಿ ತೂಗು ಹಾಕಬಹುದು. ಕೊಕೊಪಿತ್‌ನಲ್ಲಿ ದೀರ್ಘಕಾಲ ನೀರು ಹಿಡಿದಿಟ್ಟುಕೊಳ್ಳುವ ಗುಣವಿದೆ. ಮಾತ್ರವಲ್ಲ, ರೋಗ-ರುಜಿನಗಳೂ ತೀರಾ ವಿರಳ. ಹೀಗಾಗಿ ನಿರ್ವಹಣೆಯೂ ಸುಲಭ.

ಒಟಿಟಿಯಲ್ಲಿ ಬರಲಿದೆ 'ಸರ್ವೈವರ್'

ಯುವ ಪ್ರತಿಭೆ ರಜತ್ ರಜನಿಕಾಂತ್ ಈಗ ತಮ್ಮ ಸಿನಿ ಕನಸನ್ನು ಒಟಿಟಿ ಮೂಲಕ ಸಾಕಾರಗೊಳಿಸಿಕೊಳ್ಳಲು ಹೊರಟಿದ್ದಾರೆ. 'ದಿ ಸರ್ವೈವರ್' ಅವರು ಸಿದ್ಧಪಡಿಸಿದ ಕಿರುಚಿತ್ರ. ಪ್ರಚಾರದ ಭಾಗವಾಗಿ ಟ್ರೇಲರ್ ಬಿಡುಗಡೆಯಾಗಿದೆ. ಚಿತ್ರಕ್ಕೆ ರಜತ್ ರಜನಿಕಾಂತ್ ಅವರೇ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಸಂಕಲನ, ನಿರ್ದೇಶನದ ಜೊತೆಗೆ ನಾಯಕರಾಗಿ ನಟಿಸಿದ್ದಾರೆ. ಅಲ್ಲದೆ ರಜತ್ ಚಿತ್ರದ ಸಹ ನಿರ್ಮಾಪಕರೂ ಹೌದು. ಮೂಲತಃ ಇಂಗ್ಲಿಷ್‌ನಲ್ಲಿ ತಯಾರಾದ ಈ ಚಿತ್ರ ಕನ್ನಡ, ಹಿಂದಿ ಭಾಷೆಗಳಿಗೆ ಡಬ್ ಆಗಿದೆ. ಹಾಲಿವುಡ್ ಮಾದರಿಯಲ್ಲಿ ನಿರ್ಮಾಣಗೊಂಡಿದೆ ಎಂಬುದು ಸಿನಿ ಪರಿಣತರ ಮಾತು.

ಚಿತ್ರಕ್ಕೆ ಸೂರಜ್ ಅವರ ಛಾಯಾಗ್ರಹಣವಿದೆ. ಜಸ್ಟಿನ್ ಸಮುಲ ಜೇಮ್ಸ್ ನಿರ್ಮಾಪಕರು.

ವಿಭಿನ್ನ ಅಭಿರುಚಿಯ ಧಾರಾವಾಹಿ

‘ಕನ್ನಡತಿ’ ಮುಕ್ತಾಯ

ಪ್ರತಿ ದಿನ ರಾತ್ರಿ 7.30ರಿಂದ ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ ಜನಪ್ರಿಯ ಧಾರಾವಾಹಿ ‘ಕನ್ನಡತಿ’ ಶುಕ್ರವಾರ ಮುಕ್ತಾಯವಾಗಿದೆ. ಅದರ ನಾಯಕಿ ಪಾತ್ರಧಾರಿ ರಂಜನಿ ರಾಘವನ್, ಕಲರ್ಸ್ ಕನ್ನಡ ವಾಹಿನಿಯ ಮುಖ್ಯಸ್ಥ ಪರಮೇಶ್ವರ ಗುಂಡ್ಕಲ್ ‘ಕನ್ನಡತಿ’ ಕುರಿತು ನೆನಪುಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ.

ವಿನಾಯಕ ಕೆ.ಎಸ್

ಕನ್ನಡತಿ, ಕನ್ನಡತಿ...ರಾತ್ರಿ 7.30 ಆಗುತ್ತಿದ್ದಂತೆ ಬಹುತೇಕ ಮನೆಗಳಲ್ಲಿ ಕೇಳುತ್ತಿದ್ದ ಶೀರ್ಷಿಕೆ ಗೀತೆ. ಕನ್ನಡ ಧಾರಾವಾಹಿ ಇತಿಹಾಸದಲ್ಲಿ ಸಿದ್ಧ ಸೂತ್ರಗಳನ್ನು ಮೀರಿ ನಿಂತು ಟಿಆರ್‌ಪಿ, ಜನಪ್ರಿಯತೆ ಎರಡನ್ನೂ ಗಳಿಸಿದ ಕೆಲವೇ ಧಾರಾವಾಹಿಗಳ ಪಟ್ಟಿಗೆ ಇದನ್ನೂ ಸೇರಿಸಬಹುದು.

‘ಒಂದು ಉತ್ತಮ ಅಭಿರುಚಿ ಇಟ್ಟುಕೊಂಡು ಶುರುವಾದ ಧಾರಾವಾಹಿ. ಮೆಗಾ ಧಾರಾವಾಹಿಗಳನ್ನು 500 ಎಪಿಸೋಡ್ ದಾಟಿದ ನಂತರ ಜನ ಮುಗಿಸಿದ್ರೆ ಸಾಕಪ್ಪ ಎನ್ನುತ್ತಿರುತ್ತಾರೆ. ನಮ್ಮದು ಇವತ್ತಿಗೆ ಸರಿಯಾಗಿ 800ನೇ ಸಂಚಿಕೆ. ಆದರೂ ಯಾಕೆ ಮುಗಿಸ್ತಾ ಇದಾರೆ ಎಂದು ಇವತ್ತು ಸಾವಿರಾರು ಸಂದೇಶಗಳು ಬಂದಿವೆ. ಇದೇ ಒಂದು ಸಾಧನೆ ಅನ್ನಿಸುತ್ತೆ. ಈ ಯಶಸ್ಸಿನಲ್ಲಿ ಮುಖ್ಯ ಪಾಲು ಕಥೆ ಬರೆದು, ಈ ರೀತಿ ಒಂದು ಧಾರಾವಾಹಿಯನ್ನು ಹೀಗೆಯೇ ಮಾಡಬೇಕು ಎಂದು ಕನಸು ಕಂಡ ಕಲರ್ಸ್ ಕನ್ನಡ ಮುಖ್ಯಸ್ಥರಾದ ಪರಮೇಶ್ವರ್ ಗುಂಡ್ಕಲ್ ಅವರಿಗೆ ಮತ್ತು ಎಲ್ಲಿಯೂ ಮೌಲ್ಯ ಕುಸಿಯದಂತೆ ಚಿತ್ರಕಥೆ ಹೆಣೆದ ವಿಕಾಸ್ ನೇಗಿಲೋಣಿ ಅವರಿಗೆ ಸೇರಬೇಕು’ ಎಂದು ನಟಿ ರಂಜನಿ ರಾಘವನ್ 'ಪ್ರಜಾವಾಣಿಗೆ' ತಿಳಿಸಿದ್ದಾರೆ.

ಭುವನಗಿರಿಯ ಕಥೆ...

ಕಿರುತೆರೆ

‘ಕನ್ನಡತಿ’ ಧಾರಾವಾಹಿಯಲ್ಲಿ ರಂಜನಿ ರಾಘವನ್ ಭುವಿಯಾಗಿ ಕಾಣಿಸಿಕೊಂಡಿದ್ದರು. ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಪುಟ್ಟ ಊರು ಭುವನಗಿರಿ. ಕನ್ನಡ ತಾಯಿ ಭುವನೇಶ್ವರಿ ದೇವಾಲಯವಿರುವ ಊರದು. ಅಲ್ಲಿಯದ್ದೇ ಕಥೆಯನ್ನು ಇಟ್ಟುಕೊಂಡು 2020ರಲ್ಲಿ ಶುರುವಾಗಿದ್ದು ಕನ್ನಡತಿ. ಮೊದಲ ಸಂಚಿಕೆಗಳು ಸಿದ್ದಾಪುರ, ಶಿವಮೊಗ್ಗ ಜಿಲ್ಲೆಯ ಸಾಗರ ಸುತ್ತಮುತ್ತಲೇ ಚಿತ್ರೀಕರಣವಾಗಿತ್ತು. ಹಸಿರುಪೇಟೆ ಎಂಬ ಕಾಲ್ಪನಿಕ ಊರಿನಲ್ಲಿ ನಡೆಯುವ ಕಥೆಯಲ್ಲಿ ಅರೆಕಾಲಿಕ ಉಪನ್ಯಾಸಕಿಯಿಂದ ಕಂಪೆನಿಯೊಂದರ ವ್ಯವಸ್ಥಾಪಕ ನಿರ್ದೇಶಕಿಯಾಗಿ ಇಡೀ ಕುಟುಂಬ, ಕಚೇರಿಯ ಆಗುಹೋಗುಗಳನ್ನು ನಿಭಾಯಿಸುವ ಭುವಿ ಪಾತ್ರ ರಂಜನಿ ರಾಘವನ್ ಅವರಿಗೆ ಒಂದು ವಿಭಿನ್ನ ವರ್ಚಸ್ಸು ನೀಡಿದ್ದಂತು ಸುಳ್ಳಲ್ಲ. ಹಾಗೆಯೇ ರಂಜನಿ ರಾಘವನ್ ಕೂಡ ಭುವಿ ಪಾತ್ರಕ್ಕೆ ಮೆರಗು ನೀಡಿದ್ದರು ಎಂದರೂ ತಪ್ಪಲ್ಲ. ಅವರಿಗೆ ನಾಯಕರಾಗಿ ಕಿರಣ್‌ರಾಜ್ ಕೂಡ ಜನರ ಮನಸ್ಸು ಗೆದ್ದಿದ್ದರು. ಮನೆಯ ಅಮ್ಮಮ್ಮನಾಗಿ ಚಿತ್ಕಲಾ ಬಿರಾದಾರ್ ಪಾತ್ರ ಮರೆಯುವಂತಿಲ್ಲ.

‘ಒಂದು ಗಟ್ಟಿಯಾದ ಪಾತ್ರ ಹೇಗೆ ಜನಕ್ಕೆ ಇಷ್ಟವಾಗಬಹುದು ಎಂಬುದಕ್ಕೆ ಕನ್ನಡತಿ ಉತ್ತಮ ಉದಾರಹಣೆ. ಈ ರೀತಿ ಧಾರಾವಾಹಿಗಳು ಹೆಚ್ಚಾಗಬೇಕು. ಕಲರ್ಸ್ ಕನ್ನಡದ ಒಟಿಟಿ ವೇದಿಕೆ ವೂಟ್‌ನಲ್ಲಿ ಇದು ಶುರುವಾದಾಗಿನಿಂದ ಇಲ್ಲಿವರೆಗೆ ನಂಬರ್ ಒನ್ ಧಾರಾವಾಹಿ. ಮನೆಯಲ್ಲಿ ಕುಳಿತ ಮಹಿಳೆಯರು ಮಾತ್ರ ಧಾರಾವಾಹಿ ನೋಡುತ್ತಾರೆ ಎಂಬ ಆರೋಪವಿದೆ. ಆದರೆ ಗಂಡಸರು, ಹೈಪ್ರೊಫೆಲ್ ಜನ ಈ ಧಾರಾವಾಹಿ ನೋಡುತ್ತಿದ್ದರು. ತುಂಬ ಜನ ಪ್ರತಿಕ್ರಿಯಿಸಿದ್ದಾರೆ. ವಿದೇಶಕ್ಕೆ ಹೊರಟು ನಿಂತವರು ಬಂದು ಭೇಟಿಯಾಗಿ ಫೋಟೊ ತೆಗೆಸಿಕೊಂಡು ಹೋದ ಉದಾರಹಣೆ ಇದೆ. ಅಷ್ಟರ ಮಟ್ಟಿಗೆ ಈ ಪಾತ್ರ ಯಶಸ್ವಿಯಾಗಿತ್ತು. ಧಾರಾವಾಹಿ ಅಂತ್ಯಕ್ಕೆ ಬರುತ್ತಿದ್ದ ‘ಸರಿಗನ್ನಡಂ ಗೆಲ್ಗೆ’ ರಘು ಅಪಾರ ಅವರ ಪರಿಕಲ್ಪನೆ. ಅವರಿಗೂ ಧನ್ಯವಾದ’ ಎನ್ನುತ್ತಾರೆ ರಂಜನಿ.

ಜನ ಕನ್ನಡತಿ ಬಳಿಕ ಮುಂದೇನು ಎನ್ನುತ್ತಿದ್ದಾರೆ. ನನ್ನ ನಟನೆಯ ಎರಡು ಸಿನಿಮಾ ರಿಲೀಸ್‌ಗಿದೆ. ಎರಡು ಮಹಿಳಾ ಪ್ರಧಾನ ಆಂಥೋಲಜಿ ಸಿನಿಮಾಗಳು ಪೂರ್ತಿಗೊಂಡಿದೆ. ಧಾರಾವಾಹಿ ಆಫರ್‌ಗಳಿವೆ. ಆದರೆ ಮಾಡಲು ಮನಸ್ಸಿಲ್ಲ. ಒಂದೊಳ್ಳೆ ಪಾತ್ರವಿರುವ ಉತ್ತಮ ಕಥೆ ನೋಡುತ್ತಿರುವೆ. ಕನ್ನಡತಿ ಪ್ರೇಕ್ಷಕರಿಗೆ ವಿಶೇಷ ಕೃತಜ್ಞತೆ. ಈ ಥರ ಕಥೆ ಕನ್ನಡದಲ್ಲಿ ಹೆಚ್ಚು ಬರಬೇಕು.
ರಂಜನಿ ರಾಘವನ್, ನಟಿ

ಮುಂದಿನ ಬದಲಾವಣೆ ಅಂತರಪಟ?

ಕಲರ್ಸ್ ಕನ್ನಡ ಮುಖ್ಯಸ್ಥ ಪರಮೇಶ್ವರ್ ಗುಂಡ್ಕಲ್ ಅವರ ಕನಸು ಕನ್ನಡತಿ. ಟಿಆರ್‌ಪಿ ದೃಷ್ಟಿಯಿಂದ ವಾಹಿನಿ ಸಂಕಷ್ಟದಲ್ಲಿದ್ದಾಗ ಬ್ರ್ಯಾಂಡ್ ನೀಡಿದ ಧಾರಾವಾಹಿ ಕೂಡ ಹೌದು. ತಮ್ಮದೇ ಊರಿನ ಸುತ್ತಮುತ್ತಲ ಪಾತ್ರಗಳು, ಕಥೆಯನ್ನು ಧಾರಾವಾಹಿ ತಂದು ಹಚ್ಚ ಹಸಿರಾದ ಮಲೆನಾಡನ್ನು ತೋರಿಸಿದ್ದರು. ತಂಡದ ಪ್ರಯತ್ನವಿದು. ‘ಎಲ್ಲ ಕಮರ್ಷಿಯಲ್ ಕಥೆಗಳ ನಡುವೆ ಜನಕ್ಕೆ ಆಪ್ತವಾಗುವ, ಕನ್ನಡದ ಸೊಬಗನ್ನು ಬಿಂಬಿಸುವ ಈ ರೀತಿ ಕಥೆಯನ್ನು ಇಷ್ಟು ದಿನ ತೋರಿಸಿಕೊಂಡು ಬಂದಿರುವುದಕ್ಕೆ ಹೆಮ್ಮೆಯಿದೆ’ ಎನ್ನುತ್ತಾರೆ ಪರಮೇಶ್ವರ್ ಗುಂಡ್ಕಲ್.

ಸದ್ಯಕ್ಕೆ 7.30–8 ಗಂಟೆವರೆಗೆ ಭಾಗ್ಯಲಕ್ಷ್ಮಿ ಧಾರಾವಾಹಿಯ ಮದುವೆ ಸಂಚಿಕೆಗಳು ಪ್ರಸಾರವಾಗುತ್ತವೆ ಎಂಬ ಸುದ್ದಿಯಿದೆ. ಬಳಿಕ ರಾಮ್‌ಜಿ ನಿರ್ಮಾಣ ‘ಅಂತರ ಪಟ’ ಧಾರಾವಾಹಿ ಪ್ರಸಾರವಾಗಬಹುದು ಎನ್ನುತ್ತಿವೆ ಮೂಲಗಳು. ಆದರೆ ವಾಹಿನಿ ಈ ಬಗ್ಗೆ ಯಾವುದೇ ಅಧಿಕೃತ ಮಾಹಿತಿ ನೀಡಿಲ್ಲ.

ಪೋಸ್ಟರ್‌ನಲ್ಲಿ ಕಂಡ ಪಳನಿ

‘ಮೋಹನ್ ಎನ್. ಮುನಿನಾರಾಯಣಪ್ಪ ಚೊಚ್ಚಲ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಚಿತ್ರ ‘ಡಾಲರ್ಸ್ ಪೇಟೆ’. ಚಿತ್ರತಂಡ ಡಾಲರ್ಸ್ ಪೇಟೆಯ ಡಾನ್ ಪಾತ್ರಧಾರಿಯನ್ನು ಅನಾವರಣ ಮಾಡಿದೆ. ‘ಡಾಲರ್ಸ್ ಪೇಟೆ’ ಚಿತ್ರದಲ್ಲಿ ಡಾನ್ ಪಳನಿ ಪಾತ್ರಧಾರಿಯಾಗಿ ‘ಕೆಜಿಎಫ್’ ಖ್ಯಾತಿಯ ಗರುಡ ರಾಮ್ ಅವರ ಸಹೋದರ ವೆಂಕಟ್ ರಾಜ್ ನಟಿಸುತ್ತಿದ್ದಾರೆ. ಡಾನ್ ಪಳನಿ ಪೋಸ್ಟರ್ ರಿಲೀಸ್ ಆಗಿ ಗಮನ ಸೆಳೆಯುತ್ತಿದೆ.

ಚಿತ್ರೀಕರಣ ಮುಗಿಸಿದ ಚಿತ್ರತಂಡ ಪ್ರಚಾರದಲ್ಲಿ ನಿರತವಾಗಿದೆ. ಈ ಹಿಂದೆ ಸೌಮ್ಯ ಜಗನ್ ಮೂರ್ತಿ ಅವರ ಪಾತ್ರದ ಪೋಸ್ಟರ್‌ನ್ನು ಚಿತ್ರತಂಡ ಬಿಡುಗಡೆ ಮಾಡಿತ್ತು. ಮೋಹನ್ ಎನ್. ಮುನಿನಾರಾಯಣಪ್ಪ ‘ಮಾರ್ಫಿ’, ‘ಮದಗಜ’ ಚಿತ್ರಗಳಿಗೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ್ದರು. ‘ಡಾಲರ್ಸ್ ಪೇಟೆ’ ಮೂಲಕ ಸ್ವತಂತ್ರ ನಿರ್ದೇಶಕನಾಗಿ ಹೊಸ ಹೆಜ್ಜೆ ಇಟ್ಟಿದ್ದಾರೆ.

ಹೈಪರ್ ಲಿಂಕ್ ಥ್ರಿಲ್ಲರ್ ಕಥಾಹಂದರ ಒಳಗೊಂಡ ‘ಡಾಲರ್ಸ್ ಪೇಟೆ’ ಚಿತ್ರದಲ್ಲಿ ಆಕರ್ಷ್ ಕಮಲ, ಕುಶಾಲ್. ಎಸ್ ಮುಖ್ಯ ಪಾತ್ರಗಳಲ್ಲಿ ಅಭಿನಯಿಸಿದ್ದು, ಪೃಥ್ವಿ ಅಂಬರ್ ಅವರು ಅತಿಥಿ ಪಾತ್ರದಲ್ಲಿದ್ದಾರೆ. ದತ್ತು ಬಣಕಾರ್, ಕೌಶಿಕ್, ರಾಘವೇಂದ್ರ, ಹೊನ್ನವಳ್ಳಿ, ಡ್ರಾಮಾ ಜೂನಿಯರ್ಸ್ ಮಹೇಂದ್ರ ತಾರಾಬಳಗದಲ್ಲಿದ್ದಾರೆ.

ಸೂರಜ್ ಜೋಯಿಸ್ ಸಂಗೀತ ನಿರ್ದೇಶನ, ಆನಂದ್ ಸುಂದರೇಶ ಕ್ಯಾಮೆರಾ ವರ್ಕ್, ಮಹೇಶ್ ತೊಗಟ್ಟ ಸಂಕಲನ, ಅರ್ಜುನ್ ರಾಜ್ ಮತ್ತು ನರಸಿಂಹ ಸಾಹಸ ನಿರ್ದೇಶನ ಹಾಗೂ ದೀಕ್ಷಿತ್ ಕುಮಾರ್ ನೃತ್ಯ ನಿರ್ದೇಶನ, ರಮೇಶ್ ಎಸ್., ಮನೋಹರ ಸಹಬರವಣಿಗೆ ಚಿತ್ರಕ್ಕಿದೆ. ಪೆಂಟ್ರಿಕ್ಸ್ ಎಂಟರ್‌ಟೈನ್‌ಮೆಂಟ್ಸ್ ಬ್ಯಾನರ್ ಅಡಿ ಪೂಜಾ.ಟಿ.ವೈ ‘ಡಾಲರ್ಸ್ ಪೇಟೆ’ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ಮೈಲಿಗಲ್ಲೇರಿದ ಅಂಜನ್

ಕಂಬ್ಳಿಹುಳ ಖ್ಯಾತಿಯ ನಟ ಅಂಜನ್ ನಾಗೇಂದ್ರ ಮನೆ ಬಿಟ್ಟು ಮೈಲಿಗಲ್ಲಿನ ಮೇಲೆ ಸುಮ್ಮನೆ ಕುಳಿತುಬಿಟ್ಟಿದ್ದಾರೆ. ಅಂದಹಾಗೆ ಅವರು ಹೊರಟದ್ದು ಜೋಗಪ್ಪನ ಅರಮನೆಯತ್ತ. ಅವರು ಅಭಿನಯಿಸುತ್ತಿರುವ ‘ಎಲ್ಲೋ ಜೋಗಪ್ಪ ನಿನ್ನರಮನೆ’ ಚಿತ್ರದ ಫಸ್ಟ್‌ಲುಕ್ ಪೋಸ್ಟರ್‌ನಲ್ಲಿ ಅಂಜನ್ ಹೀಗೆ ಕಾಣಿಸಿಕೊಂಡಿದ್ದಾರೆ. ಅಪ್ಪನ ಮಾತಿಗೆ ಮುನಿಸಿಕೊಂಡು ಮನೆ ಬಿಟ್ಟು ಹೋಗುವ ಹುಡುಗನ ಕಥೆ ಚಿತ್ರದಲ್ಲಿದೆಯಂತೆ. ಹಯವದನ ಈ ಚಿತ್ರದ ನಿರ್ದೇಶಕರು.

ಅಪ್ಪ ಮಗನ ಬಾಂಧವ್ಯ, ಭಾವನಾತ್ಮಕತೆ ಈ ಚಿತ್ರದ ಮುಖ್ಯ ಅಂಶ. ಪ್ರೀತಿ, ಹಾಸ್ಯ ಎಲ್ಲದರ ಸಮ್ಮಿಶ್ರಣವಿದೆ ಎಂದಿದ್ದಾರೆ ನಿರ್ದೇಶಕರು. ಶುಭ ಮಂಗಳ, ನಾಗಿಣಿ, ಕಮಲಿ, ಅಗ್ನಿಸಾಕ್ಷಿ, ಮಧುಬಾಲ ಸೇರಿದಂತೆ ಹಲವು ಸೂಪರ್ ಹಿಟ್ ಧಾರಾವಾಹಿಗಳನ್ನು ಕನ್ನಡ ಕಿರುತೆರೆಗೆ ನೀಡಿದ ಖ್ಯಾತಿ ಹಯವದನ ಅವರದ್ದು. ಈಗಾಗಲೇ ಚಿತ್ರೀಕರಣ ಆರಂಭವಾಗಿದೆ.

ಶರತ್ ಲೋಹಿತಾಶ್ವ, ಸ್ವಾತಿ, ದಾನಪ್ಪ, ಲಕ್ಷ್ಮೀ ನಾಡಗೌಡ, ದಿನೇಶ್ ಮಂಗಳೂರು, ಬಿರಾದಾರ್ ಸೇರಿದಂತೆ ಹಲವು ಕಲಾವಿದರು ಚಿತ್ರದ ತಾರಾಬಳಗದಲ್ಲಿದ್ದಾರೆ. ಪೆಂಡೋರಾಸ್ ಬಾಕ್ಸ್ ಪ್ರೊಡಕ್ಷನ್ ಹಾಗೂ ಕೃಷ್ಣಛಾಯಾ ಚಿತ್ರ ಬ್ಯಾನರ್ ನಡಿ ಪವನ್ ಸಿಮಿಕೇರಿ ಮತ್ತು ಸಿಂಧು ಹಯವದನ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಶಿವ ಪ್ರಸಾದ್ ಸಂಗೀತ ಸಂಯೋಜನೆ, ನಟರಾಜ್ ಮದ್ದಾಲ ಕ್ಯಾಮೆರಾ ವರ್ಕ್, ರವಿಚಂದ್ರನ್ ಸಂಕಲನದಲ್ಲಿ ಸಿನಿಮಾ ಮೂಡಿ ಬರಲಿದೆ. ಪ್ರಮೋದ್ ಮರವಂತೆ ಸಾಹಿತ್ಯ, ಭಜರಂಗಿ ಮೋಹನ್ ನೃತ್ಯ ನಿರ್ದೇಶನ, ನರಸಿಂಹ ಮಾಸ್ಟರ್ ಸಾಹಸ ನಿರ್ದೇಶನ ಚಿತ್ರಕ್ಕಿದೆ.

ಕಡಿಮೆ ಬೆಲೆಗೆ ಉತ್ತಮ ಸ್ಮಾರ್ಟ್‌ವಾಚ್

ತಂತ್ರಜ್ಞಾನ

ಈ ಸ್ಮಾರ್ಟ್‌ವಾಚ್ 1.3 ಇಂಚು ಎಚ್‌ಡಿ ರೌಂಡ್ ಡಿಸ್‌ಪ್ಲೇ ಹೊಂದಿದೆ. ಸಿಲಿಕಾನ್ ಬೆಲ್ಟ್ ಗುಣಮಟ್ಟ ತಕ್ಕಮಟ್ಟಿಗೆ ಇದೆ. ಬೇಗನೆ ದೂಳು ಹಿಡಿಯುತ್ತದೆ. ಪಿಟ್ರಾನ್ ಫಿಟ್ + ಆ್ಯಪ್ ಮೂಲಕ ವಾಚ್‌ನ ಹಲವು ಆಯ್ಕೆಗಳನ್ನು ನಿಯಂತ್ರಿಸಬಹುದು. ಆ್ಯಪ್ ಮೂಲಕ 8 ಕಾಂಟ್ಯಾಕ್ಟ್ ಸೇವ್ ಮಾಡಿಟ್ಟುಕೊಳ್ಳಬಹುದು. 100ಕ್ಕೂ ಹೆಚ್ಚು ವಾಚ್ ಫೇಸ್‌ಗಳು ಇದರಲ್ಲಿವೆ.

ಬ್ಲೂಟೂತ್ ಮೂಲಕ ಫೋನ್‌ನೊಂದಿಗೆ ಸಂಪರ್ಕ ಸಾಧಿಸಿದರೆ ಸ್ಮಾರ್ಟ್‌ವಾಚ್ ಮೂಲಕವೇ ಕರೆ ಮಾಡಲು ಮತ್ತು ಸ್ವೀಕರಿಸಲು ಸಾಧ್ಯ. ಫೋನ್ ಕಾಂಟ್ಯಾಕ್ಟ್ ಅನ್ನು ವಾಚ್‌ನೊಂದಿಗೆ ಸಿಂಕ್ ಮಾಡಿ ಕಾಲ್ ಹಿಸ್ಟರಿ ಪಡೆಯಬಹುದು. ಫೆವರಿಟ್ ಕಾಂಟ್ಯಾಕ್ಟ್‌ಗಳನ್ನು ಸಹ ವಾಚ್‌ನಲ್ಲಿ ಸಿದ್ಧಪಡಿಸಿಟ್ಟುಕೊಳ್ಳಬಹುದು. ಇಷ್ಟೇ ಅಲ್ಲದೆ, ಸೇವ್ ಆಗಿಲ್ಲದ ನಂಬರ್‌ಗೂ ಡಯಲ್ ಮಾಡಿ ಕಾಲ್ ಮಾಡಬಹುದು. ಬಳಕೆ ಬಹಳ ಸುಲಭವಾಗಿರುವುದರಿಂದ ಕರೆ ಮಾಡಲು ಫೋನ್ ಅನ್ನೇ ಬಳಸಬೇಕು ಎಂದೇನೂ ಇಲ್ಲ. ಮೈಕ್ರೊಫೋನ್ ಮೂಲಕ ಧ್ವನಿಯು ಸ್ಪಷ್ಟವಾಗಿ ಕೇಳಿಸುತ್ತದೆ. ಫೋನಿನ ಇನ್ನೊಂದು ತುದಿಯಲ್ಲಿ ಮಾತನಾಡುವವರಿಗೂ ನನ್ನ ಧ್ವನಿ ಸ್ಪಷ್ಟವಾಗಿ ಕೇಳಿದೆ.

ಆ್ಯಪ್‌ನಲ್ಲಿ ಸ್ಮಾರ್ಟ್ ನೋಟಿಫಿಕೇಷನ್ ಸಕ್ರಿಯಗೊಳಿಸುವ ಆಯ್ಕೆ ಇದೆ. ಅಲ್ಲಿ ಮೆಸೇಜ್, ವಾಟ್ಸ್‌ಆ್ಯಪ್, ಫೇಸ್‌ಬುಕ್... ಹೀಗೆ ಯಾವೆಲ್ಲಾ ಆ್ಯಪ್‌ಗಳ ನೋಟಿಫಿಕೇಷನ್‌ಗಳು ಅಗತ್ಯ ಇದೆ ಎಂದು ಕ್ಲಿಕ್ ಮಾಡಿದರೆ ಅವೆಲ್ಲವೂ ಸ್ಮಾರ್ಟ್‌ವಾಚ್ ಪರದೆಯಲ್ಲಿ ಕಾಣಿಸುತ್ತವೆ.

ಆರೋಗ್ಯ ಮತ್ತು ಫಿಟ್‌ನೆಸ್ ಮೇಲ್ವಿಚಾರಣೆ ಮಾಡಬಹುದು. ಹೃದಯದ ಬಡಿತ, ರಕ್ತ ಸಂಚಾರ, ಉಸಿರಾಟ, ಎಷ್ಟು ಗಂಟೆ ನಿದ್ದೆ ಮಾಡಿದ್ದೇವೆ, ದಿನಕ್ಕೆ ಎಷ್ಟು ಹೆಜ್ಜೆ ನಡೆದಿದ್ದೇವೆ. ಓಡಿದ್ದೇವೆ ಇತ್ಯಾದಿಗಳನ್ನು ಸುಲಭವಾಗಿ ದಾಖಲಿಸಬಹುದು. ಹೆಲ್ತ್ ಆ್ಯಂಡ್ ಫಿಟ್‌ನೆಸ್, 7 ಸ್ಪೋರ್ಟ್ ಮೋಡ್, ವೆದರ್, ಅಲಾರ್ಮ್, ಸ್ಟಾಪ್‌ವಾಚ್, ಫೈಂಡ್ ಯುವರ್ ವಾಚ್, ಡುನಾಟ್ ಡಿಸ್ಟರ್ಬ್ ಆಯ್ಕೆಗಳಿವೆ. ಐಪಿ68 ರೇಟಿಂಗ್ಸ್ ಇದ್ದು, ದೂಳು ಮತ್ತು ನೀರಿನಿಂದ ರಕ್ಷಣೆ ಒದಗಿಸುತ್ತದೆ. ಇಷ್ಟೇ ಅಲ್ಲದೆ ಬೇರೆ ಸ್ಮಾರ್ಟ್‌ವಾಚ್‌ಗಳಲ್ಲಿ ಇರುವಂತೆಯೇ ಮ್ಯೂಸಿಕ್ ಕಂಟ್ರೋಲ್ ಮತ್ತು ಕ್ಯಾಮೆರಾ ಶೆಟರ್ ಕಂಟ್ರೋಲ್ ಸಹ ಇದರಲ್ಲಿ ಇದೆ.

260ಎಂಎಎಚ್ ಬ್ಯಾಟರಿ ಬ್ಯಾಟರಿ ಒಳಗೊಂಡಿದ್ದು, ಪೂರ್ತಿ ಚಾರ್ಜ್ ಆಗಲು 2 ಗಂಟೆ ಬೇಕು. 5 ದಿನ ಸಾಮಾನ್ಯ ಬಳಕೆಗೆ. ನಿರಂತರವಾಗಿ ಕಾಲ್ ಮಾಡಿದರೆ 3 ಗಂಟೆ ಬಾಳಿಕೆ ಬರುತ್ತದೆ ಎಂದು ಕಂಪನಿ ಹೇಳಿದೆ. ಮ್ಯಾಗ್ನೆಟಿಕ್ ಚಾರ್ಜಿಂಗ್ ಕೇಬಲ್ ಹೊಂದಿದೆ. ಬ್ಲುಟೂತ್ ಮೂಲಕ ಮೊಬೈಲ್ ಕ್ಯಾಮೆರಾ ನಿಯಂತ್ರಿಸಬಹುದು. ವಾಯ್ಸ್ ಅಸಿಸ್ಟಂಟ್ ಸೌಲಭ್ಯ ಇದೆ. ಒಟ್ಟಾರೆಯಾಗಿ, ಗುಣಮಟ್ಟದ ಬ್ಲುಟೂತ್ ಕಾಲಿಂಗ್, ಉತ್ತಮ ಬ್ಯಾಟರಿ ಬಾಳಿಕೆ ದೃಷ್ಟಿಯಿಂದ ₹ 1,500 ಬೆಲೆಯ ಒಳಗಿನ ಸ್ಮಾರ್ಟ್‌ವಾಚ್‌ಗಳಲ್ಲಿ ಇದನ್ನು ಆದ್ಯತೆಯ ಆಯ್ಕೆಯಾಗಿ ಪರಿಗಣಿಸಬಹುದು.

ಪಿಟ್ರಾನ್ ಕಂಪನಿಯು ಈಚೆಗಷ್ಟೇ ಫೋರ್ಸ್ ಎಕ್ಸ್11ಪಿ ಎನ್ನುವ ಬ್ಲೂಟೂತ್ ಕಾಲಿಂಗ್ ಇರುವ ಹೊಸ ಸ್ಮಾರ್ಟ್‌ವಾಚ್ ಬಿಡುಗಡೆ ಮಾಡಿದೆ. ಈ ಹಿಂದೆ ಬಿಡುಗಡೆ ಮಾಡಿದ್ದ ‘ಫೋರ್ಸ್ ಎಕ್ಸ್ 11’ನ ಸುಧಾರಿತ ಆವೃತ್ತಿ ಇದಾಗಿದೆ. ಬೆಲೆ ₹1,499.

ಹಸೆಮಣೆಯ ಹಾದಿಯಲ್ಲಿ ‘ವಿಜಯಾನಂದ’, ನಿರ್ದೇಶಕಿ

ನಿರ್ದೇಶಕಿ ರಿಶಿಕಾ ಶರ್ಮಾ ಮತ್ತು ನಟ ನಿಹಾಲ್ ರಜಪೂತ್ ಹೊಸ ಸುದ್ದಿಯೊಂದನ್ನು ನೀಡಿದ್ದಾರೆ. ಈ ತಿಂಗಳಲ್ಲೇ ಇಬ್ಬರೂ ಹಸೆಮಣೆ ಏರಲಿದ್ದಾರೆ. ಈ ಜೋಡಿ ನೆನಪಿರಬೇಕಲ್ಲಾ? ಉದ್ಯಮಿ ವಿಜಯ ಸಂಕೇಶ್ವರ ಅವರ ಜೀವನಗಾಥೆ ಆಧರಿತ ‘ವಿಜಯಾನಂದ’ ಚಿತ್ರವನ್ನು ನಿರ್ದೇಶಿಸಿದವರು ರಿಶಿಕಾ. ನಿಹಾಲ್ ಆ ಚಿತ್ರದಲ್ಲಿ ವಿಜಯ ಸಂಕೇಶ್ವರ ಅವರ ಪಾತ್ರ ನಿರ್ವಹಿಸಿದ್ದರು.

ಮದುವೆಯಾಗುತ್ತಿರುವ ಬಗ್ಗೆ ರಿಶಿಕಾ ಅವರು ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

‘ಸಂತೋಷದ ಸುದ್ದಿಯೊಂದನ್ನು ಹಂಚಿಕೊಳ್ಳಲು ನಾವು ಉತ್ಸುಕರಾಗಿದ್ದೇವೆ. ನಾನು ಮತ್ತು ನಿಹಾಲ್ ಫೆಬ್ರುವರಿಯಲ್ಲಿ ಮದುವೆಯಾಗಲಿದ್ದೇವೆ. ಮಿಲಿಯನ್‌ಗಟ್ಟಲೆ ಸುಂದರ ಕ್ಷಣಗಳು ನಮ್ಮ ಪ್ರೀತಿಯ ಕಥನವನ್ನು ಸೃಷ್ಟಿಸಿವೆ. ಸಂತಸದಾಯಕ, ಅರ್ಥಪೂರ್ಣ 9 ವರ್ಷಗಳ ಸ್ನೇಹ ಮತ್ತು ಪ್ರೀತಿಯ ನೆಲೆಗಟ್ಟಿನ ದಾರಿಯಲ್ಲಿ ಹೆಜ್ಜೆಯಿಡುತ್ತಿದ್ದೇವೆ. ಹರಸಿ ಹಾರೈಸಿ, ನಿಮ್ಮ ಪ್ರೀತಿ, ವಿಶ್ವಾಸ ಸದಾ ಮುನ್ನೊಡುವ - ರಿಷಿಕಾ ಮತ್ತು ನಿಹಾಲ್’ ಎಂದು ಬರೆದುಕೊಂಡಿದ್ದಾರೆ.

ಸಿನಿರಂಗದ ಮೂಲಗಳ ಪ್ರಕಾರ ಈ ಜೋಡಿ ಫೆ. 15ರಂದು ಬೆಂಗಳೂರಿನ ಮಲ್ಲೇಶ್ವರದ ಟಿಟಿಡಿ ಕಲ್ಯಾಣಮಂಟಪದಲ್ಲಿ ಮದುವೆಯಾಗಲಿದೆ. ಫೆ. 17ರಂದು ಧಾರವಾಡದಲ್ಲಿ ಆರತಕ್ಷತೆ ಹಮ್ಮಿಕೊಂಡಿದೆ ಎಂದಿವೆ.



Shop online at TANEIRA.com taneirasarees taneira_sarees +91 8147349464 Shop on call 1800 266 0123
Malleshwaram: 116/5, 11th Cross, Margosa Road, Ph: 080-49703080 | **Indiranagar:** 283, 100 Feet Road, HAL 2nd Stage, Ph: 080-48540026 | **Jayanagar:** 3rd Block, 11th Main Road, Ph: 080-48528312 | **Orion Mall**: 116, 2nd Floor, Dr. Rajkumar Road, Ph: 080-22682310 | **Phoenix Market City Mall**: LG-28, Lower Ground Floor, Mahadevpura, Ph: 080-49626263 | **HSR Layout**: No. 818, 27th Main Road, 1st Sector, Ph: 080-41711715 | **Kammanahalli:** 401/B, 2nd Block, Near Tanishq Showroom, Ph: 080-46014779 | **Banashankari:** No. 298, 7th Block, 100 Ft Ring Road, Banashankari 3rd stage, Ph: 8904431212
Scan QR code to shop online. Visit TANEIRA.com